೭೦

ಅಕ್ಟೋಬರ್-ಡಿಸೆಂಬರ್-೨೦೦೭

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿ ತ್ರೈಮಾಸಿಕ

ಸಂಪಾದಕರು

ಡಾ. ವೆಂಕಟಗಿರಿ ದಳವಾಯಿ



ದಯವಿಟ್ಟು ಗಮನಿಸಿ

* ಪ್ರತಿ ಪುಸ್ತಕಕ್ಕೂ ಮುಖ ಬೆಲೆಯ ಶೇ. ೨೦ರಷ್ಟು ರಿಯಾಯಿತಿ ನೀಡಲಾಗುವುದು.
* ಶೇ. ೩೩ರಷ್ಟು ರಿಯಾಯಿತಿಯಿದೆ. ಒಂದು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ಖರೀದಿಸಬೇಕು.
* ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕನ್ನಡ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ಕ್ಕೆ ಚಂದಾದಾರರಾಗಿರಿ.

ಅನಿಕೇತನ

ಕರ್ನಾಟಕ ಸಾಹಿತ್ಯ ಅಕಾಡೆಮಿಯ ತ್ರೈಮಾಸಿಕ

ಅಕ್ಟೋಬರ್ – ಡಿಸೆಂಬರ್ – ೨೦೦೬

ಸಂಪಾದಕ

ಡಾ. ವೆಂಕಟಗಿರಿ ದಳವಾಯಿ

ಕರ್ನಾಟಕ ಸಾಹಿತ್ಯ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು – ೫೬೦ ೦೦೨

ದೂರವಾಣಿ : ೨೨೨೧ ೧೬೮೦

ANIKETHANA : A Literary Journal (Quarterly)
Edited by : **Dr. Venkatagiri Dalavai,** Lecturer, Dept of P.G (Kannada) Basaveshwar Arts College, Bagalkot - 587 101
Published by : **V.N. Mallikarjunaswamy,** Registrar, Karnataka Sahithya Academy, Kannada Bhavana, J.C. Road, Bengalooru - 02

Pages : x + 170

Registration No. 45646/88

ಸಂಪುಟ : ೧೮

ಸಂಚಿಕೆ : ೨

ಪ್ರತಿಗಳು : ೧೨೦೦

ಪುಟಗಳು : x + ೧೭೦

ಪ್ರಧಾನ ಸಂಪಾದಕರು
ನಾಡೋಜ ಗೀತಾ ನಾಗಭೂಷಣ
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು
ವಿ.ಎನ್. ಮಲ್ಲಿಕಾರ್ಜುನಸ್ವಾಮಿ
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

ಬಿಡಿ ಪ್ರತಿ : ರೂ. ೩೦/–
ವಾರ್ಷಿಕ ಚಂದಾ : ರೂ. ೧೦೦/–
ಆಜೀವ ಚಂದಾ : ರೂ. ೩೦೦/–

ಮುಖಪುಟ ಕಲೆ : ಪಿ.ಬಿ. ಗವಾನಿ
ಕೃಪೆ : ಕರ್ನಾಟಕ ಲಲಿತಕಲಾ ಅಕಾಡೆಮಿ
ಅಕ್ಷರ ವಿನ್ಯಾಸ : ಬಸವರಾಜ ಚಿನಿವಾಲರ

ಲಕ್ಷ್ಮೀ ಮುದ್ರಣಾಲಯ
LAKSHMI MUDRANALAYA
ISO 9001-2000
ಚಾಮರಾಜಪೇಟೆ, ಬೆಂಗಳೂರು–೧೮
ದೂರವಾಣಿ : ೨೨೬೧ ೩೧೨೩, ೨೬೬೧ ೮೭೫೨

ಬೆಳಕಿನ ಮುಂದೆ ನೆರಳೇನು.....?

ನಿನ್ನೆ-ಇಂದು ಮತ್ತು ನಾಳೆಯ ಬರಹದ ನಿರೀಕ್ಷೆಗಳೇನು? ವಿನೋದ, ವಿಸ್ಮೃತಿ, ವಿಸ್ಮಯಗಳೇ? ಬರಹದ ಮೊನೆಯಲ್ಲಿ ನೆಲೆಸಬಹುದಾದ ಆತ್ಯಂತಿಕ ಮನುಷ್ಯ ಪ್ರೀತಿ ಇಡೀ ಬದುಕನ್ನು ಆವರಿಸಿದರೆ ಏನಾಗಬಹುದಿತ್ತು? ಇದೊಂದು ಅಗಾಧ ಕಲ್ಪನೆಯೇ ಸರಿ. ಸೃಜನಶೀಲ ಮನಸ್ಸು ಇಂತಹ ಕನಸುಗಳನ್ನು ಕಟ್ಟಿಕೊಳ್ಳುತ್ತಲೇ ಇರುತ್ತದೆ. ಇದರಿಂದಾಗಿಯೇ ಪೂರ್ವ ಮೀಮಾಂಸೆಯ ಗಡಿಗಳನ್ನು ಸಾಹಿತ್ಯಕವಾಗಿ ಅಳಿಸಲು ಸಾಧ್ಯವಾಗಿದೆ. ಕನ್ನಡ ಜಗತ್ತು ಮತ್ತು ಜಾಗತಿಕ ಸಾಹಿತ್ಯ ಇದನ್ನು ಪ್ರತಿನಿಧಿಸುತ್ತಲೇ ಬಂದಿದೆ. ಅಂತಹ ಪ್ರಯತ್ನದ ಒಂದು ಸಣ್ಣ ಕಟ್ಟು ಈ ಸಂಚಿಕೆಯಾಗಿದೆ.

''ಎಲ್ಲ ವಿಮರ್ಶೆಗಳ ಪ್ರಾರಂಭವೂ ಧರ್ಮದ ವಿಮರ್ಶೆಯಲ್ಲಿದೆ'' ಎನ್ನುತ್ತಾನೆ ಕಾರ್ಲ್‌ಮಾರ್ಕ್ಸ್. ಇದನ್ನೇ ಸೂಚಿಸುವಂತಿದೆ ಭೀಷ್ಮ ಸಹಾನಿಯವರ 'ಪಾಲಿ' ಕಥೆ. ಇದೊಂದು ಮಾತೃತ್ವದ ಅನನ್ಯ ಕಥನ ರೂಪ. ಬಾಲಕ 'ಪಾಲಿ' ಕಳೆದು ಹೋಗಿ ಇಲ್ತಾಫ್‌ನಾಗುವುದು, ಇಲ್ತಾಫ್ ಪುನಃ ಯಶಪಾಲ್‌ನಾಗುವುದು ಕಥನ ಬೆಳವಣಿಗೆಯಿಂದ ಕುತೂಹಲಕಾರಿಯಾದರೆ, ಆಶಯದ ದೃಷ್ಟಿಯಿಂದ ವ್ಯಕ್ತಿ ಹಾಗೂ ಅವನು ನೆಚ್ಚಿಕೊಂಡ ಧಾರ್ಮಿಕ, ಸಾಮಾಜಿಕ ಆಚರಣೆಗಳ ನಂಬಿಕೆಗಳಲ್ಲಿಯ ಪೊಳ್ಳುತನವನ್ನು ಬಯಲು ಮಾಡುವ ಹಿನ್ನಲೆಯಿಂದ ಮುಖ್ಯವೆನಿಸುತ್ತದೆ. ಕಥೆ ಮುಗಿಯುತ್ತಿದ್ದಂತೆ 'ತಾಯಿ ಮತ್ತು ಮಗು ಒಂದೇ ಆದರೆ ಧರ್ಮ ಮತ್ತು ಮನುಷ್ಯ ಒಂದಲ್ಲ' ಎನಿಸಿಬಿಡುತ್ತದೆ. ಕಥೆಯ ಆರಂಭವೇ ಬದುಕಿನ ವೈರುಧ್ಯಗಳನ್ನು ಬಿಚ್ಚಿಕೊಡುತ್ತದೆ. ''ವಿಷಯ ಎಂದೂ ಕೊನೆಗೊಳ್ಳುವುದಿಲ್ಲ. ಬದುಕಿನ ದಡ ಎಂದೂ ಪರಸ್ಪರ ಕೂಡುವುದಿಲ್ಲ. ಜೀವನದಲ್ಲಿಯೂ ಕೂಡುವುದಿಲ್ಲ. ಕಥೆ-ಕಾದಂಬರಿಗಳಲ್ಲೂ ಕೂಡುವುದಿಲ್ಲ. ಅವು ಒಂದು ದಿನ ಕೂಡುತ್ತವೆಯೆಂಬ ಆಸೆಯಲ್ಲಿಯೇ ನಾವು ಬದುಕುತ್ತಿರುತ್ತೇವೆ. ಅವು ವಾಸ್ತವವಾಗಿಯೂ ಕೂಡಿಬಿಟ್ಟಿವೆ ಎಂಬ ಭ್ರಮೆಯೂ ಒಮ್ಮೊಮ್ಮೆ ಆಗುತ್ತದೆ'' (ಪುಟ.೧)

ವ್ಯಕ್ತಿಯ ಸಹಜ ಪ್ರೀತಿ (ನಿಸರ್ಗ) ಹಾಗೂ ಆಧ್ಯಾತ್ಮಿಕ ಮನುಷ್ಯ ಪ್ರೀತಿ (ಭೌತದರ್ಶನ) ನಮ್ಮ ಜೀವನದ ಮೇಲೆ ಗಾಢ ಪ್ರಭಾವವನ್ನು ಬೀರಿದ ಸಂಗತಿಗಳು. ನಮ್ಮ ನಗ್ನ ದೇಹಕ್ಕೆ

ಇವೆರಡೂ ತೊಡುಗೆಯಾದಲ್ಲಿ ಕಾಣುವ ಸೌಂದರ್ಯದ ಭಾಷೆ ಯಾವುದು? ದೇಶ ಯಾವುದು? ಧರ್ಮ ಯಾವುದು? ಬಹುಶಃ ಇವ್ಯಾವೂ ನಮ್ಮನ್ನು ಕಾಡುವುದಿಲ್ಲ, ಮಧುರಚೆನ್ನರು ಹೇಳುವಂತೆ

''ದೇವ ಲೀಲೆಯೊ ಕಾಣೆ, ಕರ್ಮ ಜಾಲವೋ ಕಾಣೆ.
ಅದು ನಮ್ಮ ಬುದ್ಧಿಯಾಚೆಗಿನ ಮಾತು
ಯಾವುದೇನೇ ಇರಲಿ ಪ್ರೀತಿಯಂಥ ವಸ್ತು
ಭವದಲ್ಲಿ ಕಾಣೆ ಮನಗಂಡ ಮಾತು.

ಲೌಕಿಕ ಮತ್ತು ಅಲೌಕಿಕ ಚಿಂತನೆಗಳೆರಡೂ ಬೆಳಕಿನ ಪೂರ್ವದ ಕತ್ತಲೆಯೊಂದಿಗೆ ಗುದ್ದಾಡುತ್ತಲೇ ಇರುತ್ತವೆ. ದೇವಲೋಕದಿಂದ ಯಾರೂ ಬಂದರೂ, ಮನುಷ್ಯನಿಂದ ಕಲಿಯುವುದು ತುಂಬಾ ಇದೆ. ಟಾಲ್‌ಸ್ಟಾಯ್‌ನ 'ಮೈಕಲ್' ಇದಕ್ಕೆ ಸಂಕೇತವಷ್ಟೇ! ಎಂದಿನಂತೆ ಹೊಸತನಕ್ಕಾಗಿ ತಡಕಾಡುವ ಮನಸ್ಸುಗಳಿಗೆ ಪೋಲಿಶ್ ಕವಯತ್ರಿ 'ವಿಸ್ಲಾವ್ ಶಿಂಬೋರ್ಸ್ಕಾ' ಮೆಲುದನಿಯಾಗಿ ಇಷ್ಟವಾಗುತ್ತದೆ. ಯುಟೋಪಿಯಾ ಆಲೋಚನೆಗಳಿಗೆ ಹೊಂದಿಕೊಂಡ ನಮ್ಮ ಅಸ್ತಿತ್ವಕ್ಕೆ ಕೆಲವೊಂದು ಪ್ರಶ್ನೆಗಳನ್ನು ಕೇಳುವುದರ ಮೂಲಕ ಮನುಕುಲಕ್ಕೆ ಪ್ರಜ್ಞೆಯಾಗುತ್ತಾಳೆ. ೮೩ ವರ್ಷದ ಈ ನೊಬೆಲ್ ವಿಜೇತೆ ೨೦ನೇ ಶತಮಾನ 'ಕ್ಯಾಪಿಟಲಿಸಂ' ಮತ್ತು 'ಕಮ್ಯುನಿಸಂ'ನ ಸಂಧಿ ಭೂಮಿಯಾಗಿದ್ದಾಳೆ. ಸಾರ್ವಭೌಮತ್ವದ ಅನೇಕ ವಿಸಂಗತಿಗಳನ್ನು ಪಟ್ಟಿ ಮಾಡುತ್ತಲೇ ವಿಷಾದ ಪೂರ್ಣವಾಗಿ, ದಾರ್ಶನಿಕಳಂತೆ ಉತ್ತರಿಸುತ್ತಾಳೆ. ''ಕತ್ತರಿಸಿ ಹಾಕಿದ ಮರಗಳೇ, ನಾನು ನಿಮ್ಮಲ್ಲಿ ಕ್ಷಮಾ ಪ್ರಾರ್ಥಿಯಾಗಿದ್ದೇನೆ, ಮೇಜಿನ ನಾಲ್ಕು ಕಾಲುಗಳಿಗಾಗಿ, ದೊಡ್ಡ ಪ್ರಶ್ನೆಗಳೇ ಕ್ಷಮೆಯಾಚಿಸುವೆ, ಚಿಕ್ಕ ಉತ್ತರಗಳಿಗಾಗಿ''.

''ತಮ್ಮ ಸುತ್ತಣ ಕ್ಷುದ್ರ ಸಮಾಜವನ್ನು ತರಾಟೆಗೆ ತೆಗೆದುಕೊಂಡ ಲೇಖಕ ಶ್ರೀರಂಗ'' ಎಂದ ಲಂಕೇಶ್‌ರ ಮಾತು ''ನನ್ನ ನಾಟ್ಯ ನೆನಪುಗಳು: ರಂಗಾಸಕ್ತಿಯ ಕಥೆ'' ಲೇಖನ ಓದಿದಾಗ ಮತ್ತೇ ನೆನಪಾಗುತ್ತದೆ. ಶ್ರೀರಂಗರ ಮಗಳಾದ ಶಶಿ ದೇಶಪಾಂಡೆ ಬರೆದ ಈ ಲೇಖನ ಶ್ರೀರಂಗರ ರಂಗಾಸಕ್ತಿ, ಸಂಘರ್ಷದ ಹಾದಿಯನ್ನು ಪರಿಚಯಿಸುತ್ತದೆ. ಸ್ವತಃ ಮಗಳಿಗೆ ಅಪ್ಪನ ಕುರಿತಾಗಿ ಗೌರವ ತಂದುಕೊಟ್ಟ ಅಂಶಗಳು ಇಲ್ಲಿ ನಿರ್ಭಾವುಕವಾಗಿ ದಾಖಲುಗೊಂಡಿವೆ. ಕನ್ನಡಕ್ಕೆ ಡಾ. ಬಸವರಾಜ ಡೋಣೂರು ತಂದಿದ್ದಾರೆ. ಯಥಾರೀತಿ ತೆಲುಗು ಸಾಹಿತ್ಯ ನಮ್ಮ ಲೇಖಕರನ್ನು ಹೆಚ್ಚು ಆಕರ್ಷಿಸುತ್ತಲೇ ಇದೆ ಎನ್ನುವುದಕ್ಕೆ 'ಕಿಸೆಗಳು', 'ಎರಡು ಲಹರಿಗಳು', 'ಪದ್ಯದಲ್ಲಿ ಹುದುಗಿರುವ ಅಲಂಕಾರ' ಉದಾಹರಣೆಯಾಗಿವೆ.

ಭಾಗ ಎರಡು ಸೃಜನ ವಿಭಾಗದಲ್ಲಿ ಅನುವಾದಕ್ಕೆ ಸಂಬಂಧಿಸಿದ ಸಂಕೀರ್ಣತೆ, ಸಮಸ್ಯೆಗಳ ಕುರಿತಾಗಿ ಎರಡು ಲೇಖನಗಳಿವೆ. ಭಾಷಾಂತರ ಇಂದು ಹೆಚ್ಚು ಪ್ರಸ್ತುತಗೊಳ್ಳುತ್ತಿದೆ. ಸಮಕಾಲೀನ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಸೂಚಿಸುವ ಸಾಧ್ಯತೆಗಳು ಈ ಪ್ರಕಾರದಲ್ಲಿ ಢಾಳಾಗಿ ಕಾಣಿಸುತ್ತಿವೆ. ಈ ಕಾರಣಕ್ಕಾಗಿ ಅನುವಾದದ ಕೆಲಸ ಮತ್ತಷ್ಟು ಜೀವಂತವಾಗಬೇಕಿದೆ. ಸಾಂಸ್ಕೃತಿಕ ಪ್ರತಿನಿಧಿಯಾದಂತಹ ಭಾಷಾಂತರದ 'ಥಿಯರಿ'ಗಳನ್ನು ಹೆಚ್ಚಾಗಿ ಚರ್ಚಿಸಬೇಕಿದೆ. ಭಾಷಾಂತರ ಒಂದು ಸುಂದರ ಕಾವ್ಯವಾಗುವುದು ಹೇಗೆ? ತಾಯಿಯ ಜೋಗುಳದಂತೆ, ನೆಲದ ಸ್ಪರ್ಶದಂತೆ, ಹಾರುವ ಹಕ್ಕಿಯಂತೆ ಕನ್ನಡಿಸುವದು ಹೇಗೆ? ಎನ್ನುವ ಸಹಜ ಪ್ರಕ್ರಿಯಾ ಮೀಮಾಂಸೆಯನ್ನು

ಅನುವಾದದ ಪ್ರಕಾರಕ್ಕೆ ಅನ್ವಯಿಸಿ ಚರ್ಚಿಸಬೇಕಿದೆ. ಇಂತಹ ಕಾಳಜಿಗಳನ್ನು ಪ್ರೊ. ಜಿ.ಬಿ. ಸಜ್ಜನ ಮತ್ತು ಚಿದಾನಂದ ಸಾಲಿಯ ಲೇಖನಗಳು ವ್ಯಕ್ತಪಡಿಸುತ್ತವೆ. ಓದುಗನನ್ನು ಲಕ್ಷಿಸಿ ನಡೆಯಬೇಕಾದ ಭಾಷಾಂತರ ಕ್ರಿಯೆಯನ್ನು 'ಯಯಾತಿ' ಪಠ್ಯವನ್ನು ಆಧರಿಸಿ ಪ್ರೊ. ಜಿ.ಬಿ. ಸಜ್ಜನರವರು ಮಾಡಿದ್ದಾರೆ. ಹಾಗೇ ಬರಹಗಾರನ, ಮುದ್ರಕನ, ಪ್ರಕಾಶಕನ ಜವಾಬ್ದಾರಿಗಳನ್ನು ಓದುಗನ ಹಿನ್ನಲೆಯಲ್ಲಿ ಅರ್ಥೈಸಿದ್ದಾರೆ. ಈ ಹಿಂದೆ ಒಬ್ಬ ಇಂಗ್ಲೆಂಡಿನ ಓದುಗ ತಾನು ಕೊಂಡ 'Concise Oxford Dictonary' ದಲ್ಲಿ ಒಂದೇ ಒಂದು ಲೋಪವಿದ್ದುದಕ್ಕಾಗಿ ಪ್ರತಿಯನ್ನು ತಂದು ಹಣ ವಾಪಸ್ಸು ಕೊಡಿ'' ಎಂದನಂತೆ. ಈ ಪ್ರಜ್ಞೆ ಕನ್ನಡ ಓದುಗನಲ್ಲಿ ಮೂಡಬೇಕು. ಆಗ ಮಾತ್ರ ಮುದ್ರಕರು ಜಾಗೃತರಾಗುತ್ತಾರೆನ್ನುವ ಅಭಿಪ್ರಾಯವನ್ನು ವ್ಯಕ್ತಮಾಡುತ್ತಾರೆ. ಗಜಲ್ ಕವಿ ಚಿದಾನಂದ ಸಾಲಿ ಸ್ವಾನುಭವದಿಂದ ಗಜಲ್‌ನ ಅನುವಾದದ ಸಮಸ್ಯೆಗಳನ್ನು ಎತ್ತಿಕೊಂಡಿದ್ದಾರೆ.

ಹೊಸಗನ್ನಡ ಸಾಹಿತ್ಯದ ಆರಂಭದಲ್ಲಿ ಮಂಗಳೂರನ್ನು ಕೇಂದ್ರವನ್ನಾಗಿಸಿಕೊಂಡು ಗೋವಿಂದ ಪೈರವರು ಮಾಡಿದ ಅನುವಾದದ ಕಾರ್ಯವನ್ನು ಜಪಾನ್ ರಂಗಭೂಮಿ ಮತ್ತು ನೋಹ್ ನಾಟಕಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಡಾ. ಬಸವರಾಜ ಸಬರದ ತಮ್ಮ ಲೇಖನದಲ್ಲಿ ಸುಧೀರ್ಘವಾಗಿ ವಿಶ್ಲೇಷಿಸಿದ್ದಾರೆ.

ವಿಭಿನ್ನವಾಗಿ ಮಿಡಿಯುವ, ಹಂಬಲಿಸುವ ಪದ್ಯಗಳಾಗಿ 'ದಾರಿ' ಮತ್ತು 'ಅವ್ವ' ಅಭಿವ್ಯಕ್ತಿ ಪಡೆದಿವೆ. ಎಂದಿನಂತೆ ಓದಿ, ಪ್ರತಿಕ್ರಿಯಿಸುವ ಜವಾಬ್ದಾರಿಯನ್ನು ಪ್ರೀತಿಯಿಂದಲೇ ಮಾಡುವಿರೆಂದು ಆಶಿಸಿದ್ದೇನೆ.

ಡಾ. ವೆಂಕಟಗಿರಿ ದಳವಾಯಿ

ಪರಿವಿಡಿ

ಪಾಲಿ (ಕಥೆ)

ಹಿಂದಿ ಮೂಲ: **ಭೀಷ್ಮ ಸಾಹನಿ**
ಅನುವಾದ: **ಡಿ.ಎನ್. ಶ್ರೀನಾಥ್**

ವಿಷಯ ಎಂದೂ ಕೊನೆಗೊಳ್ಳುವುದಿಲ್ಲ. ಬದುಕಿನ ದಡ ಎಂದೂ ಪರಸ್ಪರ ಕೂಡುವದಿಲ್ಲ, ಜೀವನದಲ್ಲಿಯೂ ಕೂಡುವುದಿಲ್ಲ, ಕಥೆ-ಕಾದಂಬರಿಗಳಲ್ಲಿಯೂ ಕೂಡುವುದಿಲ್ಲ. ಅವು ಒಂದು ದಿನ ಕೂಡುತ್ತವೆಯೆಂಬ ಆಸೆಯಲ್ಲಿಯೇ ನಾವು ಬದುಕುತ್ತಿರುತ್ತೇವೆ; ಅವು ವಾಸ್ತವವಾಗಿಯೂ ಕೂಡಿಬಿಟ್ಟಿವೆ ಎಂಬ ಭ್ರಮೆಯೂ ಒಮ್ಮೊಮ್ಮೆ ಆಗುತ್ತದೆ.

ಮನೋಹರಲಾಲ ಮತ್ತು ಅವನ ಹೆಂಡತಿಗೆ ಒಮ್ಮೆ ದೊಡ್ಡ ವಿಪತ್ತೊಂದು ದೂರವಾಯಿತು, ಜೀವನದಲ್ಲಿ ಯಾವ ಸಮಸ್ಯೆ ಎದುರಾಗಿತ್ತೋ ಅದು ದೂರವಾಯಿತು ಎಂಬ ಭ್ರಮೆಯುಂಟಾಯಿತು. ಆದರೆ ಸಮಸ್ಯೆ ಕಥೆ-ಕಾದಂಬರಿಗಳಲ್ಲಿ ಪೂರ್ಣವಾಗಿ ಬಗೆಹರಿಯಲಾರದು, ಬದುಕಿನಲ್ಲಿಯೂ ಬಗೆಹರಿಯಲಾರದು. ಒಂದು ಸಮಸ್ಯೆ ದೂರವಾದರೆ ಇನ್ನೊಂದು ಎದುರಾಗುತ್ತದೆ. ಕಥೆ ಎಂದೂ ಕೊನೆಗೊಳ್ಳಲಾರದು. ಆದರೆ ಜೀವನ ಸಾಗುತ್ತಲೇ ಇರುತ್ತದೆ. ಅದರ ಚಲನೆ ನಿಲ್ಲಲಾರದು, ಪ್ರತಿಯೊಂದು ತಿರುವಿನಲ್ಲಿಯೂ ಅದು ಹೊಸದೊಂದು ರೂಪವನ್ನು, ಹೊಸ ಪ್ರಶ್ನೆ ಚಿನ್ಹೆಯನ್ನು ನಮ್ಮೆದುರು ಪ್ರಸ್ತುತಪಡಿಸುತ್ತಿರುತ್ತದೆಯೆಂಬುದು ಉಲ್ಲೇಖನೀಯ.

ಮನೋಹರಲಾಲ ಮತ್ತು ಅವನ ಪರಿವಾರ ದೇಶ ವಿಭಜನೆಯಾದಾಗ ಹಳ್ಳಿಯೊಂದರಲ್ಲಿ ವಾಸಿಸುತ್ತಿತ್ತು; ನೂರಾರು ಜನರೊಂದಿಗೆ ಅವನೂ ಗಂಟು- ಮೂಟೆ ಕಟ್ಟಿಕೊಂಡು ಶರಣಾರ್ಥಿ-ಯಾತ್ರಿಕರೊಂದಿಗೆ ಹೊರಟಿದ್ದ. ಧೂಳಿನಿಂದ ವಾತಾವರಣವಿಡೀ ಆವರಿಸಿತ್ತು. ಬೇರೆ-ಬೇರೆ ನದಿಗಳು ತಮ್ಮ ತಮ್ಮ ದಿಕ್ಕಿನಲ್ಲಿ ಸಾಗಿ ಸಾಗರದೆಡೆಗೆ ಮುಂದುವರೆಯುವಂತೆ ಶರಣಾರ್ಥಿ-ಯಾತ್ರಿಕರ ಗುಂಪು, ದೇಶವನ್ನು ತುಂಡುಮಾಡಿ ಎರಡು ದೇಶಗಳನ್ನಾಗಿ ಮಾಡಲು ಎಳೆದ ವಿಭಜನೆ-ರೇಖೆಯೆಡೆಗೆ ಸಾಗುತ್ತಿತ್ತು.

ಮನೋಹರಲಾಲ, ಅವನ ಹೆಂಡತಿ, ಇಬ್ಬರು ಮಕ್ಕಳು- ಚಿಕ್ಕಮಕ್ಕಳು ಅಮ್ಮನ ಮಡಿಲಿನಲ್ಲಿದ್ದು, ನಾಲ್ಕು ವರ್ಷದ ಪಾಲಿ, ಯಾತ್ರಿಕರೊಂದಿಗೆ ಅಪ್ಪನ ಹಿಂದೆ ಬರುತ್ತಿದ್ದ. ತಮ್ಮ-ತಮ್ಮ ಗಂಟು ಮೂಟೆಗೇಳನ್ನು ತಲೆ ಮತ್ತು ಬಗಲಿನಲ್ಲಿ ಹೊತ್ತಿದ್ದ ಶರಣಾರ್ಥಿಗಳು, ದಾರಹೋಕರ ಮಾತುಗಳನ್ನು ಕೇಳಲು ಕಾತುರರಾಗಿದ್ದರು- ಬಹುಶಃ ಯಾರಾದರೂ ಮಾರ್ಗವೊಂದನ್ನು ತೋರಿಸಬಹುದು ಅಥವಾ ಸುತ್ತಮುತ್ತ ಏನು ನಡೆಯುತ್ತಿದೆ, ಮುಂದೇನಾಗುತ್ತದೆಯೆಂಬುದರ ಬಗ್ಗೆಯಾದರೂ ಹೇಳಬಹುದೆಂಬ ಕಾತುರ ಅವರ ಕಣ್ಣುಗಳಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು.

ಕಡೆಯ ದಿನ ನಗರದ ಶರಣಾರ್ಥಿ - ಶಿಬಿರ ಖಾಲಿಯಾಗಲಾರಂಭಿಸಿ, ಶರಣಾರ್ಥಿಗಳು ಮತ್ತೆ ತಮ್ಮ ತಮ್ಮ ಗಂಟು ಮೂಟೆಗಳನ್ನೆತ್ತಿಕೊಂಡು ಕ್ಯಾಂಪಿನಿಂದ ಹೊರ ಹೋಗಲಾರಂಭಿಸಿದರು. ರಸ್ತೆಯಲ್ಲಿ ಒಂದರ ಹಿಂದೆ ಒಂದು, ಅನೇಕ ಲಾರಿಗಳು ಸಾಲಾಗಿ ನಿಂತು ಅವರನ್ನು ವಿಭಜನೆ ರೇಖೆಯವರೆಗೆ ಕರೆದೊಯ್ಯಲು ಕಾಯುತ್ತಿದ್ದವು. ಮನೋಹರಲಾಲನೂ ತಲೆ ಮೇಲೆ ಗಂಟು ಹೊತ್ತು ಮಗನ ಕೈ ಹಿಡಿದಿದ್ದು ಅವನ ಹೆಂಡತಿ ಕೌಶಲ್ಯಾ ಸಹ ತಲೆಗಂಟು ಹೊತ್ತು ತನ್ನ ಹಸುಳೆಯನ್ನು ಮಡಿಲಿಗೆ ಕಟ್ಟಿಕೊಂಡಿದ್ದಳು. ಇಬ್ಬರೂ ಲಾರಿಯೆಡೆಗೆ ದೌಡಾಯಿಸುತ್ತಿದ್ದರು. ಶರಣಾರ್ಥಿಗಳು ತಮ್ಮ ತಮ್ಮ ಗಂಟು-ಮೂಟೆಗಳನ್ನು ಮತ್ತು ಕೈಪೆಟ್ಟಿಗೆಗಳನ್ನು ಲಾರಿಗೆ ಎಸೆದು, ತಾವೂ ಎಗರಿ-ಎಗರಿ ಲಾರಿಗಳಿಗೆ ಹತ್ತುತ್ತಿದ್ದರು. ಮನೋಹರಲಾಲನಿಗೆ, ತನ್ನ ಮಗ ಪಾಲಿಯ ಕೈ ತನ್ನ ಕೈಯಿಂದ ತಪ್ಪಿದೆ ಎಂದು ಅನ್ನಿಸಿದಾಗ ಕೌಶಲ್ಯ ಆಗಲೇ ಲಾರಿ ಹತ್ತಿಬಿಟ್ಟಿದ್ದಳು. ಮನೋಹರಲಾಲ ತಲೆಯ ಗಂಟನ್ನು ಇಳಿಸಿ ಅದನ್ನು ಕೈಗಳಲ್ಲಿ ಹಿಡಿದುಕೊಂಡಿದ್ದ. ಪಾಲಿ ಅಲ್ಲಿರಲಿಲ್ಲ. ಆದರೆ ಅವನಿಗೆ ಆಗ ಹೆಚ್ಚು ಕಳವಳವಾಗಲಿಲ್ಲ. ಅವನು ಇಲ್ಲಿಯೇ ಎಲ್ಲೋ ಇರಬೇಕೆಂದು ಯೋಚಿಸಿದ. ಮಗು ಪಾಲಿಯ ಕೈಯ ಬಿಸಿ ಇನ್ನೂ ಅವನ ಅಂಗೈಯಲ್ಲಿತ್ತು. ಎಲ್ಲೆಲ್ಲೂ ಗದ್ದಲವೋ ಗದ್ದಲ, ಜನರ ಗುಂಪೇ ಗುಂಪು. 'ಬೇಗ-ಬೇಗನೆ ಲಾರಿಗಳಲ್ಲಿ ಹತ್ತಿ ಬಿಡಿ, ಹಗಲು ಕಳೆಯುವುದಕ್ಕೂ ಮೊದಲೇ ನಾವು ಗಡಿಯನ್ನು ದಾಟಬೇಕಾಗಿದೆ' ಎಂದು ಕ್ಯಾಂಪ್‌ಗಳ ಮುಖ್ಯಸ್ಥ ಕೂಗುತ್ತಿದ್ದ. ಲಾರಿಗಳು ಹಾರ್ನ್ ಬಾರಿಸುತ್ತಿದ್ದರೆ ಶರಣಾರ್ಥಿಗಳು ಪರಸ್ಪರ ಕಿರುಚಾಡುತ್ತಿದ್ದರು.

ಆದರೆ ಪಾಲಿ ಅತ್ತ-ಇತ್ತ ಎಲ್ಲಿಯೂ ಕಾಣದಾದಾಗ ಮನೋಹರಲಾಲನಿಗೆ ಚಿಂತೆಯಾಯಿತು. ಅವನು 'ಪಾಲಿ! ಪಾಲಿ!' ಎನ್ನುತ್ತಾ, ಅಕ್ಕ-ಪಕ್ಕ ಹಿಂದಕ್ಕೆ ಹೊರಳಿದ. ಆದರೆ

ಎಲ್ಲಿಂದಲೂ ಉತ್ತರ ಬರದಿದ್ದಾಗ ಗಾಬರಿಗೊಂಡ. ಈಗ ಮತ್ತೂ ಜೋರಾಗಿ ಮಗನ ಹೆಸರು ಹಿಡಿದು ಕರೆಯುತ್ತಾ ಮೈ-ಮರೆತು ಅತ್ತ-ಇತ್ತ ಓಡಲಾರಂಭಿಸಿದ.

ಲಾರಿಗಳು ಒಂದಾದ ನಂತರ ಒಂದರಂತೆ ಹೊರಡಲಾರಂಭಿಸಿದವು. ಅವನ ಹೆಂಡತಿಯು ತನ್ನ ಹಸುಳೆಯೊಂದಿಗೆ ನಿಂತಿದ್ದ ಲಾರಿಯೂ ಕಿಕ್ಕಿರಿದು ತುಂಬಿತ್ತು. ಆ ಲಾರಿಯ ಹಾರನ್ನೂ ಪದೇ-ಪದೇ ಕಿರುಚುತ್ತಿತ್ತು.

''ಪಾಲಿ! ಪಾಲಿ!'' ಎಂದು ಗಟ್ಟಿಯಾಗಿ ಕರೆಯುತ್ತಿದ್ದ ಮನೋಹರಲಾಲನ ಗಂಟಲು ಒಣಗಿತು, ಕಾಲುಗಳು ಕಂಪಿಸಿದವು, ತಲೆ ಸುತ್ತಲಾರಂಭಿಸಿತು, ಮನೆ ಮಠ ಇಲ್ಲದವರ ಪರಿಸ್ಥಿತಿಯೇ ಹೀಗೆ. ಕಿಕ್ಕಿರಿದು ತುಂಬಿದ್ದ ಜನ ಮತ್ತು ಲಾರಿಗಳ ಮಧ್ಯೆ ಮನೋಹರಲಾಲ ಕಳವಳ ಮತ್ತು ಗಾಬರಿಯಿಂದ ಕೂಗುತ್ತಲೇ ಮಗನನ್ನು ಹುಡುಕಲಾರಂಭಿಸಿದ. ತಾನು ಶೂನ್ಯ ಮರುಭೂಮಿಯಲ್ಲಿ ಕೂಗುತ್ತಾ ಹೋಗುತ್ತಿದ್ದೇನೆಂದು ಅವನಿಗನ್ನಿಸಿತು.

ಆಗಲೇ ಲಾರಿ ಮುಂದಕ್ಕೆ ಚಲಿಸಲಾರಂಭಿಸಿತು. ಅವನ ಹೆಂಡತಿ ಭಯದಿಂದ ರೋದಿಸಿದಳು- ಇದುವರೆಗೂ ಕಾಣುತ್ತಿದ್ದ ಅವಳ ಪತಿಯೂ ಈಗ ಅವಳ ಕಣ್ಣುಗಳಿಂದ ಮರೆಯಾಗಿದ್ದ. ಅವಳ ಜಡೆಗಳು ಅಸ್ತವ್ಯಸ್ತವಾಗಿದ್ದವು, ಹಸುಳೆ ಮಡಿಲಿನಿಂದ ಜಾರಿಬೀಳುವಂತಿತ್ತು ಉಸಿರನ್ನು ಊದುಗೊಳವೆಯಂತೆ ಬಿಡುತ್ತಿದ್ದಳು.

''ನಿಲ್ಸಿ! ನಿಲ್ಸಿ! ಲಾರಿಯನ್ನು ನಿಲ್ಸಿ! ಅಯ್ಯೋ. ಲಾರಿಯನ್ನು ನಿಲ್ಸಿ!'' ಆದರೆ ಅಲ್ಲಿ ಕೇಳುವವರು ಯಾರು? ಎಲ್ಲರೂ ಕಿರುಚಾಡುವವರೇ! ಮನೋಹರಲಾಲನ ಕುಟುಂಬ ಮಾತ್ರ ಮನೆಯನ್ನು ತ್ಯಜಿಸಿ ಹೋಗುತ್ತಿರಲಿಲ್ಲ. ಕೆಲವರ ಅರ್ಧಂಬರ್ಧ ಲಗ್ಗೇಜನ್ನು ಲಾರಿಗೆ ಹಾಕಲಾಗಿತ್ತು ಆದರೆ ಅವರ ಕುರ್ಚಿ-ಮಂಚ ಇನ್ನೂ ರಸ್ತೆಯಲ್ಲಿಯೇ ಇತ್ತು. ವೃದ್ಧ ಮಾತೆಯರಿಂದ ಲಾರಿ ಹತ್ತಲು ಸಾಧ್ಯವಾಗುತ್ತಿರಲಿಲ್ಲ, ಅವರನ್ನು ಹಿಂದಿನಿಂದ ತಳ್ಳಿ-ತಳ್ಳಿ ಹತ್ತಿಸಲಾಗುತ್ತಿತ್ತು. ಲಾರಿ ಮುಂದೆ-ಮುಂದೆ ಸರಿದಂತೆ ಕೌಶಲ್ಯಾಳ ನಿರೀಹ ಕಣ್ಣುಗಳು, ಅತ್ತ-ಇತ್ತ ಗಟ್ಟಿಯಾಗಿ ಮನವನ್ನು ಕೂಗುತ್ತಾ ಸುತ್ತು ಹಾಕುತ್ತಿದ್ದ ತನ್ನ ಗಂಡನನ್ನು ಮಾತ್ರ ಹುಡುಕಲಾರಂಭಿಸಿದವು. ನಂತರ ಕೌಶಲ್ಯ ಎದೆಬಡಿದುಕೊಂಡು ಗಟ್ಟಿಯಾಗಿ ರೋದಿಸಿದಾಗ- ಪಕ್ಷಿಯೊಂದು ತನ್ನ ಗುಡಿಸಲು ಹಾಳಾದುದ್ದನ್ನು ಕಂಡು ಕಿರುಚಿದಂತೆ- ಯಾರ್‍ಗಿಗೋ ಅವಳ ಈ ಚೀರಾಟ ಕೇಳಿಸಿತು. ''ಲಾರಿ ನಿಲ್ಸಿ! ಲಾರಿ ನಿಲ್ಸಿ!'' ಎಂಬ ಕೂಗುಗಳು ಕೇಳಿದವು. ಲಾರಿಯ ಚಲನೆ ನಿಂತಿತು.

ಪರಿಸ್ಥಿತಿಗಳು ನಿರ್ಣಾಯಕವಾಗುತ್ತವೆಯೋ, ಮನುಷ್ಯನೇ ನಿರ್ಣಾಯಕನಾಗುತ್ತಾನೆಯೋ ಅಥವಾ ಅದೃಷ್ಟ ನಿರ್ಣಾಯಕವಾಗುವುದೋ ಯಾರು ಬಲ್ಲರು? ಘಟನೆಗಳು ಘಟಿಸುತ್ತಿರುತ್ತವೆ. ಬದುಕಿನ ವಿಡಂಬನೆಗಳು ಇಣುಕಿ - ಇಣುಕಿ ನಮ್ಮನ್ನು ಅಣಕಿಸುತ್ತಿರುತ್ತವೆ. ಕೌಶಲ್ಯಾ ತನ್ನ ಗಂಟನ್ನು ಕೆಳಗೆ ಎಸೆದು, ರೋದಿಸುತ್ತಾ ತನ್ನ ಮಡಿಲಲ್ಲಿದ್ದ ಮಗುವನ್ನು ರಸ್ತೆಯಲ್ಲಿ ನಿಂತಿದ್ದ ಶರಣಾರ್ಥಿಯೊಬ್ಬನ ಕೈಗೆ ಕೊಡಬೇಕೆಂದಿದ್ದಳು, ಆಗಲೇ ಅತ್ತ ಕಡೆಯಿಂದ ಮನೋಹರಲಾಲ

ಓಡೋಡಿ ಬರುತ್ತಿದ್ದ, ಮಗ ಅವನ ಜೊತೆಗಿರಲಿಲ್ಲ. ಯಾವ ಅಲೆಗಳು ಪಾಲಿಯನ್ನು ನುಂಗಿ ಹಾಕಿದ್ದವೋ......

ಕೆಲವು ಧ್ವನಿಗಳು ಮನೋಹರಲಾಲನನ್ನು ಸಂಬೋಧಿಸಿ ಹೇಳುತ್ತಿದ್ದವು, ''ಮಗು ಇಲ್ಲೇ ಎಲ್ಲೋ ಇರ್ಬೇಕು'' ಜನ ಕೈಯನ್ನು ಬೀಸಿ-ಬೀಸಿ ಮನೋಹರಲಾಲನನ್ನು ಕರೆದರು, ''ಬಾ, ಬಾ! ಅವನು ಬೇರೆ ಲಾರಿಯಲ್ಲಿ ಕೂತಿರಬೇಕು, ನೀನು ಬಾ!' ಇನ್ನೂ ಕೆಲವು ಧ್ವನಿಗಳಲ್ಲಿ ಸಿಟ್ಟು ಉಕ್ಕಿ ಬರುತ್ತಿತ್ತು'' ನಿನ್ನ ಒಂದು ಮಗುವಿಗಾಗಿ ಲಾರಿ ನಿಂತಿರಬೇಕೆ?.... ಮಗುವನ್ನು ಹುಡುಕಬೇಕೆಂದಿದ್ದರೆ ಲಾರಿಯಿಂದ ಕೆಳಗಿಳಿ!'' ಅದೆಷ್ಟೋ ಮುಖಗಳು ಬದಲಾಗಿದ್ದವು. ಒಂದು ವೇಳೆ ಮನೋಹರಲಾಲ ಓಡೋಡಿ ಬರದಿದ್ದರೆ ಕೌಶಲ್ಯಾ ರೋದಿಸುತ್ತ ಲಾರಿಯಿಂದ ಕೆಳಗಿಳಿದು ಬಿಡುತ್ತಿದ್ದಳೇನೋ, ಉಳಿದ ಶರಣಾರ್ಥಿಗಳು ಅವಳ ಗಂಟು-ಮೂಟೆಗಳನ್ನೂ ಕೆಳಗೆಸೆದು ಬಿಡುತ್ತಿದ್ದರೇನೊ. ಅವರು ಹೇಳುತ್ತಿದ್ದದ್ದು ಸರಿಯೇ, ಅವರೆಲ್ಲಾ ಸೂರ್ಯ ಮುಳುಗುವುದಕ್ಕೂ ಮೊದಲೇ ಗಡಿ ದಾಟಿ ಹೋಗಬೇಕಾಗಿದೆಯೆಲ್ಲ? ಒಂದು ಮಗುವಿಗಾಗಿ ಲಾರಿ ನಿಲ್ಲಬೇಕೆ!

ಶರಣಾರ್ಥಿಗಳ ಹೃದಯದಲ್ಲಿ ದಯೆಯ ಪ್ರವಾಹ ಬತ್ತಿಹೋಗಿತ್ತು. ಈ ಪಾಲಿ ಹಿಂದೊಮ್ಮೆ ತನ್ನ ಹಳ್ಳಿಯಲ್ಲಿ ಕಳೆದು ಹೋದಾಗ ಇಡೀ ಹಳ್ಳಿ ಅವನನ್ನು ಹುಡುಕಲು ಹೊರಟಿತ್ತು. ಆದರೆ ಈಗ? ''ಕೆಳಗಿಳಿ, ಕೆಳಗಿಳಿ, ಮಗುವನ್ನು ಹುಡುಕಬೇಕೆಂದಿದ್ದರೆ ಕೆಳಗಿಳಿ'' ಎಂಬ ಅದೆಷ್ಟೋ ಧ್ವನಿಗಳು.

ಲಾರಿಯಿಂದ ಕೆಳಗಿಳಿಯಬೇಕೋ, ಬೇಡವೋ ಎಂಬುದನ್ನು ಪತಿ-ಪತ್ನಿ ನಿರ್ಧರಿಸದಾದರು. ಪಾಲಿಯ ಸುಳಿವೇ ಸಿಗಲಿಲ್ಲ. ಮನೋಹರಲಾಲ ಮತ್ತು ಕೌಶಲ್ಯಾ ಇನ್ನೂ ಕಣ್ಣುಗಳನ್ನು ದೊಡ್ಡದಾಗಿ ಮಾಡಿಕೊಂಡು ರಸ್ತೆಯೆಡೆಗೇ ನೋಡುತ್ತಿದ್ದರು. ಕ್ರಮೇಣ ನಗರ ಹಿಂದಕ್ಕೆ ಸರಿಯಿತು, ಅರಚಾಟ ಕೂಗಾಟಗಳು ನಿಂತವು. ಕೌಶಲ್ಯಾ ಇನ್ನೂ ದುಃಖದಿಂದ ಪರಿತಪಿಸುತ್ತಿದ್ದಳು. ನಂತರ ಮರಗಳು, ಹೊಲಗಳು ಮತ್ತು ಹರಿದ್ವರ್ಣದ ಬಯಲುಗಳು ಎದುರಾದವು. ನಗರದ ಗುಂಪುಗಳಲ್ಲಿ ಕಳೆದುಹೋದ ಪಾಲಿ ದೂರವಾಗುತ್ತ ಹೋದ. ಕೌಶಲ್ಯಾ ತುಂಬಾ ಹೊತ್ತು ಬಿಕ್ಕಳಿಸಿದಳು.

ಲಾರಿಗಳು ಅತ್ತ-ಇತ್ತ ಜಗ್ಗುತ್ತ ಮುಂದಕ್ಕೆ ಸಾಗಲಾರಂಭಿಸಿದವು, ಕ್ರಮೇಣ ಆಕಾಶದಲ್ಲಿಂದ ನೆರಳುಗಳು ಇಳಿಯಲು ಪ್ರಾರಂಭಿಸಿದಾಗ ಅಲ್ಲಲ್ಲಿ ಒಂದೊಂದು ನಕ್ಷತ್ರಗಳು ಮಿನುಗಲಾರಂಭಿಸಿದವು. ಮನೋಹರಲಾಲ ತನ್ನ ಹೆಂಡತಿಗೆ ಸಮಾಧಾನ ಹೇಳಿದ'', ಸಿಕ್ತಾನೆ, ಸಿಕ್ತಾನೆ. ಅವನು ಇಲ್ಲೇ ಎಲ್ಲೋ ಇರ್ಬೇಕು. ಅವನೆಲ್ಲೂ ಕಣ್ಮರೆಯಾಗೋದಕ್ಕೆ ಸಾಧ್ಯವಿಲ್ಲ. ದಯಾಳುವೊಬ್ಬ ಖಂಡಿತ ಅವನನ್ನು ತನ್ನ ಲಾರಿಯಲ್ಲಿ ಹತ್ತಿಸಿಕೊಂಡಿರಬಹುದು ''ಕೌಶಲ್ಯಾಳ ಗಡಸು ಕಣ್ಣುಗಳನ್ನು ಹಾಗೂ ಅವಳ ಮುಖದಲ್ಲಿ ಮೂಡಿದ್ದ ಮೂಕ ವೇದನೆಯನ್ನು ನೋಡಿ ಮತ್ತೆ ಹೇಳಿದ, ''ಸಿಗದಿದ್ರೆ ಈಗೇನು ಮಾಡೋಣ. ನಮಗಂತೂ ದೇವರ ದಯೆಯಿಂದ ಒಬ್ಬ ಮಗಳಾದರೂ ಇದ್ದಾಳೆ. ಲೇಖರಾಜನ ಕಣ್ಣೆದುರಿಗೇ ಅವನ ಮೂರೂ ಮಕ್ಕಳೂ ಸತ್ತು ಹೋಗಿದ್ದವು. ದೇವರು ಇಟ್ಟಂಗೆ ಆಗುತ್ತೆ, ನಾವೇನು ತಾನೇ ಮಾಡಲು ಸಾಧ್ಯ.''

ಕೌಶಲ್ಯಾಳ ಶೂನ್ಯ ಕಣ್ಣುಗಳೂ ರಸ್ತೆಯನ್ನೇ ನೋಡುತ್ತಿದ್ದವು. ವಾಸ್ತವವಾಗಿ ಒಂದು ಚಿಕ್ಕ ಮಗು ಕಳೆದುಹೋಗುವುದು ಅದೆಂಥ ಮಹತ್ವದ ವಿಷಯವಾಗಿತ್ತು. ಆ ಬಗ್ಗೆ ಇಷ್ಟೊಂದು ಹುಚ್ಚಾಟ ಮಾಡುವುದರಲ್ಲಿ ಏನರ್ಥ! ಶರಣಾರ್ಥಿಗಳು ಪರಸ್ಪರ ಮೆಲ್ಲನೆ ಮಾತಿಗಿಳಿದರು. ಹೆಂಗಸರೂ ಮಾತಿಗಿಳಿದಿದ್ದರು. ಅಲ್ಲಲ್ಲಿ ನಗು- ಈಕೆಯ ಧ್ವನಿಗಳೂ ಕೇಳಿಬರುತ್ತಿದ್ದವು.

ಗಡಿಯನ್ನು ಸಮೀಪಿಸುವಾಗ ಅಂಧಕಾರ ಹಬ್ಬುತ್ತಿತ್ತು. ಒಂದು ಸ್ಥಳದಲ್ಲಿ ಲಾರಿ ನಿಂತಾಗ ಮನೋಹರಲಾಲ ಲಾರಿಯಿಂದ ಕೆಳಗೆ ಹಾರಿ ಬಂದು, ಪ್ರತಿಯೊಂದು ಲಾರಿಯ ಬಳಿಗೂ ಹೋಗುತ್ತಾ 'ಪಾಲಿ! ಪಾಲಿ!' ಎಂದು ಕರುಣೆಯಿಂದ ಕೂಗಲಾರಂಭಿಸಿದ, ಪ್ರತಿಯೊಂದು ಲಾರಿಯೊಳಗೆ ಇಣಿಕಿ ಇಣಿಕಿ ನೋಡುತ್ತಲೂ ಇದ್ದ, ಆದರೆ ಎಲ್ಲೂ, ಯಾವ ಉತ್ತರ ಬರಲಿಲ್ಲ. ಶೂನ್ಯ ಮರುಭೂಮಿಯಲ್ಲಿ ಪ್ರತಿಧ್ವನಿ ಮರಳಿ ಬಂದಂತಾಯಿತು. ಪಾಲಿಯ ಸುಳಿವೇ ಸಿಗಲಿಲ್ಲ.

ಗಡಿಯನ್ನು ತಲುಪಿದ ಶರಣಾರ್ಥಿಗಳು ಲಾರಿಗಳಿಂದ ಇಳಿದು ಬೇರೆ - ಬೇರೆ ಲಾರಿಗಳಿಗೆ ಹತ್ತಿದರು. ಲಾರಿಗಳು ರಾತ್ರಿಯ ಅಂಧಕಾರದಲ್ಲಿ ಅಮೃತಸರದೆಡೆಗೆ ಹೋದವು. ಅಸಂಖ್ಯ ನಕ್ಷತ್ರಗಳನ್ನು ಹೊಂದಿದ್ದ ಆಕಾಶ ರಹಸ್ಯಮಯವಾಗಿ ತೋರುತ್ತಿತ್ತು. ಶರಣಾರ್ಥಿಗಳು ಮೌನ ತಾಳಿದ್ದರು; ಲಾರಿಗಳ ಅತ್ತ-ಇತ್ತ ಜಗ್ಗುವಿಕೆಯಲ್ಲಿ ತೂಕಡಿಸುತ್ತಿದ್ದರು. ಕೆಲವರು ಮೌನ ಮತ್ತು ನಿಶ್ಚಲರಾಗಿ ಶೂನ್ಯವನ್ನೇ ನೋಡುತ್ತಿದ್ದರು. ಆದರೆ ಇದ್ದಕ್ಕಿದ್ದಂತೆಯೇ ಮನೋಹರಲಾಲನ ಹೆಂಡತಿ ಚೀರಿದಳು, ಅವಳ ಬಾಯಿಯಿಂದ ಪದೇ ಪದೇ ಬಿಕ್ಕಳಿಕೆ ಬರಲಾರಂಭಿಸಿತು. ಲಾರಿಯಲ್ಲಿದ್ದ ಶರಣಾರ್ಥಿಗಳಿಗೆ, ಇವಳಿಗೆ ಹುಚ್ಚು ಹಿಡಿದಿದೆಯೆಂದು ಅನ್ನಿಸಿತು. ಆದರೆ ಸ್ವಲ್ಪ ಹೊತ್ತಿನ ನಂತರ ಕೌಶಲ್ಯಾ ಮೆಲ್ಲ-ಮೆಲ್ಲನೆ ಸಹಜಾವಸ್ಥೆಗೆ ಬಂದಳು. ಇವಳಿಗೆ ಹುಚ್ಚು ಹಿಡಿದಿಲ್ಲ. ನೊಂದಿದ್ದಾಳೆ, ತನ್ನ ಮಗನನ್ನು ಮರೆಯಲು ಇವಳಿಂದಾಗುತ್ತಿಲ್ಲವೆಂದು ಅವರಿಗೆ ಅನ್ನಿಸಿತು. ತುಂಬಾ ಹೊತ್ತಿನ ನಂತರ ಅವಳು ತನ್ನ ಪತಿಯ ಹೆಗಲಿಗೆ ತಲೆಕೊಟ್ಟು ನಿದ್ರಿಸಿದಾಗ ಮನೋಹರಲಾಲ ಯೋಚಿಸಿದ ಒಂದು ವೇಳೆ ಪಾಲಿ ವಾಸ್ತವವಾಗಿಯೂ ಸಿಗದಿದ್ದರೆ, ಅವನ ಬಗ್ಗೆ ಸುಳಿವು ಸಿಕ್ಕಿದ ಕೂಡಲೇ ತಾನೇ ಮಗನನ್ನರಸುತ್ತಾ ಹೋಗುವೆ.

ಭಾರತದೆಡೆಗೆ ಸಾಗುತ್ತಿದ್ದ ಲಾರಿಗಳ ಗುಂಪು, ಅಂಧಕಾರದಲ್ಲಿ ಲೀನವಾಗಿ, ಮುಂದುವರಿಯುತ್ತಲೇ ಇದ್ದವು. ಮುಂದೇನು, ಎಂಬುದರ ಬಗ್ಗೆ ಯಾರ ತಲೆಯೂ ಕೆಲಸಮಾಡುತ್ತಿರಲಿಲ್ಲ, ಎಲ್ಲರ ಮೆದುಳು ನಿಷ್ಕ್ರಿಯಗೊಂಡಿತ್ತು. ಅದೃಷ್ಟವು ಅವರೆದುರು ಕಪ್ಪು ಪರದೆಯನ್ನು ಹಾಕಿಬಿಟ್ಟಿತ್ತು, ಅದರ ಹಿಂದಿದ್ದ ಮಂದ ದೀಪದ ಬೆಳಕೂ ಗೋಚರಿಸುತ್ತಿರಲಿಲ್ಲ. ಲಾರಿಗಳ ಜಗ್ಗಾಟ, ಆಯಾಸ, ಶೂನ್ಯ ಕಣ್ಣುಗಳು, ಒಣಗಿದ ಗಂಟಲುಗಳು, ಆಕಾಶದಲ್ಲಿ ಅಸಂಖ್ಯ ನಕ್ಷತ್ರಗಳು....

★★★★★

ಅಂದು ರಾತ್ರಿ ಪಾಲಿ ಗಂಟೆಗಟ್ಟಲೆ ರೋದಿಸಿದ, ಶೋಧಿಸಿದ. ನಂತರ ಜೈನಬಳ ಎದೆಗೆ ತಲೆಯೊತ್ತಿ ನಿದ್ರಿಸಿದ; ಅವನ ಬಿಕ್ಕಳಿಕೆ ದಟ್ಟ ಸ್ನಿಗ್ಧತೆಯ ಸಾಗರದಾಳದಲ್ಲಿ ಮುಳುಗುತ್ತಾ ಸಾಗಿತು.

ಮನುಷ್ಯನಿಗೆ ಅತ್ಯಂತ ಮಹತ್ವದ ರಕ್ಷಣೆ ಮತ್ತು ಸ್ನೇಹದ ನದಿ ಹೆಣ್ಣಿನ ವಕ್ಷಸ್ಥಳವೆ ಆಗಿರುತ್ತದೆ. ಜೈನಬಳ ಎರಡೂ ಕೈಗಳು ಪಾಲಿಯನ್ನು ಆಲಿಂಗನದಲ್ಲಿ ಬಂದಿಸಿದ್ದವು. ಜೈನಬಳಿಗೆ ಬದುಕಿನಲ್ಲಿ ಮೊದಲ ಬಾರಿಗೆ ಸುಖದ ಅನುಭವವಾಗುತ್ತಿತ್ತು - ಮಡಿಲು ಬರಿದಾಗಿರುವ ಹೆಣ್ಣಿಗೆ ಮಾತ್ರ ಇಂಥ ಅನುಭವ ಸಾಧ್ಯ. ಕಂಪು ಸೂಸುವ ಚಿಕ್ಕ ಶರೀರ, ಅವಳ ಮಡಿಲಿನಲ್ಲಿ - ಆ ಮಡಿಲಿಗಾಗಿಯೇ ಸೃಷ್ಟಿಸಿದಂತೆ ನಿದ್ರಿಸುತ್ತಿತ್ತು. ಯಾವುದೇ ಕ್ಷಣ ತನ್ನ ಸ್ತನಗಳಿಂದ ಹಾಲು ಉಕ್ಕಿ ಹೊರ ಚೆಲ್ಲಬಹುದೆಂದು ಅವಳಿಗನ್ನಿಸುತ್ತಿತ್ತು. ಅವಳಿಡೀ ಶರೀರ ಮಾತೃತ್ವದ ಭಾವನೆಯಿಂದಾಗಿ ಪುಳಕಿತಗೊಂಡಿತು.

''ನೀನೇನೂ ಮಾತಾಡೋದಿಲ್ವಾ?''

ಬಳಿಯಿದ್ದ ಮಂಚದಲ್ಲಿ ಮಲಗಿದ್ದ ಶಕೂರ ಬಹಳ ಹೊತ್ತು ಸ್ವಚ್ಛ ಆಕಾಶದೆಡೆಗೆ ನೋಡುತ್ತಿದ್ದ. ಆಕಾಶದಲ್ಲಿ ಅಸಂಖ್ಯಾತ ನಕ್ಷತ್ರಗಳಿದ್ದವು. ವಿವಾಹದ ಸಂದರ್ಭದಲ್ಲಿ ಜೈನಬಳೂ ಇಂಥ ನೀಲಿ ಬಣ್ಣದ ಸೀರೆಯನ್ನು ಧರಿಸಿದ್ದಳು. ಸೀರೆಯ ಮೇಲೆ ಶ್ವೇತ ಹೊಳೆಯುವ ನಕ್ಷತ್ರಗಳಿದ್ದವು. ಜೈನಬಳ ಮಿನುಗುವ ಮುಖವನ್ನು ಕಂಡು ತನ್ನ ಅಂಗಳಕ್ಕೆ ಚಂದ್ರ ಇಳಿದು ಬಂದಿದ್ದಾನೆಂಬ ಗರ್ವ ಉಕ್ಕಿ ಬಂದಿತ್ತು.

ಶಕೂರ ಚೀನೀ-ಪಾತ್ರೆಗಳನ್ನು ಮಾರುತ್ತಿದ್ದ. ಬೀದಿ- ಬೀದಿ, ಗಲ್ಲಿ-ಗಲ್ಲಿಗಳಲ್ಲಿ ತಲೆಯ ಮೇಲೆ ಪಾತ್ರೆಗಳ ಬುಟ್ಟಿ ಹೊತ್ತು ಅಲೆಯುತ್ತಿದ್ದ. ಇಂದು ಮಧ್ಯಾಹ್ನದ ನಂತರ ಈ ಹುಡುಗ ಗುಂಪಿನ ನುಗ್ಗಾಟದಿಂದ ಎಸೆಯಲ್ಪಟ್ಟು, ಗಲ್ಲಿಯ ಅಂಚಿನಲ್ಲಿ ನಿಂತು ಪದೇ ಪದೇ 'ಅಪ್ಪಾ! ಅಪ್ಪಾ!' ಎಂದು ಅರಚುತ್ತಿದ್ದ, ಶಕೂರನ ದೃಷ್ಟಿ ಅವನ ಮೇಲೆ ಬಿದ್ದಿತ್ತು. ಅವನು ಹುಡುಗನ ಬಳಿ ಕೂತು ಪ್ರೀತಿಯಿಂದ ಅವನ ಕಣ್ಣೀರನ್ನು ಒರೆಸಿದ್ದ, ಹೀಗೆ ಪ್ರೀತಿಯ ಮಾತುಗಳನ್ನಾಡಿದ ಮೇಲೆ ಹುಡುಗನ ಬಿಕ್ಕಳಿಕೆ ನಿಂತಿತ್ತು. ಆಗ ಅವನು, 'ನಡಿ, ನಾನು ನಿನ್ನನ್ನು ನಿನ್ನ ತಂದೆಯ ಹತ್ರ ಬಿಟ್ಟು ಬರ್ತೀನಿ' ಎಂದು ಅವನ ಕೈ ಹಿಡಿದುಕೊಂಡು ನಿಧಾನವಾಗಿ ಕರೆದೊಯ್ದಿದ್ದ. ಮೊದಲು ಅವರು ಶರಣಾರ್ಥಿಗಳ ಲಾರಿಗಳು ಹೊರಟ ಸ್ಥಳಕ್ಕೆ ಹೋಗಿದ್ದರು. ಆದರೆ ಅಷ್ಟರಲ್ಲಿ ಲಾರಿಗಳೆಲ್ಲಾ ಹೊರಟು ಹೋಗಿದ್ದವು; ಧೂಳು ಸಹ ಸ್ತಬ್ಧವಾಗಿತ್ತು. ಶರಣಾರ್ಥಿಗಳ ಕ್ಯಾಂಪೂ ಖಾಲಿಯಾಗಿತ್ತು. ರಾತ್ರಿಯ ಅಂಧಕಾರದಲ್ಲಿ ಶಕೂರ ತನ್ನ ಹರಕು-ಮುರಕು ಮನೆಯ ಹೊಸ್ತಿಲಿನಲ್ಲಿ ಕಾಲಿಟ್ಟಾಗ ಪಾಲಿ ಅವನ ಹೆಗಲಿಗೊರಗಿ ನಿದ್ರಿಸುತ್ತಿದ್ದ.

ಶಕೂರ ದೈವಭಕ್ತನಾಗಿದ್ದ, ಧರ್ಮ ಭೀರುವಾಗಿದ್ದ. ಬದುಕಿನಲ್ಲಿ ಹೆಜ್ಜೆ-ಹೆಜ್ಜೆಗೂ ಅಂಜಿ ಜೀವಿಸುತ್ತಿದ್ದ. ಗಲಭೆ ಪ್ರಕರಣಗಳು ಪ್ರಾರಂಭವಾದಂದಿನಿಂದ ಎಲ್ಲದರಿಂದಲೂ ದೂರವಿದ್ದ. ಪೇಟೆಗೆ ಬೆಂಕಿ ಬಿದ್ದು ನಗರದ ಗಲ್ಲಿಗಳಲ್ಲಿ ಒಂದಿಬ್ಬರು ಸತ್ತಾಗ 'ಖುದಾ ಕೋಪಿಸಿಕೊಂಡಿದ್ದಾನೆ' ಎಂದು ವಟ ಗುಟ್ಟುತ್ತಿದ್ದ.

''ನೀನೇನು ಮಾತಾಡೋದ್ಲಿವಾ?'' ಶಕೂರ ಮತ್ತೆ ಪ್ರಶ್ನಿಸಿದ.

''ಏನು ಮಾತಾಡೋದು? ''ಜೈನಬಳ ಧ್ವನಿಯಲ್ಲಿ ದಣಿವಿತ್ತು. ಅವಳು ಮೌನಿಯಾದಳು. ಮಗುವಿನ ಕೋಮಲ ಶರೀರದ ಸ್ನಿಗ್ಧತೆಯಲ್ಲಿ ಅವಳು ಕಳೆದುಹೋಗಿದ್ದಳು. ಬದುಕಿನ ಕೊರತೆ ತೂರಿ-ತೂರಿ ಹೋಗುತ್ತಿದೆಯೆಂದು ಅವಳಿಗನ್ನಿಸುತ್ತಿತ್ತು. ದೇಹ ದಣಿದಿತ್ತು, ಆದರೂ ಅವಳು ತನ್ನ ಪತಿಗೆ, ತನಗೊಂದು ಅಪೂರ್ವ ವಸ್ತು ಸಿಕ್ಕಿದೆ, ಅದನ್ನು ಎದೆಗಪ್ಪಿಕೊಂಡರೇನೇ ತನ್ನ ಶರೀರದಲ್ಲಿ ಉಬ್ಬರವಾದಂತಾಗುತ್ತದೆ ಎಂಬುದನ್ನು ಹೇಳಲು ಬಯಸುತ್ತಿರಲಿಲ್ಲ.

''ಹಿಂದೂ-ಸಿಕ್ಖರೆಲ್ಲಾ ಮನೆ-ಮಠ ಬಿಟ್ಟು ಹೊರಟು ಹೋಗಿದ್ದಾರೆ. ಕ್ಯಾಂಪ್ ಖಾಲಿಯಾಗಿದೆ. ಇನ್ನು ಇಲ್ಲಿಗೆ ಯಾರೂ ಬರಲ್ಲ'' ಶಕೂರ ವಟಗುಟ್ಟಿದ.

ಆದರೂ ಜೈನಬ ಮಾತನಾಡಲಿಲ್ಲ. ಮಗು ನಿದ್ರೆಯಲ್ಲಿ ಒಮ್ಮೆ ಮುಗುಳ್ನಕ್ಕು ಜೈನಬಳ ವಕ್ಷಸ್ಥಳದಲ್ಲಿ ಕೈಯಿಟ್ಟುಕೊಂಡು ಆಳವಾದ ನಿದ್ರೆಗೆ ವಶವಾಯಿತು.

ಆಕಾಶವನ್ನು ನೋಡಿದ ಜೈನಬಳಿಗೆ, ತನ್ನ ಅದೃಷ್ಟದಿಂದಾಗಿಯೇ ಆಕಾಶವೆಲ್ಲಾ ಜಗಮಗ ಹೊಳೆಯುತ್ತಿದೆಯೆಂದು ಅನ್ನಿಸಿತು. ಆದರೆ ಬಾಯಿಯಿಂದ ಮಾತ್ರ ಶಕೂರನ ಅಭಿಪ್ರಾಯವನ್ನೇ ವ್ಯಕ್ತಪಡಿಸಿದಳು, ''ನೀವು ಮಗುವನ್ನು ಎಲ್ಲಿಂದ ಕರೆತಂದಿದ್ದಿರೋ, ಅಲ್ಲಿಗೇ ಹೋಗಿ ಬಿಟ್ಟು ಬನ್ನಿ. ಪಾಪ, ಯಾರು ಇವನನ್ನು ಕಳೆದುಕೊಂಡು ಪರಿತಪಿಸುತ್ತಿದ್ದಾರೋ, ಅವರ ಶಾಪ ನಮಗೇಕೆ?''

''ಅವರ ಶಾಪ ನಮಗೇಕೆ ತಟ್ಟುತ್ತೆ? ನಾವು ಮಗುವಿಗೆ ಆಶ್ರಯ ಕೊಡುತ್ತಿದ್ದೇವಲ್ಲ. ಪೋಲೀಸ್ ಸ್ಟೇಷನ್ನಿಗೆ ತಲುಪಿಸಿದ್ದರೆ ಅವರು ಮಗುವನ್ನು ತಂದೆ-ತಾಯಿಯ ಬಳಿಗಂತೂ ಕರೆದೊಯ್ಯುತ್ತಿರಲಿಲ್ಲ.''

ಇಬ್ಬರೂ ಪರಸ್ಪರರ ಮನಸ್ಸನ್ನು ತಡಕಾಡಿದರು. ತನ್ನ ಗಲ್ಲಕ್ಕೆ ಮಗುವಿನ ಹಣೆಯನ್ನು ಒತ್ತಿಕೊಂಡು ಜೈನಬ್ ಮೆಲ್ಲನೆ ಕೇಳಿದಳು, ''ಮಗುವಿನ ಹೆಸರೇನು?''

''ನನಗೇನು ಗೊತ್ತು? ನಾನು ಕೇಳಿದಾಗ ಪಾಲಿ, ಪಾಲಿ ಅಂತ ಹೇಳಿದ''

''ಹಿಂದುಗಳ ಹೆಸರು ಅದೆಷ್ಟು ವಿಚಿತ್ರವಾಗಿರುತ್ತವೆ. ಪಾಲಿಯೂ ಒಂದು ಹೆಸರೇ? ನಾನಾಗಿದ್ದರೆ ನನ್ನ ಮಗನಿಗೆ ಇಲ್ತಾಫ್ ಅಂತ ಹೆಸರನ್ನು ಇಡ್ತಿದ್ದೆ''

ಇಬ್ಬರೂ ತುಂಬಾ ಹೊತ್ತು ಮೌನರಾಗಿ ಮಲಗಿದರು. ಜೈನಬ್ ತನ್ನ ವಿಚಾರಗಳಲ್ಲಿ ಮುಳುಗೇಳುತ್ತಿದ್ದರೆ ಶಕೂರ ನಾನಾ ವಿಧದಲ್ಲಿ ಯೋಚಿಸುತ್ತಿದ್ದ. ಒಂದುವೇಳೆ ಯಾರೂ ವಿಚಾರಿಸದಿದ್ದರೆ ಜೈನಬಳ ಮಡಿಲು ತುಂಬುತ್ತದೆ. ಅಂಗಳದಲ್ಲಿ ಮಗು ಆಡುತ್ತದೆ. ಈಗ ವಿಚಾರಿಸಲು ಯಾರೂ ಬರಲಾರರು. ಮಹಮೂದ್ ದರ್ಜಿ ಹಿಂದ್‌ವಾಣಿಯನ್ನು ಮನೆಯಲ್ಲಿಟ್ಟುಕೊಂಡ, ಇದುವರೆಗೂ ಯಾರೂ ಕೇಳಲು ಬರಲಿಲ್ಲ. ಮೀರ್ ಜಮಾನ ಪಕ್ಕದ ದರ್ಜಿಯ ಅಂಗಡಿಯ ಸಾಮಾನುಗಳನ್ನೆಲ್ಲಾ ತನ್ನ ಮನೆಗೆ ತಂದಿಟ್ಟುಕೊಂಡ, ಈ ಬಗ್ಗೆಯೂ ಯಾರೂ ವಿಚಾರಿಸಲಿಲ್ಲ. ನಾನು ಈ ಮಗುವಿಗೆ ಆಶ್ರಯ ಕೊಡುತ್ತಿರುವೆ, ದಾರಿ ತಪ್ಪಿ

ರೋದಿಸುತ್ತಿದ್ದ ಮಗುವಿಗೆ ಆಶ್ರಯ ಕೊಡುತ್ತಿರುವೆ....... ಆದರೂ, ಇದನ್ನೆಲ್ಲಾ ಯೋಚಿಸಿದಾಗ ಒಮ್ಮೊಮ್ಮೆ ಅವನ ಮನಸ್ಸು. ಶಂಕಿತಗೊಳ್ಳುತ್ತಿತ್ತು.

ಮಾರನೆಯದಿನ ಮಗುವಿಗೆಚ್ಚರವಾಗಿ, ತಾನು ಅಪರಿಚಿತರ ಮಧ್ಯೆ ಇರುವ ವಿಷಯ ತಿಳಿದು 'ಅಪ್ಪಾ! ಅಪ್ಪಾ!' ಎನ್ನುತ್ತಾ ರೋದಿಸಿತು. ಜೈನಬ್ ಅವನ ಬಾಯಿಗೆ ಹಾಲಿನ ಲೋಟವನ್ನು ಹಿಡಿದಳು, ತಲೆಯನ್ನು ಪ್ರೀತಿಯಿಂದ ನೇವರಿಸಿದಳು, ಬೆನ್ನು ಸವರಿದಳು. ಮಗು ಪಾಲಿಯು ರೋದಿಸಿ-ರೋದಿಸಿ ಸುಸ್ತಾದ. ಅವನ ಬಿಕ್ಕಳಿಕೆಯೂ ನಿಂತಿತು. ಜೈನಬಳ ಕಣ್ಣುಗಳು ಪದೇ-ಪದೇ ಬಾಗಿಲೆಡೆಗೇ ನೋಡುತ್ತಿದ್ದವು ಮಗುವಿನ ಅಳುವಿನ ಧ್ವನಿ ಕೇಳಿ ಯಾರಾದರೂ ಒಳ ಬಂದರೆ! ಮಗುವಂತೂ ಮನೆಯೊಳಗೆ ಬಂದಿತ್ತು, ಆದರೆ ಅವನು ಕಳ್ಳಮಾಲಾಗಿದ್ದನಲ್ಲ! ಯಾರಿಗಾದರೂ ವಿಷಯ ತಿಳಿದರೆ? ಕೆಲವು ದಿನ ಇವನನ್ನು ಮನೆಯಲ್ಲಿಯೇ ಬಚ್ಚಿಡಬೇಕಾಗುವುದು.

ರೋದಿಸುವುದು ನಿಂತಾಗ ಪಾಲಿ ಮೌನ ವಹಿಸಿದ. ಅಂಗಳದ ಒಂದು ಮೂಲೆಯಲ್ಲಿ ಕೂತು ಶೂನ್ಯ ದೃಷ್ಟಿಯಿಂದ ಅತ್ತ ಇತ್ತ ನೋಡುತ್ತಿದ್ದ. ನಿಟ್ಟುಸಿರು ಬಿಡುತ್ತಿದ್ದ. ಈ ದೃಶ್ಯ ಕಂಡು ಜೈನಬಳಿಗೆ ವಿಚಿತ್ರ ಅನುಭವವಾಗುತ್ತಿತ್ತು. ಮಗು ಬಂದ ಮೇಲೆ ಅವಳೂ ಕಳೆದು ಹೋದವಳಂತೆ ಇದ್ದಳು.

ಒಂದೆರೆಡು ದಿನಗಳಲ್ಲಿ ಮಗು ಮನೆಯನ್ನು ಗುರುತಿಸಿಕೊಳ್ಳುತ್ತದೆಯೆಂಬ ನಂಬಿಕೆ ಶಕೂರನಿಗಿತ್ತು. ಆದರೆ ಮನಸ್ಸಿನಲ್ಲಿ ಅನುಮಾನವಿತ್ತು. ಮಗುವಿನ ತಂದೆ-ತಾಯಿ ಇಲ್ಲಿಯೇ ಎಲ್ಲೋ ಹುಡುಕಾಡುತ್ತಿರಬೇಕು, ತನ್ನ ಮನೆಗೂ ಬಂದರೆ? ಎಲ್ಲಾ ಶರಣಾರ್ಥಿಗಳೂ ಇನ್ನೂ ಹೋಗಿರಲಿಲ್ಲ. ಪೋಲೀಸಿನವರಿಗೂ ವಿಷಯ ತಿಳಿಯಬಹುದು. ಲಾಭಕ್ಕೆ ಬದಲು ಹಾನಿಯೇ ಆಗಬಹುದು.

ಎರಡು ದಿನಗಳು ಹೇಗೋ ಕಳೆದವು. ಮೂರನೆಯದಿನ ಮಗುವಿನಲ್ಲಿ ಸ್ವಲ್ಪ ಪರಿವರ್ತನೆ ಕಂಡಿತು. ಬಿಳಿ ಬೆಕ್ಕೊಂದು ಎಲ್ಲಿಂದಲೋ ಬಂದು ಅಂಗಳದ ಗೋಡೆಯ ಮೇಲೆ ಕೂತಾಗ ಮಗುವಿನ ಮನಸ್ಸು ಅರಳಿತು. ಅದು ಕೆಳಗೆ ಹಾರಿ ಬಂದಾಗ 'ಬೆಕ್ಕು ಬೆಕ್ಕು!' ಎನ್ನುತ್ತ ಅದನ್ನು ಹಿಂಬಾಲಿಸಿದ. ಈಗ ಜೈನಬಳಿಗೆ ಜೀವ ಬಂದಂತಾಯಿತು. ಆಗಲೇ ಯಾರೋ ಬಾಗಿಲನ್ನು ತಟ್ಟಿದ ಶಬ್ದವಾಯಿತು. ಪತಿ-ಪತ್ನಿ ಗಾಬರಿಗೊಂಡರು. ಇಬ್ಬರ ಎದೆ ಡವ-ಡವ ಬಡಿದುಕೊಂಡಿತು.

''ಮಗುವನ್ನು ಕಳೆದುಕೊಂಡವರು ಬಂದಿದ್ದಾರೆ'' ಅಕಸ್ಮಾತ್ ಜೈನಬಳ ಬಾಯಿಯಿಂದ ಈ ಮಾತು ಬಂದಿತು. ಅವಳ ಕಣ್ಣುಗಳಲ್ಲಿ ಭಯ ಆವರಿಸಿಕೊಂಡಿತು.

''ಪೋಲೀಸಿನವರಾಗಿರದಿದ್ದರೆ ಸಾಕು'' ಶಕೂರ ಗಾಬರಿಯಿಂದ ಬಾಗಿಲೆಡೆಗೆ ನೋಡಿದ.

ಬಾಗಿಲನ್ನು ಕುಟ್ಟಿದ ಸದ್ದಾಯಿತು-ಯಾರೋ ದೊಣ್ಣೆಯಿಂದ ಬಾಗಿಲಿಗೆ ಹೊಡೆಯುತ್ತಿದ್ದರು.

''ಬಾಗಿಲು ತೆಗೀರಿ'' ಹೊರಗಿನ ಧ್ವನಿ.

''ತೆಗೀರಿ, ಆಗುವುದೇ ಆಗೇ ತೀರಲಿ'' ಜೈನಬ್, ಪತಿಯಡೆಗೆ ನೋಡಿದಳು.

''ನೀನು ಇವನನ್ನು ಕೋಣೆಗೆ ಎತ್ತಿಕೊಂಡು ಹೋಗು'' ಶಕೂರ ತಡಬಡಿಸಿದ ಮುಂದಕ್ಕೆ ಹೋದ.

ಜೈನಬ್ ಮಗುವನ್ನೆತ್ತಿಕೊಂಡು ಕೋಣೆಗೆ ಹೋದಳು. ಬಾಗಿಲಲ್ಲಿ ಪೋಲೀಸಿನವನಿರಲಿಲ್ಲ, ಮಗುವಿನ ತಂದೆ-ತಾಯಿಯೂ ಇರಲಿಲ್ಲ. ದಪ್ಪನೆಯ ದೊಣ್ಣೆ ಹಿಡಿದು, ಗಡ್ಡಧಾರಿ ಮೌಲ್ವಿ ಸಾಹೇಬರೊಬ್ಬರು ನಿಂತಿದ್ದರು. ಅವರೊಂದಿಗೆ ಇನ್ನಿಬ್ಬರು ಲಾಠಿ ಹಿಡಿದು ನಿಂತಿದ್ದರು.

''ವಿಧರ್ಮೀಯರ ಮಗುವನ್ನು ಇಲ್ಲಿಗೆ ಯಾರು ತಂದರು?'' ಮೌಲ್ವಿ ಗರ್ಜಿಸಿದ.

''ಇನ್ನೊಬ್ಬ ವಿಧರ್ಮಿಯನ್ನು ಮನೆಯೊಳಗೆ ಬಚ್ಚಿಟ್ಟಿದ್ದೀಯಾ?''

ಶಕೂರ ಓಡಿ ಹೋಗಿ ಕುರ್ಚಿ ತಂದ.

''ಪವಿತ್ರ ಕುರಾನಿನ ಆಣೆ, ನಾವು ಯಾರನ್ನೂ ಬಚ್ಚಿಟ್ಟಿಲ್ಲ, ಯಾರಿಗೂ ಆಶ್ರಯ ಕೊಟ್ಟಿಲ್ಲ. ಆದರೆ ನಾವು ಒಬ್ಬ ಅನಾಥ ಹುಡುಗನಿಗೆ ಆಶ್ರಯ ಕೊಟ್ಟಿದೇವೆ''

''ಎಲ್ಲಿದ್ದಾನೆ, ಅವನು?''

''ಒಳಗೆ ನಿದ್ರಿಸುತ್ತಿದ್ದಾನೆ''

ಮೌಲ್ವಿ ಸಾಹೇಬರು ಅನುಮಾನದಿಂದ ಶಕೂರನ ಮುಖವನ್ನು ನೋಡಿ, ನಂತರ ಜೋರಾಗಿ ನೆಲಕ್ಕೆ ದೊಣ್ಣೆಯನ್ನು ಕುಟ್ಟಿ ಹೇಳಿದರು, ''ಅವನನ್ನು ತಗೊಂಡು ಬಾ, ನಮ್ಮೆದುರು ಹಾಜರ್‌ಪಡಿಸು, ಯಾರು ಅವನು?''

ಈಗ ಜೈನಬಳೇ ಬಾಲಕನನ್ನು ಎತ್ತಿಕೊಂಡು ಹೊರಬಂದಳು.

''ವಿಧರ್ಮೀಯರ ಮಗನಿಗೆ ಆಶ್ರಯ ಕೊಡ್ತಿದ್ದೀಯಾ?''

''ಮಗುವನ್ನು ದತ್ತಕಕ್ಕೆ ತೆಗೆದುಕೊಂಡಿದ್ದೇನೆ, ನಾನು ಯಾವ ಅಪರಾಧವನ್ನು ಮಾಡಿಲ್ಲ ಮೌಲ್ವಿ ಸಾಹೇಬರೇ! ''ಜೈನಬಳ ಮಾತಿನಲ್ಲಿ ದೃಢತೆಯಿತ್ತು.

''ಇವನಿಗೆ ಸುನ್ನತಿ ಮಾಡಿಸಿದ್ದೀರ? ಇವನಿಂದ ಕುರಾನಿನ ಮಂತ್ರವನ್ನು ಓದಿಸಿದ್ದೀರಾ?''

ಜೈನಬಳಿಗೆ ಹೋದ ಜೀವ ಬಂದಂತಾಯಿತು. ಮೌಲ್ವಿ ಸಾಹೇಬರು ಬಾಲಕನನ್ನು ಕಸಿದುಕೊಳ್ಳಲು ಬಂದಿಲ್ಲ, ಅವನನ್ನು ಮುಸಲ್ಮಾನನನ್ನಾಗಿ ಮಾಡಲಷ್ಟೇ ಬಂದಿದ್ದಾರೆ.

ಆದರೆ ಜೈನಬಳು ಮಾತನಾಡಲಿಲ್ಲ.

''ಯಾಕೆ ನೀನು ಮಾತಾಡ್ತಿಲ್ಲ? ವಿಧರ್ಮೀಯರ ಅಪವಿತ್ರ ಮಗುವನ್ನು ದತ್ತಕಕ್ಕೆ ತೆಗೆದುಕೊಳ್ತೀಯಾ? ಈ ಮಗುವಿಗೆ ನಿನ್ನ ಎದೆಹಾಲನ್ನು ಕುಡಿಸ್ತೀಯಾ? ನೀನು ಹಾವನ್ನು ಸಾಕಲು ಪ್ರಾರಂಭಿಸಿದ್ದೀಯ!''

ಜೈನಬ್ ಮೌಲ್ವಿಯ ತರ್ಕದಿಂದ ನಾಚಿದಳು. ತನಗೇಕೆ ಈ ವಿಷಯಗಳು ಹೊಳೆಯಲಿಲ್ಲವಲ್ಲವೆಂದು ಅವಳಿಗೆ ಆಶ್ಚರ್ಯವಾಯಿತು. ಅವಳಿಗೆ ಈ ಮಗು ಅಪವಿತ್ರನಾಗಿಯೂ ಕಾಣಿಸಿರಲಿಲ್ಲ, ಹಾವಾಗಿಯೂ ಕಾಣಿಸಿರಲಿಲ್ಲ. ಅವಳೇನೋ ಹೇಳಲು ಬಯಸಿದರು, ಆದರೆ ಆಗಲೇ ಮೌಲ್ವಿ ಸಾಹೇಬರು ಮತ್ತೆ ದೊಣ್ಣೆಯನ್ನು ನೆಲಕ್ಕೆ ಕುಟ್ಟಿ ಹೇಳಿದರು.'' ಈ ವಿಧರ್ಮೀಯರ ಮಗುವನ್ನು ಪವಿತ್ರ ಮಸೀದಿಗೆ, ನಾಳೆ ಬೆಳಿಗ್ಗೆಯೆ ಕರೆದುಕೊಂಡು ಬಾ. ಇಲ್ಲದಿದ್ರೆ ಚೆನ್ನಾಗಿರಲ್ಲ'' ಮೌಲ್ವಿ ಸಾಹೇಬರು ಹೀಗೆಂದು ಹೊರಳಿದರು.

ಮೌಲ್ವಿ ಸಾಹೇಬರು ಹೊರಟು ಹೋದ ಮೇಲೆ ಜೈನಬ್ ತಲೆಯಾಡಿಸಿ ಮುಗುಳ್ನಕ್ಕಳು. ಮೌಲ್ವಿ ಸಾಹೇಬರು ಸುನ್ನತಿಯನ್ನಷ್ಟೇ ಮಾಡಲು ಬಯಸುತ್ತಾರೆ, ಅದನ್ನು ನಾಳೆ ಯಾಕೆ, ಇವತ್ತೇ ಮಾಡಲಿ ಮಗುವನ್ನಂತೂ ನಮ್ಮಿಂದ ದೂರ ಮಾಡುವುದಿಲ್ಲವಲ್ಲ. ಇದಕ್ಕೆ ಯಾಕೆ ಹೆದರಬೇಕು? ಅವಳು ತನ್ನ ತಲೆಯಭಾರವನ್ನು ಇಳಿಸಿ, ಅದನ್ನೆಸದು ಹಗುರವಾದಳು; ಮಗುವನ್ನೆತ್ತಿಕೊಂಡು ಅದಕ್ಕೆ ಪದೇ-ಪದೇ ಚುಂಬಿಸಿದಳು.

ಮರುದಿನವೇ 'ಸುನ್ನತಿ'ಯಾಯಿತು. ಹರಿತ ಕತ್ತರಿಯನ್ನು ಕಂಡ ಎಳೆಯ ಬಾಲಕ ಪಾಲಿ ಹೆದರಿ ಜೈನಬಳ ಕಾಲುಗಳ ಮಧ್ಯೆ ಬಚ್ಚಿಟ್ಟುಕೊಂಡ.

ಸುನ್ನತಿಯ ನಂತರ ಮೌಲ್ವಿ ಸಾಹೇಬರೂ ಮಗುವನ್ನು ಮುದ್ದಾಡಿದರು. ಈಗ ಪಾಲಿ ನೋವಿನಿಂದ 'ಅಪ್ಪಾ, ಅಪ್ಪಾ' ಎಂದು ಕೂಗಿದ್ದರೂ ಮೌಲ್ವಿಯವರಿಗೆ ಕೆಡುಕೆನಿಸಿರಲಿಲ್ಲ, ಪ್ರತಿಯಾಗಿ ಅವರು ಮುಗುಳ್ನಗುತ್ತಿದ್ದರು. ಅಕ್ಕಪಕ್ಕದವರೂ ಜಮಾಯಿಸಿದ್ದರು, ಎಲ್ಲರೂ ಅಭಿನಂದಿಸಿ 'ಮುಬಾರಕ್' ಹೇಳುತ್ತಿದ್ದರು. ಮೌಲ್ವಿ ಸಾಹೇಬರು ಈ ಮೊದಲೇ ಬಾಲಕನಿಗೆ ಕಪ್ಪು ಚುಕ್ಕೆಗಳುಳ್ಳ ಕೆಂಪು ಬಣ್ಣದ ರೋಮವುಳ್ಳ ಟೋಪಿಯನ್ನು ತಂದಿದ್ದರು. ಅವನ್ನು ಅವನ ತಲೆಗೆ ತೊಡಿಸಿದರು. ಜೈನಬ್, ಅವನಿಗೆ ಮಲ್ಲು ಬಟ್ಟೆಯ ಜುಬ್ಬಾ ಉಡಿಸಿದಳು. ನಂತರ ಮೌಲ್ವಿಯವರೇ ಖುದ್ದು ಮಗುವನ್ನು ಎತ್ತಿಕೊಂಡು ಜೈನಬಳ ಮಡಿಲಿನಲ್ಲಿಟ್ಟರು.

'ತೆಗೆದುಕೋ, ಈಗ ಈ ಮಗು ನಿನ್ನದು, ಯಾವ ವಿಧರ್ಮೀಯನ ಮಗನೂ ಅಲ್ಲ. ಈಗ ಈ ಮಗು ನಮ್ಮ ಧರ್ಮದ್ದು''

ಅವರು ಮಗುವಿನ ಹೆಸರನ್ನು ಪಾಲಿಯಿಂದ ಇಲ್ತಾಫ್‌ಗೆ ವರ್ಗಾಯಿಸಿದರು.

ಜೈನಬ್ ಮತ್ತು ಶಕರೂನಿಗೆ ಚಂದ್ರನೇ ಭೂಮಿಗಿಳಿದು ಬಂದಂತಾಯಿತು. ಮೊಹಲ್ಲಾದವರಿಗೆ ಸಿಹಿ ಹಂಚುವಾಗ ಜೈನಬ್ ಇಲ್ತಾಫನನ್ನು ಎತ್ತಿಕೊಂಡು ಹೋದಳು.

ಕ್ರಮೇಣ ಬಾಲಕ ತನ್ನ ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲಾರಂಭಿಸಿದ. ಒಂದು ವರ್ಷದೊಳಗೆ ಎಳೆಯಬಾಲಕ ಪಾಲಿ ಪಾತ್ರ ವ್ಯಾಪಾರಿ ಶಕೂರ್ ಅಹಮದ್‌ನ ಮಗ ಇಲ್ತಾಫ ಹುಸೇನನೆಂದು ಪರಿಚಿತನಾದ. ಈಗ ಅವನು ಮನೆಯ ಅಂಗಳದಲ್ಲಿ ಅಬ್ಬಾಜಾನ್‌ನಂತೆ ಪಾತ್ರೆ ವ್ಯಾಪಾರಿಯ ನಟನೆ ಮಾಡಿ ಆಡುತ್ತಿದ್ದ. ಬುಟ್ಟಿಯಲ್ಲಿ ಮನೆಯ ಪಾತ್ರೆಗಳನ್ನು ಹಾಕಿಕೊಂಡು ಅಬ್ಬಾ ಜಾನ್‌ನಂತೆಯೇ ತಲೆಯ ಮೇಲೆ ಬುಟ್ಟಿ ಹೊತ್ತು ಅಂಗಳವನ್ನೆಲ್ಲಾ ಸುತ್ತಾಡುತ್ತಾ ''ಚೀನೀ ಪಾತ್ರೆಗಳು! ಬಟ್ಟಲುಗಳು, ತಟ್ಟೆಗಳು, ಪ್ಲೇಟುಗಳು!'' ಎಂದು ಓಡಾಡುತ್ತಿದ್ದ. ರಂಜಾನ್ ದಿನಗಳಂದು ಅಂಗಳದ ಮಧ್ಯೆನಿಂತು ಖಾಲಿ ಡಬ್ಬವನ್ನು ಜೋರಾಗಿ ಬಡಿದು ''ಏ ಮುಸಲ್ಮಾನರೇ, ಏಳಿ, ರೋಜಾ ಆಚರಿಸಿ.. ಏಳಿ... ಏಳಿ!'' ಎನ್ನಲಾರಂಭಿಸಿದ. ಶೀಘ್ರವೇ ಶಕೂರ ಮತ್ತು ಜೈನಬ್ ಅವನನ್ನು ಮಸೀದಿಯ ಶಾಲೆಗೆ ಕರೆದೊಯ್ದು ಕೂರಿಸಿದರು. ಅವನು ಉಳಿದ ಬಾಲಕರೊಂದಿಗೆ, ಮಸೀದಿಯ ಜಗಲಿಯಲ್ಲಿ ಕೂತು, ಬೆನ್ನು ಅಲುಗಾಡಿಸುತ್ತ ಪವಿತ್ರ ಕುರಾನಿನ ವಾಕ್ಯಗಳನ್ನು ಬಾಯಿಪಾಠ ಮಾಡಲಾರಂಭಿಸಿದ. ಜೈನಬ್ ಮತ್ತು ಶಕೂರನ ಜೀವನಕ್ಕೆ ಕೇಂದ್ರ ಬಿಂದುವೊಂದು ಸಿಕ್ಕಿತ್ತು. ಇದರಿಂದಾಗಿ ಅವರ ಜೀವನ ಮಜವಾಗಿ ಕಳೆಯಲಾರಂಭಿಸಿತು. ಪತಿ-ಪತ್ನಿಯ ಭವಿಷ್ಯದ ಕನಸುಗಳು ಈಗ ಎಳೆಯ ಮಗು ಇಲ್ತಾಫ್‌ನ ಅಕ್ಕ-ಪಕ್ಕ ಹೆಣೆಯಲಾರಂಬಿಸಿದವು. ಪಾತ್ರೆ ಮಾರುವ ಶಕೂರ, ಚೀನೀ ಪಾತ್ರೆಗಳ ಅಂಗಡಿ ತೆರೆದು, ಅಲ್ಲಿ ತಂದೆ-ಮಗ ಇಬ್ಬರೂ ವ್ಯಾಪಾರದಲ್ಲಿ ತೊಡುಗುವ ಕನಸು ಕಾಣಲಾರಂಭಿಸಿದ; ಆಗ ಯಾರ ಹಂಗೂ ತಮಗಿರುವುದಿಲ್ಲ. ಇಲ್ತಾಫ್‌ನ ಹೆಂಡತಿ ವೈಯ್ಯಾರ ಬಿಗುಮಾನದಿಂದ ತಮ್ಮ ಮನೆಯನ್ನು ಪ್ರವೇಶಿಸುವ ಕನಸನ್ನು ಜೈನಬ್ ಕಾಣಲಾರಂಭಿಸಿದಳು.

ಎರಡು ವರ್ಷಗಳು ಮಜವಾಗಿ ಕಳೆದವು. ಅದೊಂದು ದಿನ ಪಾತ್ರೆ ವ್ಯಾಪಾರಿ ಶಕೂರ ಮನೆಯಲ್ಲಿರಲಿಲ್ಲ. ಇಲ್ತಾಫನೂ ಶಾಲೆಗೆ ಹೋಗಿದ್ದ. ಜೈನಬ್ ಅಂಗಳದಲ್ಲಿ, ಗೋಣಿತಟ್ಟಿನ ಪರದೆಯ ಹಿಂದೆ ಕೂತು ಗೋಧಿಯನ್ನು ಬೀಸುತ್ತಿದ್ದಳು; ಆಗಲೇ ಯಾರೋ ಬಾಗಿಲು ತಟ್ಟಿದರು. ಜೈನಬ್ ಕುಳಿತಲ್ಲಿಂದಲೇ ಹೇಳಿದಳು, ''ಗಂಡಸರು ಮನೇಲಿ ಇಲ್ಲ. ಸಂಜೆಗೆ ಬನ್ನಿ''

ಬಾಗಿಲ ಹೊರಗೆ ಸ್ವಲ್ಪ ಹೊತ್ತು ಮೌನ ಕವಿಯಿತು, ನಂತರ ಯಾರೋ ಹೇಳಿದರು, ''ಶಕೂರ್ ಅಹಮದ್‌ನ ಹೆಸರಿಗೆ ಸಮನ್ ಇದೆ. ಅವರನ್ನು ಸ್ಟೇಷನ್‌ಗೆ ಬರಲು ತಿಳಿಸಲಾಗಿದೆ''

ಜೈನಬ್ ಬೀಸುಕಲ್ಲಿನ ಬಳಿಯಿಂದೆದ್ದು ಸೆರಗನ್ನು ಸರಿಪಡಿಸಿಕೊಳ್ಳುತ್ತಾ ಪರದೆಯ ಹಿಂದೆ ಬಂದು ನಿಂತಳು. ಅನುಮಾನದ ಅಲೆಯೊಂದು ಝೇಂಕರಿಸುತ್ತಾ ಅವಳ ಶರೀರವನ್ನು ಆಪಾದ ಮಸ್ತಕ ಕಂಪಿಸಿತು.

''ಏನು ಸಮಾಚಾರವಪ್ಪ?''

''ನಾಳೆ ಬೆಳ್ಳಿಗ್ಗೆ ಅವರನ್ನು ಪೋಲೀಸ್ ಸ್ಟೇಷನ್‌ಗೆ ಕಳಿಸಿ. ಜರೂರು ಕೆಲಸವಿದೆ.''

''ಏನ್ ಕೆಲಸ?'' ಜೈನಬಳ ಧ್ವನಿ ಕಂಪಿಸಿತು.

''ಹಿಂದೂಸ್ಥಾನದಿಂದ ಮಗುವನ್ನು ಕರೆದೊಯ್ಯಲು ಬಂದಿದ್ದಾರೆ. ಪತ್ರಬಂದಿದೆ''

ಜೈನಬ್ ಭಯದಿಂದ ತತ್ತರಿಸಿದಳು. ಗಂಟಲು ಒಣಗಿತು.

''ನಾಳೆ ತಪ್ಪದೆ ಕಳಿಸಬೇಕು, ಮರೆಯಬಾರ್ದು'' ಬಂದ ಹೆಜ್ಜೆಗಳು ಮರಳಿ ಹೋದ ಸದ್ದಾಯಿತು.

★★★★★

ಕೆಲವು ಅವಘಡಗಳು ಮನಸ್ಸಿನ ಮೇಲೆ ಮಾತ್ರ ಪರಿಣಾಮ ಬೀರಿ ಸಮಯ ಸಾಗಿದಂತೆ ಎಲ್ಲವನ್ನು ಮರೆಯಿಸಿ ಬಿಡುತ್ತವೆ. ಆದರೆ ಕೆಲವು ಅವಘಡಗಳು ಕುಟ್ಟೆಹುಳುವಿನಂತೆ ಒಳಗಿನಿಂದಲೇ ಎದೆಯನ್ನು ನೆಕ್ಕುತ್ತವೆ, ಮನುಷ್ಯನ ಹಿಡಿತದಲ್ಲಿ ಏನೂ ಇರುವುದಿಲ್ಲ. ಕೌಶಲ್ಯಾ ಭಾರತಕ್ಕೆ ತನ್ನ ಪತಿಯೊಂದಿಗೆ ಮರಳಿ ಬಂದಾಗ ಅವಳ ಮಡಿಲು ಬರಿದಾಗಿತ್ತು.

ಅಂದು ಲಾರಿಗಳ ಸಾಲು ಕ್ಷೇಮದಿಂದ ಗಡಿಯವರೆಗೆ ಬಂದಿದ್ದರೆ ಹಾಗೂ ಮನೋಹರಲಾಲ ಮತ್ತು ಕೌಶಲ್ಯಾ ಕೂಡ ತಮ್ಮ ಮಗುವಿನೊಂದಿಗೆ ಕ್ಷೇಮದಿಂದ ಗಡಿಯನ್ನು ದಾಟಿದ್ದರೆ, ಕ್ರಮೇಣ ಪಾಲಿಯ ನೆನಪಿನ ಮೇಲೆ ಕಾಲದ ಧೂಳು ಬಿದ್ದು ಅವನು ತಪ್ಪಿಸಿಕೊಂಡ ದುಃಖ ಮಂದವಾಗುತ್ತಿತ್ತು. ಆದರೆ ಹೀಗಾಗಲಿಲ್ಲ. ನಗರದಿಂದ ಹೊರಟ ಮೇಲೆ ಮತ್ತೊಂದು ಘಟನೆ ಘಟಿಸಿತು. ಲಾರಿಗಳ ಸಾಲು ಅಂಧಕಾರದಲ್ಲಿ ಮುಂದುವರೆಯುತ್ತಿರುವಾಗ ಇದ್ದಕ್ಕಿದ್ದಂತೆಯೇ ಕೆಲವರು ಅಕ್ಕ-ಪಕ್ಕದ ಹೊಲಗಳಿಂದ ಕಿರುಚಾಡುತ್ತಾ ಓಡೋಡಿ ಬಂದು ಮಾರ್ಗದ ಮಧ್ಯೆ ನಿಂತರು. ಮುಖದ ಮೇಲೆ ಮುಸುಕು, ಕೈಗಳಲ್ಲಿ ಈಟಿ-ಭರ್ಜಿಗಳು, ಬಾಯಿಯಲ್ಲಿ ಘೋಷಣೆಗಳೊಂದಿಗೆ ನಿಂದನೆಗಳು. ಅದೆಷ್ಟೊ ಲಾರಿಗಳು ಆಗಲೇ ಮುಂದಕ್ಕೆ ದಾಟಿದ್ದವು, ಆದರೆ ಹಿಂದಿನ ಮೂರು ಲಾರಿಗಳು ಅವರಿಗೆ ಸಿಕ್ಕಿಬಿದ್ದವು. ರಾತ್ರಿಯ ಅಂಧಕಾರದಲ್ಲಿ ಮತ್ತೆ ಅದೇ ಕೂಗು-ಚೀರಾಟ, ಈಟಿ-ಭರ್ಜಿಗಳ ಭರಾಟೆ ಹಾಗೂ ಈ ಹಿಂದೆ ತಮ್ಮ ಹಳ್ಳಿಯಲ್ಲಿ ಮನೋಹರಲಾಲ ಮತ್ತು ಕೌಶಲ್ಯಾ ಕೇಳಿದ ಆರ್ತನಾದ. ಸುತ್ತ-ಮುತ್ತಲಿನಿಂದ ರಕ್ತದ ಹನಿಗಳು ಹಾರಲಾರಂಭಿಸಿದವು. ಕೌಶಲ್ಯಾಳನ್ನು ಯಾರೋ ತಳ್ಳಿದರು, ಅವಳು ಮುಗ್ಗರಿಸಿ ಬಿದ್ದಳು, ಅವಳಿಗೇನೂ ತಿಳಿಯಲಿಲ್ಲ. ''ಕೊಡು, ಮಗುವನ್ನು ನನಗೆ ಕೊಡು'' ಎಂದು ಮನೋಹರಲಾಲ ಹೇಳಿದ್ದು ಮಾತ್ರ ಕೇಳಿಸಿತು. ಕಡೆಗೆ ಆ ಮಾತೂ ನಿಂತಿತು, ಮತ್ತೆ ಹಿಂದಿನಿಂದ ಯಾರೋ ತಳ್ಳಿದ್ದರು, ಈಗ ಅವಳು ಕವುಚಿ ಬಿದ್ದಿದ್ದಳು. ಅವಳಿಗೆ ಪ್ರಜ್ಞೆ ಬಂದಾಗ ಎಲ್ಲೋ ಸಿಳ್ಳೆ-ಧ್ವನಿಗಳು ಮೂಡುತ್ತಿರುವಂತೆ ಅನ್ನಿಸಿತು. ದಟ್ಟ ಅಂಧಕಾರ, ಬಳಿಯೋ ಕೆಲವರ ನರಳಾಟ. ಅವಳಿಗೆ ತನ್ನ ಕೈಗಳ ಕೆಳಗೆ, ಲಾರಿಯಲ್ಲಿ ಏನೋ ಒದ್ದೆ-ಒದ್ದೆಯಾದಂತೆ ಕಂಡಿತು. ಅದು ನೀರೂ ಆಗಿರಬಹುದು ಅಥವಾ ರಕ್ತವೂ ಆಗಿರಬಹುದು. ಆಗಲೇ ಲಾರಿಯಲ್ಲಿ ಚಲನೆ ಕಂಡಿತ್ತು. ನಕ್ಷತ್ರಗಳನ್ನು ನೋಡಿದಾಗ, ಅವು ಚಲಿಸುತ್ತಿರುವಂತೆ ತೋರಿತು. ಅವಳ ಗಂಟಲು ಒಣಗುತ್ತಿತ್ತು, ನೀರು ಬೇಕು ಅನ್ನಿಸುತ್ತಿತ್ತು. ನಂತರ ಅವಳಿಗೆ ನಕ್ಷತ್ರಗಳು ತಿರುಗಾಡುತ್ತಿವೆಯೆಂದು ತೋರಿತು, ಕಡೆಗೆ ಅವಳು ಮತ್ತೆ ಪ್ರಜ್ಞೆ ತಪ್ಪಿ ಬಿದ್ದಿದ್ದಳು.

ದಿಲ್ಲಿಗೆ ಬಂದ ಮೇಲೆ ಒಮ್ಮೊಮ್ಮೆ ಮನೋಹರಲಾಲನಿಗೆ, ತಾನಿನ್ನೂ ಶವಗಳ ರಾಶಿಯ ಕೆಳಗೆ ಬಿದ್ದಿದ್ದೇನೆ, ನನ್ನ ಉಸಿರು ಕಟ್ಟುತ್ತಿದೆಯೆಂದು ಅನ್ನಿಸುತ್ತಿತ್ತು. ಅವನು ಆ ರಾಶಿಯಿಂದ ಹೊರಬರಲು ಚಡಪಡಿಸುತ್ತಿದ್ದ. ತಾನು ಅಲ್ಲಿಂದ ಹೊರ ಬರದಿದ್ದರೆ ತಾನು ತುಳಿಯಲ್ಪಡುತ್ತೇನೆಂದು ಅವನಿಗನ್ನಿಸುತ್ತಿತ್ತು. ದಿಲ್ಲಿಯ ರಸ್ತೆಗಳಲ್ಲಿ ವ್ಯರ್ಥವಾಗಿ ಅಲೆಯುತ್ತಿರುವಾಗ, ಒಂದುವೇಳೆ ತಾನು ತನ್ನೆಲ್ಲಾ ವೇಳೆಯನ್ನು ಮಗುವಿಗಾಗಿ ರೋದಿಸುತ್ತಾ ಕಳೆದರೆ, ದಿಲ್ಲಿಯ ಇದೇ ರಸ್ತೆಗಳಲ್ಲಿ ತಾನು ಮತ್ತು ತನ್ನ ಹೆಂಡತಿ ಉಪವಾಸದಿಂದ ಸಾಯಬೇಕಾಗುತ್ತದೆಂದು ಅನ್ನಿಸುತ್ತಿತ್ತು. ನೂರಾರು-ಸಾವಿರಾರು ಶರಣಾರ್ಥಿಗಳು ದಿಲ್ಲಿಯ ಗಲ್ಲಿಗಳಲ್ಲಿ ಅಲೆಯುತ್ತಿದ್ದರು. ಆಶ್ರಯ ಅರಸುತ್ತಿದ್ದರು. ಒಂದು ವೇಳೆ ತಾನು ಎರಡು ಹೊತ್ತಿನ ಊಟವನ್ನು ಕಾಣಬೇಕೆಂದಿದ್ದರೆ ಹಳೆಯದನ್ನೆಲ್ಲಾ ಯೋಚಿಸಬಾರದು, ತನ್ನೊಂದಿಗೆ ಮಾತ್ರವಲ್ಲ, ಎಲ್ಲರೊಂದಿಗೂ ಅದು ಘಟಿಸಿದೆ. ಕೆಲವರು ಅವನಿಗೆ ಸಹಾಯ ಹಸ್ತ ನೀಡಿದರು, ಕೆಲವರು ತಿರುಗಿಯೂ ನೋಡಲಿಲ್ಲ, ಆದರೆ ಕಡೆಗೆ ಅವನು ನೂಕುವ ಗಾಡಿಯಲ್ಲಿ, ಪೇಟಿಯೊಂದರಲ್ಲಿ ತನ್ನ ಅಂಗಡಿಯನ್ನು ಹಾಕಿದ. ಆದರೆ ಹಗಲಿಡೀ ದುಡಿದು ಮನೆಗೆ ಮರಳಿ ಬಂದಾಗ ಅವನ ಹೆಂಡತಿ ಮೌನಿಯಾಗಿ ಒಂದು ಮೂಲೆಯಲ್ಲಿ ಹುಚ್ಚಿಯಂತೆ ಕೂತಿರುತ್ತಿದ್ದಳು, ರಾತ್ರಿವೇಳೆ ಕನವರಿಸುತ್ತಿದ್ದಳು, ಅಥವಾ ಚೀರಾಡುತ್ತಿದ್ದಳು. ಆಗ ಅವನ ಧೈರ್ಯ ಉಡುಗುತ್ತಿತ್ತು. ಒಂದು ವೇಳೆ ಹೆಂಡತಿಗೆ ವಾಸ್ತವವಾಗಿಯೂ ಹುಚ್ಚೇ ಹಿಡಿದರೆ, ನನ್ನಿಂದೆಲ್ಲಿ ಇವಳನ್ನು ನೋಡಿಕೊಳ್ಳಲು ಸಾಧ್ಯ, ಉಳಿದ ಜೀವನವೂ ದುಸ್ತರವಾಗುವುದು. ಮನೋಹರಲಾಲ ಕೌಶಲ್ಯಳನ್ನು ಮೈದಡವುತ್ತಿದ್ದ, ಅವಳ ಕೈಯನ್ನು ತನ್ನ ಕೈಯಲ್ಲಿ ಹಿಡಿದು ತಿಳುವಳಿಕೆ ಹೇಳುತ್ತಿದ್ದ ''ನೋಡು ಕೌಶಲ್ಯಾ, ಅಲ್ಲಾ ಬಯಸಿದರೆ, ನಮಗಿನ್ನೂ ಮಕ್ಕಳಾಗುತ್ತವೆ, ನೀನು ಮನಸ್ಸಿಗೆ ಸಮಾಧಾನ ತಂದುಕೋ'' ಆದರೆ ಮಕ್ಕಳ ಹೆಸರನ್ನು ಕೇಳಿದೊಡನೆಯೇ ಅವಳ ಥರ-ಥರ ಕಂಪಿಸುತ್ತಿದ್ದಳು. ಅವಳು ಕನವರಿಸುವುದನ್ನು ಕಂಡಾಗ ಮನೋಹರಲಾಲನ ಮನಸ್ಸೂ ಕಂಪಿಸುತ್ತಿತ್ತು.

ಹಗಲಿಡೀ ತನ್ನ ನೂಕು ಗಾಡಿಯ ಹಿಂದೆ ನಿಂತಿರುತ್ತಿದ್ದ ಮನೋಹರ ಬಿಡುವಿನ ವೇಳೆಯಲ್ಲಿ ಕಚೇರಿಗಳಿಗೆ ಮತ್ತು ದೊಡ್ಡ ದೊಡ್ಡ ಜನರ ಮನೆಗಳಿಗೆ ಅಲೆಯಲಾರಂಭಿಸಿದ. ಮಹಿಳೆಯರು ಯುವತಿಯರನ್ನು ಪತ್ತೆ ಮಾಡಲು, ಮಾಲುಗಳನ್ನು ಪತ್ತೆ ಮಾಡಿ ವಶಪಡಿಸಿಕೊಳ್ಳಲು ಹಾಗೂ ಕಳೆದುಹೋದವರನ್ನು ಪತ್ತೆ ಮಾಡಲು ಸರ್ಕಾರವು ಅನೇಕ ಕಚೇರಿಗಳನ್ನು ತೆರೆದಿತ್ತು. ಈ ಕಚೇರಿಗಳಲ್ಲಿ ಕೆಲಸ ಮಾಡುವ ಸರ್ಕಾರಿ ನೌಕರರು, ಸಮಾಜ ಸೇವಕರು, ಮತ್ತು ಮಹಿಳೆಯರು ಪುರುಷರು ಈ ಕೆಲಸಕ್ಕಾಗಿ ಸಾಮಾನ್ಯವಾಗಿ ಪಾಕಿಸ್ತಾನಕ್ಕೆ ಹೋಗಿ-ಬಂದು ಮಾಡುತ್ತಿದ್ದರು.

ಮನೋಹರಲಾಲನ ಓಡಾಟವೂ ಪ್ರಾರಂಭವಾಯಿತು, ಆದರೆ ಅವನ ಬಳಿ ಯಾವುದೇ ಆಧಾರವಿರಲಿಲ್ಲ. ತಿಂಗಳ ಮೇಲೆ ತಿಂಗಳುಗಳು ಕಳೆದವು. ಯಾವುದೂ ನಿಶ್ಚಿತವಾಗುತ್ತಿರಲಿಲ್ಲ. ಎಲ್ಲೂ ಯಾವುದೇ ಸುಳಿವು ಸಿಗುತ್ತಿರಲಿಲ್ಲ. ಲಕ್ಷಾಂತರ ಜನರಿಂದ ತುಂಬಿದ ನಗರದಲ್ಲಿ ದಾರಿತಪ್ಪಿದ ಮಗುವೊಂದನ್ನು ಹುಡುಕುವುದು ಸುಲಭದ ಕೆಲಸವಾಗಿರಲಿಲ್ಲ. ಇನ್ನೇನು ತಾನು ನಗರವನ್ನು ತಲುಪುವವನಿದ್ದೇನೆ, ಅಲ್ಲಿಗೆ ಹೋದ ಕೂಡಲೇ ತಾನು ಪಾಲಿಯ ಕೈಯನ್ನು ಬಿಟ್ಟ ಸ್ಥಳಕ್ಕೆ ಹೋಗುವೆ, ಪಾಲಿ ಯಾವುದೋ ಗಲ್ಲಿಯ ಕೂಡು ರಸ್ತೆಯಲ್ಲಿ ನಿಂತು ತನ್ನ ದಾರಿ ಕಾಯುತ್ತಿರುತ್ತಾನೆ,

ತಾನು ಅವನ ಬಳಿಗೆ ಹೋಗಿ ಅವನನ್ನೆತ್ತಿಕೊಂಡು ದಿಲ್ಲಿಗೆ ಬಂದು, ಅವನನ್ನು ಕೌಶಲ್ಯಾಳ ಮಡಿಲಿಗೆ ಹಾಕಿಬಿಡುವೆ ಎಂಬ ಆಸೆಯನ್ನು ಮನೋಹರಲಾಲ ಕಾಣಲಾರಂಭಿಸಿದ.

ಆದರೆ ಇಲ್ಲಿ ಈ 'ಹುಡುಕಾಟ'ದ ತಲೆ-ಬುಡವೇ ಕೈಗೆ ಸಿಗುತ್ತಿರಲಿಲ್ಲ. ಎರಡು ವರ್ಷಗಳ ಕಾಲ ಮಹೋಹರಲಾಲನ 'ಕೇಸು' ಹೀಗೇ ಮುಂದುವರೆಯಿತು. ಸರ್ಕಾರಿ ನೌಕರರ ಮತ್ತು ಸಮಾಜಸೇವಕರ ಗುಂಪು ಪಾಕಿಸ್ತಾನಕ್ಕೆ ಹೋದಾಗಲೆಲ್ಲಾ ಅವನೂ ಗಂಟು-ಮೂಟೆ ಕಟ್ಟಿಕೊಂಡು ಅವರೊಂದಿಗೆ ಹೋಗುತ್ತಿದ್ದ. ಆದರೆ ಪ್ರತಿಯೊಂದು ಬಾರಿಯೂ ತಲೆಯ ಮೇಲೆ ಕೈಹೊತ್ತು ಮರಳಿ ಬರುತ್ತಿದ್ದ.

ಆದರೆ ಎರಡು ವರ್ಷಗಳ ನಂತರ ಸುಳಿವು ಸಿಕ್ಕಿತು. ಇಂಥ ಒಂದು ಗಲ್ಲಿಯಲ್ಲಿ, ಶಕೂರನೆಂಬ ಪಾತ್ರೆ ವ್ಯಾಪಾರಿಯ ಮನೆಯಲ್ಲಿ ಮಗ ವಾಸಿಸುತ್ತಿದ್ದಾನೆಂಬ ವಿಷಯ ತಿಳಿಯಿತು. ಗುಂಪು ಪಾಕಿಸ್ತಾನಕ್ಕೆ ಹೊರಟಾಗ ಮನೋಹರಲಾಲ ಮತ್ತೆ ಭರವಸೆಗಳೊಂದಿಗೆ ಅವರೊಂದಿಗೆ ಹೊರಟ.

★★★★★

ಪೋಲೀಸಿನವನೊಬ್ಬ ಮೊದಲಬಾರಿಗೆ ಸಮನ್ ಹಿಡಿದು ಶಕೂರ್ ಅಹಮದ್‌ನ ಮನೆಗೆ ಹೋದಂದಿನಿಂದ ಜೈನಬ್, ನೀರಿನಿಂದ ಎಸೆಯಲ್ಪಟ್ಟ ಮೀನಿನಂತೆ ಚಡಪಡಿಸುತ್ತಿದ್ದಳು. ಬೆಳಕಿನಂಗಳದಲ್ಲಿ ಸರ್ಪಗಳು ಹರಿದಾಡಲು ಪ್ರಾರಂಭಿಸಿದವು; ಕನಸುಗಳು ಚೂರು-ಚೂರಾಗಲಾರಂಭಿಸಿದವು.

ಆದರೆ ಸಂಜೆಯಾಗುತ್ತಿರುವಂತೆ ಧೈರ್ಯ ಮೂಡಿತು. ಶಕೂರ ಮನೆಗೆ ಬಂದ. ವಿಷಯ ತಿಳಿದು ಅವನ ಮುಖವೂ ಕಳೆಗುಂದಿತು, ಕಾಲುಗಳು ಕಂಪಿಸಿದವು, ನಂತರ ಕೇರಿಯವರಿಗೂ ವಿಷಯ ತಿಳಿಯಿತು. ಅನೇಕರು ಸಹಾನುಭೂತಿ ವ್ಯಕ್ತಪಡಿಸಲು ಬಂದರು. ಮೌಲ್ವಿ ಸಾಹೇಬರೂ ದೊಣ್ಣೆ ಹಿಡಿದು ಬಂದರು.

''ಅವರ ಮನೆ ಹಾಳಾಗ. ನೀನೇನೂ ಯೋಚಿಸಬೇಡ, ಮಗುವನ್ನು ಮುಟ್ಟುವ ಧೈರ್ಯ ಯಾರಿಗಿದೆ, ನೋಡೇ ಬಿಡೋಣ. ಈಗ ಇವನು ನಮ್ಮ ಧರ್ಮವನ್ನು ಒಪ್ಪಿಕೊಂಡಿದ್ದಾನೆ, ನಾವು ಇವನನ್ನು ವಿಧರ್ಮೀಯರಿಗೆ ಒಪ್ಪಿಸಿ ಬಿಡ್ತೀವಿ ಅಂತ ನೀನು ತಿಳಿದುಕೊಂಡಿದ್ದೀಯಾ?''

ಜೈನಬಳ ಮನಸ್ಸಿಗೆ ನೆಮ್ಮದಿಯಾಯಿತು. ಮೌಲ್ವಿಗಳು ಹೇಳುವುದು ಸರಿ, ಈಗ ಇವನು ಈ ಹಿಂದಿನ ಮಗುವಲ್ಲ. ಆಗಲೇ ಇವನನ್ನು ಕರೆದುಕೊಂಡು ಹೋಗಬೇಕಾಗಿತ್ತು, ಆದರೆ ಈಗ ಇವನನ್ನು ಯಾರು ಅದು ಹೇಗೆ ಕರೆದೊಯ್ಯಲು ಸಾಧ್ಯ!

ಹಿರಿಯರ ತಿಳಿವಳಿಕಸ್ಥರ ಸಭೆ ಸೇರಿತು. ಸಮನ್ ಜಾರಿಗೊಳಿಸುವವ ಬಂದರೆ, ಅದರ ಮೇಲೆಯೇ 'ಶಕೂರ್ ಅಹಮದ್ ಊರಿನಲ್ಲಿ ಇಲ್ಲ, ಯಾವಾಗ ಬರುವನೋ ತಿಳಿಯದು' ಎಂದು ಮೌಲ್ವಿಸಾಹೇಬರೇ ಬರೆಯಿಸುವುದು; ಒಂದು ವೇಳೆ ಪದೇ ಪದೇ ಕರೆ ಬಂದರೆ ಕೆಲವು

ದಿನಗಳವರೆಗೆ ಮಗುವಿನೊಂದಿಗೆ ಗಂಡ-ಹೆಂಡತಿ ಇಬ್ಬರೂ ಬೇರೆ ಕಡೆಗೆ ಹೋಗಿದ್ದು ದಿನ ಕಳೆಯುವುದು ಎಂದು ತೀರ್ಮಾನಿಸಲಾಯಿತು.

''ಅವರ ಮನೆ ಹಾಳಾಗ, ನಾವೂ ನೋಡೇ ಬಿಡ್ತೀವಿ. ಅದು ಹೇಗೆ ವಿಧರ್ಮೀಯರು ಮಗುವನ್ನು ಒಯ್ಯುತ್ತಾರೆ ಅಂತ...'' ಎನ್ನುತ್ತಾ ಮೌಲ್ವಿ ಸಾಹೇಬರು ಭರವಸೆಯೊಂದಿಗೆ ಹೊರಟು ಹೋದರು.

ಮತ್ತೆ ವಿಚಿತ್ರ ಕಣ್ಣಾ ಮುಚ್ಚಾಲೆ ಆಟವೊಂದು ಪ್ರಾರಂಭವಾಯಿತು.... ಸರ್ಕಾರದ ಕರಾರುಗಳನ್ನು ಸರ್ಕಾರದ ಮುಖಂಡರು ಮಾಡುತ್ತಾರೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವವರು ಜನಸಾಮಾನ್ಯರೇ. ಇಂಥ ಹುಡುಗನನ್ನು ವಶಪಡಿಸಿಕೊಳ್ಳಿ ಅಂತ ಮೇಲಿನಿಂದ ಆಜ್ಞೆ ಬರುತ್ತದೆ, ಆಗ ಪೋಲಿಸಿನವ ಮೂಗಿಗೆ ನಶ್ಯವೇರಿಸುತ್ತಾ ಅಂಥವರ ಮನೇಗೇ ಹೋಗುತ್ತಿದ್ದ. ಮತ್ತೆ ಸಮನ್ ಹಿಡಿದು ಮರಳಿ ಹೋಗುತ್ತಿದ್ದ- ಸಮನ್‌ನಲ್ಲಿ 'ಮನೆಗೆ ಬೀಗ ಹಾಕಲಾಗಿದೆ, ಮನೆಯ ಜನ ಊರಿನಲ್ಲಿ ಇಲ್ಲ, ಯಾವಾಗ ಮರಳಿ ಬರುವರೋ ತಿಳಿದಿಲ್ಲ' ಎಂದೂ ಬರೆದುಕೊಳ್ಳುವುದನ್ನು ಮರೆಯುತ್ತಿರಲಿಲ್ಲ.

ಇಲ್ಲಿ ಅಲ್ಪ-ಸ್ವಲ್ಪ ಲಂಚದ ವಿಚಾರವಿರಲಿಲ್ಲ, ದತ್ತಕ ತೆಗೆದುಕೊಂಡ ಮಗುವಿನ ಬಗ್ಗೆಯೂ ಇರಲಿಲ್ಲ. ಪ್ರತಿಯಾಗಿ ಇದು ಧರ್ಮದ ವಿಚಾರವಾಗುತ್ತಾ ಗರಿಕೆದರಿಕೊಳ್ಳುತ್ತಲಿತ್ತು. ಮಗುವನ್ನು ಕಳುಹಿಸದೇ ಇರುವುದು ಧರ್ಮವನ್ನು ಪಾಲಿಸುವ, ಸತ್ಕರ್ಮದ ಕೆಲಸವಾಗಿತ್ತು.

ಮತ್ತೆ ತಿಂಗಳುಗಳು- ವರ್ಷಗಳೇ ಕಳೆದವು.

ಒಮ್ಮೆ ಅಧಿಕಾರಿಗಳ ಒಂದು ತಂಡವೇ ಶಕೂರ್ ಅಹಮದ್‌ನ ಮನೆಗೆ ಆಗಮಿಸಿಬಿಟ್ಟಿತು, ಆದರೆ ವಾಸ್ತವವಾಗಿಯೂ ಮನೆಗೆ ಬೀಗವನ್ನು ಹಾಕಲಾಗಿತ್ತು. ರಾತ್ರಿಯೇ ವಿಷಯ ತಿಳಿದು ಶಕೂರ್ ಅಹಮದ್ ತನ್ನ ಕುಟುಂಬದೊಂದಿಗೆ ಎಲ್ಲೋ ತಲೆಮರೆಸಿಕೊಂಡು ಹೊರಟು ಹೋಗಿದ್ದ. ಬಹಳ ವಿಚಾರಣೆಯಾದ ನಂತರ ಶಕೂರ ತನ್ನ ಅಣ್ಣನ ಮನೆಗೆ ಶೇಖ್‌ಪುರಕ್ಕೆ ಹೋಗಿರುವ ವಿಷಯ ತಿಳಿಯಿತು. ಯಾವಾಗ ಬರುವನೋ ತಿಳಿದಿರಲಿಲ್ಲ. ಅಧಿಕಾರಿಗಳ ತಂಡ ಶೇಖ್‌ಪುರಕ್ಕೂ ಹೋದಾಗ, ಒಂದು ದಿನ ಮೊದಲೇ ಶಕೂರ ತನ್ನ ಕುಟುಂಬದೊಂದಿಗೆ ಲಾಯಲ್‌ಪುರಕ್ಕೆ ಹೋಗಿರುವ ವಿಷಯ ತಿಳಿಯಿತು. ''ಹೌದು, ಮಗುವೂ ಅವರೊಂದಿಗಿತ್ತು, ಆದ್ರೆ ಅವರ ವಿಳಾಸ ನಮಗೆ ಗೊತ್ತಿಲ್ಲ, ಅವರು ಹೇಳಿ ಹೋಗಿಲ್ಲ'' ಎಂದರು ಜನ.

ಈ ಕಣ್ಣಾಮುಚ್ಚಾಲೆ ಆಟದಲ್ಲಿ ಮತ್ತೆ ಮೂರು ವರ್ಷಗಳೇ ಕಳೆದವು. ಮನೋಹರಲಾಲನ ಮುಖ ಕಪ್ಪು ವರ್ಣಕ್ಕೆ ತಿರುಗಿತು, ಗಲ್ಲಗಳ ಮೇಲೆ ಆಳವಾದ ಗೆರೆಗಳು ಮೂಡಿದವು, ತಲೆಗೂದಲುಗಳು ಹಣ್ಣಾದವು. ಕಣ್ಣೆದುರಿಗೆ ಸದಾ ಸಂಶಯದ ಧೂಳು ಸುಳಿಯುತ್ತಿತ್ತು. ಯಾವುದು ವಾಸ್ತವ, ಯಾವುದು ಸುಳ್ಳು ಎಂಬ ಪರಿಜ್ಞಾನವೇ ಹೊರಟು ಹೋಯಿತು. ರಣಹದ್ದು ಪಕ್ಷಿಯೊಂದನ್ನು ತನ್ನ ಬಾಯಿಯಲ್ಲಿ ಒತ್ತಿಟ್ಟುಕೊಂಡು ಕೊಡವಿದಂತೆ ಮನೋಹರಲಾಲನ ಜೀವನವು ಅವನನ್ನು ಕೊಡವುತ್ತಿತ್ತು.

ಮನೋಹರಲಾಲನ ದೃಢ ಸಂಕಲ್ಪದಿಂದಾಗಿಯೋ ಅಥವಾ ದುರಾದೃಷ್ಟವಂತೆ ಕೌಶಲ್ಯಾಳ ನಿಟ್ಟುಸಿರಿನ ಪರಿಣಾಮವೋ, ಐದು ವರ್ಷಗಳ ನಂತರ ಮನೋಹರಲಾಲ, ಶಕೂರ್ ಅಹಮದ್‌ನ ಮನೆಯ ಅಂಗಳದಲ್ಲಿ ಕೂತಿದ್ದ. ಅವನೊಂದಿಗೆ ಅಧಿಕಾರಿಗಳೂ ಇದ್ದರು, ಸಮಾಜ ಸೇವಕಿಯರಿದ್ದರು, ಪಾಕಿಸ್ತಾನ ಸರ್ಕಾರದ ವತಿಯಿಂದ ಮ್ಯಾಜಿಸ್ಟ್ರೇಟ್ ಸಹ ಬಂದಿದ್ದರು. ಇಬ್ಬರು ಪೋಲೀಸ್ ಅಧಿಕಾರಿಗಳೂ ಇದ್ದರು. ವಾಸ್ತವವಾಗಿ, ಮನೋಹರಲಾಲ ತನ್ನ ಸಂಬಂಧಿಕರೊಬ್ಬರಿಂದ ಉನ್ನತ ದರ್ಜೆಯ ಸರ್ಕಾರಿ ಅಧಿಕಾರಿಗಳಿಗೆ ಈ ಬಗ್ಗೆ ಶಿಫಾರಸ್ ಮಾಡಿಸಿದ್ದ. ಆ ಅಧಿಕಾರಿ ಪಾಕಿಸ್ತಾನದ ಉನ್ನತ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದ್ದ, ಹೀಗಾಗಿ ವಿಷಯ ಮುಂದುವರೆದು ಇಲ್ಲಿಯವರೆಗೆ ಬಂದಿತ್ತು. ಇಂದು ಕಾನೂನು ಕ್ರಮ ಜರುಗುವುದಿತ್ತು. ಮಗು ಮನೋಹರಲಾಲನದ್ದು ಎಂದು ಸಾಬೀತಾದರೆ ಅದು ಅವನಿಗೆ ಸೇರುತ್ತಿತ್ತು.

ಅಂಗಳದಲ್ಲಿನ ವಾತಾವರಣದಲ್ಲಿ ಬಿಗುವು ಕವಿದಿತ್ತು. ಒಂದೆಡೆ, ಅಧಿಕಾರಿಗಳಿಂದ ದೂರವಾಗಿ, ಮೌಲ್ವಿ ಸಾಹೇಬರು ಕೂತಿದ್ದರು. ಮನೆಯ ಹೊರಗೆ ಮೊಹಲ್ಲಾದ ಹತ್ತು-ಹದಿನೈದು ಮಂದಿ ನಿಂತಿದ್ದರು. ಗೋಣಿತಟ್ಟಿನ ಪರದೆಯ ಹಿಂದೆ, ವರಾಂಡದಲ್ಲಿ ಜೈನಬ್ ಕೂತಿದ್ದಳು. ಹಳದಿ ಮುಖ, ಬೆಂಕಿಯ ಜ್ವಾಲೆಯಂತಹ ಕಣ್ಣುಗಳು, ಗೂಡಿನಿಂದ ಯಾರೋ ತನ್ನ ಮೊಟ್ಟೆಯನ್ನು ಅಪಹರಿಸುತ್ತಿದ್ದಾರೆ.... ಅವಳ ಕಣ್ಣುಗಳು ಹದ್ದಿನ ಕಣ್ಣುಗಳಾಗುತ್ತಿದ್ದವು. ಒಂಭತ್ತು ವರ್ಷದ ಪಾಲಿ-ಈಗ ಇಲ್ತಾಫ್ ಹುಸೈನ್-ಅವಳೊಂದಿಗೆ ಆತು ಕೂತಿದ್ದ- ಅವನೂ ಬೆರಗಾಗಿದ್ದ, ಹೆದರಿದ್ದ. ಜೈನಬ್ ವ್ಯಾಕುಲಳಾಗಿ ಪದೇ ಪದೇ ಅವನನ್ನು ಬಾಹುಗಳಲ್ಲಿ ಒತ್ತಿಕೊಳ್ಳುತ್ತಿದ್ದಳು.

ಕಾರ್ಯಕಲಾಪ ಪ್ರಾರಂಭವಾಗುವುದಕ್ಕೂ ಮೊದಲೇ ಮೌಲ್ವಿ ಸಾಹೇಬರು ನಾನಾ ರೀತಿಯಲ್ಲಿ ಮಾತನಾಡುತ್ತಿದ್ದರು-

''ಯಾರೂ ಮಗುವನ್ನು ತೆಗೆದುಕೊಂಡು ಹೋಗಲಾರರು, ಯಾವ ವಿಧರ್ಮಿಯೂ ಅವನನ್ನು ಮುಟ್ಟಲಾರ''

'ಮೌಲ್ವಿ ಸಾಹೇಬರು ಸುಮ್ಮನಿರುವಂತೆ ಆಜ್ಞಾಪಿಸಿ, ಇಲ್ಲದಿದ್ದರೆ ವಾತಾವರಣದಲ್ಲಿ ಬಿಗುವು ಉಂಟಾಗುತ್ತೆ' ಎಂದು ಭಾರತದಿಂದ ಬಂದ ತಂಡ ಪದೇ ಪದೇ ಮ್ಯಾಜಿಸ್ಟ್ರೇಟ್‌ರಲ್ಲಿ ಮನವಿ ಮಾಡಿಕೊಳ್ಳುತ್ತಿತ್ತು.

ದೇಶ ವಿಭಜನೆಯ ನಂತರ ರಸ್ತೆಗಳಲ್ಲಿ ಗಲ್ಲಿಗಳಲ್ಲಿ ರಕ್ತದ ಹನಿಗಳಂತೂ ಒಣಗಿದ್ದವು. ಆದರೆ ಅದರ ಕಲೆ ಮಾತ್ರ ಇನ್ನೂ ಅಳಿಸಿರಲಿಲ್ಲ. ಉರಿಯುವ ಮನೆಗಳ ಬೆಂಕಿಯಂತೂ ತಣ್ಣಗಾಗಿತ್ತು, ಆದರೆ ಅವುಗಳ ಕಪ್ಪು ಅಸ್ತಿ ಪಂಜರಗಳು ಮಾತ್ರ ಇನ್ನೂ ಅಲ್ಲಲ್ಲಿ ನಿಂತಿದ್ದವು. ವಿಭಜನೆಯ ಸಮಯದ 'ಹುಚ್ಚು'ಂತೂ ಬಹಳಷ್ಟು ತಣ್ಣಗಾಗಿತ್ತು, ಆದರೆ ಅದರ ಅಳಿದುಳಿದ ಪರಿಣಾಮ ಮಾತ್ರ ಇನ್ನೂ ಜನರ ಸ್ಮೃತಿಯಿಂದ ಅಳಿಸಿರಲಿಲ್ಲ.

''ಮಗುವನ್ನು ಕರೆಸಿ'' ಮ್ಯಾಜಿಸ್ಟ್ರೇಟರು ಆಜ್ಞಾಪಿಸಿದರು.

''ನಾವು ಯಾರ ಮಕ್ಕಳನ್ನು ಅಪಹರಿಸಿಲ್ಲ, ನಾವ್ಯಾಕೆ ಮಗುವನ್ನು ಕಳಿಸಬೇಕು?'' ಜೈನಬ್ ಚಡಪಡಿಸಿದಳು.

''ಮಗುವನ್ನು ಕರೆಸಿ'' ಮ್ಯಾಜಿಸ್ಟ್ರೇಟರು ಮತ್ತೆ ಹೇಳಿದಾಗ ಶಕೂರ್ ಅಹಮದ್ ಗೋಣಿತಟ್ಟಿನ ಪರದೆಯ ಬಳಿಗೆ ಹೋದ.

ಮನೋಹರಲಾಲನ ಎದೆ ಡವ ಡವನೆ ಬಡಿದುಕೊಳ್ಳುತ್ತಿತ್ತು. ತನ್ನ ಅದೃಷ್ಟವನ್ನು ತೀರ್ಮಾನಿಸುವಂಥ ನಿರ್ಣಾಯಕ ಗಳಿಗೆಯೊಂದು ಮತ್ತೆ ಬಂದಿತ್ತು. ಅವನ ಮನಸ್ಸು ಮಗುವನ್ನು ಮತ್ತೆ ನೋಡಲು ಕಾತರಿಸುತ್ತಿತ್ತು, ಜೊತೆಗೆ ಸಂಶಯ ಮತ್ತು ಭಯವೂ ಮನಸ್ಸನ್ನು ಆವರಿಸಿತ್ತು.

ಮಗು ಎದುರಿಗೆ ಬಂದಿತು. ಅಂಗಳದಲ್ಲಿ ಜನರ ಗುಂಪು ನೋಡಿ ಮಗು ಮತ್ತೂ ಹೆದರಿ ಶಕೂರನನ್ನು ಅಪ್ಪಿಕೊಂಡಿತು. ಬಾಯಿಯಲ್ಲಿ ಬೆರಳಿಟ್ಟುಕೊಂಡು ಸುತ್ತಮುತ್ತ ನಿಂತ ಜನರನ್ನು ನೋಡಿತು.

''ಮಗು, ಇತ್ತಬಾ, ನೋಡು, ಇವರ್‍ಯಾರು? ಇವರಲ್ಲಿ ಯಾರನ್ನಾದರೂ ನೀನು ಗುರುತಿಸಬಲ್ಲೆಯಾ?'' ಮ್ಯಾಜಿಸ್ಟ್ರೇಟರು ಮಗುವನ್ನೇ ನೋಡಿದರು.

ಆಗಲೇ ಪೋಲೀಸ್ ಅಧಿಕಾರಿ ಹೇಳಿದ, ''ಯಾರೂ ಮಾತನಾಡಬಾರದು, ಮಗುನೇ ಗುರುತು ಹಿಡಿಯಲಿ''

ಮೋಹನಲಾಲನೇ ತನ್ನ ಮಗನನ್ನು ಗುರುತಿಸಲು ಸಾಧ್ಯವಾಗಲಿಲ್ಲ. ಒಂಭತ್ತು ವರ್ಷದ ಹುಡುಗ ಎತ್ತರದ ನಿಲುವು, ತಲೆಯ ಮೇಲೆ ರೇಶ್ಮೆ ಟೋಪಿ. ಮಲ್ಲಿನ ಜುಬ್ಬ, ಸಲ್ವಾರ್ ಧರಿಸಿದ್ದ. ಮನೋಹರಲಾಲನ ಕಣ್ಣುಗಳೇ ಅವನಿಗೆ ಮೋಸ ಮಾಡುತ್ತಿದ್ದವು. ತುಂಬಾ ಹೊತ್ತು ಅವನು ಹುಡುಗನನ್ನೇ ನೋಡಿದ, ನಂತರ ಇದ್ದಕ್ಕಿದ್ದಂತೆ ಮಗುವಿನ ಗುರುತು ತಲೆಗೆ ಹೊಳೆದು, ಅವನ ಗಂಟಲು ಒತ್ತಿ ಬಂತು. ಅವನು ಕಿರುಚಿ 'ಪಾಲಿ! ಮಗು ಪಾಲಿ!' ಎಂದು ಹೇಳಲು ಬಯಸುತ್ತಿದ್ದ ಆದರೆ ಬಹು ಕಷ್ಟದಿಂದ ತನ್ನನ್ನು ತಡೆದುಕೊಂಡ.

ತಂದೆಯನ್ನು ನೋಡಿಯೂ ಮಗುವಿನ ಮುಖದಲ್ಲಿ ಯಾವುದೇ ಪರಿವರ್ತನೆ ಕಾಣಬರಲಿಲ್ಲ. ಮೊದಲೇ ಮಗು ಹೆದರಿತ್ತು, ಜನರನ್ನು ನೋಡಿ ಮತ್ತೂ ಹೆದರಿತು. ಮನೋಹರಲಾಲ ನಿಂತು ಹುಡುಗನನ್ನೇ ನೋಡುತ್ತಿದ್ದ. ಮಗುವಿನ ಶರೀರ ತುಂಬಿಕೊಂಡಿತ್ತು, ಅವನು ಎತ್ತರವಾಗಿ ಬೆಳೆದಿದ್ದ, ಬೆಳ್ಳಗಿದ್ದು ಸುಂದರನಾಗಿದ್ದ.

ನಿರ್ಣಾಯಕ ಗಳಿಗೆ ಬಂದು, ಹೊರಟು ಹೋಯಿತು. ಏನೂ ಆಗಲೇ ಇಲ್ಲ. ಇನ್ನು ಅವನು ಮತ್ತೆ ಬೆಂಗಾಡಿನಲ್ಲಿ ಅಲೆಯಬೇಕು ಎಂದು ಅವನಿಗನ್ನಿಸಿತು.

ಸುತ್ತಮುತ್ತಲಿನ ಮೌನವನ್ನು ಭೇದಿಸುತ್ತಾ ಮೌಲ್ವಿ ಸಾಹೇಬರು ಹೇಳಿದರು-

''ನೋಡಿದಿರಲ್ಲ! ಮಗು ಗುರುತು ಹಿಡಿಯಲಿಲ್ಲ. ಮಗು ಇವರದ್ದಾಗಿದ್ದರೆ, ಓಡಿ ಇವರ ಹತ್ರ ಬರ್‍ತಿತ್ತು. ಬಂದು ಬಿಟ್ರು, ಮಗುವನ್ನು ಕರೆದುಕೊಂಡು ಹೋಗೋದಕ್ಕೆ!''

ಸಮಾಜಸೇವಕಿ ಉದ್ವಿಗ್ನಳಾಗಿ ಹೇಳಿದಳು, ''ಮಗು, ಇತ್ತ ಬಾರಪ್ಪ ನೋಡು ಇವರ‍್ಯಾರು ಅಂತಾ?''

ಆಗ ಪೋಲೀಸ ಅಧಿಕಾರಿ ಮತ್ತೆ ಕಿರುಚಿ ಹೇಳಿದ, ''ಯಾರೂ ಮಾತನಾಡ ಬಾರದು, ಮಗುವೇ ಗುರುತು ಹಿಡಿಯಲಿ ಅಂತ ನಾನಾಗಲೇ ಹೇಳಿಬಿಟ್ಟಿರುವೆ''

ಒಳಗೆ ಜೈನಬ್ ಉಸಿರು ಬಿಗಿ ಹಿಡಿದು ಕೂತಿದ್ದಳು. ಅವಳ ಮನಃಸ್ಥಿತಿಯನ್ನು ವರ್ಣಿಸಲು ಸಾಧ್ಯವಿರಲಿಲ್ಲ.

ಸಮಾಜಸೇವಕಿಯು ಶಕೂರನೆಡೆಗೆ ನೋಡುತ್ತಾ ಹೇಳಿದಳು, ''ಮಗು ನಿಮ್ಮದಲ್ಲ ಅಂತ ನೀವು ಒಪ್ಪಿಕೊಂಡಿದ್ದೀರಿ, ನೀವು ದತ್ತಕ ತೆಗೆದುಕೊಂಡಿದ್ದೀರಿ.''

ಉತ್ತರದಲ್ಲಿ ಶಕೂರ್ ಅಹಮದ್ ಏನೋ ಹೇಳಲು ಬಯಸಿದಾಗ ಮೌಲ್ವಿ ಸಾಹೇಬರು ದೊಣ್ಣೆಯನ್ನು ಕುಟ್ಟುತ್ತ ಹೇಳಿದರು, ''ಮಗುವನ್ನು ದತ್ತಕ ತೆಗೆದುಕೊಂಡ ಬಗ್ಗೆ ನಾವೂ ಎರಡು ಮಾತಾಡಲ್ಲ, ಆದರೆ ಮಗು ಹಿಂದೂ ಜಾತಿಗೆ ಸೇರಿದ್ದು, ಅದೂ ಇವರಿಗೆ ಸೇರಿದ್ದು ಅಂತ ಯಾರು ತಾನೇ ಹೇಗೆ ನಂಬಲು ಸಾಧ್ಯ?''

ಮ್ಯಾಜಿಸ್ಟ್ರೇಟರು ತಲೆಯಾಡಿಸಿದರು, ಅವರು ತದೇಕ ಚಿತ್ತದಿಂದ ಒಮ್ಮೆ ಹುಡುಗನನ್ನು ಮತ್ತೊಮ್ಮೆ ಮನೋಹರಲಾಲನನ್ನು ನೋಡುತ್ತಿದ್ದರು. ಮನೋಹರಲಾಲ ಹತಾಶನಾಗುತ್ತಿದ್ದ. ಮಗು ಎದುರಿಗೇ ನಿಂತಿದ್ದಾಗ್ಯೂ ಅವನು ಏನೂ ತೋಚದೆ ಮಗುವನ್ನಷ್ಟೇ ನೋಡುತ್ತಿದ್ದಾನೆ. ಬದುಕಿನ ನಿರ್ಣಾಯಕ ಗಳಿಗೆ ಬೆರಳುಗಳಿಂದ ಜಾರಿ ಹೋಗುತ್ತಿದೆ.

''ಮಗು ಹೆದರಿ ಬಿಟ್ಟಿದೆ'' ಸಮಾಜ ಸೇವಕಿ ಹೇಳಿದಳು.

''ನೀವು ಸುಮ್ನಿರಿ''

''ಸಾಕು, ಮತ್ತೇನು ನೋಡ್ತೀರ, ಹೊರಟು ಹೋಗಿ'' ಮೌಲ್ವಿ ಸಾಹೇಬರು ಗುಡುಗಿದರು.

ಆಗಲೇ ಸಮಾಜ ಸೇವಕಿ ಮನೋಹರಲಾಲನಿಗೆ ಹೇಳಿದಳು,''ನೀವು ನನಗೆ ತೋರಿಸುತ್ತಿದ್ದಿರಲ್ಲ, ಆ ಫೋಟೋ ಎಲ್ಲಿದೆ?''

ಸಾಕ್ಷಿಯ ರೂಪದಲ್ಲಿ ತರಲು ಮನೋಹರಲಾಲನ ಬಳಿ ಬೇರೇನೂ ಇರಲಿಲ್ಲ, ಹೀಗಾಗಿ ಅವನು ಒಂದು ಚಿಕ್ಕ ಫೋಟೋವನ್ನು ತನ್ನೊಂದಿಗೆ ತಂದಿದ್ದ. ವೈಶಾಖಮಾಸದ ಜಾತ್ರೆಯ ಸಮಯದಲ್ಲಿ ಕೌಶಲ್ಯಾಳ ಒತ್ತಾಯಕ್ಕೆ ಎಳೆಯ ಮಗುವಿನೊಂದಿಗೆ ತನ್ನ ಮತ್ತು ಕೌಶಲ್ಯಾಳ ಫೋಟೋವನ್ನು ಅವನು ತೆಗೆಸಿಕೊಂಡಿದ್ದ. ಫೋಟೋದಲ್ಲಿ ಎಳೆಯ ಪಾಲಿ ತಾಯಿಯ ಮಡಿಲಿನಲ್ಲಿ ಕೂತಿದ್ದ. ಆದರೆ ಈಗ ಅದರಿಂದೇನು ಪ್ರಯೋಜನ? ಮಗು ಈಗ ಎಷ್ಟು ದೊಡ್ಡವನಾಗಿದ್ದಾನೆಂದರೆ ಫೋಟೋದಲ್ಲಿ ಅವನನ್ನು ಗುರುತಿಸುವುದೇ ಕಷ್ಟವಾಗುತ್ತಿತ್ತು.

ಅವನು ಜೇಬಿನಿಂದ ಫೋಟೋ ತೆಗೆದು ಮ್ಯಾಜಿಸ್ಟ್ರೇಟರ ಕೈಗೆ ಹಾಕಿದ.

''ಈ ಫೋಟೋದಲ್ಲಿರುವ ಮಗು ಇವನೇ, ನೀವೇ ನೋಡಿ'' ಈ ಮಾತು ಕೇಳಿದ ಶಕೂರ್ ಅಹಮದ್ ಉತ್ತೇಜಿತನಾಗಿ ಹೇಳಿದ, ''ಫೋಟೋದಿಂದೇನಾಗುತ್ತೆ, ಸ್ವಾಮಿ! ಫೋಟೋ ನನ್ನ ಹತ್ರಾನೂ ಇದೆ'' ಅವನು ಆ ಕೂಡಲೇ ಒಳ ಹೋಗಿ ಒಂದು ಫ್ರೇಮ್ ಹಾಕಿದ ಫೋಟೋವನ್ನು ಅಂಗಿಯ ತೋಳಿನಿಂದ ಒರಸುತ್ತ ಹೊರಬಂದು, ಅದನ್ನು ಮ್ಯಾಜಿಸ್ಟ್ರೇಟರ ಎದುರಿಗಿಟ್ಟ.

ಮನೋಹರಲಾಲ ಕೊಟ್ಟಿದ್ದ ಫೋಟೋ ಇನ್ನೂ ಮ್ಯಾಜಿಸ್ಟ್ರೇಟ್‌ರವರ ಕೈಯಲ್ಲಿತ್ತು.

''ಈ ಕಡೆ ಬಾ ಮಗು!'' ಮ್ಯಾಜಿಸ್ಟ್ರೇಟರು ಬಾಲಕನನ್ನು ತಮ್ಮ ಬಳಿ ಕರೆದು ಫೋಟೋವನ್ನು ಅವನೆದುರಿಗಿಟ್ಟರು. ಈ ಬಗ್ಗೆ ತಮ್ಮ ಕಡೆಯಿಂದ ಏನೂ ಹೇಳಲಿಲ್ಲ. ಮಗು ತನ್ನ ಮುಖವನ್ನು ಎಂದಿಗೂ ಗುರುತಿಸಲಾರದೆಂಬ ವಿಷಯ ಅವರಿಗೆ ತಿಳಿದಿತ್ತು.

ಫೋಟೋವನ್ನು ತುಂಬಾ ಹೊತ್ತು ಬಾಲಕ ನೋಡಿದ, ಕಡೆಗೆ ತನ್ನ ತೋರಬೆರಳನ್ನು ಅದರ ಮೇಲಿಟ್ಟು ಗಟ್ಟಿಯಾಗಿ ''ಅಪ್ಪಾ!'' ಎಂದ. ನಂತರ ತೋರಬೆರಳನ್ನು ಕೌಶಲ್ಯಾಳ ಮುಂದ ಮೇಲಿಟ್ಟು ಅಮ್ಮಾ'' ಎಂದ

ಒಂದು ರೀತಿಯ ಚಿಂತೆ ಬಾಲಕನ ಮನಸ್ಸಿನಲ್ಲಿ ಕಾಡಲಾರಂಭಿಸಿತು.

ಮನೋಹರಲಾಲ ಬಿಕ್ಕಳಿಸಿ ರೋದಿಸಿದ, ತನ್ನ ಬಿಕ್ಕಳಿಕೆಯನ್ನು ಹತ್ತಿಕ್ಕಲು ತನ್ನ ಮುಂಡಾಸಿನ ಕುಚ್ಚನ್ನು ಬಾಯಿಗೆ ತುರುಕಿಕೊಂಡ.

ಮ್ಯಾಜಿಸ್ಟ್ರೇಟರು ಎರಡನೆಯ ಫೋಟೋವನ್ನು ಬಾಲಕನ ಎದುರಿಗಿಟ್ಟರು. ಅವನ ಮುಖ ಅರಳಿತು. ಅವನು ಒಮ್ಮೆಲೆ ''ಅಬ್ಬಾ! ಅಮ್ಮಿ! ಎಂದ.

ಶಕೂರನ ಮನಸ್ಸಿನಲ್ಲಿ ಉಲ್ಲಾಸದ ಅಲೆ ಎದ್ದಿತು.

ಗೋಣಿತಟ್ಟಿನ ಹಿಂದೆ ಕೂತಿದ್ದ ಜೈನಬಳ ಕಣ್ಣುಗಳು ತೇವಗೊಂಡವು.

ಮೌಲ್ವಿ ಸಾಹೇಬರು ಸಿಟ್ಟಿನಿಂದ ಕುದಿಯುತ್ತಿದ್ದರು. ಆದರೆ ಈಗ ಮಗುವಿನ ಉತ್ತರ ಕೇಳಿ ಸ್ವಲ್ಪ ನೆಮ್ಮದಿಯ ಉಸಿರಾಡಿದರು.

''ಈಗ ಇವನು ಮುಸಲ್ಮಾನರ ಮಗ, ವಿಧರ್ಮೀಯರ ಮಗನಲ್ಲ. ಈಗ ಇವನು ಕುರಾನಿನ ವಾಕ್ಯವನ್ನು ಓದಿದ್ದಾನೆ.''

''ನೀವು ಸುಮ್ಮನಿರಿ'' ಸಮಾಜಸೇವಕಿ ಗುಡುಗಿದಳು.

''ಯಾಕೆ ಸುಮ್ಮನಿರಲಿ? ಇವರು ಮಗುವನ್ನು ಎಸೆದು ಹೋಗಿದ್ದರು. ಸಾಕಿದ್ದು ನಾವು'' ಮೌಲ್ವಿ ಸಾಹೇಬರು ಮತ್ತೂ ಗಟ್ಟಿಯಾಗಿ ಗುಡುಗಿದರು.

ಮೌಲ್ವಿಯವರ ಆರ್ಭಟ ಕೇಳಿ ಮೊದಲು ಬಾಲಕ ಶಕೂರನ ಕಾಲುಗಳ ಮಧ್ಯೆ ಅಡಗಿಕೊಂಡ, ನಂತರ ಓಡಿ ಹೋಗಿ ಗೋಣಿ ತಟ್ಟಿನ ಪರದೆಯ ಹಿಂದೆ ಹೋದ.

ಒಳಗಿನ ಗದ್ದಲ ಹೊರಗೂ ಕೇಳಿಸುತ್ತಿತ್ತು. ಹೊರಗೆ ಘೋಷಣೆಗಳು ಕೇಳಿ ಬಂದವು-

''ಅಲ್ಲಾಹ್-ಓ-ಅಕ್ಬರ್!''

ಸಮಾಜ ಸೇವಕಿ ಮತ್ತು ಭಾರತದಿಂದ ಬಂದ ಇಬ್ಬರು ಅಧಿಕಾರಿಗಳೂ, ಈಗ ಮಗು ತಂದೆಯನ್ನು ಗುರುತಿಸಿದೆ, ಮಗುವನ್ನು ತಂದೆಗೆ ಒಪ್ಪಿಸಬೇಕೆಂದು ಒತ್ತಾಯಿಸುತ್ತಿದ್ದರು. ಆದರೆ ಪರಿಸ್ಥಿತಿ ಬಿಗಡಾಯಿಸುತ್ತಿತ್ತು. ವಾತಾವರಣದಲ್ಲಿ ಮತ್ತೆ ಬಿಗಿತ ಕಾಣಿಸಿಕೊಂಡಿತ್ತು. ಅತ್ತ ಬಾಲಕ, ಗೋಣಿ ತಟ್ಟಿನ ಪರದೆಯ ಹಿಂದೆ, ಹೆದರಿ ಜೈನಬಳ ಮಡಿಲಿನಲ್ಲಿ ತಲೆಯಿಟ್ಟು ಅವಳ ಕತ್ತನ್ನ ಬಳಸಿದ್ದ.

ಮಗು ಯಾರಿಗೆ ಸೇರಿದ್ದು ಅಥವಾ ಯಾರು ಸಾಕಿದರು ಎಂಬ ವಿಷಯ ಗೌಣವಾಗಿ ಮತ್ತೆ ಹಿಂದೂ-ಮುಸ್ಲಿಮ್ ವಿಷಯಕ್ಕೆ ತಿರುಗುತ್ತಿತ್ತು.

ಮನೋಹರಲಾಲನಿಗೆ ಮತ್ತೇನೂ ಹೊಳೆಯಲಿಲ್ಲ, ಅವನು ಮೌನಿಯಾಗಿ ಬಂದು ಗೋಣಿತಟ್ಟಿನ ಪರದೆಯ ಬಳಿ ನಿಂತು ಎರಡೂ ಕೈಗಳನ್ನು ಜೋಡಿಸಿ ಹೇಳಿದ-

''ತಂಗಿ, ನಾನು ನಿನ್ನಿಂದ ಮಗುವನ್ನಲ್ಲ, ನನ್ನ ಹೆಂಡತಿಯ ಪ್ರಾಣದ ಭಿಕ್ಷೆ ಬೇಡಲು ಬಂದಿರುವೆ. ಅವಳು ತನ್ನೆರಡೂ ಮಕ್ಕಳನ್ನು ಕಳೆದುಕೊಂಡಿದ್ದಾಳೆ. ಪಾಲಿಯಿಲ್ಲದೆ ಅವಳು ಹುಚ್ಚಿಯಾಗುತ್ತಿದ್ದಾಳೆ. ಹಗಲೂ-ರಾತ್ರಿ ಒದ್ದಾಡುತ್ತಿರುತ್ತಾಳೆ. ಅವಳ ಮೇಲಾದರೂ ಕರುಣೆ ತೋರು''

ಗೋಣಿತಟ್ಟಿನ ಪರದೆಯ ಹಿಂದೆ ಮೌನ ಕವಿದಿತ್ತು. ಅಧಿಕಾರಿಗಳೂ ಮೌನರಾದರು, ಅವರೂ ಪರದೆಯೆಡೆಗೇ ನೋಡಿದರು. ಮೌಲ್ವಿ ಸಾಹೇಬರೂ ಎದ್ದು ನಿಂತರು. ಉತ್ತರದಲ್ಲಿ ಪರದೆಯ ಹಿಂದಿನಿಂದ ಮನೋಹರಲಾಲನಿಗೆ ಕೇವಲ ನಿಂದನೆಯ ಮಾತುಗಳೇ ಬರುವುದೆಂಬ ವಿಶ್ವಾಸ ಅವರಿಗಿತ್ತು.

ಆದರೆ ಒಂದು ಶಿಥಿಲವಾದ ಧ್ವನಿ ಕೇಳಿಸಿತು-

''ನಿಮ್ಮ ಮಗನನ್ನು ಕರೆದುಕೊಂಡು ಹೋಗಿ, ಒಬ್ಬ ದುರಾದೃಷ್ಟೆಯ ಶಾಪವನ್ನು ನಾವು ಬಯಸುವುದಿಲ್ಲ... ನಿಮ್ಮ ಇಬ್ಬರು ಮಕ್ಕಳೂ ಕಳೆದುಹೋಗಿರುವ ವಿಷಯ ನಮಗೇನು ಗೊತ್ತು''

ಗೋಣಿತಟ್ಟಿನ ಪರದೆಯ ಹಿಂದೆ ಹೋಗಿ ಆ ಹೆಣ್ಣಿನ ಪಾದಗಳನ್ನು ಮುಟ್ಟಬೇಕೆಂದು ಮನೋಹರಲಾಲನಿಗೆ ಅನ್ನಿಸಿತು.

ಸುಮಾರು ಒಂದು ಗಂಟೆಯ ನಂತರ ಮಗುವಿನ ಬೀಳ್ಕೊಡಿಗೆಗೆ ಸಿದ್ಧತೆಯಾಯಿತು. ಜೈನಬ್ ಮತ್ತು ಶಕೂರ ಇಬ್ಬರೂ ರೋದಿಸುತ್ತ ಮಗುವಿಗೆ ಬಿಳಿಯ ಉಡುಪುಗಳನ್ನು ತೊಡಿಸಿದರು, ಆ ಉಡುಪನ್ನು ಅವರು 'ಈದ್'ಗಾಗಿ ಹೊಲಿಸಿದ್ದರು. ಅವನ ತಲೆಗೆ ರೋಮದ ಟೋಪಿಯನ್ನು ಹಾಕಿದರು. ಮಗುವನ್ನು ಹೊರಗೆ ಕಳಿಸುವುದಕ್ಕೂ ಮೊದಲು ಗೋಣಿತಟ್ಟಿನ ಪರದೆಯ ಹಿಂದೆ ನಿಂತು ಜೈನಬ್ ಹೇಳಿದಳು, ''ಆದರೆ ಒಂದು ಶರತ್ತಿನ ಮೇಲೆ ಮಗುವನ್ನು ಕೊಡ್ತೀನಿ... ಪ್ರತಿ

ವರ್ಷ ಈದ್ ವೇಳೆಗೆ ಇವನನ್ನು ನಮ್ಮ ಮನೆಗೆ ಕಳಿಸಬೇಕು. ಒಂದು ತಿಂಗಳ ಕಾಲ ಇವನು ಇಲ್ಲಿ ಇರ್ತಾನೆ. ಹೇಳಿ, ನಿಮಗೆ ಒಪ್ಪಿಗೆಯಾ? ಮಾತು ಕೊಡಿ''.

ಮನೋಹರಲಾಲ ಸಂತೋಷದಿಂದ ಆಪಾದಮಸ್ತಕ ಕಂಪಿಸಿದ. ಹಾಗೆಯೇ ಕೈ ಜೋಡಿಸಿ ಹೇಳಿದ-

''ತಂಗಿ, ಇವನು ನಿನಗೂ ಆಸ್ತಿಯೇ! ನೀನು ಇವನನ್ನು ಸಾಕಿ ಬೆಳಸಿದ್ದೀಯ. ನಾನು ಮಾತು ಕೊಡ್ತೀನಿ. ನಾನು ಜೀವಮಾನವಿಡೀ ನಿನ್ನ ಉಪಕಾರವನ್ನು ಮರೆಯುವುದಿಲ್ಲ.

★★★★★

ಜೀವನದ ರಥ ಮತ್ತೆ ಸಾಗಲಾರಂಭಿಸಿತು. ಮತ್ತೆ ಅದೇ ವಕ್ರ-ವಕ್ರ ರಸ್ತೆಗಳು, ಅದೇ ತಿರುವುಗಳು, ಅದೇ ಏರಿಳಿತಗಳು. ವಿಷಯ ಇಲ್ಲಿಗೇ ಮುಗಿದಿದ್ದರೆ, ಈ ಸಂಪೂರ್ಣ ದಸ್ತಾವೇಜು ಒಂದು ಕಥೆಯಾಗಿ ಬಿಡುತ್ತಿತ್ತು, ಆದರೆ ವಿಷಯ ಇಲ್ಲಿಗೇ ಕೊನೆಗೊಳ್ಳಲಿಲ್ಲ. ಯಾವ ವಿಷಯವೂ ಎಂದಿಗೂ ಮುಗಿಯುವುದಿಲ್ಲ.

ಸಮಾಜಸೇವಕಿ ಮತ್ತು ಅಧಿಕಾರಿಗಳು 'ಪತ್ತೆಮಾಡುವುವವರ ಪಟ್ಟಿಯಿಂದ' ಮತ್ತೊಂದು ಹೆಸರಿನ ಮೇಲೆ ಗೆರೆ ಎಳೆದು, ಅದನ್ನು ತಮ್ಮ 'ಪ್ರಾಪ್ತ ಪಟ್ಟಿ'ಯಲ್ಲಿ ಸೇರಿಸಿಕೊಂಡರು.

ಸರಕಾರದ ಜೀಪ್ ವೇಗವಾಗಿ ಬರುತ್ತಿತ್ತು. ಮುಂದಿನ ಸೀಟಿನಲ್ಲಿ ಡ್ರೈವರ್‌ನೊಂದಿಗೆ ಬಂದೂಕು ಹಿಡಿದ ಪೋಲೀಸ್ ಕಾನ್ಸ್‌ಟೇಬಲ್ ಕೂತಿದ್ದ. ಅವನ ಬಳಿಯೇ ಪೋಲೀಸ್ ಅಧಿಕಾರಿಯೂ ಕೂತಿದ್ದ. ಹಿಂದಿನ ಭಾಗದಲ್ಲಿ ಒಂದೆಡೆಗೆ ತಂದೆ-ಮಗ ಒತ್ತಿಕೊಂಡು ಕೂತಿದ್ದರು, ಅವರೆದುರು ಸಮಾಜ ಸೇವಕಿ, ಸಮಾಜ ಸೇವಕರು ಹಾಗೂ ಭಾರತದ ಅಧಿಕಾರಿಯೊಬ್ಬರು ಕೂತಿದ್ದರು. ಬಾಲಕ ಇನ್ನೂ ಗಾಬರಿಯಿಂದ ಕೂತಿದ್ದ, ಆದರೆ ಅವನ ಶರೀರ ತಂದೆ ಶರೀರದೊಂದಿಗೆ ಕ್ರಮೇಣ ಅತುಕೊಳ್ಳುತ್ತಲಿತ್ತು. ಮಗನ ಶರೀರದ ಬೆಚ್ಚನೆಯ ಅನುಭವದಿಂದ ಮನೋಹರಲಾಲನ ಶರೀರದಲ್ಲಿ ಮತ್ತೆ ರಕ್ತ ಬಿಸಿಯಾಯಿತು. ಮಮತೆಯ ತಂತಿ ಮತ್ತೆ ಕೂಡಲಾರಂಭಿಸಿತು.

ಮಧ್ಯಾಹ್ನದ ವೇಳೆಗೆ ಅವರು ವಿಭಜನೆಯ ರೇಖೆಯನ್ನು ದಾಟಿದರು. ಪಾಕಿಸ್ತಾನದ ಜೀಪ್‌ನಿಂದ ಎಲ್ಲರೂ ಇಳಿದು ಸರ್ಕಾರದ ಕಾಗದ ಪತ್ರಗಳನ್ನು, ವಿಭಜನೆಯ ರೇಖೆಯಿಂದ ಆಚೆಗೆ ನಿಂತಿದ್ದ ಭಾರತೀಯ ಅಧಿಕಾರಿಗಳಿಗೆ ಒಪ್ಪಿಸಿ, ಅದೇ ಜೀಪ್‌ನಲ್ಲಿ ಮರಳಿ ಹೊರಟರು. ಮನೋಹರಲಾಲ, ಉಳಿದ ಸದಸ್ಯರು ಇನ್ನೊಂದು ಜೀಪಿನಲ್ಲಿ ಕೂತರು. ಜೀಪ್ ಅಮೃತಸರದೆಡೆಗೆ ಸಾಗಿತು!

ಜೀಪ್ ಇನ್ನೂ ಬಯಲಿಗಿಳಿದಿತ್ತು, ಹಿಂದಿನ ಸೀಟಿನಲ್ಲಿ ಕುಳಿತಿದ್ದ ಸಮಾಜ ಸೇವಕಿಗೆ ಅದೇನು ಹೊಳೆಯಿತೋ ಏನೋ ಅವಳ ತನ್ನ ಬಲಗೈಯನ್ನು ಮುಂದಕ್ಕೆ ಚಾಚಿ ಬಾಲಕನ ತಲೆಯ ಮೇಲಿದ್ದ ರೇಶ್ಮೆ ಟೋಪಿಯನ್ನು ತೆಗೆದು, ಅದನ್ನು ತಕ್ಷಣ ಜೀಪಿನಿಂದ ಹೊರಗೆಸೆದಳು. ಕಪ್ಪು

ಗೊಂಚಲಿನ, ಕೆಂಪು ವರ್ಣದ ಆ ಟೋಪಿ ರಸ್ತೆಯ ಅಂಚಿನಲ್ಲಿದ ಧೂಳು-ಮಣ್ಣಿನ ಮೇಲೆ ಬಿತ್ತು.

''ನನ್ನ ಟೋಪಿ'' ಬಾಲಕನ ಕೈ ತಲೆಯ ಮೇಲಾಡಿತು, ಅಯ್ಯೋ ನನ್ನ ಟೋಪಿ!''

ಆಗ ಇನ್ನೊಬ್ಬ ಸಮಾಜ ಸೇವಕ ಮುಂದಕ್ಕೆ ಬಾಗಿ ಹೇಳಿದ, ''ಹಿಂದೂವಿನ ಮಗನಾಗಿದ್ದು ಮುಸಲ್ಮಾನರ ಟೋಪಿಯನ್ನು ಯಾಕೆ ಹಾಕಿಕೊಳ್ತೀಯಾ?''

ಈ ರೀತಿ ಟೋಪಿ ಎಸೆದಿದ್ದು ಮನೋಹರಲಾಲನಿಗೂ ಸರಿ ಕಾಣಲಿಲ್ಲ, ಅವನೂ ಗಾಬರಿಗೊಂಡ. ಬಾಲಕನ ಮನಸ್ಸಿಗೆ ನೋವಾಯಿತೇನೋ. ಅವನು ಧೈರ್ಯವಹಿಸಿ ಹೇಳಿದ, ''ಪಾಪ, ಈ ಮಗುವಿಗೇನು ಗೊತ್ತು, ಇದು ಮುಸಲ್ಮಾನರ ಟೋಪಿ ಅಂತ. ನೀವೇಕೆ ಟೋಪಿ ಎಸೆದಿರಿ? ಜೀಪ್ ನಿಲ್ಸಿ, ನಾನು ಹೋಗಿ ತಗೊಂಡು ಬರ್ತೀನಿ''

ಬಾಲಕ ಅಳುಮೋರೆ ಮಾಡಿಕೊಂಡು 'ನನ್ನ ಟೋಪಿ, ನನ್ನ ಟೋಪಿ' ಎಂದು ಕೂಗಿದ. ಅವನ ಕೈ ಇನ್ನೂ ಅವನ ತಲೆಯ ಮೇಲಿತ್ತು.

''ಪಾಪ, ಇವನಿನ್ನೂ ಹುಡುಗ, ನೋಡಿ, ಹೇಗೆ ಅಳ್ತಿದ್ದಾನೆ'' ಮತ್ತೆ ಮನೋಹರಲಾಲ ಧೈರ್ಯ ವಹಿಸಿದ.

''ಅಳಲಿ ಬಿಡಿ, ಏನಾಯ್ತೀಗ. ಇನ್ನಂತೂ ಇವನಿಗೆ ನೀವು ರೇಶ್ಮೆ ಟೋಪಿಯನ್ನು ಹಾಕೋದಿಲ್ಲವಲ್ಲ! ಸ್ವಲ್ಪ ಹೊತ್ತಿಗೆ ಸುಮ್ಮನಾಗ್ತಾನೆ''

ಜೀಪ್ ಧೂಳೆಬ್ಬಿಸುತ್ತ ಮುಂದೆ ಸಾಗಿತು.

ದೂರದಲ್ಲಿ, ಬಹಳಷ್ಟು ಜನ ಶರಣಾರ್ಥಿಗಳು ಬಂದು ಉಳಿದುಕೊಂಡಿದ್ದ ಚಿಕ್ಕ ಆ ನಗರದಲ್ಲಿ, ಈ ಸುದ್ದಿ ಮಿಂಚಿನಂತೆ ಹಬ್ಬಿತು. ಆಗಬಾರದ್ದು ಆದಂತೆ ..... ಮನೋಹರಲಾಲ ಮತ್ತು ಕೌಶಲ್ಯಾಳ ಮಗ ಮರಳಿ ಬಂದಿದ್ದನ್ನು ಕಂಡು ಎಲ್ಲರೂ ನಾನಾ ರೀತಿಯಲ್ಲಿ ಮಾತನಾಡುತ್ತಿದ್ದರು. ತಡವಾದರೂ ದೇವರು ಕಣ್ಣುಬಿಟ್ಟ! ಐದು ವರ್ಷಗಳ ನಂತರ ಮರಳಿ ಬಂದಿದ್ದಾನೆ! ತುಂಬಾ ಅದೃಷ್ಟವಂತ ಈ ಬಾಲಕ. ಮಹಿಳೆಯರು ಅವನ ತಲೆಗೆ ಮುತ್ತಿಕ್ಕಿ ಆಶೀರ್ವದಿಸಿದರು, ಕೈ ಜೋಡಿಸಿ ದೇವರಿಗೆ ಕೃತಜ್ಞತೆಯನ್ನರ್ಪಿಸಿದರು, ''ಇವನ ಆಯಸ್ಸು ಗಟ್ಟಿಯಿದೆ... ನೋಡಿ, ಕೌಶಲ್ಯಾಯಾವ ಮಗುವನ್ನು ತನ್ನ ಬಳಿಯಿಟ್ಟುಕೊಂಡು ಸಾಕುತ್ತಿದ್ದಳೋ ಆ ಮಗು ಸ್ವರ್ಗಸೇರಿತು, ಅದೇ ದಾರಿ ತಪ್ಪಿ-ಕೈ ತಪ್ಪಿ ಹೋಗಿದ್ದ ಮಗ ಉಳಿದು, ಮನೆಗೆ ಮರಳಿ ಬಂದಿದ್ದಾನೆ. ದೇವರು ತನ್ನ ಭಕ್ತರನ್ನು....''

ಇಲ್ಲಿಗೆ ಬಂದ ಮೇಲೂ ಬಾಲಕ, ಈ ಹಿಂದೆ ಜೈನಬಳ ಮನೆಯಲ್ಲಿ ರೋದಿಸಿದಂತೆ ರೋದಿಸುತ್ತಲೇ ಇದ್ದ. ಮೊದಲ ದಿನ ತಾಯಿಯನ್ನು ದೂರದಿಂದಲೇ ನೋಡಿದ, ಈ ತಾಯಿಯಲ್ಲಿ ಮೊದಲಿನ ತಾಯಿಯ ಯಾವ ಲಕ್ಷಣವೂ ಇರಲಿಲ್ಲ. ಒಂದು ಮಗು ಕೈತಪ್ಪಿ ಹೋದಂದಿನಿಂದ ಅವಳ ಯೌವ್ವನವೇ ಬಾಡಿ ಹೋಯಿತು. ಬಾಲಕನ ಮೆದುಳಿನಲ್ಲಿ ಕ್ರಮೇಣ

ಅಸ್ಪಷ್ಟ ನೆನಪುಗಳು ಮರುಕಳಿಸುತ್ತಿತ್ತು, ಅಸ್ತ-ವ್ಯಸ್ತ-ತಲೆಬುಡವಿಲ್ಲದ ನೆನಪುಗಳು. ಅಮ್ಮನ ಮಡಿಲಿನಲ್ಲಿ ಅವನಿಗೆ ತನ್ನ ತಂಗಿಯ ನೆನಪಾಯಿತು, ನಂತರ ಮನೆಯ ಹೊರಗೆ ಕಟ್ಟಿ ಹಾಕಲ್ಪಡುತ್ತಿದ್ದ ಎತ್ತು ನೆನಪಾಯಿತು; ಅದರ ಮೇಲೆ ಅವನು ಹತ್ತಿ ಆಟವಾಡುತ್ತಿದ್ದ. ಮನೆಯ ಹೊರಗೆ ಹಾಕುತ್ತಿದ್ದ ಮಂಚದ ನೆನಪಾಯಿತು. ಕಡೆಗೆ ಬರೇ ಗದ್ದಲವಷ್ಟೇ ಕೇಳಿಸುತ್ತಿತ್ತು. ಅತ್ತ ತಾಯಿಯ ಚೈತನ್ಯವೂ ಮರು ಕಳಿಸುತ್ತಿತ್ತು. ಅವಳಿಗೆ, ಎದುರಿಗೆ ನಿಂತು ಬಾಯಿಯಲ್ಲಿ ಬೆರಳಿಟ್ಟುಕೊಂಡು ತನ್ನನ್ನು ದುರುದುರನೆ ನೋಡುವ ಈ ಪಾಲಿ ನನ್ನ ಮಗನೇ ಎಂದು ನಂಬುವುದಕ್ಕೇ ಆಗುತ್ತಿರಲಿಲ್ಲ. ಅವಳ ಮನಸ್ಸಿನಲ್ಲಿ ಅದೇನೋ ಕವಿಯುತ್ತಿತ್ತು. ಅವಳ ಗಾಬರಿ ವೃದ್ಧಿಸುತ್ತಿತ್ತು.

ಭಾನುವಾರವಾಗಿತ್ತು. ಮೋಹನಲಾಲನ ಮನೆಯಂಗಳದಲ್ಲಿ ಡೋಲು ಬಾರಿಸಲಾಗುತ್ತಿತ್ತು. ಗಲ್ಲಿ-ಮೊಹಲ್ಲಾದ ಮಹಿಳೆಯರು ಅಲ್ಲಿ ಕೂತು ಹಾಡುಗಳನ್ನು ಹಾಡುತ್ತಿದ್ದರು. ಅಂಗಳದಲ್ಲಿ ಎರಡು ಚಿಕ್ಕ ಜಮಖಾನೆಗಳನ್ನು ಹಾಸಲಾಗಿತ್ತು. ಒಂದೆರೆಡು ಮಣೆಗಳು ಮತ್ತು ಮಂಚಗಳನ್ನು ಹಾಕಲಾಗಿತ್ತು. ಇದುವರೆಗೆ ಕೌಶಲ್ಯಾ ಬಹಳಷ್ಟು ಚೇತರಿಸಿಕೊಂಡಿದ್ದು ಅಲ್ಪ-ಸ್ವಲ್ಪ ನಗುವುದಕ್ಕೆ ಮಾತನಾಡುವುದಕ್ಕೆ ಪ್ರಾರಂಭಿಸಿದ್ದಳು. ಮಗನೂ ಸಹ ಒಮ್ಮೊಮ್ಮೆ ಅವಳ ಬಳಿ ಹೋಗಿ ಕೂರುತ್ತಿದ್ದ. ಕೌಶಲ್ಯ ಕೆಂಪು 'ಚುನಡಿ' ಹೊದ್ದಿದ್ದಳು-ಸುವರ್ಣ ಅಂಚಿನ ಕೆಂಪು 'ಚುನಡಿ' ಪರಮ ಸೌಭಾಗ್ಯದ ಸೂಚಕವಾಗಿತ್ತು.

ಮನೋಹರಲಾಲ ಒಮ್ಮೆ ನೆರೆಮನೆಯವನೊಂದಿಗೆ, ಮತ್ತೊಮ್ಮೆ ಇನ್ನೊಬ್ಬ ನೆರೆಮನೆಯವನೊಂದಿಗೆ ಪದೇ-ಪದೇ ಹೇಳುತ್ತಿದ್ದ, 'ಅವರು ಮಗುವನ್ನು ತುಂಬಾ ಪ್ರೀತಿಯಿಂದ ಸಾಕಿದ್ದಾರೆ. ನಾನು ಜೀವಮಾನವಿಡಿ ಅವರ ಉಪಕಾರವನ್ನು ಮರೆಯಲಾರೆ.''

''ಖಂಡಿತ, ಖಂಡಿತ, ಪ್ರಪಂಚದಲ್ಲಿ ಒಳ್ಳೆಯವರ ಕೊರತೆಯಿಲ್ಲ'' ಜನ ತಲೆಯಾಡಿಸಿ ಹೇಳುತ್ತಿದ್ದರು.

ಅಂಗಳ ಜನರಿಂದ ತುಂಬಿತ್ತು. ಮನೋಹರಲಾಲ ಲಾಡುಗಳ ತಟ್ಟೆ ಹಿಡಿದು, ಈ ಶುಭ ಸಂದರ್ಭದಲ್ಲಿ ಲಾಡುವನ್ನು ಹಂಚಬೇಕೆಂದಿದ್ದ, ಆಗಲೇ ಬಾಲಕ-ಪಾಲಿ-ವಿಚಿತ್ರವಾಗಿ ವರ್ತಿಸಿದ. ಆಗ ಅವನು ತಾಯಿಯೊಂದಿಗೆ ಆತು, ಡೋಲುಬಾರಿಸುವ ಮಹಿಳೆಯ ಎದುರು ಕೂತಿದ್ದ. ಅವನು ತದೇಕಚಿತ್ತದಿಂದ ಡೋಲನ್ನೇ ನೋಡುತ್ತಿದ್ದ. ಈಗ ಒಮ್ಮೆಲೇ ಮೌನಿಯಾಗಿ ಎದ್ದು ನಿಂತು, ಬಲಗಡೆಯ ಕೋಣೆಗೆ ಹೋಗಿ ಒಂದು ಚಾಪೆಯನ್ನು ತಂದ. ಅದನ್ನು ಅಂಗಳದ ಒಂದೆಡೆ ಹಾಸಿ ತನ್ನೆರೆಡೂ ಮಂಡಿಗಳನ್ನು ಊರಿ ಅದರ ಮೇಲೆ ಕೂತು ನಮಾಜು ಓದಲಾರಂಭಿಸಿದ.

ಈ ದೃಶ್ಯ ಕಂಡು ಜನರಿಗೆ ಆಶ್ಚರ್ಯವಾಯಿತು. 'ಅಯ್ಯೋ, ಇದೇನಿದು ಕೌಶಲ್ಯಾ! ನಿನ್ನ ಮಗ ಇದೇನು ಮಾಡುತ್ತಿದ್ದಾನೆ!'' ಒಬ್ಬ ಮಹಿಳೆ ಹೇಳಿದಳು.

ಆಗ ಮನೋಹರಲಾಲ ತನ್ನ ಬಳಿ ನಿಂತಿದ್ದವನಿಗೆ ಹೇಳಿದ, ''ಮಧ್ಯಾಹ್ನ ಈ ವೇಳೆಗೆ ಸರಿಯಾಗಿ ಅವನು ನಮಾಜು ಓದುತ್ತಾನೆ. ನಮಾಜಿಗೆ ಸಮಯವಾಯಿತು ಎಂಬುದು ಅವನಿಗೇ ಗೊತ್ತಾಗಿಬಿಡುತ್ತದೆ.''

ಮನೋಹರಲಾಲ ಈ ಮಾತನ್ನಂತೂ ಹೇಳಿದ, ಆದರೆ ಇಷ್ಟೊಂದು ಜನರೆದುರು ಮಗ ನಮಾಜು ಓದುವುದನ್ನು ಕಂಡು ಅವನಿಗೆ ನಾಚಿಕೆಯೆನಿಸಿತು. ಈ ಸಮಾರಂಭ ಏರ್ಪಡಿಸುವುದಕ್ಕೂ ಮೊದಲು, ಈ ಸಮಯದಲ್ಲಿಯೂ ಮಗ ನಮಾಜು ಓದುತ್ತಾನೆಂಬ ವಿಷಯವನ್ನೇ ಅವನು ಮರೆತು ಬಿಟ್ಟಿದ್ದ.

''ನೀವು ಇವನನ್ನು ತಡೆಯುವುದಿಲ್ವಾ?'' ಮತ್ತೊಂದು ಧ್ವನಿ ಪ್ರಶ್ನಿಸಿತು.

''ಮಗುವಿಗೇನು ತಿಳಿಯುತ್ತೆ ಕ್ರಮೇಣ ಅವನಿಗೇ ಎಲ್ಲಾ ಅರ್ಥವಾಗುತ್ತೆ''

ಆಗ ಮೊಹಲ್ಲಾದ ಹಿರಿಯ ರೊಬ್ಬರು ಗಟ್ಟಿಯಾಗಿ ಹೇಳಿದರು, ''ಈಗ್ಲೇ ಬಿಡಿಸಿದರೆ ಒಳ್ಳೆಯದು, ಇಲ್ಲದಿದ್ದರೆ ಈ ಬಾಲಕ ಮುಸಲ್ಮಾನನೇ ಆಗಿಬಿಡ್ತಾನೆ.''

ಬಾಲಕ ನಮಾಜು ಮಾಡಿದಷ್ಟೂ ಸಮಯ ಸುತ್ತ-ಮುತ್ತ ನಿಂತ ಜನ ಅವನನ್ನೇ ದುರುಗುಟ್ಟಿ ನೋಡಿದರು.

''ಅವರಿಗೆ ಮಕ್ಕಳಿಲ್ಲ, ಆದರೆ ಅವರು ಇವನನ್ನು ಏಳು ವರ್ಷ ಪ್ರೀತಿಯಿಂದ ನೋಡಿಕೊಂಡರು, ನಾನಂತೂ ಜನ್ಮ-ಜನ್ಮಾಂತರಕ್ಕೂ ಅವರ ಉಪಕಾರವನ್ನು ಮರೆಯಲಾರೆ'' ಎಂದು ಮನೋಹರಲಾಲ ಪದೇ-ಪದೇ ಹೇಳುತ್ತಿದ್ದ.

''ಹುಡುಗನಿಗೆ ಮುಸಲ್ಮಾನನನ್ನಾಗಿ ಮಾಡಿ ಕಳಿಸಿದ್ದಾರೆ, ಆದರೂ ಅವರ ಪರ ವಹಿಸಿ ಮಾತಾಡ್ತಿದ್ದೀಯಾ'' ಹಿರಿಯರು ಮತ್ತೆ ರೇಗಿದರು.

ಬಾಲಕ ಮಂಡಿಯೂರಿ ಕುಳಿತು, ಎರಡೂ ಕೈಗಳನ್ನು ಬೊಗಸೆಮಾಡಿ, ಆ ಕೈಗಳನ್ನು, ಆಕಾಶದೆಡೆಗೆ ಎತ್ತಿ ಬಾಯಿ ಪಾಠ ಮಾಡಿಸಿದ 'ಇಬಾದತ್ತ'ನ್ನು ಪುನರುಚ್ಚರಿಸುತ್ತಿದ್ದ. ಆಗಲೇ ಹಿರಿಯರು ಬಾಲಕನ ಬಳಿ ಬಂದು ನಿಂತರು.

ಬಾಲಕ ನಮಾಜು ಮುಗಿಸಿ ಎರಡೂ ಕೈಗಳಿಂದ ಮುಖವನ್ನು ಸವರಿಕೊಳ್ಳುತ್ತಿದ್ದ, ಆಗಲೇ ಹಿರಿಯರು ಅವನ ಮಣಿಕಟ್ಟನ್ನು ಹಿಡಿದು ಅವನನ್ನು ದರ-ದರನೆ ಅಂಗಳದ ಮಧ್ಯಕ್ಕೆ ಎಳೆದು ತಂದು, ''ಏನ್ ಮಾಡ್ತಿದ್ದೆ?'' ಎಂದು ಕೆಂಡವಾದರು.

''ನಮಾಜು ಓದ್ತಿದ್ದೆ'' ಬಾಲಕ ಹೆದರಿದ.

''ಇದೆಲ್ಲಾ ಇಲ್ಲಿ ನಡೆಯೋದಿಲ್ಲ. ಇಲ್ಲಿ ಯಾವುದೇ ನಮಾಜು-ಗಿಮಾಜು ನಡೆಯಲ್ಲ'' ಹಿರಿಯರು ಗುಡುಗಿದರು. ನಂತರ ಗಟ್ಟಿಯಾಗಿ ತನ್ನ ಕಡೆಯವರಿಗೆ ಹೇಳಿದರು, ''ಪುರೋಹಿತರನ್ನು ಕರೆದು ತನ್ನಿ, ಕ್ಷೌರಿಕನಿಗೂ ಕರೆದು ತನ್ನಿ. ಈಗ್ಲೇ ಬಾಲಕನಿಗೆ ಚೌಲ ಮಾಡಿಸಿ, ಜುಟ್ಟು ಬಿಡಿ. ಇದೇ ಸರಿಯಾದ ಮಾರ್ಗ. ಮಗುವಿಗೆ ಮುಸಲ್ಮಾನನ್ನಾಗಿ ಮಾಡಿ ಕಳಿಸಿದ್ದಾರೆ.''

ಬಾಲಕ ಮತ್ತೂ ಹೆದರಿದ, ಅವನಿಗೆ ಅಳು ಬಂತು.

"ನಿನ್ನ ಹೆಸರೇನು?"

ಬಾಲಕ ಹಿರಿಯರೆಡೆಗೆ ಧೈರ್ಯವಹಿಸಿ ನೋಡಿದ. ನಂತರ ಕಂಪಿಸುವ ಧ್ವನಿಯಲ್ಲಿ ಹೇಳಿದ, "ಇಲ್ತಾಫ್! ಇಲ್ತಾಫ್ ಹುಸೈನ್ ವಲ್ದ್ ಶಕೂರ್ ಅಹಮದ್"

ಬಾಲಕನ ಕಪಾಳಕ್ಕೆ ರಾಚಿ ಹೊಡೆಯಲು ಹಿರಿಯರಿಗೆ ಮನಸ್ಸಾಯಿತು. ಮಣಿಕಟ್ಟಿನ ಹಿಡಿತ ಬಿಗಿಯಾದಂತೆ ಬಾಲಕನಿಗೆ ಅನ್ನಿಸಿತು. ಅವನು ಇನ್ನೂ ಕಂಪಿಸುತ್ತಿದ್ದ.

"ಅಲ್ಲ, ನಿನ್ನ ಹೆಸರು ಪಾಲಿ-ಯಶಪಾಲ್ ಅಂತ"

ಬಾಲಕ ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೆ ಮೆಲ್ಲನೆ ಬಡಬಡಿಸಿದ, "ಇಲ್ತಾಫ್!"

"ಮತ್ತೊಂದು ಸಾರಿ ಹೇಳು ನೋಡೋಣ, ನಿನ್ನ ನಾಲಿಗೆ ಸೀಳಿ ಬಿಡ್ತೀನಿ!" ಎಂದು ಹಿರಿಯರು ಗುಡುಗಿ, ಅಲ್ಲಿಯೇ ಇದ್ದ ಜನರೆಡೆಗೆ ಹೊರಳಿ ಹೇಳಿದರು, "ಮುಸಲ್ಮಾನರ ಕೆಲಸವನ್ನು ನೋಡಿದಿರಾ? ಇದನ್ನೇ ಧರ್ಮಪ್ರಚಾರ ಅಂತ ಹೇಳೋದು"

ಆಗಲೇ ಕ್ಷೌರಿಕ ಮತ್ತು ಪುರೋಹಿತರು ಬಂದರು. ಅವರ ಹಿಂದೆ ತಲೆಯ ಮೇಲೆ ಹವನ ಕುಂಡ ಹೊತ್ತಿದ್ದ ವ್ಯಕ್ತಿಯಿದ್ದ ಅವನ ಹಿಂದೆ ತುಪ್ಪದ ಡಬ್ಬ ಮತ್ತು ಸಾಮಾನಿನ ಚೀಲ ಹಾಗೂ ಸಮಿತ್ತುಗಳನ್ನು ಹೊತ್ತ ಇನ್ನೊಬ್ಬನಿದ್ದ.

ಬಾಲಕನನ್ನು ಮತ್ತೆ ಅದೇ ಚಾಪೆಯ ಮೇಲೆ ಕೂರಿಸಲಾಯಿತು. ಕ್ಷೌರಿಕ, ಅಂಗೈಯ ಮೇಲೆ ಕತ್ತಿಯನ್ನು ಮಸೆಯುತ್ತಾ ಪುರೋಹಿತರ ಆಜ್ಞೆಯಂತೆ ವಿಧಿವತ್ತಾಗಿ ಮುಂಡನ ಕ್ರಿಯೆ ಮಾಡಲಾರಂಭಿಸಿದ. ಮುಂಡನ ಕ್ರಿಯೆ ನಡೆಯುವಾಗ, ಬಾಲಕ ತನ್ನ ಬಾಗಿದ ಕತ್ತಿನ ಕೆಳಗೆ ಕಣ್ಣೀರು ಸುರಿಸುತ್ತಾ ಬಿಕ್ಕಳಿಸಿದ. ಒಮ್ಮೆಯಂತೂ ಬಾಲಕ ಹೆದರಿ, ಎದ್ದು ನಿಂತು 'ಅಮ್ಮೀಜಾನ್! ಅಬ್ಬಾಜಾನ್!' ಎಂದು ಅರಚುತ್ತಾ ಅಂಗಳದ ಗೋಡೆಗೊರಗಿ ನಿಂತುಬಿಟ್ಟ. ತನ್ನ ವಿಶಾಲ ಕಣ್ಣುಗಳಿಂದ ಹಿರಿಯರೆಡೆಗೆ, ಚಕಿತ ಜಿಂಕೆ ಬೇಡನೆಡೆಗೆ ನೋಡುವಂತೆ ನೋಡಿದ. ಹಿರಿಯರು ಆದೇಶಿಸಿದಂತೆ ಮನೋಹರಲಾಲ ಅವನ ಮಣಿಕಟ್ಟನ್ನು ಹಿಡಿದು, ಅವನ ಮೈದಡವುತ್ತಾ ಮತ್ತೆ ಚಾಪೆಯ ಬಳಿಗೆ ಕರೆ ತಂದ.

ಬೋಳಿಸಿದ ತಲೆಯ ಮಧ್ಯೆ ಜುಟ್ಟು ಹಾರಾಡುತ್ತಿತ್ತು. ನಂತರ ಪಾಲಿಗೆ ಸ್ನಾನವನ್ನು ಮಾಡಿಸಲಾಯಿತು. ಶ್ವೇತವರ್ಣದ ಪಂಚೆ ಮತ್ತು ಅಂಗಿಯನ್ನು ತೊಡಿಸಲಾಯಿತು. ಮಂತ್ರೋಚ್ಚಾರಣೆಯ ಮಧ್ಯೆ ವಿಧಿವತ್ತಾಗಿ ಅವನಿಗೆ ಯಜ್ಞೋಪವೀತವನ್ನು ಹಾಕಲಾಯಿತು.

"ಮಗು, ನಿನ್ನ ಹೆಸರೇನು? ಐದು ಸಲ ಹೇಳು, ಪಾಲಿ, ಪಾಲಿ, ಪಾಲಿ...."

ಸ್ವಲ್ಪ ಸಮಯದ ನಂತರ ಓರ್ವ ಯುವಕ ಬ್ರಹ್ಮಚಾರಿಯ ವೇಷದಲ್ಲಿ ಬಾಲಕ ಯಶಪಾಲ ಎರಡೂ ಕೈಗಳನ್ನು ಜೋಡಿಸಿ ತಂದೆಯೊಂದಿಗೆ ಆತು ನಿಂತು ಮನೆಗೆ ಬಂದಿದ್ದ ಅತಿಥಿಗಳನ್ನು ಬೀಳ್ಕೊಡುತ್ತಿದ್ದ. ಸಂಬಂಧಿಕರು ಹಾಗೂ ಅತಿಥಿಗಳು ಅವನ ತಲೆಯನ್ನು ನೇವರಿಸಿ ಅವನಿಗೆ

ಆಶೀರ್ವದಿಸಿ ಹೋಗುತ್ತಿದ್ದರು. ಮನೋಹರಲಾಲ ಲಾಡು-ಉಂಡೆಯನ್ನು ಹಂಚುತ್ತಿದ್ದ.

ಅದೇ ವೇಳೆಗೆ, ನೂರಾರು ಮೈಲಿಗಳಾಚೆ ತಮ್ಮ ಶೂನ್ಯ ಅಂಗಳದಲ್ಲಿ ಕೂತಿದ್ದ ಜೈನಬ್ ಮತ್ತು ಶಕೂರ ನಾನಾ ರೀತಿಯ ಕಲ್ಪನೆಯಲ್ಲಿ ಕಳೆದು ಹೋಗಿದ್ದರು.

''ಇಲ್ತಾಫ್ ತನ್ನೊಂದಿಗೆ ಮನೆಯ ಕಳೆಯನ್ನು ತೆಗೆದುಕೊಂಡು ಹೋಗಿಬಿಟ್ಟ. ನಾನು ಈ ಸಮಯದಲ್ಲಿ ಅವನನ್ನು ಗಲ್ಲಿ-ಮೊಹಲ್ಲಾಗಳಲ್ಲಿ ಹುಡುಕಲು ಹೋಗುತ್ತಿದ್ದೆ. ಅವನು ಎಲ್ಲೆಲ್ಲೋ ಹೋಗಿಬಿಡುತ್ತಿದ್ದ, ಏನ್ರಿ, ಅವನು ಈದ್‌ಗೆ ಬರ್ತಾನೆ ತಾನೇ? ಅವರು ಅವನನ್ನು ಕಳುಹಿಸಿಕೊಡುತ್ತಾರೆ ತಾನೇ? ಅವನನ್ನು ನೋಡಲು ನಾವು ಹೋಗಲಾರೆವೆ? ನಿಮ್ಮ ಮೊಮ್ಮಗನೊಬ್ಬ ಬರೇಲಿಯಲ್ಲಿದ್ದಾನೆಂದು ನೀವು ಹೇಳ್ತಿದ್ದರಲ್ಲ. ನಾವು ಅವನ ಹತ್ರ ಹೋಗಿರೋಣ, ಮಗನನ್ನು ನೋಡಿಕೊಂಡು ಬರೋಣ ಏನು?'' ಜೈನಬ್ ಪದೇ ಪದೇ ತನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಿದ್ದಳು.

ಡಿ. ಎಸ್. ಶ್ರೀನಾಥ್, 'ನವನೀತ', ೨ನೇ ಕ್ರಾಸ್, ಅಣ್ಣಾಜಿರಾವ್ ಲೇಔಟ್, ೧ನೇ ಹಂತ, ವಿನೋಬಾನಗರ,
ಶಿವಮೊಗ್ಗ-೫೭೭ ೨೦೪

ಹೊಸ ಖಜಾನೆ (ಕಥೆ)

ಮೂಲ ಉರ್ದು: **ಕೃಷನ್ ಚಂದ್ರ**
ಅನುವಾದ: **ಡಾ. ಮುಹಮ್ಮದ್ ಸಿಬ್ಗತುಲ್ಲಾ**

ನಾನು ಹಾಸಿಗೆಯಲ್ಲಿ ಆರಾಮಾಗಿ ಬಿದ್ದುಕೊಂಡಿದ್ದೆ ಮತ್ತು ಅರೆ ನಿದ್ರೆಯ ಸ್ಥಿತಿಯಲ್ಲೇ ನನ್ನದೇ ಹಳೆ ಕತೆಯೊಂದನ್ನು ಓದುತ್ತಾ ಇದ್ದೆ. ಅಷ್ಟರಲ್ಲೇ ನನ್ನ ಆರು ವರ್ಷದ ಕುಳ್ಳ, ಹರಿದ ನಿಕ್ಕರು, ಮಿನುಗುವ ಕಣ್ಣುಗಳ ಹುಡುಗ ನೆಗೆದು ಬಂದು ನನ್ನ ಹಾಸಿಗೆಯ ಮೇಲೆ ಕುಳಿತ ಮತ್ತು ಬಲು ಕಳವಳ ಆದರೆ ಅಕ್ಕರೆಯಿಂದ ನನ್ನನ್ನು ಕೇಳತೊಡಗಿದ.

''ನನ್ನ ಖಜಾನೆ ನೋಡುವಿರ?''

''ಖಜಾನೆ''

''ಹೌದು'' ಅವನು ಹೇಳಿದ ''ಹೊಸ ಖಜಾನೆ ನೋಡುವಿರ''?

ನಾನು ಹೇಳಿದೆ: ತೋರಿಸು ನೋಡುತ್ತೇನೆ. ಆದರೆ ನಿನ್ನ ಮೊದಲ ಖಜಾನೆ ಏನಾಯಿತು?''

ಹುಡುಗ ಹೇಳಿದ ''ಅದನ್ನು ನಾನು ಮಾಲಿಯ ಮಗ ಬಿಜ್ಜುಗೆ ಕೊಟ್ಟು ಬಿಟ್ಟೆ.

ಇಷ್ಟು ಹೇಳಿ ಅವನು ತನ್ನ ಜೋಳಿಗೆ ನನ್ನ ಮುಂದೆ ಬಿಚ್ಚಿದ. ಮೊಟ್ಟ ಮೊದಲನೆಯದಾಗಿ ಅವನು ಒಂದು ಬೆಂಕಿಪೊಟ್ಟಣ ತೆಗೆದನು. ತಮಾಷೆ ಪ್ರಾರಂಭವಾಗುವ ಮುಂಚೆ ಸ್ಟೇಜ್ ಮೇಲೆ

ತೆರೆಯನ್ನು ಹೇಗೆ ಎಳೆಯಲಾಗುತ್ತದೆಯೋ ಹಾಗೆ ಅವನು ಅದನ್ನು ತೆಗೆದ. ತೆರೆ ಎಳೆದಾಗ ನಾನು ನೋಡಿದ್ದೇನೆಂದರೆ ಬೆಂಕಿಪೊಟ್ಟಣದಲ್ಲಿ ಗಾಜಿನ ಬಳೆಗಳ ಮುರಿದ ಚೂರುಗಳಿವೆ.

''ಇದೇನು''? ಎಂದು ನಾನು ಕೇಳಿದೆ.

ಅವನಿಗೆ ನನ್ನ ಮೂರ್ಖತನ ಕಂಡು ಬಹಳ ವಿಷಾದವಾಗುತ್ತಿದೆ ಎನ್ನುವ ಹಾಗೆ ಹುಡುಗ ನನ್ನ ಕಡೆ ನೋಡಿದ. ಆದರೆ ಅವನ ಕಣ್ಣಲ್ಲಿ ಚಂಚಲತೆ ಇರಲಿಲ್ಲ ಪ್ರೀತಿ ಇತ್ತು. ನನ್ನ ಹುಡುಗ ನನಗೆ ಬಹಳ ಪ್ರೀತಿಯಿಂದ ಅರ್ಥ ಮಾಡಿಸುವ ರೀತಿಯಲ್ಲಿ ಹೇಳಿದ ''ನೋಡಿ ಇವು ಮುತ್ತುಗಳು''

''ಮುತ್ತುಗಳು?''

''ಹೌದು ಮಮ್ಮಿಯ ಬಳೆಗಳಿಂದ ಮಾಡಿದ್ದೇನೆ.''

ನಂತರ ಅವನು ಆ ಬೆಂಕಿಪೊಟ್ಟಣ ಮುಚ್ಚಿ ಮತ್ತೊಂದು ಬೆಂಕಿ ಪೊಟ್ಟಣ ತೆಗೆದನು. ಅದರಲ್ಲಿ ಹಳೇ ನಿಬ್‌ಗಳು ತುಂಬಿದ್ದವು. ಆ ದಿಡಿಂಕ್ (ಮುಳುಗುನಿಬ್ಬು) ನಿಬ್‌ಗಳಿಂದ ನಾನು ಕಥೆಗಳನ್ನು ಬರೆಯುತ್ತೇನೆ. ಬಹಳಷ್ಟು ಸಲ ಒಂದು ಕಥೆ ಬರೆಯುವಾಗ ಮೂರು ನಾಲ್ಕು ನಿಬ್ಬುಗಳನ್ನು ಉಪಯೋಗಿಸಿ ಎಸೆದುಬಿಡುತ್ತೇನೆ. ಅಸಲಿನಲ್ಲಿ ದಿಡಿಂಕ್‌ನ ಹರಿತವಾದ ಅಲಗು ನನಗೆ ಬಹಳ ಇಷ್ಟ. ಬರೆಯುವಾಗ ನಿಬ್ ನೇರವಾಗಿ ಕಥೆಯ ಎದೆಯಲ್ಲಿ ಇಳಿಯುತ್ತಿದೆಯೇನೋ ಅನ್ನಿಸುತ್ತದೆ. ನೇಗಿಲಿನ ಗುಳ ಯಾವುದೋ ಗೊತ್ತಿಲ್ಲದ, ನೋಡದೇ ಇರುವಂತಹ ಭೂಮಿಯ ಎದೆಯನ್ನು ಸೀಳುತ್ತ ಮುನ್ನುಗುತ್ತಿದೆ. ರೈತನ ಬೆಳೆಯ ಹಾಗೆ ಕಥೆಯೂ ಸಹ ನಿಧಾನವಾಗಿ ಹಣ್ಣಾಗುತ್ತದೆ. ಮೊದಲಿಗೆ ಅದರಲ್ಲಿ ಮೊಳಕೆ ಬರುತ್ತದೆ, ಗಿಡ ಬೆಳೆಯುತ್ತದೆ. ಅದಕ್ಕೆ ಗಾಳಿ ಮತ್ತು ಬೆಳಕು ಸಿಗುತ್ತದೆ. ಆಕಾಶದ ಕಡೆ ನೋಡುತ್ತಿರುವ ಎಲೆಗಳ ಮೇಲೆ ತೆನೆಗಳು ಬರುತ್ತವೆ. ಆಗ ಪ್ರೀತಿಯ ಒಂದು ಕಾಳು ಜನ್ಮ ತಾಳುತ್ತದೆ. ಆದರೆ ಒಮ್ಮೊಮ್ಮೆ ಪ್ರೀತಿಯ ಒಂದು ಕಾಳೂ ಜನ್ಮ ತಾಳುವುದಿಲ್ಲ. ಆ ಕಾರಣದಿಂದ ಇಡೀ ಭೂಮಿ ಬಂಜೆಯಾಗಿ ಉಳಿಯುತ್ತದೆ. ಈ ಬಂಜರು ಕತೆಯ ಗಾಯವನ್ನು ಒಬ್ಬ ಕತೆಗಾರನ ವಿನಾ ಬೇರಾರೂ ತಿಳಿಯಲಾರ.

ಹುಡುಗನ ಪೊಟ್ಟಣ ಅದೇ ಹಳೇ ನಿಬ್‌ಗಳಿಂದ ತುಂಬಿ ನಾನು ಅವುಗಳಿಂದ ಹೊಸ ಮತ್ತು ಹಳೇ ಕಥೆಗಳನ್ನು ಬರೆದಿದ್ದೆ. ಒಳ್ಳೆ ಮತ್ತು ಕೆಟ್ಟ ಕಥೆಗಳು ಅವು 'ಆದಿಮ'ದ ಹಾಗೆ ಹಳೆಯದೂ ಆಗಿದ್ದವು. ಇಂದಿನ ಮನುಷ್ಯನ ಹಾಗೆ ಹೊಸದಾಗಿದ್ದವು. ಪ್ರೀತಿಯಲ್ಲಿ ಮುಳುಗಿದ್ದ ಕಥೆಗಳು, ಕೋಪದಿಂದ ತುಂಬಿದ ಕಥೆಗಳು, ಬಣ್ಣದಿಂದ ಕೂಡಿರುವಂತಹ, ಬಣ್ಣದ ಸಿಡಿಲಿನ ಹಾಗೆ ಮಿಂಚುತ್ತಿರುವಂತಹ ಕಥೆಗಳು ಮತ್ತು ಬಣ್ಣವಿಲ್ಲದ ಸಪ್ಪೆ ಕಥೆಗಳು. ಒಳಗಡೇಯೇ ಬೀಜ ಕೊಳೆತು ಕಥೆಯ ಬಸಿರು ಬಂಜೆ ಆದ ಹಾಗೆ. ಆದರೆ ಇವುಗಳೆಲ್ಲ ನನ್ನ ಶ್ರಮದ ಕಥೆಗಳಾಗಿದ್ದವು. ಅದರಲ್ಲಿ ನನ್ನ ಕಲ್ಪನೆಯ ನೋವು ಮತ್ತು ಸಂವೇದನೆಯ ಬೆವರು ಸೇರಿತು. ಆದ್ದರಿಂದ ನಾನು ನನ್ನ ಹುಡುಗನ ಖಜಾನೆಯನ್ನು ಬಹಳ ಆಸೆಯಿಂದ ನೋಡಿ ಅವನನ್ನು ಕೇಳಿದೆ ''ಇವೆಲ್ಲ ಏನು''?

ಹುಡುಗನಿಗೆ ಈಗ ನನ್ನ ಪೂರ್ಣ ಮೂರ್ಖತನ ಖಚಿತವಾಯಿತು. ಆದ್ದರಿಂದ ಮುಗುಳ್ ನಕ್ಕು ಹೇಳಿದ ''ಇವು ನಿಬ್ಬುಗಳು''

''ಇದನ್ನು ನೀನೇನು ಮಾಡುತ್ತಿಯಾ''

ಅವನು ಹೇಳಿದ 'ನಾನೇನು ಮಾಡಲ್ಲ! ನಾನು ಇವುಗಳೊಂದಿಗೆ ಆಡುತ್ತೇನೆ'.

'ಹೇಗೆ?'

ಅವನು ಹೇಳಿದ ''ನೋಡಿ ಇವು ನಿಬ್ಗಳು; ಇದು ಇವರ ಅಪ್ಪ''

ಹೀಗೆ ಹೇಳಿ ಹುಡುಗ ಮೂರನೇ ಪೊಟ್ಟಣ ತೆಗೆದ ಅದರಲ್ಲಿದ್ದ ಒಂದು ಅಯಸ್ಕಾಂತ ತೆಗೆದ. ಅಯಸ್ಕಾಂತ ಒಂದು ನಿಬ್ಬನ್ನು ತನ್ನ ಕಡೆ ಆಕರ್ಷಿಸಿತು. ಒಂದು ನಿಬ್ ಬಂದನಂತರ ಬಾಕಿ ನಿಬ್‌ಗಳೆಲ್ಲ ಒಬ್ಬರ ಬೆರಳು ಹಿಡಿದು ಸೂಜಿಗಲ್ಲಿಗೆ ಸುತ್ತಿಕೊಂಡವು.

ಹುಡುಗ ನಕ್ಕು ಹೇಳಿದ ''ನೋಡಿದಿಯಾ, ಇವನು ಅವರ ತಂದೆ, ಈ ನಿಬ್‌ಗಳು ಅವನ ಮಕ್ಕಳು, ಒಬ್ಬ ಬೆರಳು ಇನ್ನೊಬ್ಬ ಹಿಡಿದು ಸಾಲಾಗಿ ನಿಂತಿರುವರು. ಗೊತ್ತಾಯಿತೆ?''

ತಕ್ಷಣ ನನಗೆ ಅರ್ಥವಾಯಿತು. ಇಷ್ಟೊಂದು ಕಥೆಗಳನ್ನು ಬರೆದ ನಂತರವೂ ಯಾವುದನ್ನು ಅರ್ಥ ಮಾಡಿಕೊಂಡಿರಲಿಲ್ಲವೋ ಅದನ್ನು ಈಗ ಅರ್ಥ ಮಾಡಿಕೊಂಡೆ. ನನಗೆ ಇಷ್ಟೇ ಗೊತ್ತಿತ್ತು. ಕಥೆಗಳು ಒಳ್ಳೆಯದಿರುತ್ತವೆ. ಸಣ್ಣದಿರುತ್ತವೆ. ಬಗೆಬಗೆಯ ಕಥೆಗಳಿರುತ್ತವೆ. ಇಲ್ಲಿಯವರೆಗೆ ನನಗೆ ಗೊತ್ತಿಲ್ಲದ ಅಂಶವೆಂದರೆ ಎಲ್ಲ ಕಥೆಗಳಿಗೆ ಒಂದೇ ಒಂದು ಅಯಸ್ಕಾಂತ ಇರುತ್ತದೆ. ಅದರ ಆಧಾರದ ಮೇಲೆ ಅದು ಶೂನ್ಯ ಪ್ರದೇಶದಲ್ಲಿ ನಿಂತುಕೊಳ್ಳುತ್ತದೆ. ಆ ಸೂಜಿಗಲ್ಲೆಂದರೆ ಮಾನವ. ಮಾನವ ಇಲ್ಲದೆ ಯಾವುದೇ ಕಥೆಗೆ ಆಧಾರವೇ ಇಲ್ಲ.

ನನಗೆ ಹುಡುಗನ ಖಜಾನೆಯಲ್ಲಿ ಆಸಕ್ತಿ ಉಂಟಾಯಿತು. ಆದ್ದರಿಂದ ಅವನಿಗೆ ''ಇನ್ನೇನಿವೆ ನಿನ್ನ ಬಳಿ ತೋರಿಸು'' ಎಂದು ಕೇಳಿದೆ.

ಹುಡುಗ ಚಿತ್ರಗಳ ಒಂದು ಪ್ಯಾಕೆಟ್ ನನ್ನ ಮುಂದಿಟ್ಟನು. ಮೊದಲನೆಯ ಚಿತ್ರ ಯಾವುದೋ ಮಹಾರಾಜನದಾಗಿತ್ತು. ಅವನ ಕತ್ತಿನಲ್ಲಿ ಮುತ್ತು ರತ್ನಗಳ ಹಾರಗಳಿದ್ದವು. ನಾನು ಕೇಳಿದೆ ''ಇವನ್ಯಾರು''?

ಹುಡುಗ ಹೇಳಿದ ''ಇವನು ಗೌತಮ ಬುದ್ಧ''

ಬಹುಶಃ ಹುಡುಗ ಅವಳ ಅಕ್ಕನಿಂದ ನಿನ್ನೆಯೇ ಗೌತಮಬುದ್ಧನ ಹೆಸರು ಕೇಳಿದ್ದ ಎಂದು ಕಾಣಿಸುತ್ತದೆ. ಈ ಹೆಸರು ಅವನಿಗೆ ಆಶ್ಚರ್ಯಕರ ಹಾಗೂ ಹೊಸದು. ಆದ್ದರಿಂದ ಅವನು ಆ ಚಿತ್ರಕ್ಕೆ ಈ ರೀತಿ ನಾಮಕರಣ ಮಾಡಿದ್ದ. ನಾನು ಸಹ ಯೋಚಿಸಿದೆ. ಈ ದೇಶದಲ್ಲಿ ಮಕ್ಕಳೇ ಅಲ್ಲ ದೊಡ್ಡವರೂ ಸಹ ಇಂದಿನವರೆಗೆ ಮಹಾರಾಜರೆಲ್ಲ ಗೌತಮ ಬುದ್ಧನ ಹಾಗೆ 'ನಿರ್ಮಲ' ದೇವರ ಹಾಗೆ 'ಪವಿತ್ರ' ಮುಂತಾಗಿ ತಿಳಿದಿದ್ದಾರೆ. ಮಗುವಿನ ಈ ತಪ್ಪು ಕಲ್ಪನೆಯನ್ನು ದೂರ ಮಾಡುವುದು ನನಗೆ ಉಚಿತವೆನಿಸಲಿಲ್ಲ. ದೊಡ್ಡವನಾಗಿ ತಾನೆ ತಿಳಿದುಕೊಳ್ಳುತ್ತಾನೆ.

ಬಾಲಕ ಮತ್ತೊಂದು ಚಿತ್ರ ತೆಗೆದ. ಆ ಚಿತ್ರದಲ್ಲಿ ಒಂದು ಸುಂದರ ಮರಾಠಿ ಕನ್ಯೆ ಒಂದು ಲೆಟರ್ ಬಾಕ್ಸ್‌ನಲ್ಲಿ ಕಾಗದ ಹಾಕುತ್ತಿದ್ದಳು. ''ಇದೇನು?'' ಎಂದು ನಾನು ಕೇಳಿದೆ ಬಾಲಕನೆಂದ ''ಈ ಮಹಿಳೆ ಮನೆ ಲೆಟರ್ ಬಾಕ್ಸ್‌ನಲ್ಲಿ ಕಾಗದ ಹಾಕುತ್ತಿದ್ದಾಳೆ. ಅವಳ ಮನೆ ಲೆಟರ್ ಬಾಕ್ಸ್‌ಗೆ ಬಹಳ ಹತ್ತಿರವಿದೆ.''

''ಆ ಮಹಿಳೆಯ ಮನೆ ಲೆಟರ್‌ಬಾಕ್ಸ್‌ನಿಂದ ಬಹಳ ಹತ್ತಿರವಿದೆ ಎಂದು ನಿನಗೆ ಹೇಗೆ ಗೊತ್ತು?'' ಎಂದು ಕೇಳಿದೆ.

ಬಾಲಕ ನನ್ನ ಕಡೆ ಬಹಳ ಕರುಣೆಯಿಂದ ನೋಡಿ ''ಅವಳು ಕಾಲಲ್ಲಿ ಏನೂ ಹಾಕಿಲ್ಲ ಎಂಬುದು ಕಾಣಿಸುತ್ತಿಲ್ಲವೇ? ಆದ್ದರಿಂದಲೇ ಬೇಗನೆ ಮನೆಯಿಂದ ಹೊರಟು ಕಾಗದ ಹಾಕಲು ಬಂದಿದ್ದಾಳೆ. ದೂರ ಹೋಗಬೇಕಾಗಿದ್ದರೆ ಚಪ್ಪಲಿ ಹಾಕಿ ಕೊಳ್ಳುತ್ತಿರಲಿಲ್ಲವೇ?''

ನನಗೆ ಅವಮಾನ ಆದಂತಾಗಿ ಅದನ್ನು ದೂರ ಮಾಡಲು ''ಸರಿ ಈಗ ಬೇರೆ ಚಿತ್ರ ತೆಗಿ'' ಎಂದು ಹೇಳಿದೆ.

ಪುಟ್ಟ ಶರ್ಲಾಕ್ ಹೋಂಸ ಮತ್ತೊಂದು ಚಿತ್ರ ತೆಗೆದು ನನ್ನ ಮುಂದಿಟ್ಟ. ಆ ಚಿತ್ರದಲ್ಲಿ ಒಂದು ಪಂಜರವಿತ್ತು. ಅದರಲ್ಲಿ ಗಿಣಿ. ಗಿಣಿಯ ಬಳಿ ಒಂದು ಸುಂದರ ಮಹಿಳೆ ಒಳ್ಳೆಯ ಬಟ್ಟೆ ಧರಿಸಿ ತನ್ನ ಆಭರಣಗಳ ಪೆಟ್ಟಿಗೆ ತೆಗೆದು ಕೊಂಡು ಕುಳಿತು ಗಿಣಿಯ ಕಡೆ ನೋಡುತ್ತಿದ್ದಳು. ''ಈ ಮಹಿಳೆ ಗಿಣಿಯ ಕಡೆ ಏಕೆ ನೋಡುತ್ತಾಳೆ?'' ನಾನು ಕೇಳಿದೆ.

ಬಾಲಕ ಹೇಳಿದ '' ಹೇಳು ನನ್ನ ಮುತ್ತು ಎಲ್ಲಿ ಹೋಯ್ತು?'' ಎಂದು ಗಿಣಿಗೆ ಆ ಮಹಿಳೆ ಕೇಳುತ್ತಿದ್ದಾಳೆ.

ಮುತ್ತು ಎಲ್ಲಿ ಹೋಯ್ತು. ಬಾಲಕ ಆ ಚಿತ್ರವನ್ನು ದಿಟ್ಟಿಸಿ ನೋಡಿದ, ಮುತ್ತು ಪಂಜರದಲ್ಲಿಲ್ಲ. ಗಿಣಿ ಕೋಟು ಧರಿಸಿರಲಿಲ್ಲ ಇಲ್ಲದಿದ್ದರೆ ಮುತ್ತು ಅವನ ಜೇಬಲಿರುತ್ತಿತ್ತು. ಬಹಳ ಯೋಚಿಸಿ ಬಾಲಕ ಹೇಳಿದ ''ಮುತ್ತು ಗಿಣಿಯ ಕಣ್ಣಲ್ಲಿದೆ. ಅದು ಮುತ್ತನ್ನು ಕಣ್ಣಲ್ಲಿ ಅಡಗಿಸಿಕೊಂಡಿದೆ.''

ಇಲ್ಲಿಯವರೆಗೆ ನಾನು ಬೇಕಾದಷ್ಟು ಕಥೆಗಳನ್ನು ಬರೆದಿದ್ದೆ. ಅವುಗಳಲ್ಲಿ ಮಾನವ ತನ್ನ ಕಣ್ಣಲ್ಲಿ ಅಡಗಿಸಿರುವ ಕಥೆಯನ್ನು ಬರೆದಿರಲಿಲ್ಲ. ಆ ಕಥೆ ಯಾವಾಗ ಬರೆಯಲ್ಪಡುತ್ತದೋ, ಯಾರು ಅದನ್ನು ಬರೆಯುವನೋ! ಆದರೆ ಈ ಕಥೆ ಸಹಸ್ರಾರು ವರ್ಷಗಳಾದರೂ ಹಳೆಯದಾಗುವುದಿಲ್ಲ. ಗಿಣಿಯ ಕಣ್ಣಿನ ಹಾಗೆ ಹೊಳೆಯುತ್ತಿರುತ್ತದೆ.

ಬಾಲಕ ಮತ್ತೊಂದು ಚಿತ್ರ ತೋರಿಸಲಿದ್ದ, ಅಷ್ಟರಲ್ಲಿ ಅವಳ ತಾಯಿ ಬಂದು ''ಪುಟ್ಟ ಏಳು; ಒಂಬತ್ತು ಘಂಟೆಯಾಗಲಿದೆ. ನೀನು ಶಾಲೆಗೆ ಹೋಗ ಬೇಕಲ್ಲ'' ಎಂದಳು.

ಪುಟ್ಟನಿಗೆ ಒಂದು ರೀತಿಯ ಆಘಾತ ಉಂಟಾಯಿತು. ನನಗೂ ಆಯಿತು. ನಾವು ಸುಂದರವಾದ ಪ್ರಪಂಚದಲ್ಲಿದ್ದೆವು. ಅಲ್ಲಿ ಶಾಲೆಯ ಹೆಸರು ಬರುವುದು ಸಹ ಪಾಪ. ಶಾಲೆಯೂ

ಸಹ ಎಂತಹದು? ಚಿಕ್ಕ ಕೊಠಡಿಗಳು, ಕತ್ತಲೆ ತುಂಬಿದ ಪಡಸಾಲೆ, ಬಡತನದ ಸಿಹಿ ಕಹಿ ನೆನಪುಗಳಿಂದ ರೋಸಿಹೋಗಿರುವ ಮಾಸ್ತರ್ ಮತ್ತು ಅವನ ಕೋಪ ಹಾಗೂ ತಿರಸ್ಕಾರದಿಂದ ತುಂಬಿದ ಕೋಲು. ಈ ಬೇಸರ ಬಹಳ ದೂರದಿಂದ ಬರುತ್ತಿತ್ತು. ಆದರೆ ಮಕ್ಕಳ ಮೇಲೆ ಎರಗುತ್ತಿತ್ತು.

ಪುಟ್ಟ ಹೆದರಿದ.

ನಾನೂ ಹೆದರಿದೆ.

ಆದರೂ ಏನೂ ಮಾಡುವಂತಿರಲಿಲ್ಲ. ವಿವಶತೆಯಿಂದ ಶಾಲೆ ಗೆ ಹೋಗಲೇಬೇಕಿತ್ತು. ಹುಡುಗ ನನ್ನ ಕಡೆ ವಿವಶತೆಯಿಂದ ನೋಡಿ ''ಶಾಲೆಗೆ ಹೋಗದೇ ಇದ್ದರೆ ಏನಾಗುತ್ತದೆ?'' ಎಂದ.

''ನೀನು ಶಾಲೆಗೆ ಏಕೆ ಹೋಗುವುದಿಲ್ಲ? ಇಂದು ಯಾವ ರಜೆಯೂ ಇಲ್ಲ'' ತಾಯಿ ಕೇಳಿದಳು.

''ಇಂದು ಏಕೆ ರಜೆ ಇಲ್ಲ, ನಿನ್ನೆ ಇತ್ತು ಮೊನ್ನೆ ಇತ್ತು ಇಂದು ಏಕಿಲ್ಲ?'' ಬಾಲಕ ಕೇಳಿದನು.

''ಪ್ರತಿ ದಿನವೂ ರಜೆ ಇರುವುದಿಲ್ಲ'' ನಾನು ಹೇಳಿದೆ. ''ಏಕೆ ಇರುವುದಿಲ್ಲ?'' ಅವನು ಕೇಳಿದ.

ತಾಯಿ ಅವನನ್ನು ಮಡಿಲಿನಿಂದ ಎತ್ತಿಕೊಂಡು ನೆಲದ ಮೇಲೆ ನಿಲ್ಲಿಸಿ ''ಹೂಂ..... ಈಗ ನೆಟ್ಟಗೆ ಶಾಲೆಗೆ ಹೊರಡು..... ಯಾವ ನೆಪಗಳೂ ನಡೆಯುವುದಿಲ್ಲ'' ಎಂದಳು.

ಬಾಲಕ ತನ್ನ ಮುಂದೆ ಇಬ್ಬರು ಕರುಣೆ ಇಲ್ಲದ ಮನುಷ್ಯರು ಇರುವುದನ್ನು ನೋಡಿದ. ಅವನು ಬಹಳ ಖಿನ್ನನಾಗಿ ನಮ್ಮ ಮುಖಗಳಲ್ಲಿರುವ ಕಟುಕತನವನ್ನು ಓದಿಕೊಂಡ ನಿರಾಶನಾಗಿ ತನ್ನ ಚೀಲ ಕಟ್ಟಲಾರಂಭಿಸಿದ. ಆ ಚೀಲದಲ್ಲಿ ನಮ್ಮ ಮುಖಗಳ ಹಾಗೆ ಒರಟು ಮತ್ತು ಕರುಣೆ ಇಲ್ಲದಂತಹ ಪುಸ್ತಕಗಳಿದ್ದವು. ಹುಡುಗ ಬಹಳಷ್ಟು ತಿಳಿದಿದ್ದಾನೆ, ಬಹಳಷ್ಟು ಹೇಳಬಲ್ಲನು. ಆದರೆ ಅವನಿಗೇನು ಸಿಗುವುದಿಲ್ಲ, ಏಕೆಂದರೆ ಇದು ಮಕ್ಕಳ ಪ್ರಪಂಚವಲ್ಲ. ಇದು ವೃದ್ಧರ ಪ್ರಪಂಚ. ಆ ಬಾಲಕ ತನ್ನ ಚಿತ್ರಗಳಲ್ಲಿ ಆ ಪ್ರಪಂಚವನ್ನು ಹುಡುಕುತ್ತಾನೆ. ಅವುಗಳಲ್ಲಿ ಮಕ್ಕಳ ಹಾಗೆ ಮುಗುಳ್‌ನಗೆ ಕಾಣಬೇಕೆಂದು ಬಯಸುತ್ತಾನೆ. ಹಾಗಾಗಿ ಬಾಲಕ ತೆಪ್ಪಗೆ ತನ್ನ ಚೀಲ ಕಟ್ಟಿಕೊಂಡು ಕಂಕುಳಲ್ಲಿಟ್ಟುಕೊಂಡು ತನ್ನ ಖಜಾನೆಯನ್ನು ಜೇಬಿನಲ್ಲಿ ತುರುಕಿಸಿಕೊಂಡ. ನಮ್ಮ ಕಡೆ ನೋಡದೇ ಓದಲು ಹೊರಟುಹೋದ.

ಹುಡುಗನ ಶಾಲೆ ಮನೆಯಿಂದ ಬಹಳ ಹತ್ತಿರವಿತ್ತು. ಅರ್ಧ ಫರ್ಲಾಂಗಿನಷ್ಟು ದಾರಿ ಇರಲಿಲ್ಲ. ಅದರ ಒಂದು ಕಡೆ ಒಬ್ಬ ಸಾಹುಕಾರನ ಬಂಗಲೆಯ ಉದ್ದನೆ ಗೋಡೆ ಮತ್ತೊಂದು ಕಡೆ ಗುಲ್‌ಮೊಹರ್ ಮರಗಳ ಸಾಲು, ಮಧ್ಯದಲ್ಲಿದ್ದ ರಸ್ತೆಯ ಮೇಲೆ ನನ್ನ ಹುಡುಗ ಸುಮ್ಮನೆ ತಲೆ ಬಾಗಿಸಿ ಕೊಂಡು ಶಾಲೆಗೆ ಹೋಗುತ್ತಿದ್ದ. ನಾನು ಒಂದು ಮರದ ಹಿಂದಿನಿಂದ ಬಂದು ಅವನ ದಾರಿಗೆ ಅಡ್ಡ ಹಾಕಿದೆ.

ಹುಡುಗ ನನ್ನ ಕಡೆ ನೋಡಿದ.

ನಾನು ಅತ್ತ ಇತ್ತ ನೋಡಿದೆ. ಪಿಸು ಮಾತಿನಲ್ಲಿ ಹೇಳಿದೆ ''ಬಾ ಇಂದು ಶಾಲೆಯಿಂದ ಓಡಿ ಹೋಗೋಣ.''

ಇದನ್ನು ಕೇಳಿದ ತಕ್ಷಣ ಅವನ ಮುಖ ಕಲ್ಪನೆಯ ಜ್ಯೋತಿಯಿಂದ ಬೆಳಗಿತು. ಅದೇ ಜ್ಯೋತಿ ಅವನ ಕಣ್ಣಲ್ಲಿ ಮಿನುಗಲಾರಂಭಿಸಿತು. ಅವನ ವಿಷಾದ ತುಂಬಿದ ಕೆನ್ನೆಗಳು ಹೂವಿನ ಹಾಗೆ ಅರಳಿದವು. ನಾನು ಅವನ ಮುಖದ ಬದಲಾವಣೆ ನೋಡುತ್ತಿದ್ದೆ. ಅವನ ಆಶ್ಚರ್ಯ ಆಶಾಪೂರ್ಣ ಮತ್ತು ಸಂತಸಮಯ ರಾಗವನ್ನು ಕೇಳುತ್ತಿದ್ದೆ. ಬಾಲಕನ ಮೌನಿಮುಖವು ಸಂತೋಷದ ಹಾಡನ್ನು ಹಾಡುತ್ತಿತ್ತು.

ಅವನು ನೆಗೆದು ನನ್ನ ಬೆರಳನ್ನು ಹಿಡಿದುಕೊಂಡ ನಡೆಯುತ್ತಿದ್ದಂತೆ ಸುಮ್ಮನೆ ನಿಂತು ನನ್ನ ಕಡೆ ಗಂಭೀರವಾಗಿ ನೋಡಿ ''ಅಮ್ಮನಿಗೆ ಹೇಳುವುದಿಲ್ಲ ತಾನೆ?'' ಎಂದ.

ನಾನು ನನ್ನ ತುಟಿಗಳ ಮೇಲೆ ಬೆರಳಿಟ್ಟು ''ಷ್ ಷ್'' ಎಂದೆ.

ಕೆಂಪು ಹೂವಿನ ಒಂದು ಮರದ ಕೆಳಗೆ ಹೇರಳವಾಗಿ ಬೆಳೆದ ಬೋರೆ ಹಣ್ಣಿನ ಪೊದೆಗಳಲ್ಲಿ ಸ್ಕೂಲ್ ಚೀಲ ಬಚ್ಚಿಟ್ಟು ಒಂದು ಅಡ್ಡ ದಾರಿಗೆ ಬಂದೆವು ಅದು ವನದಿಂದ ದೂರ ತೆಂಗಿನ ತೋಟವನ್ನು ಹಾದು ಹೋಗುತ್ತಿತ್ತು.

ಆ ದಿನ ನಾವು ಸಾಕಷ್ಟು ಓಡಾಡಿದ್ದೆವು. ಆ ಬೆಳಗಿನ ವಾತಾವರಣ ನಿರ್ಮಲ ಹಾಗೂ ಹೊಳಪಿನಿಂದ ಕೂಡಿತ್ತು. ಕಾಡಿನಲ್ಲಿ ಸುತ್ತಲೂ ಮೌನ ಆವರಿಸಿತ್ತು. ಒಂದು ರೀತಿಯ ಹಸಿರು ಬಣ್ಣದ ತಣ್ಣನೆಯ ಬೆಳಕು ಸುತ್ತಲೂ ಹರಡಿತ್ತು. ನಾವಿಬ್ಬರೂ ಬರಿಗಾಲುಗಳಲ್ಲಿ ನಡೆಯುತ್ತಿದ್ದೆವು. ನಾನು ಸಹ ಮರಾಠಿ ಹುಡುಗಿಯ ಹಾಗೆ ಬೇಗನೇ ಬರಿಗಾಲಲ್ಲೇ ಮನೆಯಿಂದ ಓಡಿ ಬಂದಿದ್ದೆ. ಬಹಳ ದಿನದ ನಂತರ ನನ್ನ ನಗ್ನ ಕಾಲುಗಳು ನೆಲದ ಮೇಲೆ ನಡೆಯುತ್ತಾ ಇದ್ದವು. ಬಾಲ್ಯದ ಹಳೇ ನೆಂಟಸ್ತನದ ಸಣ್ಣ ಕಲ್ಲುಗಳು ನನ್ನ ಪಾದಗಳನ್ನು ಆಲಂಗಿಸುತ್ತಿದ್ದವು. ನನ್ನ ಕಾಲುಗಳಿಗೆ ಒಂದು ರೀತಿಯ ಸುಖದ ಅನುಭವವಾಗಲಾರಂಭಿಸಿತು ಮತ್ತು ನನ್ನ ಮಗನನ್ನು ಕರೆದುಕೊಂಡು ಕಾಡಿನಲ್ಲಿ ಓಡಲಾರಂಭಿಸಿದೆ.

ಬಾಲಕನಿಗೆ ಕಾಡಿನ ಹರ್ಷದಾಯಕ ಬೆಳಕು ಇಷ್ಟವಾಯಿತು. ''ಇಲ್ಲಿ ಹಗಲು ಇದೆ'' ಎಂದ.

''ನಮ್ಮ ಮನೆಯಲ್ಲೂ ಹಗಲಿದೆ''.

ನಾನು ಹೇಳಿದೆ ''ನಮ್ಮ ಮನೆಯಲ್ಲೂ ಹಗಲಿದೆ, ಈಗ ಎಲ್ಲರ ಮನೆಗಳಲ್ಲೂ ಹಗಲಿದೆ.''

''ಹಗಲಿನಲ್ಲಿ ರಾತ್ರಿಯಾಗುವುದಿಲ್ಲವೇ?'' ಅವನು ಪ್ರಶ್ನಿಸಿದ.

''ಅಯ್ಯೋ ಹುಚ್ಚ ಹಗಲಿನಲ್ಲಿ ರಾತ್ರಿಯಾಗುವುದಿಲ್ಲ.'' ನಾನು ಹೇಳಿದೆ.

ಬಾಲಕ ಮತ್ತೆ ಹಟ ಮಾಡುತ್ತಾ ಕೇಳಿದ, "ಸ್ವಲ್ಪವೂ ರಾತ್ರಿ ಆಗುವುದಿಲ್ಲವೇ?"

ನಾನು ಗಾಬರಿಗೊಂಡು ಕೇಳಿದೆ "ಎಂತಹ ಕೆಲಸಕ್ಕೆ ಬಾರದ ಪ್ರಶ್ನೆ ಕೇಳುತ್ತಿದ್ದೀಯ? ಹಗಲಿನಲ್ಲಿ ರಾತ್ರಿ ಆಗುವುದು ಹೇಗೆ ಸಾಧ್ಯ?

ಬಾಲಕ "ಈ ಹೊತ್ತಿನಲ್ಲಿ ನಮ್ಮ ಮಾಲಿಯ ಮನೆಯಲ್ಲಿ ರಾತ್ರಿ ಏಕಾಗುತ್ತದೆ?" ಎಂದು ಕೇಳಿದ.

ನನ್ನ ಮೈಯೆಲ್ಲ ಝುಂ ಎನಿಸಿ, ಕಂಪನದ ಒಂದು ಅಲೆ ಮೈಯಲ್ಲಿ ಹರಿದ ಹಾಗಾಯಿತು. ನನ್ನ ಬಂಗಲೆಯ ಹೊರಗಿರುವ ಮಾಲಿಯ ಗುಡಿಸಿಲು ನೆನಪಾಯಿತು. ಅಲ್ಲಿ ಹಗಲಲ್ಲೂ ಸಹ ರಾತ್ರಿ. ಮಧ್ಯಾಹ್ನವೂ ಕೂಡ ಕತ್ತಲೆ ಇರುತ್ತಿತ್ತು.

ಬಾಲಕನ ಪ್ರಶ್ನೆಗೆ ಉತ್ತರ ನೀಡಲು ನನಗೆ ಸಾಧ್ಯವಾಗಲಿಲ್ಲ. ಏಕೆಂದರೆ ನನ್ನ ಉತ್ತರ ಬಹಳ ಉದ್ದನೆಯದಾಗಿತ್ತು. ನನ್ನ ಹುಡುಗ ಚಿಕ್ಕವನಿದ್ದ.

ಕಾಡೆಲ್ಲ ತಿರುಗಿ ಹೊಸ ಹೊಸ ಗಿಡ ಮರ, ಹೂವು ಹಾಗೂ ಚಿಟ್ಟೆಗಳ ಪರಿಚಯವನ್ನು ಮಾಡಿಕೊಳ್ಳುತ್ತಾ ನಾವುಗಳು ಒಂದು ಹಳೇ ದೇವಾಲಯದ ಮೆಟ್ಟಲಿನ ಮೇಲೆ ಬಂದು ಕುಳಿತೆವು. ಅದು ಬಹಳ ಹಳೇ ದೇವಾಲಯ, ಮೇಲ್ಛಾವಣಿ ಮುರಿದಿತ್ತು. ಅಲ್ಲಿಂದ ಆಕಾಶ ಕಾಣಿಸುತ್ತಿತ್ತು. ಮೆಟ್ಟಲುಗಳನ್ನ ಹತ್ತಿದ ನಂತರ ಕಲ್ಲಿನ ನಂದಿ ಕಾಣಿಸಿತು. ಅದು ಮಂದಿರದ ಹೊರಗೆ ಕುಳಿತಿತ್ತು.

ಬಾಲಕ ಕೇಳಿದ "ಇದು ನಂದಿ ಅಲ್ಲವೇ?"

"ಹೌದು"

"ಇದು ಇಲ್ಲಿ ಏನು ಮಾಡುತ್ತಿದೆ?"

"ಮಂದಿರದ ಮುಂಭಾಗದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದೆ" ಎಂದೆ.

"ಇದು ಮಂದಿರವೆ?"

"ಹೌದು".

"ಮಂದಿರದಲ್ಲಿ ಏನಾಗುತ್ತದೆ."

"ಮಂದಿರದಲ್ಲಿ ಪೂಜೆಯಾಗುತ್ತದೆ."

"ಪೂಜೆ ಅಂದರೇನು?"

ನಾನು ಸುಮ್ಮನಾದೆ. ಅವನಿಗೆ ಪೂಜೆಯ ಬಗ್ಗೆ ಏನು ಹೇಳಲು ಸಾಧ್ಯ? ಏಕೆಂದರೆ ಭಗವಂತನ ಕಲ್ಪನೆ ಬಹಳ ದೂರದ ಮಾತು. ಶಿಶು ಮೊದಲಿಗೆ ಹಾಲು ಕುಡಿಯುತ್ತದೆ, ತಾಯಿಯ ಮುಖ ನೋಡುತ್ತದೆ. ನಿಧಾನವಾಗಿ ನಡೆಯಲಾರಂಭಿಸುತ್ತಾನೆ. ನಂತರ ಮಾತಾಡಲು

ಪ್ರಾರಂಭಿಸುತ್ತಾನೆ. ಮೊದಲಿಗೆ ಅಮ್ಮ, ನೀರು, ರೊಟ್ಟಿ, ಎಂದು ಹೇಳುತ್ತಾನೆ. ನಂತರ ಆಟದ ಗೊಂಬೆಗಳ ಹೆಸರುಗಳನ್ನು ಹೇಳುತ್ತಾನೆ. ಆ ಪುಟ್ಟ ಪ್ರಪಂಚದಲ್ಲಿ ಪೂಜೆ ಮತ್ತು ಭಗವಂತನ ಕಲ್ಪನೆ ಪ್ರವೇಶಿಸುವುದು ಸಾಧ್ಯವಿಲ್ಲ ಆದ್ದರಿಂದ ನಾನು ಮಗುವಿಗೆ ಹೇಳಿದೆ,

''ನನಗೂ ಸಹ ಗೊತ್ತಿಲ್ಲ. ಬಾ ಒಳಗೆ ಹೋಗಿ ಮಂದಿರದಲ್ಲಿ ಪೂಜೆ ಹೇಗಾಗುತ್ತದೆ ಎಂದು ನೋಡೋಣ.''

ನಾವಿಬ್ಬರೂ ಮಂದಿರದೊಳಗೆ ಹೋದೆವು.

ಮಂದಿರದ ಮುಂದಿರುವಂತಹ ಕಟ್ಟಡದೊಳಗೆ ಬಹಳಷ್ಟು ಮೂರ್ತಿಗಳಿದ್ದವು. ವಾನರ, ಆನೆ, ಕುದುರೆ ಮತ್ತು ದೇವತೆಗಳ ಮೂರ್ತಿಗಳು. ಆ ಮೂರ್ತಿಗಳು ಬಹಳ ಕೆಟ್ಟ ಸ್ಥಿತಿಯಲ್ಲಿ ಗೋಡೆಗಳ ಅಕ್ಕಪಕ್ಕ ಬಿದ್ದಿದ್ದವು. ಈಗ ಅವುಗಳ ಮೇಲೆ ಪೊದೆಗಳು ಬೆಳೆದಿದ್ದವು. ದೇವಾಲಯದ ಮಧ್ಯದಲ್ಲಿ ದೊಡ್ಡ ವಿಗ್ರಹ ಇರಬೇಕಾದ ಕಡೆ ಒಂದು ಕಲ್ಲಿನ ಕಮಲ ಮಾತ್ರವಿತ್ತು. ಅದರ ಸುತ್ತಲೂ ಗುಬ್ಬಚ್ಚಿಗಳು ಗೂಡು ಕಟ್ಟಿದ್ದವು. ಅದರೊಳಗೆ ಮೂರು ಸುಂದರವಾದ ಮೊಟ್ಟೆಗಳಿದ್ದವು. ನಾಜೂಕಾದ ನೀಲಿ ಬಣ್ಣದ ಮೂರು ಮೊಟ್ಟೆಗಳ ಮೇಲೆ ನೇರಳೆ ಬಣ್ಣದ ಚುಕ್ಕಿಗಳು ಬಹಳ ಸುಂದರವಾಗಿ ಕಾಣಿಸುತ್ತಿದ್ದವು.

ಬಾಲಕ ಸಂತೋಷದಿಂದ ಚೀರಿ ಒಂದು ಮೊಟ್ಟೆಯನ್ನು ತನ್ನ ಕೈಯಲ್ಲಿ ಎತ್ತಿಕೊಂಡ, ಅವನು ಬಹಳ ಸಂತೋಷಗೊಂಡಿದ್ದ. ಸಂತೋಷದಿಂದ ಒಮ್ಮೆ ನನ್ನ ಕಡೆ ನೋಡುತ್ತಿದ್ದ. ಅವನನ್ನು ನೋಡುತ್ತಿದ್ದರೆ ಅವನಿಗೆ ಯಾವುದೋ ದೊಡ್ಡ ಖಜಾನೆ ಸಿಕ್ಕಿದಂತೆ ಕಾಣುತ್ತಿತ್ತು. ಅವನ ಹರ್ಷ ಉಲ್ಲಾಸ ನನ್ನ ತನಕ ತಲುಪಿತು. ನನ್ನ ಹೃದಯವೂ ಒಂದು ರೀತಿಯ ಸಂತೋಷದಿಂದ ತುಂಬಿಹೋಯಿತು.

ಸ್ವಲ್ಪ ಹೊತ್ತಿನ ನಂತರ ಬಾಲಕ ಆ ಮೊಟ್ಟೆಯನ್ನು ತನ್ನ ನಿಕ್ಕರ್ ಜೇಬಿನೊಳಗಿಟ್ಟುಕೊಂಡನು ನಂತರ ಮತ್ತೊಂದು ಮೊಟ್ಟೆ ಎತ್ತಿಕೊಳ್ಳುವಾಗ ನಾನು ತಡೆದೆ.

''ಏಕೆ?'' ಹುಡುಗ ಪ್ರಶ್ನಿಸಿದ.

''ಈ ಮೊಟ್ಟೆ ನಮ್ಮದಲ್ಲ ಇದು ಮಂದಿರದ್ದು.''

ಬಾಲಕ ''ಇದು ಪೂಜೆ ಮೊಟ್ಟೆ ಏನು?'' ಎಂದು ಕೇಳಿದನು.

''ಹೌದು'' ನಾನು ಸಂತೋಷದಿಂದ ಹೇಳಿದೆ. ''ಇದು ಪೂಜೆ ಮೊಟ್ಟೆ''. ಆ ಮೊಟ್ಟೆಗಳನ್ನು ಅದರ ಗೂಡಿನಲ್ಲಿಡು. ಮತ್ತೆ ಒಂದು ಗುಬ್ಬಚ್ಚಿ ಹಾಡುತ್ತ ಬಂದು ಆ ಮೊಟ್ಟಗಳನ್ನು ತನ್ನ ರೆಕ್ಕೆಗಳಲ್ಲಿ ಇಟ್ಟುಕೊಂಡು ಮತ್ತೆ ಹಾಡು ಹಾಡಿದರೆ ಮಂದಿರದ ಛಾವಣಿಯಿಂದ ಕಾಣುವ ಆಕಾಶ ಮುಗುಳು ನಗುವುದು. ಆ ಹಕ್ಕಿಯ ರೆಕ್ಕೆಗಳ ಮಡಿಲು ಪ್ರೀತಿಯ ಸುವರ್ಣ ಸಂತೋಷದಿಂದ ತುಂಬಿ ತುಳುಕುವುದು.''

''ಆಗ ಪೂಜೆ ಪೂರ್ಣವಾಗುವುದು'' ಬಾಲಕ ಸಂತೋಷದಿಂದ ಹೇಳಿದ.

''ಹೌದು ಪೂಜೆ ಆಗ ಪೂರ್ಣವಾಗುವುದು''

ಬಾಲಕ ಸಂತೋಷ ಪಡುತ್ತಾ ಆ ಮೊಟ್ಟೆಗಳನ್ನು ಗೂಡಿನಲ್ಲಿ ವಾಪಸ್ಸು ಇಟ್ಟನು. ಅವನಿಗೆ ಈ ಪೂಜೆ ಬಹಳ ಇಷ್ಟವಾಯಿತು. ನನಗೂ ಅಸಲಿನಲ್ಲಿ ಇಂದೇ ಗೊತ್ತಾಗಿದ್ದು ಪೂಜೆ ಕೇವಲ ಭಗವಂತನಿಗಲ್ಲ. ಪೂಜೆ ತಾಯಿಗೆನ್ನುತ್ತಾರೆ, ಕ್ರಿಯಾತ್ಮಕ ಕ್ರಿಯೆಗೆ ಹೇಳುತ್ತಾರೆ, ಜೀವನದ ಪ್ರೀತಿಗೆ ಹೇಳುತ್ತಾರೆ. ಬಾಲಕ ನಡೆದು ದಣಿದಿದ್ದ. ನಾನು ಅವನನ್ನು ಎತ್ತಿಕೊಂಡೆ. ನಡೆಯುತ್ತಾ ನಡೆಯುತ್ತಾ ಅವನಿಗೆ ಅಪ್ಸರೆಯರ ದೇಶದ ಒಂದು ಸುಂದರವಾದ ಕನಸಿನ ಹಾಗೆ ಮಬ್ಬು ಮಬ್ಬಾದ ಕಥೆ ಹೇಳಲಾರಂಭಿಸಿದೆ. ಅದನ್ನು ಕೇಳುತ್ತಾ ನನ್ನ ಹುಡುಗ ಎದೆಯ ಮೇಲೆ ನಿದ್ರೆ ಹೋದ.

ಹಿಂದಿರುಗಿ ಬಂದು ಬೋರೆ ಹಣ್ಣಿನ ಪೊದೆಗಳಿಂದ ಅವನ ಚೀಲವನ್ನು ಎತ್ತಿಕೊಂಡು ಕೈ ಕೆಳಗೆ ಮಾಡಿ ನಿದ್ರಿಸುತ್ತಿದ್ದ ಹುಡುಗನ ಆಶಾಪೂರ್ಣ ಮುಖ ನೋಡಿದೆ. ಅವನ ಮುಗ್ಧ ಮುಖದಲ್ಲಿ ನನ್ನ ಬಾಲ್ಯದ ನೆರಳು ಕಾಣಿಸಿತು. ಹೀಗೇ ಒಂದು ಕತ್ತಲೆ ತುಂಬಿದ ಪಾಠಶಾಲೆಯಿಂದ ಮಾಸ್ಟರ್‌ನ ಭಯದಿಂದ ಸ್ಕೂಲಿಂದ ಓಡಿದ ಆ ದಿನದ ನೆನಪು ಬಂತು.

ಅಪ್ಸರೆಯರ ದೇಶದಲ್ಲಿ ಎಲ್ಲರ ಆಸೆ ಆಕಾಂಕ್ಷೆಗಳೂ ಪೂರ್ಣವಾಗುತ್ತವೆ ಎಂದು ಹೇಳಲಾಗುತ್ತದೆ. ಅದು ನಿಜವೇ ಆದರೆ ನಾನು ಅಪ್ಸರೆಯರ ದೇಶದ ಮಗುವನ್ನು ನನ್ನ ಮಡಿಲಲ್ಲಿ ಎತ್ತಿಕೊಂಡು ನನ್ನ ಆಸೆಯನ್ನು ನಿಮ್ಮ ಮುಂದಿಡುತ್ತೇನೆ. ನಾನು ಬಯಸುವುದೇನೆಂದರೆ ಈ ಮಗುವಿನ ಕಥೆ ನಮ್ಮ ತಳಿಯಿಂದ ಬೇರೆಯಾಗಿರಬೇಕು. ಅವನ ಕಥೆ ಎಂತಹ ಕಾಲದ್ದು ಆಗಿರಬೇಕೆಂದರೆ ಅದರಲ್ಲಿ ಮಗು ತನ್ನ ಮುಖ ನೋಡಿಕೊಳ್ಳ ಬೇಕು. ಮಕ್ಕಳ ಹಾಗೆ ಮುಗುಳ್‌ನಗಬೇಕು.

ನಂತರ ನಿದ್ರೆಯಲ್ಲಿದ್ದ ಮಗನ ಮುಖವನ್ನು ಚುಂಬಿಸಿ ಹೆಗಲ ಮೇಲೆ ಹಾಕಿಕೊಂಡು ಮನೆಯತ್ತ ಬಂದೆ. ಇಂದು ಆಕಾಶ ಬಹಳ ನೀಲಿಯಾಗಿದೆ. ನನ್ನ ತಲೆಯಮೇಲೆ ಗುಲ್‌ಮೊಹರ್ ಹೂಗಳು ಬಿದ್ದಿವೆ.

ಡಾ. ಮುಹಮ್ಮದ್ ಸಿಬ್ಘತುಲ್ಲಾ, ಉರ್ದು ಪ್ರಾಧ್ಯಾಪಕರು, ಬಾಲಕರ ಸರಕಾರಿ ಕಾಲೇಜು, ಕೋಲಾರ.

ನೀರ ಮೇಲಣ ಮೀನು (ಕಥೆ)

ಭೋಜಪುರಿ ಮೂಲ: **ರಾಮೇಶ್ವರ್ ಸಿಂಗ್ 'ಕಶ್ಯಪ್'**
ಅನುವಾದ: **ಡಾ. ಶ್ರೀಧರ ಹಿಸ್ಸೆ**

ಕುಂತಿ ತುಂಬಾ ಹೊತ್ತಿನಿಂದ ತನ್ನ ಕಾಲನ್ನು ನೀರಿನಲ್ಲಿ ಆಡಿಸುತ್ತ ಕೊಳದ ದಡದಲ್ಲಿ ಕುಳಿತ್ತಿದ್ದಳು. ಅವಳ ಬೆರಳುಗಳಿಗೆ ನೀರು ರೇಷಿಮೆಯ ಎಳೆಯಂತೆ ತೊಡರಿಕೊಂಡಿತ್ತು. ಅವಳಿಗೆ ವಿಚಿತ್ರ ಬಗೆಯ ಸಂವೇದನೆಯೊಂದು ಅನುಭವಕ್ಕೆ ಬಂದಿತು. ಅದನ್ನು ಅನುಸರಿಸಿ ಅವಳ ಅಂಗಾಲಿನಲ್ಲಿ ನಡುಕಹುಟ್ಟಿತು. ನಂತರ ಅವಳ ಅಂಗಾಂಗಗಳಿಗೆಲ್ಲ ಹಬ್ಬಿತು. ಕೆಲವು ಸಲ ಜಂಗ್ವಾ ಮೀನು ಅವಳ ಹಿಮ್ಮಡಿಯನ್ನು ಮುಟ್ಟಿ ಗೊಣಗಾಟ ಶುರು ಮಾಡುತ್ತದೆ. ಅವಳ ಅಂಗಾಂಗವೆಲ್ಲ ನಡುಗುವಂತೆ ಮಾಡುತ್ತದೆ. ಸ್ವಲ್ಪ ದೂರದಲ್ಲಿ ಕಪ್ಪೆಗಳು ವಟಗುಟ್ಟಿದವು. ಅವಲ್ಲಿ ಕೆಲವು ನೀರಿಗೆ ಜಿಗಿದವು. ತಟಕ್ಕನೆ ಅದರಿಂದ ಉಂಟಾದ ಅಲೆಗಳು ಕೊಳದಲ್ಲಿ ಸುತ್ತಲೂ ಹರಡಿಕೊಂಡವು. ಕೆಲಕಾಲ ಚುಕ್ಕಿಗಳ ನೆರಳನ್ನು ನೀರಲ್ಲಿ ಕಲಕಿದುವು.

ದುಂಬಿಯ ಅನಿಷ್ಟ ಸದ್ದು ಗಾಳಿಯಲ್ಲಿ ತುಂಬಿಕೊಂಡಿತ್ತು. ಪರಿಸರದ ತುಂಬಾ ಬೇವಿನ ಹೂವಿನ ವಾಸನೆ ಹರಡಿ ಗಾಳಿಯಲ್ಲಿ ತೂಗುತ್ತಿತ್ತು.

ಅಸಹನೀಯ ಧಗೆಯನ್ನು ಇಡೀ ದಿನ ಸಹಿಸಿಕೊಂಡ ನಂತರ ಕುಂತಿಗೆ ಅದನ್ನು ಹೋಗಲಾಡಿಸಿಕೊಳ್ಳಬೇಕೆನಿಸಿತು. ಅವಳು ಕೊಳಕ್ಕೆ ಇಳಿದುಹೋಗಿ ನೀರಲ್ಲಿ ಮುಳುಗು ಹಾಕಬಯಸಿದಳು. ಅಡುಗೆ ಮನೆಯಲ್ಲಿ ಸಂಜೆಯಿಂದ ಮಣ್ಣಿನ ಒಲೆ ಮುಂದೆ ಕುಳಿತು ಊದಿ ಊದಿ ಅವಳಿಗೆ ಸಾಕು ಸಾಕೆನಿಸಿಬಿಟ್ಟಿತು. ಅವಳ ಮೈ ಬೆವತು ಆಕೆಯ ಸೀರೆ ಮೈಗಂಟಿಕೊಂಡಿತ್ತು.

ಎಲ್ಲರಿಗೂ ಬಡಿಸಿದ ಮೇಲೆ ಅವಳು ಹೇಗೋ ಸುಧಾರಿಸಿಕೊಂಡಳು. ಪಾತ್ರೆಗಳನ್ನು ತೊಳೆಯಲು ನೀರಿಗಾಗಿ ಕೊಳಕ್ಕೆ ಹೋದಳು. ನೀರಿನಲ್ಲಿಟ್ಟು ನೆನೆಸಿ ತೊಳೆಯದೆ ಹೋದರೆ ಕೆಲ ಪಾತ್ರೆಗಳು ತೊಳೆದಂತೆಯೆ ಇರುವುದಿಲ್ಲವೆಂದು ಅವಳಿಗೂ ಗೊತ್ತಿತ್ತು. ಮಾರನೆಯ ದಿನ ಬೆಳಿಗ್ಗೆ ಆ ಪಾತ್ರೆಗಳನ್ನು ತೊಳೆದಾಗ ಅವುಗಳಿಗೆ ಅಂಟಿಕೊಂಡಿರುತ್ತಿದ್ದ ಆಹಾರ ಪದಾರ್ಥ ಒಣಗಿ ಗಟ್ಟಿಯಾಗಿ ಬಿಟ್ಟಿರುತ್ತಿತ್ತು.

ಆದರೂ ಅವಳದು ನೀರಿಗಿಳಿಯಬಾರದೆಂಬ ಮನಸು. ಅವಳು ತನ್ನ ಮೈಯನ್ನು ಸಡಿಲಬಿಟ್ಟು ಕುಳಿತಲ್ಲೇ ಕುಳಿತಿದ್ದಳು.

ಬಲಭಾಗಕ್ಕಿದ್ದ ಅವಳ ಮನೆಯ ಮೊಗಸಾಲೆ ಅಲ್ಲಿಂದ ಕಾಣುತ್ತಿತ್ತು. ಹೊರಗಿನ ರೂಮಿನಲ್ಲಿ ಮಣ್ಣಿನ ಹಣತೆಯೊಂದು ಕಪ್ಪುಹೊಗೆಯನ್ನು ಉಗುಳುತ್ತಿತ್ತು. ಮಣ್ಣಿನ ಹಣತೆಯ ಮಂದ ಬೆಳಕಿನಲ್ಲಿ ಎಮ್ಮೆ ತನ್ನ ಬಾಲವನ್ನು ಆಡಿಸುತ್ತ ಸೊಳ್ಳೆಗಳನ್ನು ಓಡಿಸುತ್ತಿದ್ದುದು ಅವಳಿಗೆ ಕಾಣುತ್ತಿತ್ತು. ಮೂಲೆಯೊಂದರಲ್ಲಿ ಕುಳಿತ ಓರಗರು ಮೆಲಕು ಹಾಕುತ್ತಿತ್ತು. ತನ್ನ ತಾಯಿ ನಿದ್ದೆ ಹೋಗಿ ಗೊರಕೆ ಹೊಡೆಯುತ್ತಿರಬೇಕೆಂದು ಕುಂತಿ ಕಲ್ಪಿಸಿಕೊಂಡಳು, ಅವಳ ತಂದೆ ಒಬ್ಬ ಅಸ್ತಮ ರೋಗಿ. ಉಸಿರಾಟದ ತೊಂದರೆಯಿಂದ ಆತ ಕಣ್ಣುಮುಚ್ಚಿ ಕರ್ಕಶ ಸದ್ದು ಹೊರಡಿಸುತ್ತಿದ್ದ. ತನ್ನ ಉಸಿರಾಟದ ತೊಂದರೆಯಿಂದ ಅವನು ಕಣ್ಣು ಮುಚ್ಚಿಕೊಂಡಿದ್ದರೂ ಗಾಢ ನಿದ್ದೆ ಮಾಡುತ್ತಿದ್ದುದ್ದು ತುಂಬಾ ಅಪರೂಪ.

ಸೀತ್ವಾ, ಗೀತ್ವಾ, ಮೋತಿಯಾ, ಗಾಯೇತ್ರ್ಯಾ, ಅಭಿಲಕ್ಷ್ವಾ ಮತ್ತು ಕಲಿಯಾ - ಎಲ್ಲರೂ ಒಂದೇ ಹಾಸುಗೆಯಲ್ಲಿ ಮಲಗಿರುತ್ತಿದ್ದರು. ಒಬ್ಬರ ಕಾಲು ಮತ್ತೊಬ್ಬರ ತಲೆಯ ಮೇಲೆ ಬಿದ್ದಿರುತ್ತಿದ್ದರೆ ಮಗದೊಬ್ಬರ ತಲೆ ಮಂಚದಿಂದ ಕೆಳಗೆ ತೂಗುಬಿದ್ದಿರುತ್ತಿತ್ತು. ಮೂರನೆಯವನ ಕಾಲನ್ನು ಸುತ್ತಲಿ ದಾರದಿಂದ ಮಂಚಕ್ಕೆ ಬಿಗಿದಿರುತ್ತಿತ್ತು. ಅವಳು ಎದ್ದಮೇಲೆ ಅವರನ್ನೆಲ್ಲ ಹಾಸುಗೆ ಮೇಲೆ ಸರಿಯಾಗಿ ಮಲಗಿಸಬೇಕಾಗಿತ್ತು. ಆ ಮೇಲೆ ಅವರು ಕುನ್ನಿಗಳಂತೆ ಕುರ್ರೊ, ಮರ್ರೊ ಎನ್ನಲು ಶುರುವಿಡುತ್ತಿದ್ದರು. 'ಈ ಕುಂತಿ ಅನಿಷ್ಟದ ಮಾಯಕಾತಿ. ಈ ಮಕ್ಕಳಿಗೆ ಹಿಂಸೆ ಕೊಡಬೇಕು ಅಂದರೆ ಅವಳಿಗೆ ತುಂಬಾ ಇಷ್ಟ. ಅವಳು ತನ್ನಿಷ್ಟದಂಗೆ ಇರಬೇಕು ಅಂದರೆ ಅವಳಿಗೆ ತುಂಬಾ ಇಷ್ಟ. ಅವಳು ತನ್ನಿಷ್ಟದಂಗೆ ಇರಬೇಕು ಅನ್ನೊದಾದರೆ ಎಲ್ಲ ಮಕ್ಕಳ ಜೀವಾ ತೆಗೀಲಿ ಅತ್ತಾಗೆ' ಎಂದು ಅವಳ ತಾಯಿ ಗರ್ಜಿಸುತ್ತಿದ್ದಳು. 'ಅವರನ್ನ ಯಾಕಮ್ಮಾ ಅಳಿಸ್ತೀಯಾ? ನನಗೆ ಉಸಿರಾಡೋಕೂ ಬಿಡಲ್ವಾ ನೀನು? ಅಸ್ತಮಾ ನನ್ನ ಬಾಳನ್ನು ಕಂಗೆಡಿಸಿದೆ ಅಂತಾ ನಿನಗೆ ಗೊತ್ತಿಲ್ವಾ?' ಎಂದು ಅವಳ ತಂದೆ ಆ ಮಾತಿಗೆ ತನ್ನ ಮಾತು ಸೇರಿಸುತ್ತಿದ್ದರು. ಮಕ್ಕಳು ಮಂಚದ ಮೇಲೆ ಮಲಗಿದ್ದಂತೆ ಕುಂತಿ ಅವರನ್ನು ಹಾಗೇ ಬಿಟ್ಟುಬಿಟ್ಟರೆ ಅವಳನ್ನು ಕಂಡು ಆ ಮಲತಾಯಿ ಹೀಗೆ ಹೇಳಿರುತ್ತಿದ್ದಳು -'ಅವಳ ಗುಂಡಿಗೆ ಮರದ್ದೊ ಕಲ್ಲಿಂದೋ ಇರಬೇಕು. ಈ ಮಕ್ಕಳನ್ನು ಕಂಡರೆ ಅವಳಿಗೆ ಕರುಳು ಚುರುಕ್ ಅನ್ನೋದೇ ಇಲ್ಲ, ಅವರನ್ನ ಸಾಯೋಕೆ ಬಿಟ್ಟು ಅವಳು ಕದಲದೆ ಕುಕ್ಕರಿಸ್ತಾಳೆ. ನನಗೋ ಬಂದ ಸಿಟ್ಟು ನುಂಗಿಕೊಂಡಿರೋಕೆ ಶಾನೆ ಕಷ್ಟ?'

ಮನೆಯ ಬಗೆಗೆ ಚಿಂತಿಸುತ್ತಿದ್ದ ಕುಂತಿಗೆ ಗಂಟಲು ಬಿಗಿದುಬಂತು. ಉಗುಳು ಮುದ್ದೆ ಮೇಲೆ ಕಾಲಿಟ್ಟಂತೆ ಅವಳಿಗೆ ಅಸಹ್ಯವಾಗುತ್ತಿತ್ತು. ಹಳೆಯ ನೆನಪುಗಳನ್ನವಳು ಬಯಸದಿದ್ದರೂ ಸಿನಿಮಾವೊಂದರ ಸ್ಫುಟವಾದ ದೃಶ್ಯದಂತೆ ಅವು ಅವಳ ತಲೆಯಲ್ಲಿ ಸುಳಿಯತೊಡಗಿದವು.

ಅವಳ ತಾಯಿ ಸತ್ತಾಗ ಆಕೆ ಒಂಬತ್ತು ವರುಷದವಳು. ಅವಳ ತಾಯಿಯ ಸಾವು ಅವಳ ಕಣ್ಣು ಕಟ್ಟಿದಂತಿದೆ. ಅವಳ ತಾಯಿ ಸುಟ್ಟ ಬದನೆಕಾಯಿ ಥರಾ ಕಾಣುತ್ತಿದ್ದಳು. ಹಳ್ಳಿಯ ಮಂತ್ರವಾದಿ ಕೆಂಪನೆ ಒಣಗಿದ ಮೆಣಸಿನಕಾಯಿಯನ್ನು ಮಡಕೆಯೊಳಗೆ ಸುಟ್ಟು; ನೆಲದ ಮೇಲೆ ಕೋಲಿನಿಂದ ಬಾರಿಸಿ; ಬಹುಶಃ ಅವಳಿಗೆ ಹಿಡಿದಿದ್ದ ಗಾಳಿ ಬಿಟ್ಟುಹೋಗಲೆಂದು ಮಂತ್ರ ಪಠಿಸಿದ್ದನು. ಇಷ್ಟಾದರೂ ಅನಿವಾರ್ಯವಾಗಿದ್ದುದೇ ಘಟಿಸಿತು. ಒಂದು ದಿನ ಅವಳು ಸತ್ತು ಹೋದಳು. ಗ್ರಾಮದ ಮುದುಕಿಯರು ತೋಳಗಳಂತೆ ಹುಯ್ಯಲಿಟ್ಟರು. ಕೆಲವು ದಿನಗಳ ನಂತರ ಅವಳ ತಂದೆ ಮತ್ತು ಚಿಕ್ಕಪ್ಪಂದಿರು ತಮ್ಮ ತಲೆ ಬೋಳಿಸಿಕೊಂಡರು. ಊರಿಗೆ ಊಟ ಹಾಕಿಸಿದರು. ಆರು ತಿಂಗಳೊಳಗೆ ಅವಳ ಹೊಸ ತಾಯಿ ಆಗಮಿಸಿದಳು.

ಈ ಹೊಸ ತಾಯಿ ಅವಳನ್ನು ಮೊದಲ ಬಾರಿಗೆ ನೋಡಿ ತನ್ನ ತುಟಿಗಳನ್ನು ಕೊಂಕಿಸಿ ನುಡಿದಳು - 'ಓ..ನೀನೇ ನನ್ನ ಸವತಿ ಮಗಳು.' 'ಹೌದು' ಎಂದು ಕುಂತಿ ಉತ್ತರಿಸಿದಳು. ಆ ದಿನದಿಂದ ಅವಳ ಕಠಿಣ ಪರೀಕ್ಷೆ ಶುರುವಾಗಿತ್ತು. ಅಲ್ಲಿಂದೀಚೆಗೆ ಅವಳ ಮಲತಾಯಿ ಅವಳಿಗೆ ಕೊಟ್ಟಷ್ಟು ತೊಂದರೆ ಬಹುಶಃ ಅವಳ ಜೀವನದಲ್ಲಿ ಬೇರೆ ಯಾರೂ ಕೊಟ್ಟಿರಲಿಲ್ಲ. ಕಳೆದ ಹತ್ತು ವರುಷಗಳಿಂದ ಉಗ್ರ ನರಕದಲ್ಲಿ ಬಾಳಲೇಬೇಕಾದ ಒತ್ತಡಕ್ಕೆ ಸಿಲುಕಿರುವುದಕ್ಕೆ ತಾನು ಹಿಂದಿನ ಜನುಮದಲ್ಲಿ ಮಾಡಿದ್ದ ಪಾಪವಾದರೂ ಎಂಥದು ಎಂದು ಅವಳಿಗೆ ಗೊತ್ತಿರಲಿಲ್ಲ.

ಅವಳ ಹೊಸ ತಾಯಿ ಪ್ರತಿ ವರುಷ ಒಂದೊಂದು ಮಗು ಹೆತ್ತಳು. ಅವುಗಳಲ್ಲಿ ಐದು ಮಕ್ಕಳು ಒಂದಲ್ಲ ಒಂದು ಕಾಯಿಲೆಯಿಂದ ಸತ್ತುಹೋದವು. ಮಕ್ಕಳು ಸಾಯಲು ಕುಂತಿಯೆ ಕಾರಣವೆಂಬುದು ಮಲತಾಯಿಯ ಆರೋಪವಾಗಿತ್ತು. ಈ ನಡುವೆ ಅವಳ ತಂದೆ ಅಸ್ತಮಾ ಕಾಯಿಲೆಗೆ ಒಳಗಾಗಿ ನರಳುತ್ತಿದ್ದನು. ಅವಳ ಮಲತಾಯಿಯೂ ಕಾಯಿಲೆಯೆ ನಾಚುವಂತೆ ಎಲ್ಲ ಕಾಲದಲ್ಲು ನರಳುತ್ತ ಇರುತ್ತಿದ್ದಳು. ಅವಳ ಈ ಸ್ವಭಾವದಿಂದಾಗಿಯೆ ಕುಂತಿಯ ಚಿಕ್ಕಪ್ಪ ಅವರಿಂದ ಬೇರೆಯಾದರು. ಅಲ್ಲಿಂದೀಚೆಗೆ ಅವಳೊಬ್ಬಳೇ ಎಲ್ಲ ಮಕ್ಕಳನ್ನು ನೋಡಿಕೊಳ್ಳುವಂತಾಗಿತ್ತು. ಅವಳು ಅಡುಗೆ ಮಾಡುವುದಷ್ಟೇ ಅಲ್ಲ. ಎಮ್ಮೆಗಳಿಗೆ ಹುಲ್ಲು, ನೀರು ಹಾಕಬೇಕಿತ್ತು. ಅವಳ ಮಲತಾಯಿ ಸಣ್ಣಪುಟ್ಟ ಕೆಲಸ ಕೂಡ ಎಂದೂ ಮಾಡುತ್ತಿರಲಿಲ್ಲ.

ಅವಳು ಕಳೆದ ಹತ್ತು ವರುಷಗಳಿಂದ ಮೇಲಿಂದ ಮೇಲೆ ಮರುಕೊಳಿಸುವ ತಲೆನೋವಿನಿಂದ ನರಳಿದ್ದಳು. ಆದರೂ ಅವಳನ್ನು ವಿಚಾರಿಸಿಕೊಳ್ಳಲು ಯಾರಿಗೂ ಪುರುಸೊತ್ತಿರಲಿಲ್ಲ. ಕುಂತಿ ಮಿತಿಮೀರಿ ಕೆಲಸ ಮಾಡುತ್ತಿದ್ದಳು. ಅವಳಿಗೆ ದಿನಕ್ಕೊಮ್ಮೆಯಾದರೂ ಕನ್ನಡಿಯಲ್ಲಿ ತನ್ನ ಮೊಗ ನೋಡಿಕೊಳ್ಳಲು ಬಿಡುವು ಇರುತ್ತಿರಲಿಲ್ಲ. ಈ ಎಲ್ಲವನ್ನು ನೆನೆದುಕೊಂಡು ತನ್ನ ದೇಹ ತನ್ನದಲ್ಲವೆಂದೇ ಅವಳು ಭಾವಿಸಿದಳು.

ಚಂದ್ರನು ಕಲ್ಲಂಗಡಿ ಹಣ್ಣಿನ ಕೊಳೆತ ತುಂಡಿನಂತೆ, ಬಿದಿರ ಗಳುವಿನ ತುದಿಗೆ ಕಟ್ಟಿರುವಂತೆ, ಬಿಳುಚಿರುವಂತೆ, ಸೊರಗಿದಂತೆ, ನಾಚಿದಂತೆ ಕಾಣುತ್ತಿದ್ದನು, ಮೋಡದ ಧೂಳಿನಿಂದ ಆಗಸದ ಬಣ್ಣ ಸ್ಲೇಟಿನ ಕಪ್ಪು ಬಣ್ಣಕ್ಕೆ ತಿರುಗಿತ್ತು.

ನೀರಿನಲ್ಲಿ ವಿಶ್ರಾಂತಿ ಪಡೆಯುತ್ತಿರುವ ಕುಂತಿಯ ಕಾಲು ಜೋಮು ಹಿಡಿಯತೊಡಗಿತ್ತು. ನೀರಿನಲ್ಲಿದ್ದ ತನ್ನ ಕಾಲನ್ನು ಮನಸ್ಸಿಲ್ಲದ ಮನಸ್ಸಿನಿಂದ ಹೊರತೆಗೆದಳು. ಸ್ವಲ್ಪ ಹೊತ್ತಿನಲ್ಲೆ ಮಡಕೆಯಲ್ಲಿ ನೀರು ತುಂಬಿಕೊಂಡು ತಾನು ಮನೆಗೆ ಹಿಂದಿರುಗುವಳೆಂದು ಬಗೆದಳು. ಈಗಾಗಲೇ ರಾತ್ರಿಯಲ್ಲಿ ಬಹಳ ಸಮಯವಾಗಿತ್ತು. ಆದರೂ ಆಯಾಸದ ಮನಸ್ಥಿತಿಯನ್ನವಳು ಮೀರಿದ್ದಳು. ಅವಳ ಮೈ ಪೂರಾ ನೋಯುತ್ತಿದ್ದರೂ ಇಟ್ಟಿಗೆಯ ಚೂರೊಂದನ್ನು ತೆಗೆದುಕೊಂಡು ಕಾಲಹಿಮ್ಮಡಿಗಳನ್ನು ತಿಕ್ಕುತ್ತ ತೊಳೆಯತೊಡಗಿದಳು.

ಅವಳು ಮತ್ತೆ ಆಲೋಚಿಸಿದಳು. 'ಮೂರು ವರುಷದಿಂದ ನಾನು ಸುಮ್ಮನೆ ಕೂತಿದ್ದೀನಿ ಅಂತಾ ಅನ್ನಿಸಲೇ ಇಲ್ಲ.' ದಿನನಿತ್ಯದ ಸಣ್ಣ ಪುಟ್ಟ ಮನೆಗೆಲಸ ಬಿಟ್ಟು ಅವಳು ನಿಜವಾಗಿಯೂ ಬೇರೇನೂ ಮಾಡದೆ ಕುಳಿತುಕೊಂಡು ಬಿಟ್ಟಿದ್ದರೆ ಬೇರೆ ಬಗೆಯ ವಿಚಾರಗಳು ಆಕೆಯ ಮಿದುಳನ್ನು ತಿನ್ನಲು ತೊಡಗುತ್ತಿದ್ದವು ಅಷ್ಟೇ. ಆದರೆ ಆ ವಿಚಾರಗಳನ್ನು ಚಿಂತಿಸಿ ಏನು ಪ್ರಯೋಜನ? ಏನೊಂದೂ ಬದಲಾಗುವುದಿಲ್ಲ. ಎಲ್ಲವೂ ಹಾಗೆಯೆ ನಡೆದುಕೊಂಡು ಹೋಗುತ್ತವೆ. ದುರಾದೃಷ್ಟದಿಂದ ಅವಳ ತಲೆಯಲ್ಲಿ ಬೇಡವಾದ ಆಲೋಚನೆಗಳು ಮಾತ್ರ ಸುಳಿಯುತ್ತವೆ. ಈ ಕಾರಣದಿಂದ ಆಕೆ ಮನೆಯ ವಿವಿಧ ಸಣ್ಣಪುಟ್ಟ ಕೆಲಸಗಳಲ್ಲಿ ಸದಾ ತೊಡಗಿಸಿಕೊಂಡಿರುತ್ತಿದ್ದಳು. ಅವಳ ಸರೀಕರೆಲ್ಲಾ ಬಹಳ ಹಿಂದೆಯೆ ಮದುವೆಯಾಗಿದ್ದರು. ಅವರಲ್ಲಿ ಬಹಳ ಜನ ತಾಯಿಯರಾಗಿದ್ದಾರೆ. ಯಾವಾಗಲಾದರೂ ಒಮ್ಮೆ ಅವರು ಎದುರು ಸಿಕ್ಕಿದರೆ ತಮ್ಮ ಅತ್ತೆ, ಗಂಡಂದಿರ ಬಗ್ಗೆ ಮಾತಾಡಲು ಶುರುವಿಡುತ್ತಾರೆ. ಅಲ್ಲದೆ ತಮ್ಮ ಅತ್ತೆಮಾವಂದಿರ ಜೊತೆಗಿನ ಬೇರೆ ಬೇರೆ ಅನುಭವವನ್ನು ತುಂಬಾ ಆಸಕ್ತಿಯಿಂದ ಹಂಚಿಕೊಳ್ಳುತ್ತಾರೆ. ಅಂಥ ಮಾತುಕತೆಯ ಸವಿಯನ್ನು ಅವಳು ಅನುಭವಿಸಲಾರಳು. ಆದರೆ ಅವಳ ಕೆಲವು ಗೆಳತಿಯರು ತಮ್ಮ ಕತೆಯನ್ನು ಹೇಳತೊಡಗಿದಾಗ ತನ್ನ ಕಿವಿಗಳನ್ನು ಹೇಗೆ ಮುಚ್ಚಿಕೊಳ್ಳುತ್ತಾಳೆ? ಅಂಥ ಮಾತುಕತೆಗಳನ್ನು ಯಾವ ದಿನವೆ ಕೇಳಲಿ ಅಂದಿನ ರಾತ್ರಿ ಆಕೆ ಕಣ್ಣಿನ ರೆಪ್ಪೆ ಕೂಡ ಬಡಿಯುವುದಿಲ್ಲವೆಂದು ಅವಳ ಅಂತರಂಗವೂ ಒಪ್ಪಿಕೊಳ್ಳುತ್ತದೆ. ಅವಳು ಅತ್ತೆಮಾವಂದಿರ ಮನೆಯಲ್ಲಿ ತನ್ನ ಸ್ಥಾನ ಎಂಥದ್ದು ಇದ್ದಿರಬಹುದೆಂದೋ ಅಥವಾ ತನ್ನ ಅತ್ತೆಯ ಸ್ವಭಾವ ಎಂಥದ್ದು ಇದ್ದಿರಬಹುದೆಂದೋ ಇಲ್ಲವೆ ತನ್ನ ಗಂಡನ ಧ್ವನಿ ಮೃದು ಮಧುರವೋ ಕರ್ಕಶವೋ ಎಂದು ಕನಸು ಕಾಣುತ್ತಿರುತ್ತಾಳೆ. ಅವಳು ಈ ವಿಚಾರಗಳನ್ನು ಕುರಿತು ಆಲೋಚಿಸುವುದನ್ನು ಇದ್ದಕ್ಕಿದ್ದಂತೆ ನಿಲ್ಲಿಸಿ ಹಣೆಬರಹ ಇದ್ದಂತೆ ಆಗುತ್ತದೆ ಎಂದು ಭಾವಿಸುತ್ತಾಳೆ. ತನ್ನ ಅತ್ತೆಮಾವಂದಿರ ಮನೆಯಲ್ಲಿ ತನ್ನ ಸ್ಥಿತಿ ಎಷ್ಟು ಕೆಟ್ಟುಹೋದರೂ ಅದು ಮಲತಾಯಿಯ ಮನೆಯಲ್ಲಿರುವುದಕ್ಕಿಂತ ಖಂಡಿತ ಉತ್ತಮವಾಗಿರುತ್ತದೆ ಎಂಬ ರೀತಿಯಲ್ಲಿ ಅವಳ ಪ್ರತಿಯೊಂದು ಆಲೋಚನೆ ಕೊನೆ ಮುಟ್ಟುತ್ತಿತ್ತು.

ಮಲತಾಯಿಯ ಮಾತುಗಳಲ್ಲಿ ತಾಯಿಯೊಬ್ಬಳ ಮಮಕಾರ ಇರುತ್ತಿರಲಿಲ್ಲ. ಅವು ಉರಿವ ಕೊಳ್ಳಿಯನ್ನು ಆಕೆಯತ್ತ ಬೀಸಿ ಒಗೆದಂತೆ ಇರುತ್ತಿತ್ತು. ತನ್ನ ಬಗೆಗಿನ ತಂದೆಯ ಅಭಿಪ್ರಾಯವನ್ನು ಅವಳು ಸಂಪೂರ್ಣ ಬದಲಿಸಿಬಿಟ್ಟಿದ್ದಳು. ಕಳೆದೆರಡು ವರುಷದಲ್ಲಿ ತಂದೆ ಅವಳ ಮದುವೆ ಗೊತ್ತು ಮಾಡಿದ್ದರು. ಆದರೆ ಮಲತಾಯಿ ಆಗಗೊಡಲಿಲ್ಲ. ಅದರ ಬದಲು ಎಮ್ಮೆಯನ್ನು ತರಬೇಕೆಂದು ಅವಳು ಒತ್ತಾಯಿಸಿದ್ದಳು. ಬೇಸಾಯವನ್ನು ಪಾಲಿಗೆ ಮಾಡುವುದು ಇದರಿಂದ ತಪ್ಪುವುದೆಂದು ನಿರ್ಧರಿಸಿದ್ದಳು. 'ನೋಡಿ ನಮ್ಮ ನೇಗಿಲು ಈಗ ನಮ್ಮ ಹೊಲದಲ್ಲಿ ಉಳುತ್ತವೆ' ಎಂದು ಅವಳು ಹೇಳಿದ್ದಳು.

ಕಳೆದ ವರುಷ ಮತ್ತೆ ಕುಂತಿ ಮದುವೆಯ ಮಾತು ಶುರುವಾಯಿತು. ಗಂಡು ವಿಧುರ. ಅಂಚೆಯವನಾಗಿ ಕೆಲಸ ಮಾಡುತ್ತಿದ್ದನು. ಕುಂತಿಯ ಗೆಳತಿಯರು ಅವಳನ್ನು ರೇಗಿಸತೊಡಗಿದ್ದರು. ಒಬ್ಬಳು ಅವಳನ್ನು ಅಂಚೆ ಕವರು, ಕಾರ್ಡುಗಳ ಒಡತಿ ಎಂದು ಕರೆದಿದ್ದರೆ ಇನ್ನೊಬ್ಬಳು ಎಂ.ಒ. ಹಣದ ಉಸ್ತುವಾರಿಯಲ್ಲಿ ಇರುವಳೆಂದು ಹೇಳಿದಳು. ಕುಂತಿಗೂ ಒಳಗೆ ಖುಷಿ ಎನಿಸಿತ್ತು. ಗಂಡು ವಿಧುರನಾಗಿದ್ದರೂ ಕೊನೆ ಪಕ್ಷ ತನ್ನ ಕುಟಿಲ ಮಲತಾಯಿಯ ಹಿಡಿತದಿಂದಲಾದರೂ ಬಿಡುಗಡೆ ಪಡೆಯಬಹುದೆಂದು ಯೋಚಿಸಿದ್ದಳು. ಆದರೆ ಅವಳ ಮಲತಾಯಿ ತನ್ನ ಕುಟಿಲತೆಯನ್ನು ಮತ್ತೊಮ್ಮೆ ಫಲಪ್ರದವಾಗಿ ಪ್ರದರ್ಶಿಸಿದ್ದಳು.

ಕುಂತಿಯನ್ನು ವಿಧುರನಿಗೆ ಮದುವೆ ಮಾಡಿ ಕೊಡುವುದಿಲ್ಲವೆಂದೂ ತಾನು ತನ್ನ ಮಲ ಮಗಳ ಸೇಡಿನಿಂದ ಹಾಗೆ ಮಾಡಿದೆನೆಂದು ಎಲ್ಲರೂ ತನ್ನನ್ನು ದೂಷಿಸುವರೆಂದೂ ಅವಳು ಒತ್ತಿ ಹೇಳಿದ್ದಳು. ತಾನು ಅಂಥ ಮಾತನ್ನು ತನ್ನ ಜೀವಮಾನವಿಡೀ ಕೇಳಲು ಸಿದ್ಧವಿಲ್ಲವೆಂದೂ ಸೇರಿಸಿದ್ದಳು. ಕುಂತಿಯ ತಂದೆ ತಮ್ಮ ನಿಲುವನ್ನು ಬಿಟ್ಟುಕೊಟ್ಟು ಅವಳ ಮಲತಾಯಿಯ ಬಯಕೆಯಂತೆ ಎಲ್ಲವನ್ನು ಮಾಡಿದ್ದರು. ಒಂದು ಒಳ್ಳೆಯ ಅವಕಾಶ ಹೀಗೆ ತಪ್ಪಿಹೋಯಿತು.

ಆದರೆ ಕುಂತಿಗೆ ವಾಸ್ತವ ಸತ್ಯ ಏನೆಂದು ಚೆನ್ನಾಗಿ ಗೊತ್ತು. ಅವಳ ಮಲತಾಯಿ ಆಕೆಯ ಮದುವೆಯನ್ನು ನಡೆಸಿಕೊಡಲು ತಯಾರಿರಲಿಲ್ಲ. ಆಕೆ ಒಬ್ಬ ಆದರ್ಶ ಮನೆಗೆಲಸದವಳಂತೆ ಎಲ್ಲ ಕೆಲಸವನ್ನು ಮಾಡಿಕೊಂಡು ಹೋಗುತ್ತಿದ್ದಾಳೆ. ಕುಂತಿಯ ಮದುವೆಯ ನಂತರ ಮನೆಯ ಸಣ್ಣಪುಟ್ಟ ಕೆಲಸಗಳೂ ಸೇರಿದಂತೆ ಪ್ರತಿಯೊಂದನ್ನೂ ಮಾಡಿಕೊಂಡು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳುವಂಥವರನ್ನು ಹುಡುಕುವುದು ಕಷ್ಟಕರವಾಗುತ್ತಿತ್ತು.

ಅವಳ ಗಂಟಲಲ್ಲಿ ಏನೋ ಇರಿಕಿದಂತಾಗಿ ಅವಳಿಗೆ ಕಿರಿಕಿರಿಯಾಗಿತ್ತು. ಅವಳ ಮೈಯ್ಯ, ಮೂಳೆಗಳು ನೋವಿನಿಂದ ಚೀರಿಡುತ್ತಿತ್ತು. ಮೈಯ್ಯ ಬಿಸಿಹವೆಯನ್ನು ಹೊರಸೂಸುತ್ತಿತ್ತು. ತಲೆಯ ನರನಾಡಿಗಳು ಬಿಗಿದುಕೊಂಡು ಹಿಂಸೆ ಎನಿಸುತ್ತಿತ್ತು. ಆರ್ಭಟಿಸಿದಂತಾಗುತ್ತಿತ್ತು. ಅವಳು ವೇಗವಾಗಿ ಉಸಿರಾಡುತ್ತಿದ್ದಳು. ಮೇಲ್ತುಟಿ ಮೇಲೆ ಮೂಗಿನ ಹೊಳ್ಳೆಗಳು ಬಿಸಿಯುಸಿರನ್ನು ಹೊರ ಸೂಸುತ್ತಿವೆ ಎಂದು ಭಾವಿಸಿದಳು. ಅವಳ ಗಟ್ಟಿಮುಟ್ಟಿಯಾದ ದೇಹ ಬೆವರುತ್ತಿತ್ತು. ಪ್ರತಿಸಲ ಉಸಿರಾಡಿದಾಗಲೂ ಸಾಗರದ ಅಲೆಗಳಂತೆ ಅವಳ ಎದೆ ಏರಿಳಿಯುತ್ತಿತ್ತು. ತುಟಿಗಳು ಮುಂಜಾನೆಯ ಗಾಳಿಗೆ ಜಾಲಿಯ ಎಲೆಗಳು ನಡುಗುವಂತೆ ಕಂಪಿಸುತ್ತಿತ್ತು.

ಮೀಟರ್ ಗೇಜ್ ರೈಲು ಹಂತಿಯೊಂದರ ಮೇಲೆ ಚಲಿಸುವ ಚಿಕ್ಕ ಹಾವಿನಂತೆ ತೆವಳುತ್ತಿತ್ತು.

ಕಳೆಗುಂದಿದ ತಿಂಗಳ ಬೆಳಕಿನ ರಾತ್ರಿ ಏದುಸಿರು ಬಿಡುತ್ತಿರುವಂತೆ ಭಾಸವಾಯಿತು. ಆ ಕ್ಷಣವೇ ಕುಂತಿ ನಿಡಿದಾದ ತಣ್ಣನೆಯ ಉಸಿರೆಳೆದುಕೊಂಡಳು. ಅವಳ ಮೈಯ್ಯಿ ಬಿಸಿಗಾಳಿಗೆ ಹೂ ತುಂಬಿದ ಮಾವಿನ ಮರದಂತೆ ನಡುಗತೊಡಗಿತು.

ಪ್ರತಿಯೊಂದು ಮೆಟ್ಟಿಲು ವಾಕರಿಕೆ ಹುಟ್ಟಿಸುವಂತಿತ್ತು. ಒಂದು ದಿವಸ ಅವಳು ಅಚ್ಚೈವತ್ ಸಿಂಗ್‌ನ ಮನೆ ಛಾವಣಿ ಮೇಲೆ ಬಿಸಿಲಿಗೆ ಗೋಧಿ ಹರವಲೆಂದು ಹೋಗಿದ್ದಳು. ಆಗ ಆತನ ಸೋದರಳಿಯ ಸುನಿಲ್ ಅವಳಿಗೆ ತನ್ನ ಹೆಸರೇನೆಂದು ಕೇಳಿದ. ಆ ಹುಡುಗ ಪಾಟ್ನಾದಲ್ಲಿ ಓದುತ್ತಿದ್ದಾನೆ. ನನ್ನ ಹೆಸರು ನಿನಗೇಕೆಬೇಕೆಂದು ಕೇಳಿ ಅವನನ್ನು ಬಯ್ಯಬೇಕೆಂದು ಅವಳಿಗನ್ನಿಸಿತ್ತು. ಆದರೂ ಆಕೆ ಸಂಯಮ ತಂದುಕೊಂಡು ಅವನನ್ನು ಸುಮ್ಮನೆ ದಿಟ್ಟಿಸಿದಳು. ಅವಳ ಮನಸ್ಥಿತಿಯನ್ನು ಅರಿತುಕೊಂಡು ಅವನು ಹಿಂದಿರುಗಿ ಹೋದ. ಬಿರಿಚ್ ಮಾವನ ಮಗನ ನಡವಳಿಕೆಯೂ ಇದೇ ರೀತಿದಾಗಿತ್ತು. ಅವಳ ಮೈ ತೊಳೆಯಲು ಕೊಳಕ್ಕೆ ಹೋದಾಗಲೆಲ್ಲ ಅವನು ಬಾಗಿಲು ಹಿಂದೆ ಅವಿತುಕೊಂಡು ಆಕೆಯನ್ನು ದಿಟ್ಟಿಸಿ ನೋಡುವುದಿತ್ತು. ಅವಳು ಅವನಿಗೆ ಚೆನ್ನಾಗಿ ತಪರಾಕಿ ಸೇವೆ ಮಾಡಿದ್ದರೆ ಅವನೊಬ್ಬ ಕಾಮಣ್ಣನಾಗುವುದು ತಪ್ಪುತ್ತಿತ್ತು. ಅವನೊಬ್ಬನನ್ನು ಮಾತ್ರ ಏಕೆ ಬಯ್ಯಬೇಕು? ಅವಳಿಗೆ ತಲೆನೋವು ಉಂಟು ಮಾಡುವುದರಲ್ಲಿ ಬಸಿಯಾ ಕಮ್ಮಿಯಿರಲಿಲ್ಲ. ರೇಷಿಮೆಯಂಗಿ ಧರಿಸಿ ಅವಳ ಮನೆಯಿಂದ ಓಣಿಯಲ್ಲಿ ಹತ್ತಾರುಬಾರಿ ತಿರುಗುತ್ತಿದ್ದ. ಅವನ ನಡತೆ ಅವಳಿಗೇನು ತಿಳಿಯದೆ? ಆದರೆ ಅವನು ಅವಳಿಗೆ ಬಾಯಿಬಿಟ್ಟು ಏನೆಂದೂ ಹೇಳಿರಲಿಲ್ಲ. ಅವನು ಅವಳಿಗೆ ಎಂದಾದರು ಏನಾದರು ಕೇಳಿದ್ದರೆ ಅವಳು ಅವನಿಗೆ ತನ್ನ ಮನಸ್ಸು ಎಂಥದ್ದು ಎಂದು ಸ್ವಲ್ಪವಾದರೂ ಮನವರಿಕೆ ಮಾಡಿಸುತ್ತಿದ್ದಳು. ಅವನು ಮತ್ತೆ ಅವಳ ಹತ್ತಿರ ಬರುವ ಎದೆಗಾರಿಕೆ ತೋರಿಸಲೇ ಇಲ್ಲ.

ಈ ನೀಚ ಜನ ಯಾವಾಗಲೂ ಹೆಂಗಸರಿಗಾಗಿ ಹೊಂಚುಹಾಕುತ್ತಿರುತ್ತಾರೆ. ತಾನು ಮಾತ್ರ ಅವರ ಕಿವಿ ಹಿಂಡಿ ಕೆನ್ನೆಗೆರಡು ಬಾರಿಸಬಲ್ಲೆ ಎಂದು ಕುಂತಿ ಯೋಚಿಸಿದಳು. ಆದರೆ ಇಂಥ ಚಿತ್ರ ಹಿಂಸೆ ಇನ್ನೆಷ್ಟು ಕಾಲ ಅನುಭವಿಸಬೇಕು ಎಂಬುದೆ ಅವಳ ಮುಖ್ಯ ಚಿಂತೆಯಾಗಿತ್ತು.

ತನ್ನ ಮೈಯಲ್ಲಿ ಹಲವು ಹಾವುಗಳ ವಿಷವೇನಾದರೂ ಹರಡಿದ್ದಿರಬಹುದೇ ಎಂದು ಅವಳಿಗೆ ಭಾಸವಾಯಿತು. ಹೊಗೆ ತುಂಬಿದ್ದ ರೂಮಿನೊಳಗೆ ಕುಳಿತಿದ್ದಂತೆ ಉಸಿರು ಕಟ್ಟಿದ ಅನುಭವವಾಯಿತು. ಅವಳ ದೇಹದ ಸಣ್ಣಸಣ್ಣ ಭಾಗವೂ ಪಾದರಸದ ಒಂದೊಂದು ಹನಿಯಂತೆ ಕಂಡಿತು. ಹಳ್ಳಿಯ ತೆಂಕಣ ಸೆರಗಿನಲ್ಲಿ ಬೀದಿನಾಯಿಗಳು ಬೊಗಳುತ್ತಿದ್ದವು. ಇನ್ನೊಂದು ಕಡೆಯಿಂದ ಹೊಲದಲ್ಲಿ ತೋಳಗಳು ಊಳಿಡುತ್ತಿದ್ದವು. ಈ ನಡುವೆ ಕಾಳಿ ದೇಗುಲದಲ್ಲಿ ಪ್ರಾರ್ಥನೆ ಸಲ್ಲಿಸಿ ಹಿಂದಿರಿಗುತ್ತಿದ್ದ ಚಾರಿತ್ತರ್ ಮಾವಯ್ಯನನ್ನು ಅವಳು ಕಂಡಳು. ಆತ ಧರಿಸಿದ್ದ ಮರದ ಪಾದುಕೆಯ ಸದ್ದು ಅವಳ ಕಿವಿಗೆ ಬೀಳುತ್ತಿತ್ತು.

ಇಂಥ ಹೊತ್ತಲ್ಲದ ಹೊತ್ತಲ್ಲಿ ತಾನು ಕೊಳದ ಬಳಿ ಕುಳಿತಿರುವುದು ಚಾರಿತ್ತರ್ ಮಾವಯ್ಯನಿಗೆ ಇಷ್ಟವಾಗುವುದಿಲ್ಲವೆಂದು ಕುಂತಿಗೆ ಗೊತ್ತು. ಮಡಕೆಯಲ್ಲಿ ನೀರು ತುಂಬಿಸಿಕೊಂಡು ಅವಳು ಮನೆಯ ದಾರಿ ಹಿಡಿದಳು.

ಅವಳಿದ್ದೆಡೆಯಿಂದ ಸ್ವಲ್ಪ ದೂರದಲ್ಲಿದ್ದ ಮರಕ್ಕೆ ಸೋರೆ ಬಳ್ಳಿಯೊಂದು ಹಬ್ಬಿಕೊಂಡಿತ್ತು. ಇದ್ದಕ್ಕಿದ್ದಂತೆ ಏನೋ ತೆವಳುತ್ತಿರುವ ಸದ್ದು ಕೇಳಿಸಿತು 'ಯಾರದು?' ಎಂದು ಅವಳು ಅರಚಿದಳು. ಬನ್ನಿ! 'ದಯಮಾಡಿ ನನ್ನ ಮಾತುಕೇಳು'. ಅವನು ನಡುಗುವ ಮೆಲುದನಿಯಲ್ಲಿ ಹೇಳಿದನು.

ಕುಂತಿಯ ಕೈ ಕಾಲು ಥರಥರ ನಡುಗಲಾರಂಭಿಸಿತು. ಅವಳು ದಾಪುಗಾಲು ಹಾಕುತ್ತ ಜಾಗ ಖಾಲಿ ಮಾಡಿದಳು. ಸರಸರ ಮನೆ ತಲುಪಿ ಒಳಗಿನಿಂದ ಚಿಲಕ ಹಾಕಿಕೊಂಡಳು. ಅವಳ ಮೊಗದ ಮೇಲೆ ದೊಡ್ಡ ದೊಡ್ಡ ಬೆವರ ಹನಿಗಳು ಮೂಡಿದ್ದವು. ಅವಳು ಏದುಸಿರು ಬಿಡುತ್ತಿದ್ದಳು. ಸ್ವಲ್ಪ ಹೊತ್ತು ಕುಳಿತು ಸುಧಾರಿಸಿಕೊಂಡಳು. ನಂತರ ಎದ್ದು ಮಡಕೆಯನ್ನು ಅದರ ಜಾಗದಲ್ಲಿಟ್ಟು ಬನ್ನಿಗೆ ಮೌನವಾಗಿ ಶಾಪ ಹಾಕಿದಳು.

ಅವಳ ಮಲತಾಯಿ ಹಿತ್ತಲಿನಲ್ಲಿರಲಿಲ್ಲ. ಹುಡುಗರು ಮಂಚದ ಮೇಲೆ ಮರದ ತೊಲೆಗಳಂತೆ ಅಡ್ಡಾದಿಡ್ಡಿಯಾಗಿ ಮಲಗಿದ್ದರು. ಅವಳ ತಂದೆಯ ರೂಮಿನಲ್ಲಿ ಮಣ್ಣಿನ ಹಣತೆಯೊಂದು ಉರಿಯುತ್ತಿತ್ತು. ಬಾಗಿಲು ಮುಚ್ಚಿತ್ತು. ಹೀಗಿದ್ದರೂ ಅವಳಿಗೆ ರೂಮಿನೊಳಗಿಂದ ಪಿಸುಗುಡುತ್ತಿರುವ ಸದ್ದು ಕೇಳಿಸಿತು. ಅವಳ ಹೆಸರು ಕೂಡ ಮಾತಿನ ನಡುವೆ ಪ್ರಸ್ತಾಪವಾಯಿತು. ಅವರ ಮಾತುಕತೆಯ ವಿಷಯದ ಬಗ್ಗೆ ಅವಳು ಕುತೂಹಲ ತಾಳುವಂತೆ ಮಾಡಿತು. ಯಾವ ಸದ್ದು ಮಾಡದೆ ಬಾಗಿಲಿಗೆ ಕಿವಿಕೊಟ್ಟು ನಿಂತಳು. ಅವಳ ಮಲತಾಯಿ ತನ್ನ ತಂದೆಗೆ ವಿವರಿಸಿದ್ದಳು. 'ಈ ವರ್ಷಾನೆ ಕುಂತಿ ಮದುವೆ ಬಗ್ಗೆ ಯೋಚನೆ ಮಾಡೋದು ಅಷ್ಟು ಸರಿಯಲ್ಲ, ನಿಮಗೆ ತುಂಬಾ ಕೆಟ್ಟದಾಗಿ ಅಸ್ತಮಾ ಬಂದಿದೆ. ನಿಮ್ಮನ್ನು ತೋರಿಸೋಕೆ ಬನರಾಸಿಗೆ ಹೋಗೋಣ, ನೀವು ಅಲ್ಲಿ ಇರುವಾಗಲೇ ನಾನೂ ಅಲ್ಲೆ ಸರಿಯಾಗಿ ತೋರಿಸ್ಕೋತೀನಿ'.

'ಅದೇನೋ ನಿಜಾನೆ, ಆದರೆ ಜನ ಈಗಾಗಲೇ ನಮ್ಮ ಕಡೆ ಬೆರಳು ಮಾಡಿ ತೋರಿಸೋಕೆ ಶುರು ಮಾಡವರೆ. ಹಾಗಂದ್ರೂ, ಬೆಳೆದು ನಿಂತರ ನಿನ್ನ ಮಗಳನ್ನು ಎಷ್ಟು ದಿವಸ ಅಂತಾ ಹಾಗೆ ಇರಿಸ್ಕೋತೀಯಾ ನೀನು?' ಅವಳ ತಂದೆ ಪ್ರಶ್ನಿಸಿದನು.

'ಜನ ನಿನಗೆ ಬಾವಿಗೋಗಿ ಬೀಳು ಅಂತಾರೆ. ನೀನು ಹಾಗೆ ಮಾಡ್ತೀಯಾ? ಈ ವರ್ಷ ಅಲ್ಲದಿದ್ದರೆ ಮುಂದಿನ ವರ್ಷ ಅವ ಮದುವೆ ಮಾಡಬೋದು. ಹೆಚ್ಚು ಹೊತ್ತು ನೀರಿಂದ ಹೊರಗಿದ್ದರೆ ಹಾಳಾಗೋಕೆ ಅವಳೇನು ಮೀನಲ್ಲ?' ಅವಳ ತಾಯಿ ವಾದಿಸಿದಳು.

ಅವಳ ತಂದೆ ನೆಲಕ್ಕೆ ಉರುಳಿದ್ದರು. 'ಹೌದು. ಅವಳೇನು ಮೀನಲ್ಲ ಹಾಳಾಗೋಕೆ. ಹಾಗಾದರೆ ಮುಂದಿನ ವರ್ಷ ಮದುವೆ ಮಾಡೋಣ'.

ಅವಳಿಗೆ ಒಟ್ಟಿಗೆ ಐವತ್ತು ಚೇಳು ಕಚ್ಚಿದಂತಾಯಿತು. ಈಗೆ ಪೂರ್ತಿ ಮಂಕು ಕವಿದಂತಾಯಿತು. ಅವಳು ತನ್ನ ಮಂಚದ ಬಳಿಗೆ ಹೋದಳು. ಆದರೆ ಅವಳ ಕಾಲು ಅಲ್ಲಿ ಎತ್ತದೆ ಉಳಿದಿದ್ದ ತಟ್ಟೆಯ ಮೇಲಿಟ್ಟ ಸದ್ದಾಯಿತು. ಅವಳ ಮಲತಾಯಿ ಅರಚಿದ್ದಳು: 'ಏನಾಯಿತೆ ನಿನಗೆ ಮಾಟಕಾತಿ?'

ಕುಂತಿಗೆ ಅಳುವಂತಾಯಿತು. ಮಗಳೊಬ್ಬಳು ನೀರಿನಿಂದ ಹೊರಗೆ ಜೀವಂತದಿಂದ ಹೆಚ್ಚುಕಾಲ ಉಳಿಯದ ಮೀನು ಎಂದು ತನ್ನ ತಂದೆಯ ಬಳಿ ಹೇಳಲು ಅವಳಿಗೆ ಆಸೆಯಾಯಿತು. ಅದರಿಂದ ಅವಳು ಹೊರಗಿಟ್ಟು ಕೊಂಡಿದ್ದಳೆ? ಯಾವುದೋ ಬೆಕ್ಕು ಅವಳ ದಾರಿಯಿಂದ ದೂರ ಸೆಳೆದಿತ್ತು.

ಆದರೆ ಅವಳು ತನ್ನನ್ನು ತಾನು ಸಮಾಧಾನಿಸಿಕೊಂಡು ಮಲತಾಯಿಗೆ ಹೇಳಿದಳು 'ಏನಿಲ್ಲಮ್ಮಾ, ಅದೊಂದು ಬೆಕ್ಕು. ಏ ಹೋಗು.... ಹೋಗು...'

ಕಿಸೆಗಳ್ಳ (ಕಥೆ)

ತೆಲುಗು ಮೂಲ: **ವಿ.ಎಸ್. ಚಿನ್ನೂರಿ**
ಅನುವಾದ: **ಡಾ. ಆಂಜನಪ್ಪ.**

ರಸ್ತೆ ಧೂಳನ್ನು ಎಬ್ಬಿಸುತ್ತಾ ಬಂದು ನಿಂತಿದೆ ಸಿಟಿ ಬಸ್. ಇಳಿಯುವವರಿಗೆ ಅವಕಾಶ ಕೊಡದೆ ಹತ್ತುವವರು ಮುಗಿಬೀಳುತ್ತಿದ್ದಾರೆ. ಮುಗಿಬೀಳುತ್ತಿದ್ದ ಜನರನ್ನು ಸೀಳಿಕೊಂಡು ಇಳಿಯುವುದಕ್ಕೆ ವಿಶ್ವಪ್ರಯತ್ನ ಮಾಡುತ್ತಿದ್ದ ಒಬ್ಬ ದೊಡ್ಡ ಮನುಷ್ಯ. ಅವನ ಪ್ಯಾಂಟ್ ಜೇಬಿನಲ್ಲಿ ಯಾರದೋ ಕೈ. ಅವನು ಕೂಗಲಿಲ್ಲ ಆರ್ಭಟ ಮಾಡಲಿಲ್ಲ. ಅತಿ ಎಚ್ಚರದಿಂದ ಅವನ ಕೈಯನ್ನು ಹಾಗೇ ಹಿಡಿದುಕೊಂಡು ಹೇಗೋ ಜನರಿಂದ ಬೇರ್ಪಡಿಸಿಕೊಂಡು ಹೊರಬಿದ್ದ. ತಿರುಗಿ ನೋಡದೇ ನಡೆದ.

ಅವನ ಹಿಂದೆಯೇ ನಡೆಯುತ್ತಿದ್ದಾನೆ ಆ ಯುವಕ. ನೋಡಲು ಬೆಳ್ಳಗೆ ಸಣಕಲ ಶರೀರ. ಕೆದರಿದ ಕೂದಲು ಸುಕ್ಕುಗಟ್ಟಿದ ಬಟ್ಟೆಗಳು. ಹೊಳೆಯುವ ಕಣ್ಣುಗಳು. ವಯಸ್ಸು ಇನ್ನೂ ಇಪ್ಪತ್ತಾಗಿಲ್ಲ. ದೊಡ್ಡ ಮನುಷ್ಯ ನಿಂತು ಹಿಂದಕ್ಕೆ ತಿರುಗಿ ನೋಡಿ ಕೈ ಬಿಟ್ಟು ಬಿಟ್ಟ. ಯುವಕ ಓಡಲಿಲ್ಲ. ಓಡುವುದಕ್ಕೆ ಪ್ರಯತ್ನವೂ ಮಾಡಲಿಲ್ಲ ಅವನನ್ನು ಹಾಗೆಯೇ ನೋಡುತ್ತ ಜೇಬಿನಿಂದ ಸಿಗರೇಟ್ ಬೆಂಕಿ ಪೊಟ್ಟಣ ಹೊರತೆಗೆದ.

'ಸಿಗರೇಟ್ ಸೇದ್ತೀಯಾ?' ಎಂದು ಕೇಳಿದ.

'ಉಹ್ಞೂ' ಎಂದು ಯುವಕ ತಲೆಯನ್ನು ಅಲ್ಲಾಡಿಸಿದ.

'ಯಾಕೆ?'.

'ಅಭ್ಯಾಸವಿಲ್ಲ'.

ದೊಡ್ಡ ಮನುಷ್ಯನಿಗೆ ಆಶ್ಚರ್ಯವಾಯಿತು.

ಜೇಬು ಕಳ್ಳನಿಗೆ ಸಿಗರೇಟ್ ಅಭ್ಯಾಸವಿಲ್ಲವೆ? ದೊಡ್ಡ ಮನುಷ್ಯ ಗಂಭೀರವಾಗಿ ಸಿಗರೇಟನ್ನು ತುಟಿಗೆ ಹೊತ್ತಿಸಿ ಒಂದು ದಮ್ಮನ್ನು ಎಳೆದು 'ಓದಿದ್ದೀಯ?' ಎಂದು ಕೇಳಿದ ಯುವಕನ ಕಡೆ ನೋಡುತ್ತ.

'ಹ್ಲೂಂ' ಎಂದ ಆ ಯುವಕ.

'ಎಷ್ಟು?'

'ಏನೋ ಸ್ವಲ್ಪ!'

'ಏನು ಕೆಲಸ ಮಾಡುತ್ತಿದ್ದೀಯಾ?'

'ಪಿಕ್ ಪಾಕೆಟ್ ಹೊಡೆಯುವುದು'

ದೊಡ್ಡ ಮನುಷ್ಯ ಆಶ್ಚರ್ಯದಿಂದ ಬಾಯಿ ತೆಗೆದ. ಕಳ್ಳ ಯಾವಾಗಲೂ ತಾನು ಕಳ್ಳನೆಂದು ಹೇಳಿಕೊಳ್ಳಲ್ಲ.

ಕಳ್ಳತನ ತಪ್ಪಲ್ಲವೆ?

ಇರಬಹುದು.

ಮತ್ತೆ! ಯಾಕೆ ಮಾಡುತ್ತೀಯ?

ಯುವಕ ತಲೆಯೆತ್ತಿ ಅವನ ಕಣ್ಣನ್ನು ವಿಚಿತ್ರವಾಗಿ ನೋಡಿ ವಿಕಾರವಾಗಿ ನಕ್ಕ. ಪ್ರಪಂಚದಲ್ಲಿ ತಪ್ಪು ಮಾಡುವವರೆಲ್ಲ ತಾವು ಮಾಡುವುದು ತಪ್ಪು ಕೆಲಸವೆಂದು ತಿಳಿಯದೆ ಮಾಡುವರೆಂದೇ ನಿಮ್ಮ ಅಭಿಪ್ರಾಯವೆ? ಯುವಕನ ಪ್ರಶ್ನೆಗೆ ದೊಡ್ಡಮನುಷ್ಯನ ತಲೆ ಗಿರ್ರೆಂದಿತು.

ಆದರೆ.... ಯಾಕೆ? ಗೊತ್ತಿದ್ದು ಹೀಗೆ ಮಾಡ್ತಿದ್ದೀಯ?

ವಿಧಿ ಇಲ್ಲದೆ!

ಅಂದ್ರೆ!

'ಗತಿ ಇಲ್ಲದೆ'

ದೊಡ್ಡ ಮನುಷ್ಯ ಯೋಚಿಸಿದ.

ಜೀವನಕ್ಕೆ ಕಳ್ಳತನ ಒಂದೇ ಮಾರ್ಗವೆ?

ಅಲ್ಲ! ಆದರೆ.... ಅದೂ ಒಂದು ಮಾರ್ಗವೆ!

ಯಾವುದಾದರೂ ನೌಕರಿ ಮಾಡಿಕೋ...

ನೌಕರಿಗಳು ಎಲ್ಲಿವೆ?

ವ್ಯಾಪಾರ ಮಾಡಬಹುದಲ್ಲವೆ?

'ಹಣ?'....

ಕನಿಷ್ಟ ಕೂಲಿಯಾದ್ರು ಮಾಡಿಕೊಂಡು ಜೀವಿಸಬಹುದಲ್ಲ!

ಕೂಲಿ ಮಾಡುವುದಕ್ಕೆ ಮೈಯಲ್ಲಿ ಶಕ್ತಿ ಬೇಕಲ್ಲ!

ದೊಡ್ಡ ಮನುಷ್ಯ ಸ್ವಲ್ಪ ಇಕ್ಕಟ್ಟಿನಲ್ಲಿ ಬಿದ್ದಂತಾಗಿ... ಭಾರವಾಗಿ ನಿಟ್ಟುಸಿರು ಬಿಟ್ಟ. ಜೇಬಿಗೆ ಕೈ ಹಾಕಿ ಪರ್ಸನ್ನು ಹೊರತೆಗೆದ. ಒಂದು ಹತ್ತು ರೂಪಾಯಿ ನೋಟನ್ನು ಯುವಕನ ಕೈಯಲ್ಲಿಡುತ್ತಾ... ಆ ಸಂದಿ ಮೂಲೆಯಲ್ಲಿ ಪಾನ್ ಬೀಡದ ಅಂಗಡಿ ಇದೆ. ಒಂದು ವಿಲ್ಸ್‌ಪಾಕೆಟ್ ತೆಗೆದುಕೊಂಡು ಬಾ... ಇಲ್ಲಿಯೇ ಇರುತ್ತೇನೆ ಎಂದ!

ಯುವಕ ನೋಟನ್ನು ತೆಗೆದುಕೊಂಡು ಹೋಗಿ ಮತ್ತೆ ಐದು ನಿಮಿಷದಲ್ಲಿ ಹಿಂತಿರುಗಿದ. ದೊಡ್ಡ ಮನುಷ್ಯ ಅಲ್ಲಿಲ್ಲ! ಯುವಕ ಬಹಳ ಹೊತ್ತು ನೋಡಿದ. ದೊಡ್ಡ ಮನುಷ್ಯ ಬರಲೇ ಇಲ್ಲ! ಅವನಿಗಾಗಿ ಹಿಂದೆ ಮುಂದೆ ನೋಡಿದ. ಅಲ್ಲೆಲ್ಲ ವಿಚಾರಿಸಿದ! ದೊಡ್ಡ ಮನುಷ್ಯ ಕಾಣಲಿಲ್ಲ. ಸಿಗರೇಟ್ ಪ್ಯಾಕ್, ಚಿಲ್ಲರೆಯನ್ನು ಕೈಯಲ್ಲಿ ಹಿಡಿದುಕೊಂಡು ಅಲ್ಲೇ... ನಿಂತ. ಎದುರುಗಡೆ ಸ್ವಲ್ಪ ದೂರದಲ್ಲಿ ದೊಡ್ಡ ಮನುಷ್ಯ ಯಾರದೋ ಜೊತೆ ಮಾತಾಡುತ್ತಾ ಹೋಗುತ್ತಿದ್ದಾನೆ. ಯುವಕನ ಮುಖ ಅರಳಿತು. ಹಗುರಾಗಿ ಉಸಿರುಬಿಟ್ಟು ಅವನತ್ತ ಓಡಿದ. ದೊಡ್ಡ ಮನುಷ್ಯನನ್ನು ಎಚ್ಚರಿಸಿ, ಸಿಗರೇಟ್ ಪ್ಯಾಕ್, ಚಿಲ್ಲರೆ ಅವನ ಕೈಯಲ್ಲಿಟ್ಟ. ದೊಡ್ಡ ಮನುಷ್ಯ ಆಶ್ಚರ್ಯಗೊಂಡ. ಯುವಕ ತಿರುಗಿ ಬರುತ್ತಾನೆಂದು ಊಹಿಸಿಕೊಂಡಿರಲಿಲ್ಲ. ಕಾಣದ ನನಗೋಸ್ಕರ ಹುಡುಕಿ ಕೊಡುತ್ತಾನೆಂದು ಭಾವಿಸಿರಲಿಲ್ಲ. ಜೇಬುಗಳನು ಅಪ್ಪು ನಂಬಿಕೆಯಾಗಿ ತನ್ನ ಸ್ವತ್ತು ತನಗೆ ತಲುಪಿಸುತ್ತಾನೆಂದು ಯಾರು ತಾನೆ ಊಹಿಸುವರು.

ಸಿಗರೇಟ್ ತಾ ಎಂದು ಹಣಕೊಟ್ಟೆ.... ಮರೆತುಹೋದೆ. ಇರುತ್ತೇನೆಂದ ಕಡೆ ನಾನಿರಲಿಲ್ಲ. ನೀನು ಆ ಹಣವನ್ನು ತೆಗೆದುಕೊಂಡು ಹೋಗಬಹುದಾಗಿತ್ತು. ಆದರೆ.... ನೀನು ಹಾಗೆ ಯಾಕೆ ಮಾಡಲಿಲ್ಲ. ದೊಡ್ಡ ಮನುಷ್ಯ ಯುವಕನ ಮುಖ ನೋಡುತ್ತಾ ಕೇಳಿದ.

ಯುವಕ ನಕ್ಕ.

ಕಬ್ಬಿಣದ ಪೆಟ್ಟಿಗೆಯ ಬೀಗದ ಕೈ ನಿಮ್ಮ ಹತ್ತಿರ ಇರುವ ತನಕ ನಿಮ್ಮ ಹೆಂಡ್ತಿಗೆ ಅಗತ್ಯವಿದ್ರೂ, ಇಲ್ಲದಿದ್ರೂ, ಹತ್ತೋ, ಐವತ್ತೋ ಸಮಯ ಸಿಕ್ಕಾಗಲೆಲ್ಲ ಕದಿಯಬೇಕೆನಿಸುತ್ತದೆ. ಬೀಗಗಳನ್ನು ಆಕೆಯ ಕೈಗೇ ಕೊಟ್ಟು ಬಿಡಿ, ಒಂದು ದಮ್ಮಡಿ ಸಹ ಮುಟ್ಟಲ್ಲ! ಹೌದಂತೀರಾ!

'ಹೌದು!'

'ಯಾಕೆ?'

'ಜವಾಬ್ದಾರಿ'

ಇದೂ.. ಅಷ್ಟೆ! ನೀವೂ ನಂಬಿ ನನ್ನ ಕೈಗೆ ವಸ್ತುವನ್ನು ಕೊಟ್ರಿ! ಅದನ್ನು ಭದ್ರವಾಗಿ ಕಾಪಾಡಿ ನಿಮಗೊಪ್ಪಿಸುವುದು ನನ್ನ ಧರ್ಮ, ದೊಡ್ಡ ಮನುಷ್ಯ ಯೋಚನೆಯಲ್ಲಿ ಬಿದ್ದ. ಏನಂದುಕೊಂಡನೋ ಏನೋ ಜೇಬಿನಲ್ಲಿ ಕೈ ಹಾಕಿ ಪರ್ಸ್ ಹೊರತೆಗೆದ, 'ತಗೋ' ಎಂದು ಯುವಕನಿಗೆ ಕೊಡಲು ಹೋದ.

ಯಾಕೆ? ಯುವಕ ಪ್ರಶ್ನಿಸಿದ.

'ನಿನಗೆ',

'ನನಗೇಕೆ?' ಮತ್ತೆ ಪ್ರಶ್ನಿಸಿದ.

'ಯಾಕೆ, ಬೇಡ್ವಾ?'

'ಉಹ್ಞಂ, ಬೇಡಾ'

ಮತ್ತೆ ನನ್ನ ಜೇಬಿಗೆ ಯಾಕ್ ಕೈ ಹಾಕಿದೆ?

'ಪರ್ಸ್‌ಗೋಸ್ಕರ'

ಮತ್ತೆ ತೆಗೆದುಕೊಳ್ಳಿಲ್ಲ ಯಾಕೆ?

ಯುವಕ ವಿಚಿತ್ರವಾಗಿ ನಕ್ಕ.

ನೀವು ಮಾರ್ಕೆಟ್‌ಗೆ ಹೋಗಿ, ಒಂದು ವಸ್ತುವನ್ನು ಖರೀದಿ ಮಾಡುತ್ತೀರ! ನಾಲ್ಕಾಣೆ ವಸ್ತುವಿಗೆ ಅಂಗಡಿಯವ ರೂಪಾಯಿ ಹೇಳ್ತಾನೆ. ನಿಮಗೆ ವ್ಯಾಪಾರ ಮಾಡುವುದು ಗೊತ್ತಿಲ್ಲ. ಮೋಸ ಹೋಗ್ತೀರಾ! ರೂಪಾಯಿ ಕೊಟ್ಟು ಕೊಳ್ಳುವಿರಿ. ಅಂಗಡಿಯವನು ಹೆಚ್ಚಾಗಿ ಬಂದ ಹಣವನ್ನು ಸಂತೋಷದಿಂದ ಗಪ್‌ಚಿಪ್ಪಾಗಿ ತೆಗೆದು ಗಲ್ಲಾ ಪೆಟ್ಟಿಗೆಯಲ್ಲಿ ಹಾಕುತ್ತಾನೆ. ಆ ಮೇಲೆ ನಾನು ಹೋಗುತ್ತೇನೆ, ನನಗೆ ವ್ಯಾಪಾರ ಮಾಡುವುದು ಗೊತ್ತು. ಆ ವಸ್ತುವನ್ನು ನಾಲ್ಕಾಣೆಗೆ ಖರೀದಿ ಮಾಡಿಕೊಂಡು ಕೊಳ್ತೀನಿ. ಆಮೇಲೆ ನಾಲ್ಕಾಣೆ ಬಿಟ್ಟು ಕೊಡ್ತೇನೆ ತೆಗೆದುಕೊ ಅಂತೀನಿ. ಆದರೆ... ಅವನು ತೆಗೆದುಕೊಳ್ಳುವುದಿಲ್ಲ ಇದಕ್ಕೆ ಏನಂತೀರಾ?

ಯೋಚಿಸಿದ!

ಹೌದು. ಅದು ವ್ಯಾಪಾರ!

ಅಂದ್ರೆ:

ವ್ಯಾಪಾರಿ ತನ್ನ ಚಾಕಚಕ್ಯತೆ ತೋರಿಸಿ, ಸಾಧ್ಯವಾದಷ್ಟು ಜಾಸ್ತಿ ಲಾಭವನ್ನು ಪಡೆಯುವುದಕ್ಕೆ ನೋಡುತ್ತಾನೆ. ಆದರೆ ಬಿಟ್ಟು ಕೊಡುತ್ತೇನೆಂದರೆ ತೆಗೆದುಕೊಳ್ಳುವುದಿಲ್ಲ. ಇದೂ ಅಷ್ಟೆ! ನನಗೆ ಬೇಕಾದದ್ದು ನಿಮ್ಮ ಧರ್ಮವಲ್ಲ. ಸಂಪಾದನೆ.

'ದೊಡ್ಡಮನುಷ್ಯನಿಗೆ ನಗುಬಂತು!'

'ಇದು ಸಂಪಾದನೆಯೆ?'

'ಯಾಕಾಗಲ್ಲ?'

ಸಂಪಾದನೆ ಆಗಬಹುದು ಆದರೆ.... ಅನ್ಯಾಯಾರ್ಜಿತ.

ಈ ಮನೆ ಮಹಡಿಗಳು ಕಟ್ಟಿದವರೆಲ್ಲ ನ್ಯಾಯವಾಗಿ ಸಂಪಾದಿಸಿ ಶ್ರೀಮಂತರಾದರಾ? ದೊಡ್ಡ ಮನುಷ್ಯ ಮಾತಾಡಲಿಲ್ಲ.

ಹೋಗ್ಲಿ ನಾನೊಂದು ಕೇಳ್ತೀನಿ!

'ಕೇಳಿ'

ಜೀವಿಸುವುದಕ್ಕೆ, ಸುಲಭವಾದ ನ್ಯಾಯವಾದ ಬೇರೊಂದು ಮಾರ್ಗ ತೋರಿಸುವೆ ಇದನ್ನು ಬಿಡ್ತೀಯಾ?

ಹೇಳೋಕಾಗಲ್ಲ!

ಯಾಕೆ?

ತುಂಬಾ ತಡವಾಗಿದೆ!

ಆದ್ರೇನು?

ನಿಮ್ಮನ್ನೊಂದು ಮಾತು ಕೇಳ್ತೀನಿ, ಹೇಳ್ತೀರಾ?

ನಿಮಗೆ ಸಿಗರೇಟ್ ಸುಡುವುದು ಹೇಗೆ ರೂಢಿಯಾಯಿತು?

'ಮೊದಲು ಏನೂ ತೋಚದೆ ಸೇದಿದೆ'

ಈಗ ಅದನ್ನು ಸೇದದೆ ಹೋದರೆ ಏನೂ ತೋಚೋದಿಲ್ಲ ಹೌದೇ?

'ಹೌದು'

ಇದೂ ಅಷ್ಟೇ; ಮೊದಲು ಬದುಕಿಗಾಗಿ ಈ ಕೆಲಸ ಮಾಡಿದೆ. ಈಗ ಮಾಡದೆ ಹೋದರೆ ಬದುಕೋಕೆ ಆಗೋಲ್ಲ.

'ಅಂದ್ರೆ!'

ಅಭ್ಯಾಸವಾಗಿದೆ.

'ಅಭ್ಯಾಸವನ್ನು ಬದಲಾವಣೆ ಮಾಡಿಕೊಳ್ಳಬಾರದೆ?'

ನೀವು ಸಿಗರೇಟ್ ಬಿಡುತ್ತೀರಾ?

ದೊಡ್ಡ ಮನುಷ್ಯ ಭಾರವಾಗಿ ನಿಟ್ಟುಸಿರು ಬಿಟ್ಟ.

'ಸರಿ... ಹೋಗು!

ಯುವಕ ಆಶ್ಚರ್ಯವಾಗಿ ಅವನತ್ತ ನೋಡಿದ

'ಎಲ್ಲಿಗೆ?'

ಎಲ್ಲಿಗೋ ನಿನ್ನಿಷ್ಟ ಬಂದ ಕಡೆಗೆ!

ನನ್ನನ್ನು ಪೋಲಿಸ್ ಠಾಣೆಗೆ ಕರೆದುಕೊಂಡು ಹೋಗುವುದಿಲ್ಲವೆ?

ಯಾಕೆ?

ಕಂಪ್ಲೇಂಟ್ ಕೊಡುವುದಕ್ಕೆ

ಕಂಪ್ಲೇಂಟ್ ಕೋಡ್ತೀನೆಂದು ನಾನೇನು ಹೇಳಿದೆನಾ!

ಯುವಕ ಒಂಥರಾ ನಕ್ಕ!

ಯಾವುದಾದರೂ ಹಾವೋ, ಚೇಳೋ ಮಾನವನ ಕಣ್ಣಿಗೆ ಬಿದ್ದರೆ ಸಾಯಿಸದೆ ಬಿಡ್ತಾನಾ? ನೀನು ಹಾವೂ ಅಲ್ಲ, ಚೇಳೂ ಅಲ್ಲ ಮಾನವ!

ಹೌದು ಹಾವಿಗಿಂತಲೂ, ಚೇಳಿಗಿಂತಲೂ.... ಅಪಾಯಕಾರಿ ಮಾನವ. ಮೊದಲು ಹಾಗೆ ಅಂದುಕೊಂಡಿದ್ದೆ ಆದರೆ ಈಗಿಲ್ಲ....

ಯಾಕೇ?

ಹೇಳಲಾರೆ!

ನಿಮಗೆ ನೀವೇ ಮೋಸ ಹೋಗುತ್ತಿದ್ದೀರೇನೋ ಎಂದೆನಿಸುತ್ತದೆ. ಆದರೂ... ಪರವಾಗಿಲ್ಲ.

'ಸರಿ ಬರ್ತೀನಿ'

'ಒಳ್ಳೆಯದು!'

ಯುವಕ ನಗುತ್ತ ಹೊರಟು ಹೋದ.

ದೊಡ್ಡ ಮನುಷ್ಯ ತಲೆ ಬಗ್ಗಿಸಿ ನಡೆಯುತ್ತಾ... ಯೋಚನೆ ಮಾಡುತ್ತಿದ್ದಾನೆ.

ನಾನು ಇಷ್ಟು ಹೊತ್ತು ಯಾರ ಜೊತೆ ಮಾತಾಡಿದೆ? ನನ್ನ ಜೇಬಿಗೆ ಕೈ ಹಾಕಿ, ಪರ್ಸ್ ಹೊಡೆಯಲು ನೋಡಿದ ಆ ಕಳ್ಳನ ಜೊತೆಗೆ ಅಲ್ಲ..... ಖಂಡಿತ ಅಲ್ಲ.... ಆದರೆ ಯಾರ ಜೊತೆ?

ಆದೇ ಊಹಿಸುವುದಕ್ಕೂ ಆಗ್ತಾ ಇಲ್ಲ.

ನಡೆಯುತ್ತಿದ್ದಾನೆ.!

ಹೌದು ಯುವಕ ಹೇಳಿದ್ದು ಅಕ್ಷರಶಃ ನಿಜ!

ನ್ಯಾಯವಾಗಿ ಸಂಪಾದಿಸುವವರೆಲ್ಲ ಮನೆ, ಮಹಡಿಗಳನ್ನು ಕಟ್ಟಿದ್ದಾರಾ? ನಾನೇನು ನ್ಯಾಯವಾಗಿ ಬೆವರು ಸುರಿಸಿ ಸಂಪಾದನೆ ಮಾಡಿ ಹೆಂಡ್ತಿ ಮಕ್ಕಳಿಗೆ ಹೊಟ್ಟೆತುಂಬಾ ಕೂಳು, ಮೈ ತುಂಬಾ ಬಟ್ಟೆ ಕೊಟ್ನಾ?

ನ್ಯಾಯವಾಗಿ ಬಾಳೋರು ಯಾವತ್ತೂ..... ಸುಖ ಪಡುವುದಿಲ್ಲ.

ದೊಡ್ಡ ಮನುಷ್ಯ ನಡೆಯುತ್ತಲೇ ಇದ್ದಾನೆ. ಯೋಚನೆ ಮಾಡುತ್ತಲೇ ಇದ್ದಾನೆ.

ಎಷ್ಟು ದೂರ ಹೋದನೋ ಗೊತ್ತಿಲ್ಲ!

ತುಂಬ ಕಗ್ಗತ್ತಲಾಗಿದೆ. ಒಂದು ಸಿನಿಮಾ ಮಂದಿರದ ಹತ್ತಿರ ನಿಂತು ಜೇಬಿಗೆ ಕೈ ಹಾಕಿದ, ಜೇಬು ಹಗುರಾಗಿತ್ತು. ನೋಡಿಕೊಂಡ ಪರ್ಸ್ ಇಲ್ಲ. ಅವನ ಹೊಟ್ಟೆ ಚುರುಕ್ ಅನ್ನಲಿಲ್ಲ. ಆದರೆ ಭಾರವಾಗಿ ನಿಟ್ಟುಸಿರು ಬಿಟ್ಟ. ಮನೆ ಕಡೆ ಮುಖ ಮಾಡಿ ನಡೆಯುತ್ತಾ ಯೋಚಿಸುತ್ತಾನೆ. ನಾನು ಮನೆಯಿಂದ ಹೊರಟಾಗ ಪರ್ಸನಲ್ಲಿ ಎಷ್ಟಿತ್ತು? ಇಪ್ಪತ್ತೈದು ರೂಪಾಯಿ ಅಲ್ಲವೆ? ಈಗ ಹೋಗಿದ್ದೆಷ್ಟು ಐನೂರು ಇದೆಲ್ಲವೂ ನ್ಯಾಯವಾದ ಸಂಪಾದನೆಯೇ?

ಂಂ

ಡಾ. ಆಂಜನಪ್ಪ ನಂ ೮೪, ೫ನೇ ಮುಖ್ಯರಸ್ತೆ ೩ನೇ ತಿರುವು, ಭೋವಿ ಕಾಲೋನಿ, ಬಸವೇಶ್ವರ ನಗರ, ಬೆಂಗಳೂರು-೭೯.

ಮೈಕಲ್ (ಏಕಾಂಕ ನಾಟಕ)

ಮೂಲ: ಟಾಲ್‌ಸ್ಟಾಯ್‌ನ "What Men Live By"
ನಾಟಕ ರೂಪಾಂತರ : ಮೈಲ್ಸ್ ಮ್ಯಾಲೆಸನ್‌ನ "Michae"
ಅನುವಾದ: **ಶ್ರೀನಿವಾಸ್ ಎ. ಸುತ್ರಾವೆ**

ದೃಶ್ಯ-೧

(ಒಬ್ಬ ರಷ್ಯನ್ ಹಳ್ಳಿಗನ ಗುಡಿಸಲು. ಬಲಭಾಗದಲ್ಲಿ ಒಂದು ಕೋಣೆ. ಎಡಭಾಗದಲ್ಲಿ ಬೆಂಕಿಗೂಡು. ಅದರ ಪಕ್ಕದಲ್ಲಿ ಒಂದು ಸಾದಾ ಬೆಂಚು, ಕೋಣೆಯಲ್ಲಿ ಅಷ್ಟೇನೂ ಪೀಠೋಪಕರಣಗಳಿಲ್ಲ. ಮರದ ಒಂದು ಟೇಬಲ್ಲು ಹಾಗೂ ಕೆಲವು ಸ್ಟೂಲುಗಳು. ಟೇಬಲ್ಲಿನ ಮೇಲೆ ಕೆಲವು ಹಳೆಯ, ಹರಿದು ಹೋಗಿರುವ ಬಟ್ಟೆಗಳು ಮತ್ತು ಹೊಲಿಗೆಯ ಕೆಲವು ಸಾಮಗ್ರಿಗಳು.

ತೆರೆಯೆದ್ದಾಗ ಖಾಲಿ ರಂಗಸ್ಥಳ. ನೀರಿನ ಬಕೀಟನ್ನು ಕೈಯಲ್ಲಿ ಹಿಡಿದಿರುವ ಹಳ್ಳಿಹೆಂಗಸೊಬ್ಬಳು ಹೊರಗಡೆಯಿಂದ ಒಳಬರುತ್ತಾಳೆ. ಒಳ ಕೋಣೆಯಲ್ಲಿ ಯಾರಾದರೂ ಇದ್ದಾರಾ ಎಂದು ಇಣುಕಿ ನೋಡುತ್ತಾಳೆ. ಯಾರೂ ಇರದಿರುವುದನ್ನು ಗಮನಿಸಿ ಕೂಗಿ ಕರೆಯುತ್ತಾಳೆ)

ಮ್ಯಾತ್ರಿಯೋನಾ : ಅನುಷ್ಕಾ... ಅನುಷ್ಕಾ! (ಉತ್ತರದ ರೂಪದಲ್ಲಿ ಊ.... ಈ. ಎಂದು ಖುಷಿಯಿಂದ ಹೇಳಿದ ಒಂದು ಮಗುವಿನ ಧ್ವನಿ. ಹೆಂಗಸು ಬಾಗಿಲ ಬಳಿ ಬಂದು ಹೊರಗೆ ಕೂಗುತ್ತಾಳೆ) ಅನುಷ್ಕಾ, ಎಲ್ಲಿ, ನೀನು ತಂದಿರೋ ಕಡ್ಡಿಪುಳ್ಳೆ ತಗೊಂಡು ಬಾ ಒಳಗೆ. ಬೆಂಕಿಗೂಡಿಗೆ ಬೇಕು. ಬೇಗ ಬಾರೇ.

(ಅವಳು ಬೆಂಕಿಗೂಡಿನೆಡೆ ನಡೆದು ಅಲ್ಲಿ ಕೂರುತ್ತಾಳೆ. ಕೇವಲ ಕಾಲು ಕಾಣಿಸುವಷ್ಟು ಮರದ ಕಡ್ಡಿಗಳ ಹೊರೆ ಹೊತ್ತಿರುವ ಪುಟ್ಟ ಹುಡುಗಿಯು ಒಳ ಬಂದು ಅದನ್ನು ಬೆಂಕಿಗೂಡಿನ ಬಳಿ ಹಾಕುತ್ತಾಳೆ.)

ಮ್ಯಾತ್ರಿಯೋನಾ : ಅನುಷ್ಕಾ, ಸ್ವಲ್ಪ ಬೆಂಕಿ ಸರಿಯಾಗಿ ನೋಡ್ಕೋಮ್ಮ. ಪೇಟಿಯಿಂದ ನಿಮ್ಮಪ್ಪ ಬರೋ ಹೊತ್ತಾಯ್ತು.

(ಹುಡುಗಿ ನೆಲದ ಮೇಲೆ ಕುಳಿತು ಮರದ ಕಡ್ಡಿಗಳನ್ನು ತುಂಡು ಮಾಡಲು ಪ್ರಾರಂಭಿಸುತ್ತಾಳೆ. ಸಣ್ಣ ಕಡ್ಡಿಗಳೇನೋ ಸರಿ, ಆದರೆ ದೊಡ್ಡವನ್ನು ಸೀಳಲಿಕ್ಕೆ ಅವಳಿಗೆ ಕಷ್ಟವಾಗುತ್ತದೆ. ಈ ದೃಶ್ಯವಿಡೀ ಅವಳು ಈ ಕೆಲಸದಲ್ಲಿ ನಿರತಳಾಗಿರುತ್ತಾಳೆ. ಮ್ಯಾತ್ರಿಯೋನಾ ಟೇಬಲ್ಲಿನ ಬಳಿ ಕುಳಿತು ಹರಿದು ಹೋಗಿರುವ ಅಂಗಿಯೊಂದಕ್ಕೆ ತೇಪೆ ಹಾಕುತ್ತಿದ್ದಾಳೆ.)

ಅನುಷ್ಕಾ : ಊಫ್! (ಹಾಗೆ ಊಬುತ್ತಾ ಒಂದು ಕಡ್ಡಿಯನ್ನು ಮುರಿಯುತ್ತಾಳೆ) ಅಮ್ಮ- ಊಫ್!-

ಮ್ಯಾತ್ರಿಯೋನಾ : ಏನೇ?

ಅನುಷ್ಕಾ : ಉಫ್! ಅಪ್ಪ ಯಾಕೆ ಪೇಟೆಗೆ ಹೋಗಿರೋದು?

ಮ್ಯಾತ್ರಿಯೋನಾ : ಬೆಚ್ಚಗಿರೋ ಕುರಿಚರ್ಮದ ಕೋಟು ತರಲಿಕ್ಕೆ ಹೋಗಿದಾರೆ. ಈ ಚಳಿಗಾಲಕ್ಕೆ ಬೇಕಲ್ಲ. ನಮ್ಮಿಬ್ಬರಿಗೂ ಒಂದೇ ಕೋಟು ಇರೋದು. ಆದರೆ ಅದು ಕೂಡ ಹರಿದು ಚಿಂದಿಯಾಗಿದೆ.

ಅನುಷ್ಕಾ : ಊಫ್! ಅಪ್ಪ ಯಾಕೆ- ಊಫ್- ಪೇಟೆಗೆ ಆಗಾಗ ಹೋಗಿ ತರಲ್ಲ?.... ಊಫ್!... ಅಪ್ಪ ಹೀಗೆ ಇಡೀ ಹೊರಗಡೆ ಹೋಗಿರೋದನ್ನ ನಾನು ಕಂಡಿಲ್ಲ ಯಾವತ್ತು ಕಂಡಿಲ್ಲ ವಲ್ಲ....

ಮ್ಯಾತ್ರಿಯೋನಾ : ಹೌದಮ್ಮ, ಅವರಿಗೆ ಈ ಕೆಲ್ಸದಲ್ಲಿ ಒಂದು ನಿಮಿಷಾನೂ ಪುರುಸೊತ್ತಿರಲ್ಲ.

ಅನುಷ್ಕಾ : ಉಫ್!

ಮ್ಯಾತ್ರಿಯೋನಾ : ಕೆಲಸಕ್ಕೆ ಸರಿಯಾದ ಬೆಲೆ ಇಲ್ಲ, ಆದರೆ ರೊಟ್ಟಿ ಮಾತ್ರ ದುಬಾರಿ ನೋಡು. ಆಮೇಲೆ, ಅವರು ದುಡಿದದ್ದೆಲ್ಲ ಬರೀ ಹೊಟ್ಟೆಗಾಗುತ್ತೆ ಅಷ್ಟೆ. ಕೈಯಲ್ಲಿ ಸಾಕಷ್ಟು ದುಡ್ಡಿಲ್ಲದೆ ಅಷ್ಟು ದೂರ ಹೋಗಿ ಬರೋದು ಏನು ಪ್ರಯೋಜನ ಇಲ್ಲ.

ಅನುಷ್ಕಾ : ಉಫ್!... ಅಪ್ಪನ ಹತ್ರ ಈಗ ದುಡ್ಡಿದೆಯಾ?

ಮ್ಯಾತ್ರಿಯೋನಾ : ಸಾಕಾಗುವಷ್ಟಿದೆ. ಒಂದು ವರ್ಷದ ತನಕ ಪ್ರತಿದಿನ ಜನರಿಗೆ ಬೂಟು ಹೊಲಿದು ಕೊಡೋ ಕೆಲ್ಸ ಮಾಡಿದ್ರಲ್ಲಿ ಉಳಿಸಿರೋ ಹಣದಿಂದ ಒಂದು ಕೋಟು ತಗೊಳ್ಳಿಕ್ಕಾಗೋವಷ್ಟು. ಆಮೇಲೆ, ಆ ದುಡ್ಡನ್ನ ಜನರಿಂದ ಇಸ್ಕೊಳ್ಳಿಕ್ಕೆ ಅವರು ಸಾಕಷ್ಟು ದೂರ ಹೋಗ್ಬೇಕು.

ಅನುಷ್ಕಾ : ಯಾರಿಂದ ಇಸ್ಕೋಬೇಕು?

ಮ್ಯಾತ್ರಿಯೋನಾ : ಅಯ್ಯೋ, ಅಕ್ಕಪಕ್ಕದ ಊರಿನವರಿಂದ ಕಣೆ. ಅದೊಂದು ದರಿದ್ರ ಕೆಲಸ. (ಮ್ಯಾತ್ರಿಯೋನಾ ಅರ್ಧ ತನ್ನಷ್ಟಕ್ಕೆ ಮತ್ತರ್ಧ ಮಗೂಗೆ ಹೇಳುತ್ತಾ) ಅಂಗಡಿಯವನು ನಿಮ್ಮಪ್ಪನಿಗೆ ಮೋಸ ಮಾಡಲಿಲ್ಲ ಅಂದ್ರೆ ಪರವಾಯಿಲ್ಲ. ನಿಮ್ಮಪ್ಪ ತುಂಬ ಭೋಳೆ ಸ್ವಭಾವದವರು. ಅವರ್‍ಯಾರಿಗೂ ಮೋಸ ಮಾಡಲ್ಲ. ಎಷ್ಟು ಸೀದಾ ಸಾದಾ ಮನುಷ್ಯ ಅಂದ್ರೆ, ಒಂದು ಮಗೂನೂ ಬೇಕಾದ್ರೆ ಅವರಿಗೆ ಮೋಸ ಮಾಡಿಬಿಡಬಹುದು. ಅಷ್ಟು ಸರಳ ಮನುಷ್ಯ.... ಎಂಟು ರೂಬಲ್ಲು ಅಂದ್ರೆ, ಸಾಕಷ್ಟು ಹಣಾನೇ. ಆ ಹಣದಲ್ಲಿ ಅವರು ಒಳ್ಳೆ ಕೋಟೇ ತಗೋಬಹುದು. ಹದಮಾಡಿದ ಚರ್ಮದ್ದಲ್ಲದಿದ್ದರೂ ಒಟ್ಟಿನಲ್ಲಿ ಚಳಿಗಾಲಕ್ಕೆ ಒಳ್ಳೆ ಕೋಟೇ ಅವರು ಮನೆಯಿಂದ ಹೊರಗೆ ಹೋಗುವಾಗ ನಮ್ಮಲ್ಲಿ ಕೋಟಿದೆಯಲ್ಲ ಅದನ್ನೇ ಹಾಕ್ಕೊಂಡು ಹೋಗಿದ್ದು. ಹಾಗಾಗಿ ನಾನು ಮನೆಯೊಳಗೇ ಇರಬೇಕಾಯ್ತು.

ಅನುಷ್ಕಾ : (ಒಂದು ದಪ್ಪನೆಯ ಕಟ್ಟಿಗೆಯನ್ನು ಸೀಳಲು ಹರಸಾಹಸ ಮಾಡುತ್ತಾ) ಥೂ,ಥೂ, ಥೂ, ಥೂ! ನಾನಿದನ್ನ 'ಊಫ್' ಮಾಡಾಕಾಗಲ್ಲ!

ಮ್ಯಾತ್ರಿಯೋನಾ : ಆಮೇಲೆ, ಅನುಷ್ಕಾ, ಬ್ರೆಡ್ಡು ಎಷ್ಟಿದೆ ನೋಡು... ಅವರು ವಾಪಸ್ಸು ಬಂದಾಗ ತಿನ್ನಲಿಕ್ಕೆ ಏನಾದ್ರೂ ಬೇಕಲ್ಲ. (ಹುಡುಗಿ ಬೀರು ಹತ್ತಿರ ಹೋಗಿ ಅದರಿಂದ ಒಂದು ಚೂರು ಬ್ರೆಡ್ಡನ್ನು ತೆಗೆದು ತೋರಿಸುತ್ತಾಳೆ) ಸರಿ, ಅದಷ್ಟೆ ತಿನ್ನಬೇಕಾಗುತ್ತೆ, ಮತ್ತೇನು ಮಾಡೋದು? ಅವರು ಪೇಟೆಯಲ್ಲಿ ಊಟ ಮಾಡಿರಲೂ ಬಹುದು. ಏನೇ ಇರಲಿ, ಅದನ್ನ ಟೇಬಲ್ ಮೇಲಿಡು, ಅನುಷ್ಕಾ. (ಅವಳು ಹೊಲಿಗೆ ಸಾಮಾನುಗಳನ್ನು ಟೇಬಲ್ಲಿನಿಂದೀಚೆ ತಂದು ಬೆಂಕಿಗೂಡಿನ ಬಳಿಯ ಬೆಂಚಿನ ಮೇಲೆ ಕೂರುತ್ತಾಳೆ. ಅನುಷ್ಕಾ ಟೇಬಲ್ಲು ಮತ್ತು ಬೀರುವಿನ ನಡುವೆ ನಲಿದಾಡುತ್ತಾ, ತನ್ನಷ್ಟಿಗೆ ತಾನೇ ಹಾಡುತ್ತಾ ಊಟದ ತಟ್ಟೆ ಸಿದ್ಧ ಮಾಡಿಡುತ್ತಾಳೆ.) ಅವರು ಹೋಗೋವಾಗ ಬೇಗನೇ ಏನೂ ಹೊರಡಲಿಲ್ಲ. ತುಂಬ ದೂರದ ಹಾದಿ. ಹೋಗ್ತಾ ಹೋಗ್ತಾ ಮಧ್ಯೆ ಮಧ್ಯೆ ಜನರಿಂದ ದುಡ್ಡಿಸ್ಕೋಬೇಕು. ವಾಪಸ್ಸು ಬರೋದು ತಡ ಆಗೇ ಆಗುತ್ತೆ. ಆದರೂ, ಇಷ್ಟು ಹೊತ್ತಿಗೆ ಬರಬೇಕಿತ್ತಲ್ಲ- ಸದ್ಯ, ಕುಡೀಲಿಕ್ಕೆ ಹೋಗಿಲ್ಲ ಅಂದ್ರೆ ಅಷ್ಟೆ ಸಾಕು!

ಅನುಷ್ಕಾ : (ತನ್ನ ತಂದೆಯ ಊಟವನ್ನು ತಟ್ಟೆಯಲ್ಲಿಟ್ಟು ಸಿದ್ಧಗೊಳಿಸಿ, ಬಾಗಿಲ ಬಳಿ ಹೋಗಿದ್ದಾಳೆ. ಇದ್ದಕ್ಕಿದ್ದಹಾಗೆ) : ಇಗೋ, ಬಂದ್ರು, ನೋಡು! ಅಪ್ಪ ಬಂದ್ರು, ನೋಡಮ್ಮ! (ತುಂಬ ಸಂಭ್ರಮದಿಂದ ತಾಯಿಯೆಡೆ ಓಡಿ ಹೋಗಿ, ಮರಳಿ ತಂದೆಯ ಬಳಿಗೆಂದು ಬಾಗಿಲ್ಲತ್ತ ಓಡಿ ಬರುತ್ತಾಳೆ; ಆದರೆ ಒಮ್ಮೆಲೆ ನಿಂತು ಬಿಡುತ್ತಾಳೆ.) ಅಪ್ಪ ಒಬ್ರೇ ಅಲ್ಲ ಬಂದಿರೋದು. ಅವರ ಜೊತೆ ಇನ್ಯಾರೋ ಬಂದಿದಾರೆ.

ಮ್ಯಾತ್ರಿಯೋನಾ : ಏನು? ಯಾರು? ಯಾರದು ಅವರ ಜೊತೆ ಬಂದಿರೋದು? (ಅವಳು ತನ್ನ ಕೆಲಸವನ್ನು ನಿಲ್ಲಿಸುತ್ತಾಳೆ.)

ಅನುಷ್ಕಾ : ಯಾರೋ ಗೊತ್ತಿಲ್ಲ. ಆದ್ರೆ ಆ ಮನುಷ್ಯನಿಗೆ ತುಂಬ ಚಳಿಯಾಗ್ತಿರಬೇಕು. ಅವನ ತೋಳಿನ ಮೇಲೆ ಬಟ್ಟೆನೇ ಇಲ್ಲ. ಆ ಮೇಲೆ, ಅವನ ಕಾಲು.... ಅವನ್ಯಾರೋ ಭಿಕ್ಷುಕನಿರಬೇಕು.

ಮ್ಯಾತ್ರಿಯೋನಾ : ಭಿಕ್ಷುಕನಾ !

ಅನುಷ್ಕಾ : ಇಲ್ಲ, ಭಿಕ್ಷುಕನ ಥರ ಏನೂ ಇಲ್ಲ.

ಮ್ಯಾತ್ರಿಯೋನಾ : ನಿಮ್ಮಪ್ಪ ಕೋಟು ಹಾಕ್ಕೊಂಡಿದಾರಾ?

ಅನುಷ್ಕಾ : ಇಲ್ಲ.

ಮ್ಯಾತ್ರಿಯೋನಾ : ಏನು? ಇಲ್ಲ ಅಂದೆಯಾ? (ಅವಳು ಬಾಗಿಲ ಬಳಿ ಓಡಿ ಬರುತ್ತಾಳೆ) ಕೋಟಿಲ್ಲ! ಏನೂ ಇಲ್ಲ! ಅದು ಸಾಕಿಲ್ಲ ಅನ್ನೋ ಹಾಗೆ ಈ ಭಿಕ್ಷುಕನ್ನ ಬೇರೆ ಕರಕೊಂಡು ಬಂದಿದಾರೆ ಮನೆಗೆ. ನಾನಂದ್ಕೊಂಡ್ಹಾಗೇ ಆಯ್ತು. ಇವರು ಕುಡೀಲಿಕ್ಕೆ ಹೋಗಿದಾರೆ. ಕೋಟು ತಗೊಂಡು ಬನ್ನಿ ಅಂದ್ರೆ ವೋಡ್ಕಾ ಕುಡಿದು ದುಡ್ಡು ಹಾಳು ಮಾಡಿ ಬಂದಿದಾರೆ. (ಸಿಟ್ಟು ಬಂದು) ಒಂದು ವರ್ಷ ಪೂರ್ತಿ ಕಷ್ಟಪಟ್ಟಿದ್ದು ದಂಡ ಆಯ್ತು. ನನ್ನೆದೆ ಒಡೆದು ಹೋಗೋದು ಒಂದು ಬಾಕಿ ಇದೆ ಅಷ್ಟೆ. ಒಂದು ವರ್ಷ ಕಷ್ಟಪಟ್ಟು ಉಳಿಸಿದ್ದ ದುಡ್ಡೆಲ್ಲ ಇವರು ಕುಡೀಲಿಕ್ಕಾಯ್ತು! (ಈಗ ಸಿಟ್ಟನ್ನು ಮಗುವಿನ ಮೇಲೆ ತೋರಿಸುತ್ತಾ) ಹೋಗೇ, ಮಲಕ್ಕೋ ಹೋಗು!

ಅನುಷ್ಕಾ : (ದುಗುಡ ತುಂಬಿದ ದನಿಯಲ್ಲಿ) : ನಾನು ಅಪ್ಪನ್ನ ನೋಡ್ಬೇಕು.

ಮ್ಯಾತ್ರಿಯೋನಾ : ಹೋಗು ಅಂದೆ! ನೀನು ನಿಮ್ಮಪ್ಪ ಕುಡಿದಿರೋದು ನೋಡೋದೂ ಬ್ಯಾಡ, ನಾನು ಅವರಿಗೆ ಬಯ್ಯೋದು ಕೇಳೋದೂ ಬ್ಯಾಡ! ಹೋಗೀಗ!

ಅನುಷ್ಕಾ : (ಕಣ್ಣಲ್ಲಿ ನೀರು ತುಂಬಿಕೊಂಡು, ಗದ್ಗದಿತಳಾಗಿ) ನಾನು ಇಡೀ ದಿನ ಅಪ್ಪನ್ನ ನೋಡಿಲ್ಲ.

ಮ್ಯಾತ್ರಿಯೋನಾ : ಹೋಗಾಚೆ- ಹೋಗಿ ಮಲಕ್ಕೋ ಅಂದೆ!

(ಅನುಷ್ಕಾ ಕಣ್ಣೀರು ಹರಿಯುವುದು ತಡೆಯಲೆಂಬಂತೆ ಬೆರಳಿನ ಗೆಣ್ಣುಗಳಿಂದ ಕಣ್ಣುಮುಚ್ಚಿಕೊಂಡು ನಿಧಾನವಾಗಿ ಕೋಣೆಗೆ ಹೋಗುತ್ತಾಳೆ. ಮ್ಯಾತ್ರಿಯೋನಾ ಕೋಣೆಯ ಬಾಗಿಲನ್ನೆಳೆದುಕೊಂಡು, ಹಿತ್ತಲ ಬಾಗಿಲನ್ನೂ ಮುಚ್ಚುತ್ತಾಳೆ. ಈಗ ಇನ್ನೂ ಹೆಚ್ಚು ಉಗ್ರಳಾಗಿ) ಸರಿ ಹೋಯ್ತಲ್ಲ! ಕೂಲಿ ಕೆಲಸ ಮಾಡಿ ಮಾಡಿ ಏನು ಪ್ರಯೋಜನ? ದುಡಿದದ್ದೆಲ್ಲ ಕುಡೀಲಿಕ್ಕೆ ಸುರಿಯೋದು! ಅದೂ ಅಲ್ದೆ ಕೆಲ್ಸಕ್ಕೆ ಬಾರದ ಕುಡುಕ ಸ್ನೇಹಿತನನ್ನ ಬೇರೆ ಮನೆಗೆ ಕರ್ಕೊಂಡು ಬರೋದು! ಸರಿಯಾಗಿ ಬುದ್ಧಿ ಕಲಿಸಬೇಕು ಇವರಿಗೆ!

(ಬೆಂಕಿಗೂಡಿನ ಬಳಿ ನಿಂತು ಕಾಯುತ್ತಾಳೆ. ಬಾಗಿಲು ತೆರೆಯುತ್ತದೆ. ಸೈಮನ್ ಒಳಗೆ ಬರುತ್ತಾನೆ. ತನ್ನ ಜೊತೆಯಲ್ಲಿರುವನು ಒಳ ಬರಲಿಕ್ಕಾಗಿ ಬಾಗಿಲನ್ನು ಹಿಡಿದುಕೊಂಡಿದ್ದಾನೆ.)

ಸೈಮನ್ : ಬಾಪ್ಪ...... ಒಳಗೆ ಬಾ.

(ಒಬ್ಬ ತರುಣನ ಪ್ರವೇಶ. ಅವನು ಸುಮಾರು ಹದಿನೆಂಟು ವರ್ಷದವನಿರಬೇಕು. ಮುಖ ಸುಂದರವಾಗಿದೆ. ಅವನ ಬೋಳು ಕೈಕಾಲುಗಳು, ಆಕಾರ, ರೂಪ ಅದ್ಭುತವಾಗಿದೆ. ಅವನ ಮೈಮೇಲಿರುವ ಒಂದು ಒರಟು ವಸ್ತ್ರ ಮತ್ತು ಸೈಮನ್ ಕೊಟ್ಟಿರುವ ಹಳೆಯ ಕೋಟು ಎಷ್ಟು ಸಾಧ್ಯವೋ ಅಷ್ಟು ಚಳಿಯನ್ನು ತಡೆದಿವೆ. ಅವನು ಒಳಬಂದು ಬಾಗಿಲಲ್ಲಿ ನಿಲ್ಲುತ್ತಾನೆ. ತಲೆ ತಗ್ಗಿಸಿ, ಕೆಳಗೆ ನೋಡುತ್ತಾ ನಿಂತಿದ್ದಾನೆ. ಸೈಮನ್ ಅಷ್ಟೇನೂ ಕುಡಿದಿಲ್ಲ, ಆದರೆ ಹೆಂಡತಿ ಅವನನ್ನು ಸ್ವಾಗತಿಸುವ ರೀತಿಯ ಬಗ್ಗೆಯಂತೂ ಅವನಿಗೆ ಭಯವಿದೆ.)

ಸೈಮನ್ : ಹೂಂ, ಏನು ಅಮ್ಮ? (ಅವಳು ಉತ್ತರ ಕೊಡುವುದಿಲ್ಲ) ಬಾ, ಮಿತ್ರ, ಇಲ್ಲಿ ಕೂತ್ಕೋ ಈ ಬೆಂಕಿಗೂಡಿನ ಹತ್ರ. ಬೆಚ್ಚಗಿರುತ್ತೆ. (ಅವನು ಬೆಂಚನ್ನು ಬೆಂಕಿಗೂಡಿಗೆ ಇನ್ನೂ ಹತ್ತಿರವಾಗಿ ಎಳೆದು, ಅತಿಥಿಯನ್ನು ಕೈಸನ್ನೆಯಿಂದ ಕರೆಯುತ್ತಾನೆ) ಹಾಂ, ಹಾಗೆ! ಕೂತ್ಕೋ. ಈಗ ಚಳಿ ಸ್ವಲ್ಪ ತಡಕೋಬಹುದಲ್ವಾ? ನಾವೀಗ ಊಟ ಮಾಡೋಣಂತೆ. ಊಟ ಇದೆಯಾ, ಅಮ್ಮ?

ಮ್ಯಾತ್ರಿಯೋನಾ : ನೀವು ನನ್ನ ಕೋಟು ತಂದಾಗಷ್ಟೆ ನಿಮಗೆ ಊಟ ಸಿಗೋದು.

ಸೈಮನ್ : ಓ, ಬಿಡು, ಅಮ್ಮ - ಇದೆಂಥ ಸ್ವಾಗತ ಅಂತೀನಿ! ನಾನು ಕೋಟು ತಗಳ್ಳಿಕ್ಕೆ ಆಗಲಿಲ್ಲ.

ಮ್ಯಾತ್ರಿಯೋನಾ : ಯಾಕೆ?

ಸೈಮನ್ : ನಾನು ನೆರೆ ಊರಿನ ತ್ರಿಫೊನಾಫ್‌ನನ್ನು ಕಂಡಿದ್ದೆ. ಸಿಟೀಗೆ ಹೋಗೋವಾಗ. ಆದರೆ ಅವನು ನನಗೆ ಕೊಡಬೇಕಾಗಿರೋ ಹಣ ಕೊಡಲಿಲ್ಲ. ಪಾಪ, ಅವನ ಹತ್ರ ಹಣ ಇರಲಿಲ್ಲ. ಅವನ ಹೆಂಡತಿ ಮಕ್ಕಳಿಗೂ ಸರಿಯಾಗಿ ಊಟಕ್ಕಿಲ್ಲ. ನಾನು ಅವನಿಗೆ ಒತ್ತಾಯ ಮಾಡಲಿಕ್ಕೆ ಆಗಲಿಲ್ಲ. ನಾನು ಅಂಗಡಿಯವರಿಗೆ ಉದ್ರಿ ಕೇಳ್ದೆ, ಆದ್ರೆ ಅವರ್‍ಯಾರೂ ಕೊಡಲಿಲ್ಲ. ಹಾಗಾಗಿ ನಾವೀಗ ಕೋಟಿಲ್ದೇನೇ ಇರಬೇಕು.

ಮ್ಯಾತ್ರಿಯೋನಾ : ನಿಮ್ಮ ಹತ್ರ ಇದ್ದ ಹಣ ಏನಾಯ್ತು?

ಸೈಮನ್ : ಇಗೋ, ಇಲ್ಲಿದೆ ನೋಡು (ಅವನು ಅವಳಿಗೆ ಸ್ವಲ್ಪ ಹಣ ಕೊಡುತ್ತಾನೆ.)

ಮ್ಯಾತ್ರಿಯೋನಾ : (ಎಣಿಸುತ್ತಾ): ಪೂರ್ತಿ ಇಲ್ಲವಲ್ಲ?

ಸೈಮನ್ : ನಾನು ಅದರಲ್ಲಿ ಸ್ವಲ್ಪ ಖರ್ಚು ಮಾಡ್ದೆ.

ಮ್ಯಾತ್ರಿಯೋನಾ : ಯಾವುದಕ್ಕೆ?

ಸೈಮನ್ : ವೋಡ್ಕಾಗೆ.

ಮ್ಯಾತ್ರಿಯೋನಾ : ಹೂಂ, ನನಗೆ ಗೊತ್ತಿತ್ತು ನೀವು ಹಾಗೆ ಮಾಡ್ತೀರ ಅಂತ.

ಸೈಮನ್ : ಚಳಿ ತಡಕೊಳ್ಳಿಕ್ಕೆ ಅಂತ ಸ್ವಲ್ಪ ತಗೊಂಡಿದ್ದಷ್ಟೆ. ಹಿಮ ಸುರಿತಾ ಇರೋವಾಗ್ಲೆಲ್ಲ ತುಂಬ ದೂರ ನಡೀಬೇಕಲ್ಲ.... ಹಿಮ ಉದ್ದಕ್ಕೂ ಹೀಗೇ ಸುರೀತಾ ಇತ್ತು..... ಅಯ್ಯೋ, ಏನು ಕೆಲ್ಸ ಅಂತೀನಿ ಹಸಿವು ಬೇರೆ.

ಮ್ಯಾತ್ರಿಯೋನಾ : ನಿಮ್ಮಂಥ ಕುಡುಕರಿಗೆ ಊಟ ಇಲ್ಲ ಹೋಗಿ.

ಸೈಮನ್ : ಅಯ್ಯೊ, ಹಾಗಂದ್ರೆ ಹ್ಯಾಗೆ ಅಮ್ಮ?

ಮ್ಯಾತ್ರಿಯೋನಾ : ಈ ಚಳಿಯಿಂದಾಗಿ ನಿಮ್ಮ ಮತ್ತು ಈಗ ಇಳಿದಿರಬಹುದು, ಸರಿ. ಆದ್ರೆ ನೀವು ಕೋಟು ತರ್ಲಿಕ್ಕೆ ಅಂತ ಹೋದವರು ಏನೂ ತರದೆ ಈ ಬೆತ್ತಲೆ ಅಲೆಮಾರಿಯನ್ನ ಕರ್‍ಕೊಂಡು ಬಂದಿದೀರಲ್ಲ.

ಸೈಮನ್ : ಸಾಕು ಸುಮ್ನಿರು, ಮ್ಯಾತ್ರಿಯೋನಾ. ಸುಮ್ಮನೆ ಬಾಯಿಗೆ ಬಂದ ಹಾಗೆ ಮಾತಾಡಬೇಡ.

ಮ್ಯಾತ್ರಿಯೋನಾ : ಹ್ಞೂಂ, ಊಟ ಬೇರೆ ಕೇಳ್ತೀರ! ಏನೂ ಆಗಿಲ್ಲ. ಅನ್ನೋ ಹಾಗೆ. ಬ್ರೆಡ್ಡು ಒಂದು ದಿವಸಕ್ಕಾಗೋವಷ್ಟು ಮಾತ್ರ ಇದೆ. ನಾವು ಊರಲ್ಲಿರೋ ಕುಡುಕರಿಗೆಲ್ಲ ಊಟ ಹಾಕ್ಲಿಕ್ಕಾಗಲ್ಲ.

ಸೈಮನ್ : ನೋಡಿದ್ಯಾ, ನೋಡಿದ್ಯಾ, ಮ್ಯಾತಿಯೋನಾ, ಸ್ವಲ್ಪ ನಾಲಿಗೆ ಬಿಗಿ ಹಿಡಿ.

ಮ್ಯಾತ್ರಿಯೋನಾ : ಹೂಂ, ನಾಲಿಗೆ ಬಿಗಿ ಹಿಡಿ! ಸಾಕಾಯ್ತು ನಿಮ್ಮ ಸಹವಾಸ. ನಾನು ಈಗ ಇನ್ನೂ ಒಂದು ವರ್ಷ ಚಾಕರಿ ಮಾಡಬೇಕು, ಅಲ್ವಾ? ನಿಮಗೆ ಆಗ ಊಟ ಸಿಗುತ್ತೆ. ಆಗ ನೀವು ಸಂಸಾರ ನಡೆಸಬಹುದು... ಎಲ್ಲಿ, ಕೊಡು ಅದನ್ನ ನನಗೆ! (ಅವಳು ಅಪರಿಚಿತನ ಹೆಗಲ ಮೇಲಿರುವ ಕೋಟನ್ನು ಕಿತ್ತುಕೊಂಡು ತಾನು ಹಾಕಿಕೊಳ್ಳುತ್ತಾಳೆ. ಅನಂತರ, ಬಾಗಿಲತ್ತ ನಡೆಯುತ್ತಾಳೆ, ಆದರೆ ಅವಳ ಗಂಡನಾಗಲೀ, ಆ ಅಪರಿಚಿತನಾಗಲೀ ಅಲ್ಲಿಂದ ಕದಲುವುದಿಲ್ಲ. ಅವಳು ಕುತೂಹಲದಿಂದ ವಾಪಸ್ಸು ಬಂದು ಅಪಂಚಿತನಿಗೆ ಮಾತನಾಡಿಸುತ್ತಾಳೆ.) ನೀನು ಕುಡಿದಿಲ್ಲ ಅನ್ನೋದಾದ್ರೆ ಈ ರೀತಿ ಬಂದಿರೋದು ಯಾಕೆ? (ಉತ್ತರವಿಲ್ಲ.) ನೀನೊಬ್ಬ ಕೆಟ್ಟ ಮನುಷ್ಯ ಇರಬೇಕು. ಅದಕ್ಕೆ ನಿನಗೆ ಭಯ, ಅಲ್ವಾ? (ಉತ್ತರವಿಲ್ಲ; ಅವಳು ಇನ್ನೂ ಸ್ವಲ್ಪ ಹತ್ತಿರ ಬರುತ್ತಾಳೆ.) ನೀನು ಭಿಕ್ಷುಕನ ಥರ ಬಟ್ಟೆ ಹಾಕ್ಕೊಂಡಿದೀಯ. ಅದರೆ ನಿನ್ನ ಮೈ ಚರ್ಮ ಬೆಳ್ಳಗಿದೆ ಮತ್ತು ನಿನ್ನ ಕೈ ತುಂಬ ನಯವಾಗಿದೆ... ನೀನು ಎಲ್ಲಿಯವನು?... ನಿನಗೇನು ಬೇಕು? (ಅಪರಿಚಿತನು ತಲೆ ಅಲ್ಲಾಡಿಸುತ್ತಾನೆ, ಅಷ್ಟೆ.) ನಿನಗೇನು ಮಾತಾಡಕೆ ಬರಲ್ವಾ?

ಸೈಮನ್ : ಅವನು ನನಗೆ ಸಿಕ್ಕಾಗಲಿಂದ ಒಂದು ಮಾತೂ ಆಡಿಲ್ಲ.

ಮ್ಯಾತ್ರಿಯೋನಾ : ಸಿಕ್ಕಾಗ? ಅಂದ್ರೆ ಎಲ್ಲಿ ಬಿದ್ದಿದ್ದ ಈತ?

ಸೈಮನ್ : ರಸ್ತೆಪಕ್ಕ. ನಾನು ರಸ್ತೆ ಮೂಲೇಲಿರೋ ಚರ್ಚನ್ನ ಹಾದು ಹೋಗ್ತಿದ್ದೆ. ಆಗ ನನಗೆ ನೆಲದ ಮೇಲೆ ಏನೋ ಕಾಣಿಸ್ತು. ಹತ್ರ ಹೋಗಿ ನೋಡ್ದೆ. ನೋಡಿದ್ರೆ ಈ ಮನುಷ್ಯ ಹಿಮದಲ್ಲೇ ಬೆತ್ತಲೆಯಾಗಿ ಬಿದ್ದಿದ್ದ. ಯಾರೋ ಇವನ ಬಟ್ಟೇನೆಲ್ಲ ಕಿತ್ತುಕೊಂಡು ಇವನನ್ನ ಅಲ್ಲೇ ಬಿಟ್ಟು ಹೋಗಿದಾರೇನೋ ಅಂದ್ಕೊಂಡೆ. ನಾನೇನಾದ್ರೂ ಇವನಿಗೆ ಸಹಾಯ ಮಾಡಿದ್ರೆ ನಾನೇ ತೊಂದ್ರೇಲಿ ಸಿಕ್ಕಹಾಕ್ಕೊಳಬಹುದು ಅಂತ ತಿಳ್ಕೊಂಡು ಮುಂದೆ ಸರಸರ ನಡೆದೆ... ಆ ಮೇಲೆ ನಾನು ಯೋಚ್ನೆ ಮಾಡ್ದೆ- ಪಾಪ, ಆ ಮನುಷ್ಯ ಚಳಿಯಿಂದ ಮತ್ತೆ ಹಸಿವಿನಿಂದ ಸಾಯ್ತಾ ಇರ್ಬೇಕು ಅಂತ. ಆ ಮೇಲೆ, ನನಗೆ ಹೆದರಿಕೆ ಆಗಿ, ಸುಮ್ಮನೆ ಯಾರಿಗೂ ಕಾಣದ ಹಾಗೆ ಹೋಗಿ ಬಿಡೋಣ ಅನ್ನಿಸಿ ಸರಕ್ಕನೆ ಆಚೆ ಹೊರಟಿದ್ದೆ! ಆದ್ರೆ, ಆಗ ನನ್ನ ಮನಸ್ಸು ಹೇಳ್ತು: "ಸೈಮನ್, ನೀನೀಗ ದರೋಡೆಕೋರರಿಗೆ ಹೆದರೋವಷ್ಟು ಶ್ರೀಮಂತನಾಗಿಬಿಟ್ಟಿದಿಯಾ? ನಾಚ್ಕೆ ಆಗ್ಬೇಕು ನಿನಗೆ!" ಹಾಗಾಗಿ, ನಾನು ವಾಪಸ್ಸು ಹೋದೆ. ಹೋಗಿ ಅವನನ್ನ ಮೇಲಕ್ಕೆತ್ತಿ, ಅವನಿಗೆ ನನ್ನ ಕೋಟು

ಹಾಕಿ, ಅವನನ್ನ ನಮ್ಮ ಮನೆಗೆ ಕರ್‍ಕೊಂಡು ಬಂದೆ. ನಾನವನಿಗೆ ಏನೇನೋ ಪ್ರಶ್ನೆಗಳನ್ನು ಕೇಳ್ದೆ, ಆದ್ರೆ ಅವನು ಮಾತೇ ಆಡ್ಲಿಲ್ಲ.... ಸರಿ, ಈಗ ನಿನಗೆಷ್ಟು ಗೊತ್ತೋ ಅಷ್ಟೇ ನನಗೂ ಗೊತ್ತಿರೋದು.

(ಮ್ಯಾತ್ರಿಯೋನಾ ಅವನನ್ನು ಇನ್ನೂ ಹೆಚ್ಚು ಕುತೂಹಲದಿಂದ ನೋಡುತ್ತಾಳೆ.)

ಮ್ಯಾತ್ರಿಯೋನಾ : ಇವನ ಮೈಚರ್ಮ ಒಬ್ಬ ಕುಲೀನ ಮನಷ್ಯನ ಥರಾನೇ ಇದೆ. ಬೆಳ್ಳಗೆ ಮತ್ತು ನಯವಾಗಿ. ಆದರೆ ಇವನು ಕೊರೆಯುವ ಚಳಿಯಲ್ಲಿ ರಸ್ತೆಲಿ ಬಿದ್ದಿದ್ದ ಅಂದಿರಿ. ಇವನು ಬದುಕಿರೋದೇ ಆಶ್ಚರ್ಯ! ಏನೇ ಇರಲಿ, ಇವನು ಉಪವಾಸ ಇರೋದು ಬ್ಯಾಡ. ಎಲ್ಲಿ, ಈ ಕಡೆ ಬಾಪ್ಪ! (ಅವಳ ದನಿಯಲ್ಲೀಗ ದಯೆ ಇದೆ. ಅವಳು ಒಲೆಯ ಮೇಲಿನ ಕೆಟಲ್ಲನ್ನು ತೆಗೆದುಕೊಳ್ಳುವಳಿದ್ದಾಳೆ) ಇಗೋ,.... ಇಲ್ಲಿ ಕೂತ್ಕೋ. ಇಲ್ಲಿ ಬೆಚ್ಚಗಿರುತ್ತೆ. (ಅವಳು ಅವನಿಗಾಗಿ ಒಲೆಯ ಹತ್ತಿರ ಕುರ್ಚಿಯೊಂದನ್ನಿಡುತ್ತಾಳೆ. ಈಗ ಅವನು ಬೆನ್ನು ಪ್ರೇಕ್ಷಕರ ಕಡೆಗಿದೆ. ಅವಳು ಅವನಿಗೆ ಬಟ್ಟಲಲ್ಲಿ ಟೀ ಕೊಡುತ್ತಾಳೆ.) ತಗೋ ಕುಡಿ ಇದನ್ನ. ಸ್ವಲ್ಪ ಬೆಚ್ಚಗನ್ನಿಸುತ್ತೆ. (ಅವನು ಬಟ್ಟಲನ್ನು ತೆಗೆದುಕೊಳ್ಳುವಾಗ ಅವಳ ಕಡೆ ಮುಖವೆತ್ತಿ ನೋಡುತ್ತಾನೆ. ಆಗ ತಕ್ಷಣವೇ ಅವಳು ಸ್ವಲ್ಪ ಹಿಂದೆ ಸರಿದು ಅವನನ್ನು ದಿಟ್ಟಿಸಿ ನೋಡುತ್ತಾಳೆ ಯಾವುದೋ ಮೋಡಿಗೊಳಗಾದಂತೆ ಅವನನ್ನೇ ನೋಡುತ್ತಾ ಅವಳು ಸೈಮನ್ನನ ಸನಿಹಕ್ಕೆ ಬರುತ್ತಾಳೆ. ಅವಳ ಧ್ವನಿಯಲ್ಲಿ ಅಚ್ಚರಿ ಮತ್ತು ಭಯವಿದೆ.) ನೋಡಿದಿರಾ... ಸೈಮನ್?... ನೀವು ನೋಡಿದಿರಾ?

ಸೈಮನ್ : ಏನು? ಏನಿತ್ತು ನೋಡೋವಂಥದ್ದು?

ಮ್ಯಾತ್ರಿಯೋನಾ : ನಾನು ಅವನಿಗೆ ಕಪ್ ಕೊಟ್ಟಾಗ ಅವನು ನನ್ನ ಕಡೆ ನೋಡಿ ಮುಗುಳ್ನಕ್ಕ. ಅಂಥ ಮುಗುಳ್ನಗೆಯನ್ನ ನಾನು ಯಾವತ್ತೂ ನೋಡೇ ಇಲ್ಲ! ಆ ರೀತಿ ನಕ್ಕ ಯಾವ ಮನುಷ್ಯನನ್ನೂ ನಾನು ಇದುವರೆಗೆ ನೋಡಿಲ್ಲ. ಸೈಮನ್, ನನಗೆ ಹೆದರಿಕೆಯಾಯ್ತು.... ನಿಜವಾಗ್ಲೂ, ನನಗೆ ಅವನ ಬಗ್ಗೆ ಯಾಕೋ ಭಯ.... ಎಲ್ಲ ತುಂಬ ವಿಚಿತ್ರ ಇದೆ.

ಸೈಮನ್ : ವಿಚಿತ್ರ ಇರಲಿ ಬಿಡಲಿ, ನಾವು ಅವನಿಗೆ ಉಪವಾಸ ಕೆಡವಬಾರದಲ್ಲ. ಅವನಿಗೆ ಈ ಬ್ರೆಡ್ಡು ಕೊಡು.

ಮ್ಯಾತ್ರಿಯೋನಾ : ನೀವು ಕೊಡಿ.

ಸೈಮನ್ : ತಗೋ ಮಿತ್ರ, ತಗೋ ಇದನ್ನ.

(ಸೈಮನ್ ಅವನಿಗೆ ಬ್ರೆಡ್ಡನ್ನು ಕೊಡುತ್ತಾನೆ. ಒಂದು ಕ್ಷಣ ಅವರಿಬ್ಬರೂ ಅವನನ್ನು ವೀಕ್ಷಿಸುತ್ತಾರೆ. ಆಗ:)

ಮ್ಯಾತ್ರಿಯೋನಾ : ಮನೆಯಲ್ಲಿರೋದು ಅದೊಂದೇ ಚೂರು ಕಣಪ್ಪ. ನಿನಗೆ ಹಸಿವಾಗಿರಬೇಕಲ್ಲ. ನೀನಿದನ್ನ ತಿನ್ನು. ನಾನು ಇಲ್ಲೇ ಹತ್ರ ಇರೋ ಮಾರ್ತಾ ಹತ್ರ ಸ್ವಲ್ಪ ಇಸ್ಕೊಳ್ಳಿಕ್ಕೆ ಅಡ್ಡಿ ಇಲ್ಲ... ಈಗ್ಲೇ ಹೋಗಿ ಬರ್ತೀನಿ. (ಬಾಗಿಲಲ್ಲಿ ಸ್ವಲ್ಪ ಹೊತ್ತು ಹಿಂದೇಟು ಹಾಕುತ್ತಾ ನಿಲ್ಲುತ್ತಾಳೆ) ಅಯ್ಯೋ, ತುಂಬ ಕತ್ಲಿದೆ. ಈಯಪ್ಪ ನನಗೇನೋ ಮೋಡಿ ಮಾಡಿ ಬಿಟ್ಟಿದಾನೆ- ಈ ಕತ್ತಲಲ್ಲಿ ಹೊಲ ದಾಟಿ ಹೋಗ್ಲಿಕ್ಕೆ ನನಗೆ ಭಯ ಆಗುತ್ತೆ... ಸೈಮನ್, ನೀವು ಬನ್ನಿ ನನ್ನ ಜೊತೆ. ಈತ ಸ್ವಲ್ಪ ಹೊತ್ತು ಆರಾಮವಾಗಿರ್ತಾನೆ. (ಸೈಮನ್ ಅವಳೊಡನೆ ಹೊರಡಲು ಬಾಗಿಲ ಬಳಿ ಬರುತ್ತಾನೆ.) ನಾವು ಲಾಟೀನು ತಗೊಂಡು ಹೋಗೋದು ಉತ್ತಮ ಅನ್ಸುತ್ತೆ.

ಸೈಮನ್ : ಏನು ಬೇಡ, ಅಮ್ಮ. ನಮಗೆ ದಾರಿ ಚೆನ್ನಾಗಿ ಗೊತ್ತಲ್ಲ..... ಎಲ್ಲಿ, ನೀನು ನನ್ನ ಕೈ ಹಿಡ್ಕೋ.

(ಅವರಿಬ್ಬರೂ ಜೊತೆಗೂಡಿ ಹೋಗುತ್ತಾರೆ. ಅಪರಿಚಿತನು ಬೆಂಚಿನ ಮೇಲೆ ಮೌನವಾಗಿ ಕುಳಿತಿದ್ದಾನೆ. ಒಳ ಕೋಣೆಯಿಂದ ಮಗುವಿನ ಧ್ವನಿ ಕೇಳಿಬರುತ್ತೆ.)

ಅನುಷ್ಕಾ : ಅಮ್ಮ..... ಅಮ್ಮ..... ಅಪ್ಪ..... ಅಪ್ಪ.....

(ಪುಟ್ಟ ಹುಡುಗಿಯು ಒಂದು ಬಿಳಿಯ ಅಂಗಿಯನ್ನು ಧರಿಸಿದ್ದಾಳೆ; ಅವಳು ಕೋಣೆಯೊಳಗೆ ಇಣುಕಿ ನೋಡುತ್ತಾಳೆ. ಅನಂತರ ಒಳ ಬರುತ್ತಾಳೆ. ಅವಳು ಅಪರಿಚಿತನನ್ನು ನೋಡಿದಾಗ ಅಚ್ಚರಿಯಿಂದ, ಸದ್ದಿಲ್ಲದೆ, ಅವನನ್ನು ವೀಕ್ಷಿಸುತ್ತಾಳೆ; ನಿಧಾನವಾಗಿ ಅವನೆಡೆ ನಡೆದು ಬರುತ್ತಾಳೆ. ಅವನು ಅವಳತ್ತ ನೋಡುತ್ತಾನೆ; ಅವಳು ಭಯವಿಲ್ಲದ ಕುತೂಹಲದಿಂದ ಅವನ ಬಳಿ ಬಂದು, ಒಂದು ಕೈಯನ್ನು ಮುಂದೆ ಚಾಚುತ್ತಾಳೆ, ಅವನು ಆ ಕೈ ಹಿಡಿಯುತ್ತಾನೆ. ಅನಂತರ ಅವಳು ಮೆಲ್ಲನೆ ಅವನ ತೊಡೆಯೇರಿ ಸಂತೃಪ್ತಿಯಿಂದ ತನ್ನ ತಲೆಯನ್ನು ಅವನ ಭುಜದ ಮೇಲೆ ಒರಗಿಸುತ್ತಾಳೆ. ಈಗ ರಂಗಸ್ಥಳದಲ್ಲಿ ಕತ್ತಲು.)

ದೃಶ್ಯ - ೨

(ಈಗ ರಂಗದ ಮೇಲೆ ಪುನಃ ಬೆಳಕು. ದೃಶ್ಯ ಅದೇ. ಒಂದು ವರ್ಷ ಕಳೆದಿದೆ. ಸೈಮನ್ನನು ಬೂಟುಗಳನ್ನು ಹೊಲೆಯುತ್ತಾ ಕುಳಿತ್ತಿದ್ದಾನೆ. ಮ್ಯಾತ್ರಿಯೋನಾ ಹೊಲಿಗೆ ಕೆಲಸದಲ್ಲಿ ನಿರತಳಾಗಿದ್ದಾಳೆ.)

ಮ್ಯಾತ್ರಿಯೋನಾ : ಸೈಮನ್.

ಸೈಮನ್ : ಏನು, ಅಮ್ಮ?

ಮ್ಯಾತ್ರಿಯೋನಾ : ಇವತ್ತು ಯಾವ ದಿನ ಅಂತ ಗೊತ್ತಾ?

ಸೈಮನ್ : ಇಲ್ಲ, ಯಾವ ದಿನ?

ಮ್ಯಾತ್ರಿಯೋನಾ : ನೀವು ಮೈಕಲ್‌ಗೆ ಮನೆಗೆ ಕರ್‍ಕೊಂಡು ಬಂದು ಇವತ್ತಿಗೆ ಒಂದು ವರ್ಷ.

ಸೈಮನ್ : ನನ್ನ ಅದೃಷ್ಟದ ದಿನ ಅದು. ಇವನು ಕೆಲಸ ಮಾಡೋದನ್ನ ಎಷ್ಟು ಬೇಗ ಕಲಿತ ನೋಡು. ಮೈಕಲ್‌ಗೆ ಕೆಲ್ಸ ಹೇಳಿಕೊಡೋದು ತುಂಬಾನೆ ಸುಲಭ ಇತ್ತು. ಬೇರೆ ಯಾರೂ ಹಾಗೆ ಕಲ್ತಿದ್ದನ್ನ ನಾನು ಕಂಡಿಲ್ಲ. ಆಮೇಲೆ, ಅವನಷ್ಟು ನೀಟಾಗಿ ಮತ್ತು ಗಟ್ಟಿಮುಟ್ಟಿಯಾಗಿ ಬೂಟುಗಳನ್ನು ಹೊಲಿಯೋದು ನಮ್ಮ ಈ ಇಡೀ ಜಿಲ್ಲೆಯಲ್ಲೇ ಇಲ್ಲ. ಅವನಿಗೆ ಈಗ ಹೆಸರು ಬಂದಿದೆ ಕೂಡ. ಈಗ ಜನ ದೂರ ದೂರದಿಂದ ಬರ್‍ತಾ ಇದಾರೆ ಇಲ್ಲಿ ಬೂಟು ಮಾಡಿಸ್ಕೊಂಡು ಹೋಗಲಿಕ್ಕೆ. ನಾವಿನ್ನ ಬಹಳ ಬೇಗ ಅನುಕೂಲಸ್ಥರೂ ಆಗಬಹುದು.

ಮ್ಯಾತ್ರಿಯೋನಾ : ಅದೇನೇ ಇದ್ರು, ಅವತ್ತಿನಿಂದ ಇವತ್ತಿನವರೆಗೆ ನನಗೆ ಅವನೊಬ್ಬ ನಿಗೂಢ ಮನುಷ್ಯನಾಗೇ ಉಳಿದಿದ್ದಾನೆ. ಅಂದ್ಹಾಗೆ, ಅವನೆಲ್ಲಿ ?

ಸೈಮನ್ : ಯಾರಿಗೋ ಬೂಟು ಕೊಟ್ಟು ಬರ್‍ಲಿಕ್ಕೆ ಹೋಗಿದಾನೆ.

ಮ್ಯಾತ್ರಿಯೋನಾ : ಅವನ ಆ ಬೆಂಚು ಯಾವತ್ತೂ ಖಾಲಿಯಾಗಿರೋದನ್ನ ನಾ ಕಾಣೆ. ಅವನು ಯಾವಾಗ್ಲೂ ಕೆಲ್ಸ ಮಾಡ್ತಾ ಇರ್‍ತಾನೆ. ಮೌನವಾಗಿ. ತುಂಬ ವಿಚಿತ್ರ. ಅವಶ್ಯಕತೆ ಇದ್ದಾಗಷ್ಟೆ ಅವನು ಮಾತಾಡೋದು. ತಮಾಷೆ ಮಾಡಲ್ಲ, ನಗಲ್ಲ. ಆಮೇಲೆ ಒಂದು ಸಲ ಬಿಟ್ರೆ- ಅದೇ ಆ ಒಂದು ಸಲ ಬಿಟ್ರೆ- ಅವನು ಯಾವತ್ತೂ ನಕ್ಕಿದ್ದೇ ನಾನು ನೋಡಿಲ್ಲ. ಏನು ಗೊತ್ತಾ, ಅಪ್ಪ, ನನಗನೇಕ ಸಲ ಅನ್ಸುತ್ತೆ, ಏನಾದ್ರೂ ಒಂದು ವಿಚಿತ್ರವಾದದ್ದು ನಡೆಯುತ್ತೆ ಮತ್ತು ನಾನು ಅವನನ್ನ ಕಳಕೊಳ್ತೇವೆ ಅಂತ.

ಸೈಮನ್ : ದೇವರು ಆ ದಿನ ಬಾರದ ಹಾಗೆ ಮಾಡಲಿ! ಈ ಮನುಷ್ಯ ತುಂಬ ಒಳ್ಳೆ ಕೆಲಸಗಾರ.

(ಬಾಗಿಲು ತೆರೆಯುತ್ತದೆ. ಮೈಕಲ್‌ನ ಪ್ರವೇಶ. ಹಳ್ಳಿಗನ ಬಟ್ಟೆ ಧರಿಸಿದ್ದಾನೆ. ಒಳಗೆ ಬಂದು, ಸದ್ದಿಲ್ಲದೆ ತನ್ನ ಬೆಂಚಿನೆಡೆ ನಡೆದು ಕೆಲಸ ಪ್ರಾರಂಭಿಸುತ್ತಾನೆ. ಇವರು ಕೆಲಸ ಪ್ರಾರಂಭಿಸಿರುವ ಸ್ವಲ್ಪ ಹೊತ್ತಿಗೇ ಹೊರಗಡೆ ಸ್ಲೆಜ್* ಗಾಡಿಯ ಗಂಟೆಯ ಶಬ್ದ ಕೇಳಿಸುತ್ತದೆ. ಕೂಡಲೇ ಮ್ಯಾತ್ರಿಯೋನಾ ಬಾಗಿಲೆಡೆ ನಡೆಯುತ್ತಾಳೆ.)

ಮ್ಯಾತ್ರಿಯೋನಾ : ಓ, ಎಂಥ ಚೆಂದದ ಗಾಡಿ! ಎಷ್ಟು ಸುಂದರವಾದ ಕುದುರೆಗಳು! ಆಮೇಲೆ, ಸೇವಕರು! ಯಾರೋ ದೊಡ್ಡ ಮನುಷ್ಯರ ಗಾಡಿ ಇರಬೇಕು... ಗಾಡಿ ಇಲ್ಲೇ ನಿಲ್ಲೋ ಹಾಗೆ ಕಾಣುತ್ತೆ... ಸೇವಕರು ಇಳೀತಿದಾರೆ.... ಓ, ಹೌದು, ಆ ಮನುಷ್ಯ ಕೂಡ!...... ಆತ ಇಲ್ಲಿಗೆ ಬರ್‍ತಾ ಇದಾನೆ. (ಅವಳು ಗಾಬರಿಗೊಂಡು ಬಾಗಿಲನ್ನು ಮುಚ್ಚುತ್ತಾಳೆ.) ಸೈಮನ್, ಯಾರೋ ದೊಡ್ಡ ಮನುಷ್ಯರು ನಮ್ಮ ಮನೇ ಕಡೇನೇ ಬರ್‍ತಾ ಇದಾರೆ!

(ಸೈಮನ್ ಮೇಲೇಳುತ್ತಾನೆ, ಅವರು ಆತಂಕದಲ್ಲಿ ಕಾಯುತ್ತಾರೆ. ಮೈಕಲ್ ಮಾತ್ರ ಯಾವ ಚಿಂತೆಯಿಲ್ಲದೆ, ತನ್ನ ಪಾಡಿಗೆ ತಾನು, ಕೆಲಸ ಮಾಡುತ್ತಲೇ ಇದ್ದಾನೆ. ಜೋರಾಗಿ ಬಾಗಿಲು ತಟ್ಟಿದ ಶಬ್ದ. ಮ್ಯಾತ್ರಿಯೋನಾ ಗಾಬರಿಯಿಂದ ಬಾಗಿಲು ತೆರೆಯುತ್ತಾಳೆ. ಭರ್ಜರಿ ಪೋಷಾಕಿನಲ್ಲಿರುವ ಕುಲೀನನೊಬ್ಬ ಠೀವಿಯಿಂದ ಒಳ ಬರುತ್ತಾನೆ.)

ಕುಲೀನ : ನೀನೇನಾ ನಿಪುಣ ಮೋಚಿ?

ಸೈಮನ್ : ಹೌದು, ಮಹಾಸ್ವಾಮಿ.

ಕುಲೀನ : (ಬಾಗಿಲಾಚೆ ಕೂಗುತ್ತಾ) ಫೇದ್ಕಾ, ಆ ಚರ್ಮ ತಗೊಂಡು ಬಾ..... (ಒಬ್ಬ ಸೇವಕ ಚರ್ಮ ಕೈಯಲ್ಲಿ ಹಿಡಿದುಕೊಂಡು ಓಡಿ ಬರುತ್ತಾನೆ.) ಇಲ್ಲಿ ಕೊಡು ಅದನ್ನ ನನಗೆ... ನೋಡಯ್ಯಾ, ಮೋಚಿ, ಈ ಚರ್ಮ ನೋಡಿದ್ಯಾ?

ಸೈಮನ್ : ನೋಡಿದೆ, ಮಹಾಸ್ವಾಮಿ.

ಕುಲೀನ : ಇದು ಎಂಥ ಚರ್ಮ ಅಂತ ನಿನಗೆ ಗೊತ್ತಾ?

ಸೈಮನ್ : ಇದು ಒಳ್ಳೆ ಚರ್ಮ.

ಕುಲೀನ : ಒಳ್ಳೆ ಚರ್ಮ! ಏ, ಮೂರ್ಖ, ಇಂಥ ಚರ್ಮವನ್ನು ನೀನು ನಿನ್ನ ಜೀವಮಾನದಲ್ಲೇ ನೋಡಿಲ್ಲ. ಇದು ಪರದೇಶದ್ದು. ಇದಕ್ಕೆ ಇಪ್ಪತ್ತು ರೂಬಲ್ಲು ಕೊಟ್ಟೆ.

ಸೈಮನ್ : (ಆಶ್ಚರ್ಯಚಕಿತನಾಗಿ) ಇಪ್ಪತ್ತು ರೂಬಲ್ಲಾ! ನಾನು ಇಂಥ ಚರ್ಮಾನ ಎಲ್ಲಿ ನೋಡಲಿಕ್ಕೆ ಸಾಧ್ಯ?

ಕುಲೀನ : ನಾನೂ ಅದೇ ಹೇಳಿದ್ದು. ಈಗ ನೀನು ಇದರಿಂದ ನನಗೆ ಬೂಟು ಮಾಡಿಕೊಡ್ಲಿಕ್ಕೆ ಆಗುತ್ತಾ?

ಸೈಮನ್ : ಮಾಡಿಕೊಡಬಲ್ಲೆ, ಮಹಾಸ್ವಾಮಿ.

ಕುಲೀನ : ಮಾಡಿಕೊಡಬಲ್ಲೆಯಾ? ಸರಿ, ನೀನು ಬೂಟು ಯಾರಿಗೆ ಮಾಡಿಕೊಡ್ತಾ ಇದೀಯ ಅನ್ನೋದು ನೆನಪಿರಲಿ. ಆಮೇಲೆ, ಚರ್ಮ ಎಂಥದ್ದು ಅನ್ನೋದೂ ನೆನಪಿರಲಿ. ಒಂದು ವರ್ಷ ಬಾಳಿಕೆ ಬರೋವಂಥದ್ದು ಮಾಡಿಕೊಡಬೇಕು. ಆಕಾರಾನೂ ಕೆಡಬಾರದು, ಹೊಲಿಗೇನೂ ಬಿಚ್ಚಿ ಹೋಗಬಾರದು. ನಿನ್ನ ಕೈಲಿ ಆಗುತ್ತೆ ಅನ್ನೋದಾದರೆ, ಈ ಚರ್ಮ ತಗೋ ಮತ್ತು ಕೆಲಸ ಶುರುಮಾಡು. ಆದರೆ, ನಿನ್ನ ಕೈಲಾಗಲ್ಲ ಅನ್ನೋದಾದರೆ, ಹಾಗಲ್ಲಂತ ಹೇಳು. ನಾನೀಗ್ಲೇ ಎಚ್ಚರಿಕೆ ಕೊಡ್ತಾ ಇದೀನಿ?- ನೀನೇನಾದರೂ ಈ ಚರ್ಮ ಹಾಳು ಮಾಡಿದರೆ, ನಾನು ನಿನ್ನನ್ನು ಜೈಲಿಗೆ ಹಾಕಿಸ್ತೀನಿ.

ಸೈಮನ್ : ಮಹಾಸ್ವಾಮಿ!

ಕುಲೀನ : ಆದ್ರೆ, ನೀನು ಒಳ್ಳೆ ಬೂಟುಗಳನ್ನು ಮಾಡಿಕೊಟ್ಟರೆ- ಅದೇ, ನಾನು ಹೇಳಿದ ರೀತಿಯಲ್ಲಿ- ನಾನು ನಿನ್ನ ಕೆಲಸಕ್ಕೆ ಹತ್ತು ರೂಬಲ್ಲು ಕೊಡ್ತೇನೆ. ಮಾಡ್ತಿಯಾ?

ಸೈಮನ್ : ಹತ್ತು ರೂಬಲ್ಲು ಅಂದ್ರಾ....

ಕುಲೀನ : ಹೌದು, ಹತ್ತು ರೂಬಲ್ಲು.- ಯಾಕೆ?

ಸೈಮನ್ : ಆಯ್ತು ಮಹಾಸ್ವಾಮಿ, ಮಾಡಿಕೊಡ್ತೀನಿ.

ಕುಲೀನ : ಸರಿ, ಹಾಗಾದರೆ ನನ್ನ ಅಳತೆ ತಗೋ. (ಕುಲೀನನು ಕುಳಿತುಕೊಂಡಾಗ ಅವನ ಸೇವಕನು ಆತನ ಒಂದು ಬೂಟನ್ನು ತೆಗೆಯುತ್ತಾನೆ. ಸೈಮನ್ ಅಳತೆ ತೆಗೆದುಕೊಳ್ಳಲು ಶುರುಮಾಡುತ್ತಾನೆ) ಆಮೇಲೆ, ಬೂಟು ತುಂಬ ಬಿಗಿ ಇರಬಾರದು! ಗೊತ್ತಾಯ್ತಾ?

ಸೈಮನ್ : ಗೊತ್ತಾಯ್ತು ಮಹಾಸ್ವಾಮಿ.

(ಅನುಷ್ಕಾ ಕುಣಿದಾಡುತ್ತಾ, ಕೂಗುತ್ತಾ ಕೋಣೆಯೊಳ ಬರುತ್ತಾಳೆ- ಅಲ್ಲಿ ಕುಲೀನನ ಇರುವಿಕೆಯನ್ನು ಗಮನಿಸದೆ.)

ಮ್ಯಾತ್ರಿಯೋನಾ : (ಅಂಥ ಗಲಾಟೆಯನ್ನು ಕಂಡು ಕುಲೀನನು ಎಲ್ಲಿ ಸಿಟ್ಟಾಗುತ್ತಾನೋ ಎಂಬ ಭಯದಿಂದ) ಅನುಷ್ಕಾ!

(ಹುಡುಗಿಯು ಕುಲೀನನನ್ನು ನೋಡಿ ಗಾಬರಿಯಿಂದ ಮೆಲ್ಲನೆ ಹೋಗಿ ತನ್ನ ತಾಯಿಯ ಲಂಗದಲ್ಲಿ ಮುಖ ಮರೆ ಮಾಡುತ್ತಾಳೆ.)

ಕುಲೀನ : ಈ ಮಗು ನಿನ್ದೊ?

ಮ್ಯಾತ್ರಿಯೋನಾ : ಹೌದು, ಮಹಾಸ್ವಾಮಿ.

(ಈಗ ಅಳತೆ ತೆಗೆದುಕೊಂಡಾಗಿದೆ; ಕುಲೀನ ಮೇಲೇಳುತ್ತಾನೆ)

ಕುಲೀನ : ಸರಿ. ಇಲ್ನೋಡು, ಚರ್ಮ ಹಾಳು ಮಾಡೀಯ, ಜೋಕೆ! (ಈಗ ಅವನು ಮೈಕಲ್ಲನನ್ನು ಗಮನಿಸುತ್ತಾನೆ. ಮೈಕಲ್ ತನ್ನ ಪಾಡಿಗೆ ತಾನು ಮೌನವಾಗಿ ಕೆಲಸ ಮಾಡುತ್ತಿದ್ದಾನೆ) ಇದ್ಯಾರು ಇಲ್ಲಿ?

ಸೈಮನ್ : ಆತ ನನ್ನ ಕೆಲಸಗಾರ, ಅವನೇ ಬೂಟು ಹೊಲಿಯೋದು

ಕುಲೀನ : ಏನು? ಇವನಾ? (ಅವನು ಮೈಕಲ್ಲನ ಕಡೆ ದರ್ಪದಿಂದ ನಡೆದು ಬರುತ್ತಾನೆ.) ಏನಯ್ಯಾ, ಒಂದು ವರ್ಷ ಬಾಳಿಕೆ ಬರೋ ಹಾಗೆ ಬೂಟು ಮಾಡಬೇಕು, ಗೊತ್ತಾಯ್ತಾ? ಆಕಾರಾನೂ ಕೆಡಬಾರದು, ಹೊಲಿಗೇನೂ ಬಿಚ್ಚಿ ಹೋಗಬಾರದು.

(ಮೈಕಲ್ ತಾನು ಕುಳಿತಿದ್ದ ಸ್ಥಳದಿಂದ ನಿಧಾನವಾಗಿ ಮೇಲೇಳುತ್ತಾನೆ. ಅವನ ಬೆನ್ನು ಪ್ರೇಕ್ಷಕರ ಕಡೆಗಿದೆ. ಅವನು ಕುಲೀನನ್ನು ದಿಟ್ಟಿಸಿ ನೋಡುತ್ತಾ ನಿಂತಿದ್ದಾನೆ. ಮ್ಯಾತ್ರಿಯೋನಾ ಸೈಮನ್ನನ ಕೈಯನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾಳೆ.)

ಮ್ಯಾತ್ರಿಯೋನಾ : (ಪಿಸುಮಾತಿನಲ್ಲಿ) : ಸೈಮನ್! ಅಲ್ನೋಡಿ! ಮೈಕಲ್ಲನ್ನ ನೋಡಿ! ಮೈಕಲ್ಲನ ಮುಖ ನೋಡಿ! ಮುಗುಳ್ನಗ್ತಾ ಇದಾನೆ!

ಸೈಮನ್ : (ಪಿಸು ದನಿಯಲ್ಲಿ) ದೇವರು ನಮ್ಮನ್ನ ಕಾಪಾಡಬೇಕು!

ಮ್ಯಾತ್ರಿಯೋನಾ : ಅವನು ಒಂದು ವರ್ಷದ ಹಿಂದೆ ಹೇಗೆ ನಕ್ಕಿದ್ದನೋ ಹಾಗೇನೇ.

ಕುಲೀನ : (ಕಸಿವಿಸಿಯಿಂದ, ಒರಟು ದನಿಯಲ್ಲಿ) ... ಅದೇನು ಹಾಗೆ ಹಲ್ಲು ಕಿರೀತೀಯ, ಮೂರ್ಖ! ನಿಲ್ಲಿಸು! ನಿಲ್ಲಿಸು ಹಲ್ಲು ಕಿರಿಯೋದನ್ನ!

(ಕುಲೀನನು ಅವನಿಗೆ ಹೊಡೆಯಲೆಂಬಂತೆ ಮುಂದೆ ಬರುತ್ತಾನೆ, ಆದರೆ ಮರುಕ್ಷಣವೇ ಕದಲದೆ ನಿಂತುಬಿಡುತ್ತಾನೆ. ಹಿಂದೆ ಮುಂದೆ ನೋಡಿ, ಕೊನೆಗೆ

ಬಾಗಿಲತ್ತ ನಡೆಯುತ್ತಾನೆ.) ನೀನು ಇಲ್ಲಿ ಹೀಗೆ ನಗ್ತಾ ನಿಲ್ಲೋದರ ಬದಲು, ನಾನು ಹೇಳಿದ ಹಾಗೆ ಬೂಟು ಹೊಲಿದು ಕೊಡು. ಹಾಗೆ ಮಾಡಿದರೆ ನೀನು ನಿನ್ನ ಯಜಮಾನನಿಗೆ ಹತ್ತು ರೂಬಲ್ಲು ಸಂಪಾದಿಸಿ ಕೊಟ್ಟ ಹಾಗಾಗುತ್ತೆ. ಆದರೆ, ಚರ್ಮ ಏನಾದರೂ ಹಾಳಾಯ್ತೊ ಏ, ಹಲ್ಲು ಕಿರಿಯೋ ಮೂರ್ಖ, ನಿನಗೂ ಅವನಿಗೂ ಜೈಲುವಾಸ. ಗೊತ್ತಾಯ್ತಾ... ಬಾ, ಫೇದ್ಕಾ.

(ಕುಲೀನ ಮತ್ತು ಅವನ ಸೇವಕ ಹೊರ ನಡೆಯುತ್ತಾರೆ. ಮೈಕಲ್ ಚಲಿಸದೇ ಹಾಗೇ ನಿಂತಿದ್ದಾನೆ. ಸೈಮನ್ ಮತ್ತು ಅವನ ಹೆಂಡತಿ ಅವನನ್ನೇ ನೋಡುತ್ತಾ ನಿಲ್ಲುತ್ತಾರೆ.)

ಸೈಮನ್ : (ಚರ್ಮವನ್ನು ಜ್ಞಾಪಿಸಿಕೊಂಡು): ಅದ್ಭುತವಾದ ಚರ್ಮ. ಮೈಕಲ್ ನೀನದನ್ನು ಕತ್ತರಿಸು. ಜಾಗರೂಕತೆಯಿಂದ. ಚರ್ಮ ಹಾಳಾದರೆ, ನಮ್ಮ ಕಥೆ ಮುಗೀತು ಅಂತ. ತಗೋ! (ಅವನು ಚರ್ಮವನ್ನು ಮೈಕಲ್ಲನಿಗೆ ಕೊಡುತ್ತಾನೆ.) ತಾಳು, ಮೊದ್ಲು ನಾನು ನಿನಗೆ ಅಳತೆ ಕೊಡ್ತೀನಿ. (ಅಳತೆಯನ್ನು ಕೊಡುತ್ತಾ.) ನೀನು ನನಗಿಂತಲೂ ಒಳ್ಳೆಯ ಕೆಲಸಗಾರ. ಹೂಂ, ಚೆನ್ನಾಗಿ ಕತ್ತರಿಸಬೇಕು. ಈ ಹಿಂದೆ ಯಾವತ್ತೂ ಕತ್ತರಿಸದಷ್ಟು ಕರೆಕ್ಟಾಗಿ. (ಆದರೆ ಅಳತೆಗಾಗಿ ಕಾಯದೆ ಮೈಕಲ್ಲನು ಚರ್ಮವನ್ನು ಮಡಚಿ, ನಿರ್ಭಯವಾಗಿ ಕತ್ತರಿಸಿ ಎರಡು ಭಾಗ ಮಾಡುತ್ತಾನೆ.)

ಸೈಮನ್ : (ದಿಗ್ಭ್ರಾಂತನಾಗಿ): ಅಯ್ಯೋ ದೇವರೆ! ಇದೇನು ಮಾಡಿದೆಯಪ್ಪ, ಮೈಕಲ್! (ಮೈಕಲ್ ಅದನ್ನು ಉದ್ದೇಶಪೂರ್ವಕವಾಗಿ ಮತ್ತೆ ಕತ್ತರಿಸುತ್ತಾನೆ.) ಚರ್ಮ ಹಾಳಾಗಿ ಹೋಯ್ತು. ಅಯ್ಯೋ ದೇವರೆ! ನಮ್ಮ ಕಥೆ ಮುಗೀತು! ನಮಗೆ ಜೈಲಿಗೆ ಕಳಿಸ್ತಾರೆ! ಮ್ಯಾತ್ರಿಯೋನಾ, ಅನುಷ್ಕಾ- ಈ ಪುಟ್ಟ ಮಗು- ನಮ್ಮ ಮನೆ.... ಎಲ್ಲ ಮುಗಿದು ಹೋಯ್ತು ಅಂತಾನೇ ಲೆಕ್ಕ! ಆ ಕುಲೀನನಿಗೆ ಸಿಟ್ಟು ಬರೋದಂತೂ ಖಂಡಿತ ಮತ್ತು ನಾವು ಅಸಹಾಯಕರಾಗಿ ಬಿಡ್ತೇವೆ... ನಾವೇನೂ ಮಾಡಾಕಾಗಲ್ಲ.... ಮೈಕಲ್, ನೀನು ಯಾವತ್ತೂ ತಪ್ಪು ಮಾಡಿದವನಲ್ಲ. ಈಗ ಯಾಕೆ ಹೀಗೆ ಮಾಡಿದೆ? ನೀನು ಮಾಡಿರೋ ತಪ್ಪು ನಮ್ಮನ್ನ ದುರ್ಗತಿಗೆ ತಳ್ಳಿಬಿಡುತ್ತೆ! (ಮೈಕಲ್ ಏನು ಮಾಡಿದ್ದಾನೆ ಎಂಬುದನ್ನು ಪರೀಕ್ಷಿಸುತ್ತಾ) ಎಲ್ಲ ಹಾಳಾಯ್ತು- ಪೂರ್ತಿ ಹಾಳಾಯ್ತು! ಓ, ಅಮ್ಮ, ಅಮ್ಮ, ನಾವು ಸತ್ತೆವು ಅಂತಾನೇ! ಇದರಿಂದ ಈಗ ಯಾವ ಬೂಟೂ ಮಾಡಾಕಾಗಲ್ಲ. ಮೆತ್ತನೆಯ ಚಪ್ಪಲಿ ಮಾಡಬಹುದು, ಅಷ್ಟೇನೆ!

(ಕುಲೀನನ ಸೇವಕ ಮರಳಿ ಬಂದು ದಢಾರನೆ ಒಳ ನುಗ್ಗುತ್ತಾನೆ. ಅವನು ತುಂಬ ಕ್ಷೋಭೆಗೊಂಡಿದ್ದಾನೆ.)

ಸೇವಕ : ನಾನು ಬೂಟ್ಸ್ ಬಗ್ಗೆ ವಾಪಸ್ಸು ಬಂದಿದ್ದೇನೆ.

ಸೈಮನ್ : ಬೂಟ್ಸ್ ಬಗ್ಗೇನಾ?

ಸೇವಕ : ಹೌದು, ನನ್ನೊಡೆಯನಿಗೆ ಅದಿನ್ನು ಬೇಕಿಲ್ಲ.

ಸೈಮನ್ : (ಅದೇ ಮಾತನ್ನು ತಾನೂ ಹೇಳುತ್ತಾ) ನಿಮ್ಮೊಡೆಯನಿಗೆ ಅದಿನ್ನು ಬೇಕಿಲ್ಲವಾ?

ಸೇವಕ : ಹೌದು, ಅವರು ಸತ್ತರು!...... ಅವರು ಸ್ಲೆಜ್ ಗಾಡಿಯಲ್ಲಿ ತಮ್ಮ ಹೆಂಡತಿಯ ಜೊತೆ ಕೂತ ನಂತರ ನಾವೆಲ್ಲ ಹೊರಟಾಗ, ಕುದುರೆಗಳಿಗೆ ಬಾರುಕೋಲು ಬಾರಿಸಿದ ಕೂಡಲೇ ಅವು ಜೋರಾಗಿ ಓಡಿದವು. ವಿಪರೀತ ಜೋರಾಗಿ ನಮ್ಮ ಯಜಮಾನಿಯವರು ಹೆದರಿಕೊಂಡು ಗಾಡಿ ನಿಲ್ಲಿಸಲಿಕ್ಕೆ ಕೂಗಿದರು... ನಾವು ಇಳಿದು ನಮ್ಮ ಧಣಿಯವರ ಕಡೆ ಹೋಗೋದ್ರೊಳಗೆ ಅವರು ಗಾಡಿ ಕೆಳಕ್ಕೆ ಬಿದ್ದು ಸತ್ತು ಹೋದ್ರು.... ಈಗ ನಮ್ಮ ಒಡತಿ ನನಗೆ ಇಲ್ಲಿಗೆ ವಾಪಸ್ಸು ಕಳಿಸಿದಾರೆ. ಈಗ ನೀವು ಬೂಟು ತಯಾರಿಸೋದೇನೂ ಬೇಕಿಲ್ಲ. ಶವಕ್ಕೆ ಅಂತ ಮೆತ್ತನೆಯ ಚಪ್ಪಲಿ ಸಾಕಂತೆ.

ಸೈಮನ್ : (ನಿಧಾನವಾಗಿ, ನಂಬಲಿಕ್ಕೆ ಸಾಧ್ಯವಿಲ್ಲ ಎನ್ನುವಂತೆ): ಶವಕ್ಕೆ ಮೆತ್ತನೆಯ ಚಪ್ಪಲಿಗಳಾ?....

ಸೇವಕ : ಹೌದು, ನಾನು ಅವನ್ನ ತಗೊಂಡು ಹೋಗ್ಲಿಕ್ಕೆ ನಾಳೆ ಬರ್ತೀನಿ. ಬರ್ತೀನಿ ಕಣ್ರಪ್ಪ. (ನಿಷ್ಕ್ರಮಣ)

ಸೈಮನ್ : ಶವಕ್ಕೆ ಮೆತ್ತನೆಯ ಚಪ್ಪಲಿಗಳು!......

(ಸೈಮನ್ ಮತ್ತು ಮ್ಯಾತ್ರಿಲೋನಾ ಮೈಕಲ್ಲನನ್ನು ದಿಟ್ಟಿಸಿ ನೋಡುತ್ತಾರೆ. ಅವನು ಕೆಳಗೆ ಕುಳಿತು ಚಪ್ಪಲಿಯ ಕೆಲಸಕ್ಕೆ ತೊಡಗಿದ್ದಾನೆ. ರಂಗಸ್ಥಳದ ಮೇಲೆ ಕತ್ತಲು.)

ದೃಶ್ಯ-೩

(ಈಗ ರಂಗ ಸ್ಥಳದ ಮೇಲೆ ಪುನಃ ಬೆಳಕು. ಸಂಧ್ಯಾಸಮಯ. ಮೈಕಲ್ ಮತ್ತು ಸೈಮನ್ ಕೆಲಸದಲ್ಲಿ ನಿರತರಾಗಿದ್ದಾರೆ. ಅನುಷ್ಕ ನೆಲದ ಮೇಲೆ ಬಣ್ಣಬಣ್ಣದ ಚೆಂದದ ಆಟದ ಸಾಮಾನುಗಳ ಜೊತೆ ಆಟವಾಡುತ್ತಿದ್ದಾಳೆ. ಮ್ಯಾತ್ರಿಯೋನಾ ಮನೆಗೆಲಸದಲ್ಲಿ ತೊಡಗಿದ್ದಾಳೆ.

ಯಾರೊ ಮೆಲ್ಲಗೆ ಬಾಗಿಲ ತಟ್ಟಿದ ಶಬ್ದ. ತಕ್ಷಣ ಕೋಣೆಯಲ್ಲಿನ ಕೆಲಸ ನಿಲ್ಲುತ್ತದೆ. ಈಗ ಮತ್ತೊಮ್ಮೆ, ಸ್ವಲ್ಪ ಜೋರಾಗಿ, ಬಾಗಿಲು ಬಡಿತ.)

ಸೈಮನ್ : ಇಷ್ಟು ತಡವಾಗಿ ಯಾವ ಗಿರಾಕಿಗಳು ಬರ್ತಾರೆ!

ಮ್ಯಾತ್ರಿಯೋನಾ : ಯಾರು ನೋಡು, ಅನುಷ್ಕಾ.

(ಅನುಷ್ಕ ಬಾಗಿಲು ತೆರೆಯುತ್ತಾಳೆ. ಹೊರಗಿದ್ದವರು ಕೆಲವು ಹೆಜ್ಜೆ ಹಿಂದೆ ಹೋಗಿದ್ದಾರೆ. ಅನುಷ್ಕ ಮರೆಯಾಗುತ್ತಾಳೆ. ಮರುಕ್ಷಣ ವಾಪಸ್ಸು ಬರುತ್ತಾಳೆ.)

ಅನುಷ್ಕಾ : ಯಾರೊ ಒಬ್ಬರು ಹೆಂಗಸರು ಬಂದಿದಾರೆ. ಅವರ ಜೊತೆ ಎರಡು ಸಣ್ಣ ಮಕ್ಕಳೂ ಇವೆ. ಅದರಲ್ಲೊಬ್ಬ ಹುಡುಗೀದು ಕಾಲು ಸರಿ ಇಲ್ಲ. (ಮೈಕಲ್ ಕತ್ತೆತ್ತಿ ನೋಡುತ್ತಾನೆ; ಬೆಂಚಿನಿಂದ ಮೇಲೇಳುತ್ತಾನೆ. ಬಾಗಿಲಲ್ಲಿ ಒಬ್ಬ ಹೆಂಗಸು ನಿಂತಿದ್ದಾಳೆ. ಅವಳ ಜೊತೆಯಲ್ಲಿ ಎರಡು ಪುಟ್ಟ ಮಕ್ಕಳು ಇವೆ. ಒಂದು ಮಗುವಿನ ಕಾಲು ಕುಂಟು. ಮೈಕಲ್ಲನಿಗೆ ಅವರನ್ನು ನೋಡಿ ಮರುಕ ಉಂಟಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ.)

ಹೆಂಗಸು : ನಮಸ್ಕಾರ, ಇವರೆ.

ಸೈಮನ್ : ನಮಸ್ಕಾರ.

ಹೆಂಗಸು : ಈ ಮಕ್ಕಳಿಗೆ ಷೂಸ್ ಮಾಡಿಸಬೇಕಿತ್ತು.

ಸೈಮನ್ : ಒಳಗೆ ಬನ್ನಿಯಮ್ಮ. ಎಂಥ ಷೂಸ್ ಬೇಕಿತ್ತು?

ಹೆಂಗಸು : ಚರ್ಮದ್ದು. ಈಗ ಬರೋ ವಸಂತಕಾಲಕ್ಕೆ ಅಂತ.

ಸೈಮನ್ : ಮಾಡಿಕೊಡ್ತೀವಿ.

(ಮೈಕಲ್ಲನು ಭಾವಪೂರ್ಣತೆಯಿಂದ ಆ ಇಬ್ಬರು ಮಕ್ಕಳನ್ನೇ ದಿಟ್ಟಿಸಿ ನೋಡುತ್ತಿದ್ದಾನೆ. ಎಲ್ಲರ ಕಣ್ಣು ತನ್ನ ಕಡೆಗೇ ಇದೆ ಎಂಬುದರ ಅರಿವಾಗಿ ಅವನು ಸ್ವಲ್ಪ ಮರೆಯಾಗುತ್ತಾನೆ.)

ಹೆಂಗಸು : ನೀವು ಈಗ ಅಳತೆ ತಗೊಳ್ತೀರಾ?

ಸೈಮನ್ : ಹೂಂ.

ಹೆಂಗಸು : (ಕುಂಟ ಮಗುವನ್ನು ತನ್ನ ತೊಡೆಯಮೇಲೆ ಕೂರಿಸಿಕೊಳ್ಳುತ್ತಾ) ಈ ಹುಡುಗಿಯ ಎರಡೂ ಅಳತೆ ತಗೊಳ್ಳಿ. ಕುಂಟ ಕಾಲಿಗೆ ಒಂದು ಮಾಡಿ,

ಸರಿ ಇರೋ ಕಾಲಿಗೆ ಮೂರು ಮಾಡಿ. ಆಮೇಲೆ, ಆ ಇನ್ನೊಂದು ಹುಡುಗೀಗೆ ಎರಡು ಜೊತೆ ಮಾಡಿ. ಇಬ್ಬರದೂ ಒಂದೇ ಅಳತೆ- ಇವರು ಅವಳಿ ಜವಳಿ.

ಸ್ಟೆಮನ್ : (ಅಳತೆ ತೆಗೆದುಕೊಳ್ಳುತ್ತಾ): ಪಾಪ, ಈ ಹುಡುಗೀಗೆ ಹೀಗ್ಯಾಕೆ ಆಯ್ತೋ? ಎಷ್ಟು ಸುಂದರವಾಗಿದಾಳೆ! ಅಂದ್ಹಾಗೆ, ಇವಳು ಹುಟ್ಟಿದಾಗ್ಲೇ ಕಾಲು ಹೀಗಿತ್ತಾ?

ಹೆಂಗಸು : ಇಲ್ಲ. ಅವಳ ಅಮ್ಮನಿಂದಾಗಿ ಹಾಗೆ ಆಗಿದ್ದು.

ಮ್ಯಾತ್ರಿಯೋನಾ : ಅಂದ್ರೆ, ನೀವು ಇವರ ತಾಯಿಯಲ್ವಾ?

ಹೆಂಗಸು : ಅಲ್ಲ. ನಾನು ಇವರ ತಾಯೀನೂ ಅಲ್ಲ, ಸಂಬಂಧೀನೂ ಅಲ್ಲ. ಇವರು ನನಗೆ ಗೊತ್ತೂ ಇರಲಿಲ್ಲ. ಆದರೂ ನಾನು ಈ ಮಕ್ಕಳನ್ನ ಸಾಕಿದೆ.

ಮ್ಯಾತ್ರಿಯೋನಾ : ಇವರು ನಿಮ್ಮ ಮಕ್ಕಳಲ್ಲದಿದ್ದರೂ ನೀವು ಇವರನ್ನ ಎಷ್ಟು ಪ್ರೀತಿಸ್ತೀರಲ್ವಾ?

ಹೆಂಗಸು : ಪ್ರೀತಿಸ್ದೇ ಇರಲಿಕ್ಕೆ ಹ್ಯಾಗೆ ಸಾಧ್ಯ? ನಾನಿವರನ್ನ ಸಾಕಿದೀನಿ. ನನಗೂ ಒಂದು ಮಗು ಇತ್ತು. ಆದರೆ ದೇವರು ಅವನನ್ನು ಬೇಗ ಕರಕೊಂಡುಬಿಟ್ಟ. ನಿಜ ಹೇಳಬೇಕೂಂದ್ರೆ, ಇವತ್ತು ಈ ಮಕ್ಕಳನ್ನ ಕಂಡರೆ ನನಗೆಷ್ಟು ಪ್ರೀತೀನೋ ಅಷ್ಟು ಪ್ರೀತಿಯೇನೂ ಇರ್ಲಿಲ್ಲ ನನಗೆ ಆ ಮಗು ಮೇಲೆ.

ಮ್ಯಾತ್ರಿಯೋನಾ : ಇವರು ಯಾರ ಮಕ್ಕಳು?

(ಅನುಷ್ಕ ಆ ಇನ್ನೊಂದು ಹುಡುಗಿಯ ಜೊತೆ ಆಗಲೇ ಸ್ನೇಹ ಬೆಳೆಸಿ ಅವಳನ್ನ ಆಟಿಕೆಗಳಿರುವ ಕಡೆ ಕರೆದೊಯ್ದಿದ್ದಾಳೆ. ಅಳತೆ ತೆಗೆದುಕೊಂಡ ಕೂಡಲೇ ಕುಂಟ ಹುಡುಗಿ ಅವರ ಜೊತೆ ಸೇರುತ್ತಾಳೆ. ಈಗ ಆ ಮೂವರು ಜೊತೆಗೂಡಿ ನೆಲದ ಮೇಲೆ ಆಡುತ್ತಿದ್ದಾರೆ.)

(ಹಗಲಿನ ಬೆಳಕು ಕಡಿಮೆಯಾಗುತ್ತಾ ಹೋದಂತೇ, ಕೋಣೆಯಲ್ಲಿನ ಬೆಳಕು ಕ್ಷೀಣಿಸುತ್ತದೆ. ಟೇಬಲ್ಲಿನ ಮೇಲೊಂದು ದೀಪವಿದೆಯಾದರೂ ಕೋಣೆಯಲ್ಲಿ ಎಲ್ಲ ಮಸುಕು ಮಸುಕು. ದೂರದ ಮೂಲೆಯಲ್ಲಿರುವ ಮೈಕಲ್ ಸರಿಯಾಗಿ ಕಾಣಿಸುತ್ತಿಲ್ಲ ಕೂಡ.)

ಹೆಂಗಸು : ಈ ಮಕ್ಕಳ ತಂದೆ-ತಾಯಿಗಳು ಒಂದು ವಾರದ ಅವಧಿಯಲ್ಲೇ ತೀರಿಕೊಂಡರು. ನಾನು-ನನ್ನ ಗಂಡ ಅವರಿದ್ದ ಹಳ್ಳಿಯಲ್ಲೇ ಇದ್ದವರು. ಇವರ ತಂದೆ ಕಾಡಿನಲ್ಲಿ ಮರ ಕಡಿಯುವವನಾಗಿದ್ದ. ಒಂದು ದಿನ ಮರ ಕಡಿಯೋವಾಗ ಒಂದು ಮರ ಅವನ ಮೈಮೇಲೆ ಬಿದ್ದು ಅವನು ಸತ್ತು

ಹೋದ. ಅದೇ ವಾರ ಅವನ ಹೆಂಡತಿ ಈ ಇಬ್ಬರು ಮಕ್ಕಳನ್ನು ಹೆತ್ತಳು. ಪಾಪ, ಬಡವಿ, ಒಂಟಿ ಹೆಂಗಸು. ಅವಳೂ ಸತ್ತಳು. ಬೆಳಿಗ್ಗೆ ನಾನು ಅವಳನ್ನು ನೋಡ್ಲಿಕ್ಕೆ ಹೋದಾಗ ಅವಳು ಆಗಲೇ ಸತ್ತಿದ್ದಳು. ಅವಳು ಸಾಯೋ ಹೊತ್ನಲ್ಲಿ ಒಂದು ಮಗುವಿನ ಮೈಮೇಲೆ ಉರುಳಿ ಬಿದ್ದುಬಿಟ್ಟಿದ್ದಳು. ಹಾಗಾಗಿ ಆ ಮಗೂನ ಕಾಲೇ ಜಜ್ಜಿ ಹೋಯ್ತು. ಹಳ್ಳಿಯ ಜನ ಗುಡಿಸಿಲಿಗೆ ಬಂದರು, ಶವದ ಮೈ ತೊಳೆದರು, ಶವಪೆಟ್ಟಿಗೆ ತಯಾರಿಸಿ, ಶವವನ್ನು ಹೂಳಿ ಬಂದರು. ಒಳ್ಳೆ ಜನ. ಪಾಪ, ಪುಟಾಣಿ ಮಕ್ಕಳು ಗತಿ ಇಲ್ಲದವರಂತಾದರು. ಅವರನ್ನ ಯಾರು ನೋಡ್ಕೋಬೇಕು? ಅಲ್ಲಿದ್ದ ಒಬ್ಬಳೇ ಹೆಂಗಸೆಂದರೆ ನಾನೇ. ನನಗೂ ಆಗ ಚಿಕ್ಕಮಗು ಇತ್ತು. ಹಾಗಾಗಿ ನಾನು ಆ ನನ್ನ ಮಗೂಗೆ ಮತ್ತು ಈ ಇಬ್ಬರು ಮಕ್ಕಳಿಗೆ ಹಾಲುಣ್ಣಿಸಿದೆ. ದೇವರ ಇಚ್ಛೆ- ಇವರಿಬ್ಬರೂ ಬೆಳೆದರು, ಆದರೆ ನನ್ನ ಸ್ವಂತ ಮಗು ಎರಡು ವರ್ಷ ತುಂಬೋ ಮೊದಲೇ ಸತ್ತು ಹೋಯಿತು. ನನಗೆ ಮತ್ತೆ ಮಕ್ಕಳೇನೂ ಆಗಲಿಲ್ಲ. ಈ ಮಕ್ಕಳು ಇಲ್ದೇ ಹೋಗಿದ್ದರೆ ನಾನು ಎಷ್ಟು ಒಂಟಿಯಾಗಿರಬೇಕಾಗಿತ್ತು! ನಾನು ಈ ಮಕ್ಕಳನ್ನ ಪ್ರೀತಿಸದೇ ಇರಲಿಕ್ಕೆ ಹ್ಯಾಗೆ ಸಾಧ್ಯ? ಇವು ನನ್ನ ಕಣ್ಮಣಿಗಳು..... (ಅವಳು ಈಗ ಮೇಲೆದ್ದು, ನೆಲದ ಮೇಲೆ ಆಡುತ್ತಿರುವ ಮಕ್ಕಳನ್ನು ನೋಡುತ್ತಾಳೆ) ಆಮೇಲೆ, ನಿಮ್ಮ ಈ ಮಗು ಎಷ್ಟು ಚೆನ್ನಾಗಿದೆ! (ಅವಳು ಮ್ಯಾತ್ರಿಯೋನಾ ಕಡೆಗೆ ತಿರುಗಿ) ನಾವು ತುಂಬ ಅದೃಷ್ಟವಂತರು. ಬನ್ನಿ, ಮಕ್ಕಳೆ, ಹೋಗೋಣ. ಟಾಟಾ ಅನ್ನಿ ಇವರಿಗೆ. ಹೊತ್ತಾಯ್ತು. ವಾಪಸ್ ಹೋಗಬೇಕೀಗ.

(ಕುಂಟು ಮಗುವನ್ನೆತ್ತಿಕೊಳ್ಳುತ್ತಾಳೆ.)

ಮ್ಯಾತ್ರಿಯೋನಾ : ನೀವು ಈ ಕಡೆಯರಲ್ಲವಾ?

ಹೆಂಗುಸು : ಅಲ್ಲ, ನಾವು ಇಲ್ಲಿ ಸ್ನೇಹಿತರೊಬ್ಬರ ಮನೇಲಿ ಇಳಕೊಂಡಿದೀವಿ. ಅವರೇ ನಿಮ್ಮ ಹತ್ತಿರ ಕಳಿಸಿದ್ದು- ಷೂಸ್‌ಗಾಗಿ. ಬೇಗ ರೆಡಿಯಾಗಿರ್ತವೆ ತಾನೆ?

ಸೈಮನ್ : ಎರಡು ದಿನದಲ್ಲಿ.

ಹೆಂಗುಸು : ಒಳ್ಳೇದು. ಬರ್‍ತೀನಿ.

ಸೈಮನ್ : (ಅವಳಿಗಾಗಿ ಬಾಗಿಲು ತೆರೆಯುತ್ತಾ) ಹೋಗಿ ಬನ್ನಿ, ನಮಸ್ಕಾರ.

ಮ್ಯಾತ್ರಿಯೋನಾ : ಸೈಮನ್, ಅವರಿಗೆ ದಾರಿ ತೋರ್‍ಸಿ. ಪಾಪ, ಆ ಮಗೂಗೆ ಕಷ್ಟ..... ಹೋಗಿ ಬನ್ನಿ, ಮಕ್ಕಳೆ. (ಅವಳು ಇಬ್ಬರು ಮಕ್ಕಳಿಗೂ ಮುತ್ತು ಕೊಡುತ್ತಾಳೆ.) ಮತ್ತೆ ಬನ್ನಿ. ನಿಮ್ಮ ಷೂಸ್ ತಗೊಂಡು ಹೋಗ್ಲಿಕ್ಕೆ ಮತ್ತು ಅನುಷ್ಕಾ ಜೊತೆ ಆಡ್ಲಿಕ್ಕೆ.

ಅನುಷ್ಕಾ : ನಾನೂ ಅಪ್ಪನ ಜೊತೆ ಹೋಗ್ಲಾ?

ಮ್ಯಾತ್ರಿಯೋನಾ : ಹೋಗಬಹುದು, ರಸ್ತೆ ತನಕ..... ಅಯ್ಯೋ, ತುಂಬ ಕತ್ತಲೆಯಾಗಿದೆಯಲ್ಲ! ಈ ದೀಪ ತಗೊಂಡು ಹೋದ್ರೆ ವಾಸಿ.

(ಮ್ಯಾತ್ರಿಯೋನಾ ದೀಪವನ್ನೆತ್ತಿಕೊಂಡು ಬಾಗಿಲವರೆಗೆ ಬರುತ್ತಾಳೆ. ಅಲ್ಲಿ ಅವಳು ಅದನ್ನು ಮೇಲಕ್ಕೆ ಹಿಡಿಯುತ್ತಾಳೆ. ಹೋಗುತ್ತಿರುವವರಿಗೆ ದಾರಿ ಕಾಣಲೆಂದು. ಅವಳು ಅವರಿಗೆ ಬೀಳ್ಕೊಟ್ಟು, ಕೈಯಲ್ಲಿ ದೀಪ ಹಿಡಿದುಕೊಂಡೇ ಹೊರಗೆ ಹೋಗುತ್ತಾಳೆ. ಈಗ ಕೋಣೆಯಲ್ಲಿ ಕತ್ತಲು. ಸ್ವಲ್ಪ ಹೊತ್ತಿನ ನಂತರ ಮೈಕಲ್ ಇದ್ದ ಮೂಲೆಯಿಂದ ಒಂದು ವಿಚಿತ್ರ ಬೆಳಕು. ಪ್ರಕಾಶಿಸಲಾರಂಭಿಸುತ್ತದೆ. ಅದು ಕ್ರಮೇಣ ಹೆಚ್ಚು ಪ್ರಕಾಶಮಾನವಾಗುತ್ತಾ ಹೋದಾಗ ಆ ಬೆಳಕಲ್ಲಿ ಮೈಕಲ್ ಸ್ಪಷ್ಟವಾಗಿ ಕಾಣಿಸುತ್ತಾನೆ.)

(ಮ್ಯಾತ್ರಿಯೋನಾ ಕೋಣೆಗೆ ಹಿಂತಿರುಗಿ ಬರುತ್ತಾಳೆ. ಸೀದಾ ಟೇಬಲ್ಲ ಬಳಿ ಹೋಗಿ ದೀಪವನ್ನು ಅದರ ಮೇಲೆ ವಾಪಸ್ಸು ಇಡುತ್ತಾಳೆ. ಅವಳು ತಿರುಗಿ ನೋಡುವ ತನಕವೇನೂ ಮೈಕಲ್ಲನನ್ನು ಗಮನಿಸಿರಲಿಲ್ಲ. ಆನಂತರ)

ಮ್ಯಾತ್ರಿಯೋನಾ : (ಭಯಚಕಿತಳಾಗಿ, ಮೆಲುದನಿಯಲ್ಲಿ) ಸೈಮನ್!.... ಸೈಮನ್!..... (ಸೈಮನನ್ನು ಅನುಷ್ಕಾ ಜೊತೆ ಹಿಂತಿರುಗಿ ಬರುತ್ತಾನೆ.) ಇಲ್ನೋಡಿ, ಮೈಕಲ್ ಮತ್ತೆ ಮುಗುಳ್ನಗ್ತಾ ಇದಾನೆ..... ನಾನು ಅದನ್ನ ನೋಡಲಾರೆ!

ಸೈಮನ್ : (ಅಚ್ಚರಿಯ, ತಗ್ಗಿದ ದನಿಯಲ್ಲಿ) ಮೈಕಲ್..... ಮೈಕಲ್, ಈಗ ನಿನಗೆ ನೋಡಿದರೆ ಹೆದರಿಕೆಯಾಗುತ್ತಲ್ಲ. ನಿನ್ನ ಮುಖ ಯಾಕೆ ಹಾಗೆ ಹೊಳೆಯುತ್ತೆ ಅಂತ ಹೇಳ್ತೀಯಾ?

ಮೈಕಲ್ : ಯಾಕೆ ಅಂದ್ರೆ, ನನಗೆ ಶಿಕ್ಷೆ ಆಗಿ, ಈಗ ಕ್ಷಮೆ ಸಿಕ್ಕಿದೆ.

ಸೈಮನ್ : ಆದ್ರೆ ನೀನು ಯಾಕೆ ಹಾಗೆ ಮುಗುಳ್ನಗ್ತೀಯ? ಆಮೇಲೆ, ಈಗ ಒಟ್ಟು ಮೂರು ಸಲ ಯಾಕೆ ಹಾಗೆ ನಕ್ಕಿದೀಯ?

ಮೈಕಲ್ : ಹೌದು, ನಾನು ಮೂರು ಸಲ ನಕ್ಕಿದ್ದೇನೆ. ಯಾಕೆಂದರೆ ನಾನು ಮೂರು ಸತ್ಯಗಳನ್ನು ತಿಳಕೊಳ್ಳಲಿಕ್ಕೆ ಅಂತ ಕಳಿಸಲ್ಪಟ್ಟಿದ್ದೆ. ಮತ್ತು ನಾನು ಅವನ್ನು ತಿಳಕೊಂಡೆ..... ಮೊದಲನೇ ಸತ್ಯವನ್ನ ನಾನು ತಿಳಕೊಂಡಿದ್ದು ಯಾವಾಗೆಂದರೆ ನಿಮ್ಮ ಹೆಂಡತಿ ನನ್ನ ಮೇಲೆ ಕರುಣೆ ತೋರಿಸಿದಾಗ. ಅದಕ್ಕೆ ನಾನು ಮೊದಲ ಸಲ ನಕ್ಕಿದ್ದು. ಎರಡನೆಯ ಸತ್ಯವನ್ನು ನಾನು

ತಿಳಕೊಂಡಿದ್ದು ಯಾವಾಗೆಂದರೆ ಆ ಶ್ರೀಮಂತ ಮನುಷ್ಯ ಹೊಸ ಬೂಟು ಮಾಡಿಕೊಡ್ಲಿಕ್ಕೆ ಹೇಳಿದಾಗ. ಅದಕ್ಕೆ ನಾನು ಎರಡನೆಯ ಸಲ ನಕ್ಕಿದ್ದು. ಮತ್ತೀಗ ನಾನು ಮೂರನೆಯ ಸತ್ಯವನ್ನು ಕಂಡುಕೊಂಡಿದೀನಿ. ಅದಕ್ಕೇ ನಾನು ಮೂರನೇ ಸಲ ನಕ್ಕಿರೋದು.

ಸೈಮನ್ : (ಗೌರವದ ದನಿಯಲ್ಲಿ) ಮೈಕಲ್, ನಿನಗೆ ಶಿಕ್ಷೆ ಯಾಕಾಯ್ತು? ಆಮೇಲೆ, ಆ ಮೂರು ಸತ್ಯಗಳ್ಯಾವುವು? ಹೇಳು, ಯಾಕಂದ್ರೆ ನಾನೂ ಅವನ್ನ ತಿಳಕೊಂಡ್ಹಂಗೆ ಆಗುತ್ತೆ.

ಮೈಕಲ್ : ನಾನು ಸ್ವರ್ಗದಲ್ಲಿ ದೇವತೆಯಾಗಿದ್ದವನು. ಆದರೆ ನಾನು ದೇವರ ಆಜ್ಞೆಯನ್ನು ಪಾಲಿಸಲಿಲ್ಲ. (ಟೇಬಲ್ಲ ಮೇಲಿನ ದೀಪದ ಮಂದ ಬೆಳಕಿನಲ್ಲಿ ನಾವು ಸೈಮನ್, ಮ್ಯಾತ್ರಿಯೋನಾ ಮತ್ತು ಅನುಷ್ಕಾ ಇವರ ಆಕೃತಿಗಳನ್ನು ಮಸಕು ಮಸುಕಾಗಿ ಕಾಣಬಹುದು. ಮೈಕಲ್ಲನ ಪ್ರಭಾವಳಿಯಿಂದಾಗಿ ಆ ದೀಪದ ಬೆಳಕು ಮಂಕಾಗಿ ಕಾಣುತ್ತಿದೆ. ಮ್ಯಾತ್ರಿಯೋನಾ ಮಂಡಿಯೂರಿದ್ದಾಳೆ, ಮತ್ತು ಪುಟ್ಟ ಹುಡುಗಿಯು ತಾಯಿಯನ್ನು ಗಮನಿಸಿ ತಾನು ಮಂಡಿಯೂರುತ್ತಾಳೆ.) ದೇವರು ನನ್ನನ್ನು ಒಬ್ಬ ಹೆಂಗಸಿನ ಪ್ರಾಣವನ್ನು ತರಲಿಕ್ಕೆ ಕಳಿಸಿದ್ದ. ನಾನು ಹಾರಿ ಭೂಲೋಕಕ್ಕೆ ಬಂದೆ. ಆಗ ನರಳುತ್ತಾ ಮಲಗಿದ್ದ ಒಬ್ಬ ಹೆಂಗಸನ್ನು ಕಂಡೆ. ಅವಳು ಆಗ ತಾನೆ ಎರಡು ಹೆಣ್ಣುಮಕ್ಕಳನ್ನು ಹೆತ್ತಿದ್ದಳು. ಅವಳು ನನ್ನನ್ನು ನೋಡಿದಾಗ ಅವಳಿಗೆ ಅರ್ಥವಾಯಿತು. ಆಗ ಅವಳು ಅತ್ತಳು. ಆಮೇಲೆ, ಹೇಳಿದಳು : ''ಓ, ದೇವದೂತನೆ, ನನ್ನ ಗಂಡನ ಶವಸಂಸ್ಕಾರ ಈಗಷ್ಟೆ ಆಗಿದೆ - ಆತನ ಮೈಮೇಲೆ ಅವನು ಕಡಿಯುತ್ತಿದ್ದ ಮರವೊಂದು ಬಿದ್ದಿತ್ತು. ಈಗ ಈ ಮಕ್ಕಳನ್ನು ನೋಡ್ಕೋಳೋರು ಯಾರು? ನಾನು ಸಾಯುವುದಕ್ಕಿಂತ ಮುಂಚೆ ಇವರನ್ನು ಬೆಳೆಸೋರು ಯಾರು? ತಂದೆ ತಾಯಿಗಳಿಲ್ಲದೆ ಮಕ್ಕಳಾದ್ರೂ ಹ್ಯಾಗೆ ಬದುಕ್ತಾರೆ?''

ನಾನು ಅವಳ ಮಾತನ್ನು ಕೇಳ್ದೆ. ಆಗ ದೇವರ ಹತ್ತಿರ ಹೋಗಿ ಹೇಳಿದೆ ''ಅವಳ ಗಂಡ ಈಗ ತಾನೆ ಸತ್ತಿದಾನೆ, ಮತ್ತು ಅವಳಿಗೆ ಈಗ ಎರಡು ಮಕ್ಕಳು ಹುಟ್ಟಿವೆ. ನಾನು ಅವಳ ಪ್ರಾಣ ತರಲಿಕ್ಕಾಗಲಿಲ್ಲ.'' ಆಗ ದೇವರು ಹೇಳಿದ : ''ಹೋಗು, ಅವಳ ಪ್ರಾಣ ತೆಗಿ ಮತ್ತು ಮೂರು ಸತ್ಯಗಳನ್ನು ತಿಳಿದುಕೊಂಡು ಬಾ - ಮನುಷ್ಯನಲ್ಲಿ ಏನು ಇದೆ; ಮನುಷ್ಯನಲ್ಲಿ ಏನು ಇಲ್ಲ; ಮತ್ತು ಮನುಷ್ಯರು ಯಾವುದರಿಂದ ಬದುಕಿರುತ್ತಾರೆ ಎಂಬುದನ್ನು. ನೀನು ಈ ಮೂರು ವಿಷಯಗಳನ್ನು ತಿಳಿದುಕೊಂಡಾಗ ಸ್ವರ್ಗಕ್ಕೆ ವಾಪಸ್ಸು ಬರಬಹುದು.''

ಹಾಗಾಗಿ ನಾನು ಪುನಃ ಭೂಮಿಗೆ ಬಂದೆ, ಮತ್ತು ಆ ತಾಯಿಯ ಪ್ರಾಣವನ್ನು ತೆಗೆದುಕೊಂಡೆ, ಅವಳು ಉರುಳಿ ಬಿದ್ದಳು ಮತ್ತು ಹಾಗೆ ಬಿದ್ದಾಗ ಅವಳ ಒಂದು ಮಗುವಿಗೆ ಪೆಟ್ಟಾಗಿ ಅದರ ಒಂದು ಕಾಲು ಸೊಟ್ಟವಾಯಿತು. ನಾನು ಆ ಹಳ್ಳಿಯ ಮೇಲೆ ಹಾರಿ ಹೊರಟಿದ್ದೆ, ಆದರೆ ಗಾಳಿಯ ರಭಸಕ್ಕೆ ನನ್ನ ರೆಕ್ಕೆಗಳು ಮುರಿದುಬಿದ್ದವು. ಅವಳ ಆತ್ಮ ಮೇಲೇರಿತು, ಆದರೆ ನಾನು ನೆಲದ ಮೇಲೆ ಬಿದ್ದೆ - ರಸ್ತೆ ಪಕ್ಕದಲ್ಲಿ... ಆ ಹಿಂದೆ ಯಾವತ್ತೂ ನನಗೆ ಮನುಷ್ಯನ ಅಗತ್ಯಗಳೇನೆಂಬುದು ಗೊತ್ತಿರಲಿಲ್ಲ. ಆದರೆ ಆಗ ನನಗೆ ಹಸಿವಾಯಿತು, ನನ್ನ ಮೈ ಆ ಕೊರೆಯುವ ಚಳಿಯಲ್ಲಿ ನೋವು ಅನುಭವಿಸಿತು. ತಕ್ಷಣ ಯಾರೋ ಒಬ್ಬ ಮನುಷ್ಯ ಆ ರಸ್ತೆಯಲ್ಲಿ ಬರುತ್ತಿರುವ ಶಬ್ದ ನನಗೆ ಕೇಳಿಸಿತು. (ಈಗ ಸೈಮನ್ನನ ಒಂದು ಚಲನೆ. ಅವನು ಈ ಮಾತುಗಳನ್ನು ಭಾವೋದ್ವೇಗದಿಂದ ಕೇಳುತ್ತಿರುವುದು ಕಂಡು ಬರುತ್ತದೆ.) ದೇವತೆಯಾಗಿದ್ದ ನಾನು ಮನುಷ್ಯನಾದಾಗ ಮೊದಲ ಬಾರಿಗೆ ಒಬ್ಬ ಮನುಷ್ಯನ ಯಾತನಾಭರಿತ ಮುಖವನ್ನು ನೋಡಿದೆ. ಅವನು ನನ್ನನ್ನು ನೋಡಿದಾಗ ಮುಖ ಗಂಟಿಕ್ಕಿದ. ನನಗೆ ಅವನು ಭಯಂಕರವಾಗಿ ಕಂಡ. ಅನಂತರ ಅವನು ನನ್ನಿಂದ ಆಚೆ ತಿರುಗಿ ಹೋದ. (ಸೈಮನ್ ಮೆಲ್ಲಗೆ ನರಳುತ್ತಾನೆ. ಕೈಯಲ್ಲಿ ತಲೆ ಹುದುಗಿಸಿ, ದೇವತೆಗೆ ಬಾಗಿ ನಮಸ್ಕರಿಸುತ್ತಾನೆ.) ನನಗೆ ಕಳವಳ ಉಂಟಾಯಿತು. ಆದರೆ ತಕ್ಷಣ ಅವನು ಹಿಂತಿರುಗಿ ಬರುತ್ತಿರುವುದು ಕೇಳಿಸಿತು. ನಾನು ತಲೆಯೆತ್ತಿ ನೋಡಿದೆ. ಆದರೆ ಆಗ ಅವನು ಮೊದಲಿನಂತಿರಲಿಲ್ಲ. ಮುಂಚೆ ನಾನು ಅವನ ಮುಖದಲ್ಲಿ ಸಾವನ್ನು ಕಂಡಿದ್ದೆ, ಆದರೆ ಈಗ ಅವನು ಜೀವಂತನಾಗಿದ್ದ, ಮತ್ತು ನಾನು ಅವನಲ್ಲಿ ದೇವರ ಇರುವಿಕೆಯನ್ನು ಕಂಡೆ. (ಈಗ ಸೈಮನ್ ತಲೆಯತ್ತಿ ಪುನಃ ನೆಟ್ಟಗೆ ನಿಲ್ಲುತ್ತಾನೆ.) ಅವನು ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋದ. ಅಲ್ಲೊಬ್ಬ ಹೆಂಗಸಿದ್ದಳು. (ಮ್ಯಾತ್ರಿಯೋನಾ ಮಂಡಿಯೂರಿದ್ದಾಳೆ.) ಅವಳು ಅವನಿಗಿಂತ ಹೆಚ್ಚು ಭಯಂಕರವಾಗಿದ್ದಳು; ಸಾವು ಅವಳಲ್ಲಿ ಮನೆಮಾಡಿದಂತಿತ್ತು. ಅದನ್ನು ಕಂಡು ನನ್ನ ಉಸಿರೇ ಕಟ್ಟಿಹೋದಂತಾಯಿತು. ಅವಳು ನನ್ನನ್ನು ಆ ಕೊರೆಯುವ ಚಳಿಯಲ್ಲಿ ಹೊರಗಟ್ಟುವವಳಿದ್ದಳು. ಅವಳು ಹಾಗೆ ಮಾಡಿದ್ದಿದ್ದರೆ ಅವಳು ಸತ್ತು ಹೋಗುತ್ತಿದ್ದಳು ಎಂಬುದು ನನಗೆ ಗೊತ್ತಿತ್ತು. (ಮ್ಯಾತ್ರಿಯೋನಾ ಮುಲುಗುತ್ತಾಳೆ.) ಆದರೆ ಅವಳು ಒಮ್ಮೆಲೆ ಬದಲಾದಳು; ನನಗೆ ಊಟಕ್ಕಿಕ್ಕಿದಳು. ಆಗ ನಾನವಳನ್ನು ನೋಡಿದಾಗ ಅವಳಲ್ಲಿ ಈ ಹಿಂದೆ ಮನೆಮಾಡಿದ್ದ ಸಾವು ಈಗ ಇರಲಿಲ್ಲ. ಅವಳೀಗ ಜೀವಂತ

ವ್ಯಕ್ತಿಯಾಗಿದ್ದಳು, ಮತ್ತು ನಾನು ಅವಳಲ್ಲಿ ಕೂಡ ದೇವರನ್ನು ಕಂಡೆ. ಆಗ ನನಗೆ ನನ್ನ ಮೊದಲ ಪಾಠ ನೆನಪಾಯಿತು : ''ಮನುಷ್ಯನಲ್ಲಿ ಏನು ಇದೆ ಎಂಬುದನ್ನು ತಿಳಿದುಕೊಂಡು ಬಾ'' ಅನ್ನುವುದು. ಆಗ ನನಗೆ ಗೊತ್ತಾಯಿತು - ಮನುಷ್ಯನಲ್ಲಿ ಪ್ರೀತಿ ಇದೆ ಅಂತ. ಹಾಗಾಗಿ ನಾನು ಆ ಮೊದಲ ಸಲ ಮುಗುಳ್ನಕ್ಕೆ.

ಒಂದು ವರ್ಷ ಕಳೆಯಿತು. ಆಗ ಒಬ್ಬ ಮನುಷ್ಯ ಬಂದ. ಒಂದು ವರ್ಷ ಬಾಳಿಕೆ ಬರುವಂಥ ಬೂಟುಗಳನ್ನು ಮಾಡಿಕೊಡು ಅಂದ. ಆಗ ನಾನು ನನ್ನ ಮಿತ್ರನಾದ ಸಾವಿನ ದೇವತೆಯನ್ನು ಅವನ ಬೆನ್ನ ಹಿಂದೆಯೇ ಕಂಡೆ. ಆಗ ನನಗೆ ಗೊತ್ತಾಯಿತು - ಸೂರ್ಯ ಮುಳುಗುವ ಮುನ್ನವೇ ಸಾವಿನ ದೇವತೆಯು ಆ ಮನುಷ್ಯನ ಪ್ರಾಣವನ್ನು ತೆಗೆಯುತ್ತಾನೆ ಅಂತ. ಆಗ ನನಗೆ ನನ್ನ ಎರಡನೆಯ ಪಾಠ ನೆನಪಾಯಿತು. : ''ಮನುಷ್ಯನಲ್ಲಿ ಏನು ಇಲ್ಲ ಎಂಬುದನ್ನು ತಿಳಿದುಕೊಂಡು ಬಾ'' ಅನ್ನುವುದು. ಆಗ ನನಗೆ ಗೊತ್ತಾಯಿತು. - ಮನುಷ್ಯನಿಗೆ ತನ್ನ ಅಗತ್ಯಗಳು ಏನು ಎಂಬುದು ತಿಳಿದಿಲ್ಲ ಅಂತ. ಹಾಗಾಗಿ ನಾನು ಆ ಎರಡನೆಯ ಸಲ ಮುಗುಳ್ನಕ್ಕೆ.

ಮತ್ತೆ ಒಂದು ವರ್ಷ ಕಳೆಯಿತು. ಆಗ ಒಬ್ಬ ಹೆಂಗಸಿನ ಜೊತೆ ಇಬ್ಬರು ಪುಟ್ಟ ಹೆಣ್ಣುಮಕ್ಕಳು ಬಂದರು. ಅವರು ಹೇಗೆ ಬದುಕುಳಿದಿದ್ದರು ಎಂಬುದನ್ನು ನಾನು ಕೇಳಿದ್ದೆ. ಆಗ ನನಗೆ ಮೂರನೆಯ ಸತ್ಯ ಗೊತ್ತಾಯಿತು. ಹಾಗಾಗಿ ನಾನು ಆ ಮೂರನೆಯ ಸಲ ಮುಗುಳ್ನಕ್ಕೆ ... (ದೇವತೆಯ ದನಿಯಲ್ಲಿ ವಿಜಯದ ಸಂತಸ ಸೂಸುತ್ತದೆ)... ನನಗೆ ತಿಳಿಯಿತು ಎಲ್ಲ ಮನುಷ್ಯರೂ ಪ್ರೀತಿಯಿಂದ ಬದುಕುತ್ತಾರೆಯೇ ವಿನಹ ಸ್ವಾರ್ಥದಿಂದಲ್ಲ ಅಂತ. ನಾನು ಮನುಷ್ಯನಾಗಿ ಬದುಕಿದ್ದುದು ನನಗೆ ನನ್ನ ಬಗ್ಗೆಯೇ ಇದ್ದ ಕಾಳಜಿಯಿಂದಾಗಿ ಅಲ್ಲ, ಬದಲಿಗೆ ನನ್ನ ಬಗ್ಗೆ ಆ ದಾರಿಹೋಕನಿಗೆ ಪ್ರೀತಿ ಇದ್ದುದಕ್ಕಾಗಿ, ಮತ್ತು ಅವನು ಹಾಗೂ ಅವನ ಹೆಂಡತಿ ನನ್ನ ಮೇಲೆ ಕರುಣೆ ತೋರಿಸಿದ್ದಕ್ಕಾಗಿ ಅಂತ. ಆಮೇಲೆ, ಆ ಅನಾಥ ಮಕ್ಕಳು ಬದುಕಿದ್ದುದು ತಾಯಿ ಅವರನ್ನು ನೋಡಿಕೊಂಡಿದ್ದಕ್ಕಾಗಿ ಅಲ್ಲ, ಬದಲಿಗೆ ಯಾರೋ ಒಬ್ಬ ಅಪರಿಚಿತ ಹೆಂಗಸಿನ ಹೃದಯದಲ್ಲಿ ಅವರ ಬಗ್ಗೆ ಕರುಣೆ ಮತ್ತು ಪ್ರೀತಿ ಇದ್ದುದಕ್ಕಾಗಿ.... ಜನ ತಮ್ಮ ಹಿತಚಿಂತನೆಯಿಂಧಾಗಿ ಬದುಕಿರುತ್ತಾರೆ ಅಂತ ತಿಳಿದಿರುತ್ತಾರೆ, ಆದರೆ ವಾಸ್ತವವಾಗಿ ಅವರು ಬದುಕಿರುವುದು ಪ್ರೀತಿಯಿಂದಾಗಿ. (ದೇವತೆಯು ಕೈಗಳನ್ನು ಮೇಲಕ್ಕೆ ತೋರಿಸುತ್ತಾನೆ.) ನಾನು ನನ್ನ ಮೂರನೆಯ ಪಾಠವನ್ನು

ಕಲಿತಿದ್ದೇನೆ : ಮನುಷ್ಯರು ಯಾವುದರಿಂದ ಬದುಕಿರುತ್ತಾರೆ ಎಂಬುದನ್ನು. ಅವರು ಬದುಕಿರುವುದು ಪ್ರೀತಿಯಿಂದ ಮಾತ್ರ.

(ಒಮ್ಮೆಲೆ ಕತ್ತಲು ಆವರಿಸುತ್ತದೆ... ಆನಂತರ, ನಮಗೆ ದೀಪದ ಬೆಳಕಲ್ಲಿ ಕಾಣಿಸುವುದು ಸೈಮನ್, ಮ್ಯಾತ್ರಿಯೋನಾ ಮತ್ತು ಅನುಷ್ಕಾ ಮಾತ್ರ.)

ತೆರೆ

Acknowledgement : "Michanel" miles malleson, "one-Act plays for students" Edited by mahavir P. Jain and Sunita Jain, S. Chand & Company Ltd, Ram Nagar, New Delhi-110055. 1986.

★ Sledge (ಸ್ಲೆಜ್) = ಹಿಮದ ಮೇಲೆ ಓಡಾಡಲು ರೂಪಿಸಿದ ಗಾಲಿಗಳಿಲ್ಲದ ಗಾಡಿ.

ಪ್ರೊ. ಶ್ರೀನಿವಾಸ್ ಏ. ಸುತ್ರಾವೆ, ನಂ. ೧೬೪೬/೧೮, ಮಹಡಿ, ''ಸಿದ್ದೇಶ್ವರ ನಿಲಯ'' ವಿದ್ಯಾನಗರ, ದಾವಣಗೆರೆ-೫೭೭ ೦೦೫.

ಎರಡು ಲಹರಿಗಳು

ತೆಲುಗು ಮೂಲ: **ಡಾ. ರಾವೂರಿ ಭರದ್ವಾಜ**
ಅನುವಾದ: **ಡಾ. ಎಚ್. ಎಸ್. ಸುಜಾತಾ**

"ನನ್ನನ್ನು ಕರೆದಿರಾ?" ಎಂದ ಆತ ಹಿಂದಿರುಗಿ.

"ಹೌದು" ಎಂಬಂತೆ ತಲೆಯಾಡಿಸಿತು ಆ ದೀಪ.

"ಏನು ಹೇಳಿ" ಎಂದ ಆತ ದೀಪದ ಬಳಿಗೆ ಸರಿಯುತ್ತ.

"ಈ ಗುಡಿಯ ಗೋಡೆಯ ಪಕ್ಕದಲ್ಲಿ, ಶಿಥಿಲವಾಗಿ ಬಿಟ್ಟಿರುವ ಒಂದು ಹುಲ್ಲಿನ ಜೋಪಡಿಯಿದೆ. ದಯಮಾಡಿ ನನ್ನನ್ನು ಅಲ್ಲಿಗೆ ಒಯ್ಯುತ್ತೀರಾ?" ಎಂದು ಆ ದೀಪ ಆತನನ್ನು ಗೋಗರೆಯಿತು.

ಆತ ಆ ದೀಪದ ಕಡೆಗೆ ಅಚ್ಚರಿಯಿಂದ ನೋಡಿದ.

"ಎಲ್ಲರೂ ಭಗವದ್ದರ್ಶನಕ್ಕಾಗಿ ತಹತಹಿಸುತ್ತಾರೆ. ಒಂದು ಕ್ಷಣ ಕಾಲ ದರ್ಶಿಸಲು ಎಷ್ಟೆಷ್ಟೋ ಯೋಜನೆಗಳ ದೂರದಿಂದ ಸಹ ಬರುತ್ತಾರೆ. ನಿಮ್ಮ ಜನ್ಮಜನ್ಮಾಂತರ ಸುಕೃತದಿಂದ ನಿಮಗೆ ಭಗವತ್ಸಾನ್ನಿಧ್ಯ ಲಭಿಸಿದೆ. ಈ ಮಹತ್ತರ ಅವಕಾಶವನ್ನು ಬೇಡವೆಂದು ನೀವು ಎಲ್ಲಿಗೋ ಹೋಗಿಬಿಡುತ್ತೇನೆ ಎನ್ನುತ್ತಿದ್ದೀರಿ. ಯಾಕಾಗಿ? ಇದು ಅರ್ಥಹೀನ ಅಲ್ಲವೇ?" ಎಂದ ಆತ.

"ಇದು ಅರ್ಥಹೀನವೋ ಅರ್ಥ ಪೂರ್ಣವೋ ನನಗೆ ತಿಳಿಯದು. ಆ ಹುಲ್ಲಿನ ಜೋಪಡಿಯಲ್ಲಿ ಇರುವ ಒಬ್ಬ ಹುಟ್ಟಾ ಬಡವಿ ಈಗ ತಾನೇ ಪ್ರಸವಿಸಿದ್ದಾಳೆ. ತನ್ನ ಮಗುವನ್ನು

ನೋಡಬೇಕೆಂದು ತಹತಹಿಸುತ್ತಿದ್ದಾಳೆ. ಕಗ್ಗತ್ತಲೆಯ ಕಾರಣದಿಂದ ಏನೂ ಕಾಣುತ್ತಿಲ್ಲ. ಆ ತಾಯಿಗೆ ಸ್ವಲ್ಪ ಸಹಾಯ ಮಾಡೋಣ ಎಂದುಕೊಳ್ಳುತ್ತಿದ್ದೇನೆ'' ಎಂದಿತು ಆ ದೀಪ ಆರ್ದ್ರ ನಯನಗಳೊಂದಿಗೆ.

★★★★

''ಕಿಂಚಿತ್ ಗಾಳಿಯೂ ಬೀಸುತ್ತಿಲ್ಲ. ಆದರೂ ಆ ಮರದ ಕೊಂಬೆ ತನ್ನ ಕೆಲಸವೆ ಅದು ಎಂಬಂತೆ ಅತ್ತ ಇತ್ತ ತೂಗುತ್ತಿದೆ. ಇಂತಹ ವಿಚಿತ್ರವನ್ನು ಈ ಮೊದಲು ನಾನೆಲ್ಲೂ ನೋಡಲಿಲ್ಲ'' ಎಂದ ಆತ.

''ತೂಗುತ್ತಿರುವ ಮರದ ಕೊಂಬೆಯನ್ನು ಮಾತ್ರವೇ ನೀವು ನೋಡುತ್ತಿದ್ದೀರಿ. ಆದರೆ ಅದಕ್ಕೆ ನೇತು ಹಾಕಿರುವ ಉಯ್ಯಾಲೆಯನ್ನು ನೋಡಲಿಲ್ಲ. ಆ ಉಯ್ಯಾಲೆಯಲ್ಲಿ ಒಂದು ಹಸುಕಂದ ಇರುವ ಸಂಗತಿ ನಿಮಗೆ ಅಸಲೇ ತಿಳಿದಿರುವುದಿಲ್ಲ. ಹೊಟ್ಟೆಯ ಕೂಳಿಗಾಗಿ, ದೂರವಾಗಿ ಇರುವ ಆ ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಿರುವ ಒಬ್ಬ ಬಡತಾಯಿ ತನ್ನ ಮಗುವನ್ನು ಇಲ್ಲಿ ಇರಿಸಿದ್ದಾಳೆ. ಮಗು ಅತ್ತರೆ ತನಗೆ ಕೇಳುತ್ತದೆಂದೂ ಆಗ ಬಂದು ಮಗುವಿಗೆ ಹಾಲೂಡಿಸಿ ಹೋಗಬಹುದೆಂದೂ ಆ ತಾಯಿಯ ಎಣಿಕೆ. ಆದರೆ ಹಾಗೆ ಪದೇ ಪದೇ ಮಗುವಿನ ಹತ್ತಿರಕ್ಕೆ ಬರಲು ಹೊಲದ ಯಜಮಾನ ಒಪ್ಪುವುದಿಲ್ಲ. ಒಂದು ವೇಳೆ ಒಪ್ಪಿದರೂ ಕೂಲಿಹಣ ಕಡಿಮೆ ಮಾಡುತ್ತಾನೆ. ಪೂರ್ತಿ ಕೂಲಿ ಕೊಟ್ಟರೂ ಸಾಕೂಸಾಕಾಗದೆ ಜೀವನ ಸಾಗಿಸುವ ಆ ತಾಯಿ, ಕಡಿಮೆ ಕೂಲಿಯಲ್ಲಿ ಬದುಕಲಾರಳೆಂದು ಆ ಮರಕ್ಕೆ ಗೊತ್ತು. ಆದ್ದರಿಂದಲೇ ಅತ್ತಿತ್ತ ತೂಗು ಎಂದು ತನ್ನ ಕೊಂಬೆಗೆ ಆ ಮರ ಹೇಳಿತು. ಮರತಾಯಿ ಹೇಳಿದಂತೆ ಕೊಂಬೆ ತೂಗಾಡುತ್ತಿದೆ. ಉಯ್ಯಾಲೆಯನ್ನೂ ತೂಗುತ್ತಿದೆ. ನಾನು ಸಹ ಈವರೆಗೆ ಆ ಮಗುವಿನ ಹತ್ತಿರವೇ ಇದ್ದು, ಜೋಗುಳ ಹಾಡಿ, ನಿದ್ದೆ ಮಾಡಿಸಿ, ಇತ್ತ ಬರುತ್ತಿದ್ದೇನೆ'' ಎಂದಿತು ಒಂದು ಕೊಡತಿ ಹುಳು.

ಆತ ಆ ಕೊಡತಿ ಹುಳದವರಿಗೆ ನಮಸ್ಕರಿಸಿದ.

ಡಾ. ಎಚ್.ಎಸ್. ಸುಜಾತಾ, ೫೩, 'ಸುಹಾಸ', ೪ನೇ ಮುಖ್ಯರಸ್ತೆ, ಮಾರುತಿ ದೇವಸ್ಥಾನದ ಬೀದಿ, ಕುವೆಂಪು ನಗರ, ಮೈಸೂರು-೫೭೦ ೦೦೯.

ಬೋಧಗಯೆ (ಕವಿತೆ)

ಮೈಥಿಲಿ ಮೂಲ: **ಪಂಕಜ ಪರಾಶರ**
ಅನುವಾದ: **ಡಿ. ಆರ್. ತುಕಾರಾಂ**

ಬೋಧಗಯೆಯಿಂದ ಬುದ್ಧ
ಹಿಂದಿರುಗುತ್ತ
ಗಂಗೆಯ ಆಚೆದಡ ಸೇರುತ್ತಲೇ
ನಾವಿಕ ನಿಷಾಧ ನುಡಿದ
ಪ್ರಭೂ ಬೋಧಿಸತ್ವ
ಬೋಧಗಯೆಗಿನ್ನು 'ಬೋಧ'ದ ಜರೂರತ್ತಿಲ್ಲ.
ಗಯೆಯಲ್ಲಿ ಗಯಾಸುರ
ಮಗಧದಲ್ಲಿ ಅಜಾತಶತ್ರು
ಎಲ್ಲೆಲ್ಲೂ ಎಲ್ಲರಿಗೂ ತಮ್ಮ ತಮ್ಮ
ಸಂದೇಹವೇ ಶತ್ರು!
'ರೋಧ' ದಲ್ಲಿ 'ವಿ' ಇರಲಿ
ಅಥವಾ 'ಅನು' ಉಪಸರ್ಗವಿರಲಿ
ಭಂತೇ!
ನಿಜವಾಗಿಯೂ
ಬೋಧಗಯೆಗಿನ್ನು 'ಬೋಧ'ದ ಜರೂರತ್ತೇ ಇಲ್ಲ.

ಸ್ಥವಿರ

ಮೈಥಿಲಿ ಮೂಲ: **ಪಂಕಜ ಪರಾಶರ**
ಅನುವಾದ: **ಡಿ. ಆರ್. ತುಕಾರಾಂ**

ಸ್ತ್ರೀಯೊಬ್ಬಳು
ಓಡುತ್ತೋಡುತ್ತ ತೇಕುತ್ತ
ಆರು ತಿಂಗಳಿನ ತನ್ನ ಶಿಶುವನ್ನು ಎದೆಗವಚಿಕೊಂಡು
ಕೊನೆಯ ಆಸೆಯ ಭರವಸೆಯೊಂದಿಗೆ
ಆಕೆ ತಲುಪುವಳು ಬೌದ್ಧ ವಿಹಾರ.
ಆದರೆ ತೆರೆಯಲ್ಲಿಲ್ಲ ದ್ವಾರ.

ಬಾಗಿಲೆದುರು ನಿಂತ ಮಹಿಳೆ ಕದ
ತಟ್ಟೇ ತಟ್ಟುತ್ತಾಳೆ ಎಡಬಿಡದೆ. ಕದ ಕದಲಲಿಲ್ಲ.
ಹೀಗೇ ಎಷ್ಟೋ ಕಾಲ, ಆದೆಷ್ಟೋ ಸ್ಥಳಗಳಲಿ
ಎಷ್ಟೋ ವಿಹಾರಗಳ ಬಾಗಿಲುಗಳನು
ತಟ್ಟಿದಳು. ತಟ್ಟೇ ತಟ್ಟಿದಳು ಅಸಂಖ್ಯಸಲ!

ಭಿಕ್ಷುಗಳ ದಂಡಿನೆದುರು ದಂಡಿದಂಡಿಯಾಗಿ
ಕೇಳುವ ಅವರ ಪ್ರಶ್ನೆಗಳ ಮೊನಚು ಬಾಣಗಳೆದುರು
ಆಕೆ ಸತ್ಯದ ಪರೀಕ್ಷೆ ಕೊಡುತ್ತಲೇ ಇದ್ದಳು.

ಈ ರೀತಿ
ಹತ್ಯೆ ಹಾಗೂ ಆತ್ಮಹತ್ಯೆಗಳ ನಡುವೆ
ಶೇಷ ಜೀವನದಲ್ಲಿ
ಎಡಬಿಡದೆ ಕ್ರೂರಪರೀಕ್ಷೆಗೊಳಪಡಿಸುತ್ತ
ಅವಳ ದಿನಗಳುರುಳುತ್ತಲಿವೆ-
ಅಂತ್ಯವಿಲ್ಲದ ಕಾಲಚಕ್ರದಡಿ.

ಪ್ರತುಲ್‌ನಿಂದ ಹಿಡಿದು ಭೂಧರ ಶರ್ಮ
ಚಕ್ರಧರ ಪುರೋಹಿತನ ವರೆಗೆ
ಹತ್ತಾರು ವ್ಯವಸಾಯಿಗಳ ಹತ್ತಾರು ಕರಗಳಲಿ
ಕೈಯಿಂದ ಕೈಗೆ ಬದಲಾಗುತ್ತಾ
ಬಟಾಬಯಲು ಭರ್ತಿ ಬಾಜಾರಿನಲ್ಲಿ
ಹರಾಜಾಗುತ್ತ, ಬಿಕರಿಯಾಗುತ್ತಾಳೆ
ಮೂಕಪಶುವಿನಂತೆ ದಾಸಿ ದಿವ್ಯಾ!

ದಾಸಿಗೆಲ್ಲುಂಟು ಅಭೀಪ್ಸೆ, ವಾಂಛೆ?
ಮನುಷ್ಯಳಾಗಿಯೂ
ಆಕೆ
ಪಾದುಕೆ!

ಪುತ್ರನ ಪ್ರಾಣರಕ್ಷಣೆಗಾಗಿ
ವಾತ್ಸಲ್ಯಮಯಿ ತಾಯಿ
ಓಡುತ್ತಲಿದ್ದಳು, ಓಡುತ್ತಲೇ ಇದ್ದಳು
ತೇಕುತ್ತ ತೇಕುತ್ತ ಮತ್ತೆ ಮತ್ತೆ ತಲುಪುತ್ತಲಿದ್ದಳು
ಬೌದ್ಧವಿಹಾರ.
ಆದರೆ
ಅವಳ ಆರ್ತ ಶರಣಾಗತಿಗೆ ಸಿಕ್ಕಿದ್ದು ಮಾತ್ರ
ತಿರಸ್ಕಾರ!
ಮಾರಣಾಂತಿಕ
ಪ್ರಹಾರ!

ಸ್ಥವಿರ!
ಓ! ಸ್ಥವಿರ!
ಪತಿ ಇಲ್ಲದ
ಪಿತನೂ ಇಲ್ಲದ
ಪತಿತೆ ಅನಾಥ ಅಬಲೆ
ಯಾರಲ್ಲಿ ಗೋಗರೆಯಬೇಕು
'ನನ್ನನ್ನು ದಾಸಿಯನ್ನಾಗಿ ಸ್ವೀಕರಿಸಿ' ಎಂದು?

ಸ್ಥವಿರ!
ಓ ಸ್ಥವಿರ!
ಬೌದ್ಧಮತದಲ್ಲಿ ಬುದ್ದಿಗೆ, ಹೃದಯಕ್ಕೆ ಕರುಣೆಗೆ
ಇಷ್ಟೊಂದು ಬರವೇ?

ಸ್ಥವಿರಾ!
ಅಯ್ಯಾ ಸ್ಥವಿರ! ಗೊತ್ತೇನಯ್ಯಾ ನಿನಗೆ?
ಸ್ತ್ರೀ ಎಲ್ಲರನ್ನೂ ತನ್ನವರೆಂದು ಪ್ರಾಂಜಲವಾಗಿ ಅಪ್ಪುತ್ತಾಳೆ.
ಆದರೆ
ಅದೇ ಸ್ತ್ರೀಯನ್ನು ಯಾರಪ್ಪಾ ತನ್ನವಳೆಂದು ಒಪ್ಪುತ್ತಾರೆ?

ಡಿ.ಆರ್. ತುಕಾರಾಂ, ನಿವೃತ್ತ ಅಧ್ಯಾಪಕ, ಜಯನಗರ, ಮುಧೋಳ-೫೮೭ ೩೧೩ . ಬಾಗಲಕೋಟ.(ಜಿ)

ಹುಲಿ (ಕವಿತೆ)

ಇಂಗ್ಲಿಷ ಮೂಲ: **ವಿಲಿಯಂ ಬ್ಲೇಕ**
ಅನುವಾದ: **ಬಿ.ಎಸ್. ದುಂಡರಡ್ಡಿ**

ಕಟ್ಟಡವಿಯ ನಡುವೆ ಕಾರಿರುಳ ಗರ್ಭದಲಿ
ಉರಿಗಣ್ಣ ಉಗ್ರ, ವ್ಯಗ್ರ ವ್ಯಾಘ್ರ!
ಆಜೇಯ ಉಕ್ಕು ನಖ, ಅತ್ಯುಗ್ರ ಕಣ್ಣುಮುಖ
ದಿಗ್ಭ್ರಮೆಯ ಸೃಷ್ಟಿಯಿದು ಕೌಶಲ್ಯ ಶಲ್ಯವೊ?

ಕಣ್ಣ ಕ್ರೌರ್ಯದ ಆಳ, ರುದ್ರ ಭೀಕರ ಮೇಳ,
ಉರಿ ಉರಿವ ಗೋಳ, ಭಯಾನಕ ಕರಾಳ
ಕಾಲರೆಕ್ಕೆ ತಾ; ತೆಕ್ಕೆಗೆ ಸಿಕ್ಕ ಬಹುದೇನ್?
ಅಗ್ನಿ ಗೋಲವ ತಬ್ಬಿ, ಉಳಿಯ ಬಹುದೇನ್?

ಹುರಿಗೈಯ್ದು ನರ ನರವ ಬಿಗಿಬಿಗಿದು,
ನಿನ್ನದೆಯ ಹೊಸೆದ ಕಲಾವಿದನಾರು?
ಮಿಂಚುಗೈ, ಸಿಡಿಲುಕಾಲ್ಗಳ ಹೊಡೆತ,
ಕೆಚ್ಚಿನ ಕ್ರೌರ್ಯದ ವಜ್ರಾಘಾತ!

ಯಾವ ಕುಲುಮೆಯ? ಯಾವ ಸ್ಥೂಣದ?
ಯಾವ ನಿಗಿನಿಗಿ ಲೋಹ ಕಿಡಿಕಿಡಿಯ,
ಘೋರಾತಿ ಘೋರ ಸರಣಿ ಪ್ರಹಾರಗಳ,
ಯಾವ ಕಮ್ಮಾರನ ಕೈಯ್ಯ ವಿನ್ಯಾಸ ನೀನು?

ಚೆಲ್ಲಿದವು ಚಿಕ್ಕೆಗಳು, ಭಲ್ಲೆಗಳನೆಲ್ಲೆಲ್ಲು,
ಸ್ವರ್ಗಸುರಿಸಿತು, ತನ್ನ ಕಂಬನಿಯ ಧಾರೆ.
ಮುಗ್ಧ ಕುರಿಮರಿಯನ್ನು ರೂಪಿಸಿದ ರೂವಾರಿ,
ನಿನ್ನ ನಿರ್ಮಿಸಿ ನೋಡಿ ನಗುತಿರುವನೆಲ್ಲೊ?

ಕಟ್ಟಡವಿಯ ನಡುವೆ, ಕಾರಿರುಳ ಗರ್ಭದಲಿ
ಉರಿಗಣ್ಣ ಉಗ್ರ, ವ್ಯಗ್ರ ವ್ಯಾಘ್ರ!
ಅಜೇಯ ಉಕ್ಕುನಖ, ಅತ್ಯುಗ್ರ ಕಣ್ಣು ಮುಖ
ದಿಗ್ಭ್ರಮೆಯ ಸೃಷ್ಟಿಯಿದು ಕೌಶಲ್ಯ ಶಲ್ಯವೊ!

ವಿಷವೃಕ್ಷ (ಕವಿತೆ)

ಇಂಗ್ಲಿಷ್ ಮೂಲ: **ವಿಲಿಯಂ ಬ್ಲೇಕ**
ಅನುವಾದ: **ಬಿ.ಎಸ್.ದುಂಡರಡ್ಡಿ**

ಗೆಳೆಯನೊಡನೆ ಕೋಪಗೊಂಡೆ,
ಅದನು ಅವಗೆ ಹೇಳಿಕೊಂಡೆ;
ಸಿಟ್ಟು ಶಮನವಾಯಿತು.

ವೈರಿಯೊಡನೆ ಕೋಪಗೊಂಡೆ,
ಹೇಳಲಿಲ್ಲ; ಬೆಳೆಸಿಕೊಂಡೆ
ಸಿಟ್ಟು ಸಿಡಿಲಾಯಿತು.

ಭೀತಿಯೆಂಬ ನೀರು ಹಣಿಸಿ,
ಹಗಲು-ರಾತ್ರಿ ಅತ್ತೆನು.
ನಟನೆ ನಗೆಯ ಬಿಸಿಲ ಸೂಸಿ,
ಮೋಸಕೆ ಮನ ತೆತ್ತೆನು.

ವಿಷವೃಕ್ಷ ಬೆಳೆಯಿತು
ಸೇಬುಫಲ ಹೊಳೆಯಿತು

ನನ್ನ ವೈರಿ ನೋಡಿದ
ಕದಿಯೆ ಮನ ಮಾಡಿದ

ರಾತ್ರಿಯಾಯ್ತು ಹಿಗ್ಗಿದ
ಕಳ್ಳ: ತೋಟ ನುಗ್ಗಿದ

ಮರದ ಕೆಳಗೆ ವೈರಿ ಮರಣ
ನನಗೆ ಹಿಗ್ಗು ತಂತು ಅರುಣ

ಬಿ.ಎಸ್.ದುಂಡರಡ್ಡಿ, ಉಪನ್ಯಾಸಕರು, 'ಹೊಂಗಿರಣ', ವೀರಮಣಿ ಕ್ರೀಡಾಂಗಣದ ಉತ್ತರ,
ಇಲಕಲ್ಲ-೫೮೭೧೨೫

ಪದ್ಯದಲ್ಲಿ ಹುದುಗಿರುವ ಅಲಂಕಾರ (ಕವಿತೆ)

ತೆಲುಗು ಮೂಲ: **ಗುಡಿಹಾಳು ರಘುನಾಥ**
ಅನುವಾದ: **ಡಾ. ಅಣ್ಣಮ್ಮ**

ಅಲಂಕಾರವು ನನ್ನನ್ನು ಮೋಸಗೊಳಿಸುತ್ತಿದೆ.
ನನಗೆ ತಿಳಿಯದೇ ನನ್ನನ್ನು ಹಿಂಬಾಲಿಸುತ್ತಾ
ನನ್ನನ್ನು ನನ್ನ ಜನಗಳಿಂದ ದೂರ ಮಾಡುತ್ತಿದೆ.
ನಾನು ಸಮಾಜದ ಭೀಭತ್ಸವನ್ನು ಚಿತ್ರಿಸುವಾಗ
ನನ್ನ ದನಿಯನ್ನು ದಾರಿ ತಪ್ಪಿಸಿ ಸುಕುಮಾರಕ್ಕೆ ಇಳಿಸುತ್ತದೆ.
ಧರ್ಮದ ದುರ್ಗಂಧವನ್ನು ಪ್ರಸ್ತಾಪಿಸಿದಾಗ
ಪದ ಸೌರಭದೊಳಕ್ಕೆ ನನ್ನನ್ನು ತಳ್ಳುತ್ತದೆ.
ನಾನು ಮರುಭೂಮಿಗಳನ್ನು ಕುರಿತು ಹೇಳುವಾಗ
ಅಲಂಕರಿಸಲಿಕ್ಕೆ ಮಲ್ಲಿಗೆ ಬಳ್ಳಿಯಂತಿರುವ
ಪದ ಚಿತ್ರಗಳನ್ನು ಎತ್ತಿಕೊಡುತ್ತೆ
ಇಣಕಿಣಕಿ ನೋಡುತ್ತಾ ಒಂದೇ ಬಾರಿಗೆ
ನಿಮಗೂ, ನನಗೂ ಮಧ್ಯೆ ತೆರೆಯಾಗಿ ನಿಲ್ಲುತ್ತೆ
ಬಹುಶಃ ಆಗ ನಾನು ಸಾಮಾಜಿಕ ಹತ್ಯೆಗಳ ಕುರಿತು ಮಾತಾಡುತ್ತಿರುತ್ತೇನೆ.
ಕಾನೂನಿನ ಹಿಂಸಾಕಾಂಡಗಳನ್ನು ಕುರಿತು ಯೋಚಿಸುತ್ತೇನೆ.
ತೆರೆ ತೆಗೆದರೆ ಹತ್ಯೆ!

ಹತ್ಯೆ ಬರೀ ಮನುಷ್ಯರನ್ನು ಸಾಯಿಸುವುದೇ ಅಲ್ಲ
ಮನುಷ್ಯ ಮುಖದಲ್ಲಿನ ಸೂರ್ಯನನ್ನು ಸಾಯಿಸುವುದು ಹತ್ಯೆ.

ಕೆಂಪಾಗಿ ಮೊಳಕೆ ಒಡೆಯುವ
ಹೃದಯಕ್ಕೆ ನೀರುಹಾಕದೇ ಇರುವುದು ಹತ್ಯೆ.
ಭ್ರಮೆಗಳಲ್ಲಿ ಮನುಷ್ಯನನ್ನು ಕಡ್ಲೆಬೀಜದಂತೆ ನೆನೆಸುವುದು ಹತ್ಯೆ.
ನಿರಾಶಾ ತತ್ವಶಾಸ್ತ್ರವನ್ನು ವಿಶ್ವವಿದ್ಯಾಲಯಗಳಲ್ಲಿ
ಬೆಳೆಸಿ ಪೋಷಿಸುವುದು ಹತ್ಯೆ.

ಥಾರ್ ಮರುಭೂಮಿ, ರಾಜಾಸ್ಥಾನದಲ್ಲಿಯೇ ಅಲ್ಲ.
ನಮ್ಮ ಮನಸ್ಸುಗಳಲ್ಲಿಯೂ ಇದೆ.
ಮತಗಟ್ಟೆಗಳಲ್ಲಿದೆ, ಮಂತ್ರಿವಲಯದಲ್ಲಿದೆ.
ಸಹರಾ ಇರುವುದು ಬರೀ ಆಫ್ರಿಕಾದಲ್ಲೇ ಅಲ್ಲ
ದರೋಡೆ ಕಾಂಡದಲ್ಲಿದೆ.
ದೌರ್ಜನ್ಯಗಳಲ್ಲಿದೆ
ಭಗಲ್ಪೂರ್ ಪೋಲೀಸ್ ಠಾಣೆಗಳಲ್ಲಿದೆ.
ಕಣ್ಣುಗಳನ್ನು ಹಾಳು ಮಾಡುವ ಆಸಿಡ್‌ನಲ್ಲಿದೆ
ಕಬ್ಬಿಣ ಪಂಜರದಲ್ಲಿದೆ
ಡೆಲ್ಲಿ ದರ್ಬಾರಿನಲ್ಲಿದೆ
ವ್ಯವಸ್ಥೆಯಲ್ಲಿ ದಿನನಿತ್ಯ
ವಿಸ್ತರಿಸುತ್ತಾ ಹೋಗುವ ಮರುಭೂಮಿಗಳು ಸಾಮೂಹಿಕ ಹತ್ಯೆಗಳು.
ಸುತ್ತಲೂ ವಿಸ್ತರಿಸುವ ಮರುಭೂಮಿಗಳನ್ನು ಲೆಕ್ಕಿಸದಿರುವ
ಮಧ್ಯಮ ವರ್ಗದ ಮಂದಬುದ್ಧಿಗಳ ಮನಸತ್ತ್ವ ಹತ್ಯೆ.
ಪತ್ರಿಕೆಗಳಲ್ಲಿ ತುಪಾಕಿ ಗುಂಡಿನ ನೀತಿ.
ಟೀವಿಗಳಲ್ಲಿ ಚಂಡಮಾರುತಗಳ ಪ್ರಶಾಂತತೆ
ತೆರೆಯ ಮರೆಯಲ್ಲಿ ಮುದಿ ನಾಯಕರ
ಶೃಂಗಾರ ಸನ್ನಿವೇಶಗಳ ಬುರುಖಾ ಹತ್ಯೆ.
ಪ್ರಗತಿ ಶೀಲದ ಮುಸುಕು ತೊಟ್ಟುಕೊಂಡ
ಸಿನಿಸಿಂಹದ ಮರುಕತ್ತಿ.
ಬಂಡಾಯದ ಬುರುಖಾ ಹಾಕಿಕೊಂಡ ಭಾವಕವಿ ಸಿಡಿಯದ ಪಟಾಕಿ.
ರಂಗದ ಮೇಲೆ ಮರಕತ್ತಿ - ಸಿಡಿಯದ ತುಪಾಕಿ ನರ್ತಿಸುವುದು ಹತ್ಯ.

ಅವುಗಳನ್ನು ಹೊತ್ತು ಮೆರವಣಿಗೆ ಮಾಡುವ
ಮಧ್ಯಮ ವರ್ಗದ ಕವಿಕೋಗಿಲೆಗಳ ಹತ್ಯೆ.
ಪದ್ಯದಲ್ಲಿ ಒಳಗೊಳ್ಳುವ ಪದ
ಪದ್ಯದ ಮುಂದೆಯೇ ತೆರೆ ಬೀಳುವುದು ಹತ್ಯೆ.
ನಿಜ ಸ್ಥಿತಿ ನಿನಗೇ ಗೊತ್ತಿದ್ದರೂ
ಯಾವುದನ್ನೋ ಹುಡುಕುತ್ತಿರುತ್ತೀಯ.

ಬಿಸಿಲು ನಿನ್ನನ್ನು ಪ್ರಶ್ನಿಸುತ್ತೆ
ಮಳೆ ನಿನ್ನ ದೇಹವನ್ನು ತಡವಿ ತಡವಿ
ನಿಜ ಹೇಳು ಅಂತ ತಾಯಿಯಂತೇ ಬೇಡಿಕೊಳ್ಳುತ್ತೆ.
ಗಾಳಿ ನಿನ್ನನ್ನು ತಳ್ಳಿ ಮತ್ತಷ್ಟು ದಬಾಯಿಸುತ್ತೆ.
ರಹಸ್ಯವನ್ನು ಕಕ್ಕೂ ಎಂದು...
ಧೂಳು ನಿನ್ನನ್ನು ಹಿಂಬಾಲಿಸುತ್ತೆ
ಚಂಡ ಮಾರುತಗಳು ನಿನ್ನ ಗಂಟಲೊಳಕ್ಕೆ ತೂರುತ್ತವೆ.

ಡಾ. ಅಣ್ಣಮ್ಮ, ಕನ್ನಡ ಅಧ್ಯಾಪಕಿ, ಸರ್ಕಾರಿ ಕಲಾ ಕಾಲೇಜ್, ಬೆಂಗಳೂರು-೧.

ನನ್ನ ನಾಟ್ಯ ನೆನಪುಗಳು : ರಂಗಾಸಕ್ತಿಯ ಕಥೆ

ಇಂಗ್ಲೀಷ್ ಮೂಲ: **ಶಶಿ ದೇಶಪಾಂಡೆ**
ಅನುವಾದ: **ಡಾ. ಬಸವರಾಜ ಡೋಣೂರ**

ಕೆಲವು ವರ್ಷಗಳ ಹಿಂದೆ ನನ್ನ ತಂದೆಯ 'ಸಾಹಿತಿಯ ಆತ್ಮಜಿಜ್ಞಾಸೆ' ಎಂಬ ಗ್ರಂಥದ ಕೆಲವು ಪ್ರತಿಗಳನ್ನು ಪ್ರಕಾಶಕರಿಂದ ಪಡೆದುಕೊಂಡೆ. ನಾನು ಆ ಗ್ರಂಥದ ಮೇಲೆ ಸುಮ್ಮನೆ ಕಣ್ಣಾಡಿಸುತ್ತಿದ್ದಾಗ- ಏಕೆಂದರೆ ಅದನ್ನು ಓದಲು ನನಗೆ ಸಮಯ ಇದ್ದಿರಲಿಲ್ಲ- ಶಾಲಾ ಬಾಲಕನಿದ್ದಾಗ ನನ್ನ ತಂದೆ ವಿಜಾಪುರದಲ್ಲಿ ಮರಾಠೀ ರಂಗಭೂಮಿಯ ಪರಿಚಯ ಮಾಡಿಕೊಂಡಿದ್ದುದರ ಕುರಿತಾದ ಅಧ್ಯಾಯ ಅನಿರೀಕ್ಷಿತವಾಗಿ ನನ್ನ ಕಣ್ಣಿಗೆ ಬಿದ್ದಿತು. ನಾನು ಓದುತ್ತಿದ್ದ ವಿಷಯ ನನ್ನ ಮನಸ್ಸನ್ನು ಎಷ್ಟು ಗಾಢವಾಗಿ ಹಿಡಿಯಿತ್ತೆಂದರೆ ನಾನು ಅದನ್ನು ಮುಂದೆ ಓದಲೇಬೇಕಾಯಿತು ಮತ್ತು ಆ ಗ್ರಂಥವನ್ನು ಪೂರ್ಣಗೊಳಿಸಬೇಕಾಯಿತು. ನಾನು ಅವರ ಪುತ್ರಿಯಾಗಿದ್ದರೂ ನನಗೆ ತೀರ ಹೊಸದೆನ್ನಿಸುವ ಹಾಗೂ ನಾನು ಅರಿಯದ ಹೇರಳವಾದ ಮಾಹಿತಿಯನ್ನು ಈ ಗ್ರಂಥದಲ್ಲಿ ಕಂಡುಕೊಂಡೆ. ಇದಕ್ಕಿಂತಲೂ ಹೆಚ್ಚು ಸ್ವಾರಸ್ಯಕರವಾದ ಸಂಗತಿಯೇನೆಂದರೆ, ಆ ಗ್ರಂಥದ ನಿರೂಪಣಾ ಶೈಲಿ, ಒಬ್ಬ ಓದುಗನಾಗಿ ನಾನು ಲೇಖಕನ ವಿಶ್ವಾಸನೀಯವಾದ ಆತ್ಮೀಯ ಕೇಳುಗನಾಗಿದ್ದೇನೆಂಬ ಭಾವ ನನ್ನಲ್ಲಿ ಹುಟ್ಟುವಂತೆ ಮಾಡಿದ್ದುದು. ನಾನು ಕೇವಲ ಅವರ ಪುತ್ರಿಯೆಂಬ ಕಾರಣಕ್ಕಾಗಿ ಹೀಗಾಗಿದ್ದಲ್ಲ, ಪ್ರತಿಯೊಬ್ಬ ಓದುಗ ಕೂಡ ಈ ರೀತಿ ಭಾವಿಸಬಹುದೆಂಬುದು ನನ್ನ ಅನಿಸಿಕೆ. ನಿಜವಾಗಿ ನಾನು ಓದಿದ ಪುಸ್ತಕದ ಭಾಗವು ಒಬ್ಬ ಶಾಲಾ ಬಾಲಕನ ಮತ್ತು ಒಬ್ಬ ಕಾಲೇಜು ವಿದ್ಯಾರ್ಥಿಯ ನಿಟ್ಟಿನಿಂದ ಬರೆದಿರುವಂಥದು.

ಆದ್ದರಿಂದ ಒಂದು ರೀತಿಯ ನಿರ್ಲಿಪ್ತತೆಯಿಂದ ಓದಲು ಮತು ಒಬ್ಬ ಆಗುಂತಕ ಲೇಖಕನ ಬರಹ ಓದುವಂತೆ ಪ್ರತಿಕ್ರಿಯೆ ತೋರಲು ನನಗೆ ಸಾಧ್ಯವಾಯಿತು. ಅದೇನೇ ಇರಲಿ, ನನಗೆ ಗೊತ್ತಿಲ್ಲದ ರಂಗಭೂಮಿಯ ಕುರಿತಾದ ಅವರ ಭಾವನೆಗಳು ನನ್ನನ್ನು ಮರುಳಗೊಳಿಸಿದವು. ಹೀಗಾಗಿ ನಾನು ಈ ಪುಸ್ತಕದ ಸ್ವಲ್ಪ ಭಾಗವನ್ನಾದರೂ ಭಾಷಾಂತರ ಮಾಡಲು ನಿರ್ಧರಿಸಿದೆ. ಇದು ಗಂಭೀರ ಭಾಷಾಂತರಕ್ಕೆ ಕೈ ಹಾಕುವ ಮೊದಲ ಸಾಹಸವಾಗಿತ್ತು. ನನ್ನ ಸೀಮಿತ ಕನ್ನಡ ಭಾಷಾಜ್ಞಾನದ ಹಿನ್ನೆಲೆಯಲ್ಲಿ ಅದು ಸರಳವಲ್ಲವೆಂಬುದು ನನಗೆ ಗೊತ್ತಿತ್ತು. ರಂಗಭೂಮಿಯ ಬಗೆಗಿರುವ ಅವರ ಭಾವನೆಗಳ ತೀವ್ರತೆ ಈ ಅನುವಾದದ ಪ್ರಯತ್ನವನ್ನು ಮಾಡಲು ನಿರ್ಧಾರ ತಳೆಯುವಂತೆ ನನ್ನನ್ನು ಪ್ರೇರೇಪಿಸಿತು.

ಅವರು ವಿಜಾಪೂರದಲ್ಲಿ ಶಾಲೆಯ ವಿದ್ಯಾರ್ಥಿಯಾಗಿದ್ದಾಗಿನ, ಅವರು ವೃತ್ತಿಪರ ರಂಗಭೂಮಿ ಮತ್ತು ಮರಾಠಿ ನಾಟಕಕ್ಕೆ ತೆರೆದುಕೊಂಡಾಗಿನ ದಿನಗಳಿಗೆ ಸಂಬಂಧಿಸಿದ, ಅವರು ಲಂಡನ್ನಿನಲ್ಲಿ ವಾಸಿಸುತ್ತಿದ್ದಾಗ ಉತ್ಸುಕತೆಯಿಂದ ನಾಟಕಗಳನ್ನು ನೋಡುವ ಮತ್ತು ಅವರು ಲಂಡನ್ನಿನ ಪರಿಸರದಲ್ಲಿ ಸಂಭ್ರಮಿಸುತ್ತಿದ್ದಾಗಿನ ದಿನಗಳಿಗೆ ಸಂಬಂಧಿಸಿದ ಗದ್ಯಭಾಗಗಳನ್ನು ನಾನು ಭಾಷಾಂತರಕ್ಕಾಗಿ ಆಯ್ದುಕೊಂಡೆ.

ಈ ಗದ್ಯಭಾಗಗಳಲ್ಲಿ ಅವರು ತೆರೆದ ಮನಸ್ಸಿನಿಂದ ಹೇಳಿಕೊಂಡಿದ್ದಾರೆ. ಉದಾಹರಣೆಗೆ ವಿಜಾಪುರದಲ್ಲಿದ್ದಾಗ ಅವರು ಹೊಂದಿದ್ದ ಕೀಳರಿಮೆಯ ಕುರಿತು, ಹೇಗೆ ಅವರು ಮರಾಠೀ ನಾಟಕ ಉನ್ನತ ಮಟ್ಟದ್ದೆಂದು ಭಾವಿಸುತ್ತಿದ್ದರು ಮತ್ತು ಆ ನಾಟಕ ನೋಡಿದಾಗ ಹೇಗೆ ಸ್ವಯಂ ಪ್ರೇರಣೆಯಿಂದ ಮರಾಠೀ ನಾಟಕಕ್ಕೆ 'ಶ್ರೇಷ್ಠ' ದರ್ಜೆಯ ಸ್ಥಾನಮಾನ ಅನುಗ್ರಹಿಸುತ್ತಿದ್ದರು ಎಂಬುದರ ಕುರಿತು ಅವರು ಮಾತನಾಡುತ್ತಾರೆ. ತಾವು ನೋಡಿದ ಶ್ರೇಷ್ಠ ನಟ ದಂತಕಥೆಯಾಗಿದ್ದ ಬಾಲ ಗಂಧರ್ವರ ಕುರಿತು ಹೇಳುತ್ತಾರೆ ಹಾಗೂ ಗಣಪತ್‌ರಾವ್ ಜೋಶಿ ಮತ್ತು ಗಣಪತ್‌ರಾವ್ ಬೋಡ್ಸ್ ಅವರ ಬಗ್ಗೆ ಶ್ಲಾಘನೀಯ ಧಾಟಿಯಲ್ಲಿ ವಿವರವಾಗಿ ಬರೆಯುತ್ತಾರೆ. ತಮ್ಮೂರು ಅಗರಖೇಡದಲ್ಲಿ ಕನ್ನಡ ಕಂಪನಿ ನಾಟಕಗಳ ಅನುಕರಣಾತ್ಮಕತೆಗೆ ಒಳಗಾದ ತೀರ ಸಂಸ್ಕೃತೀಕರಣಗೊಂಡಿರದ ತಾವು ನೋಡಿದ ಪ್ರದರ್ಶನಗಳನ್ನು ಹೇಗೆ ಮತ್ತು ಯಾಕೆ ಅವರು ಹೆಚ್ಚು ಇಷ್ಟಪಟ್ಟರು ಎಂಬುದರ ಬಗ್ಗೆ ನಮಗೆ ಹೇಳುತ್ತಾರೆ. ಅವರ ಲಂಡನ್ನಿನ ವಾಸಕ್ಕೆ ಸಂಬಂಧಿಸಿದಂತೆ ಹೇಳುವುದೇನೆಂದರೆ ಅವರು ಒಂದೇ ನಿರ್ದಿಷ್ಟವಾದ ನಾಟಕವನ್ನು ಹೇಗೆ ಏಳು ಬಾರಿ ನೋಡಿದರು (ಪ್ರತೀ ಸಲವೂ ಅವರು ಹೆಚ್ಚಿಗೆ ದುಡ್ಡು ಕೊಟ್ಟರು ಮತ್ತು ಕಡಿಮೆ ಅವಧಿ ರಂಗಭೂಮಿಯಲ್ಲಿ ಇದ್ದರು) ಎಂಬುದು ಈಗ ದಂತಕಥೆಯಾಗಿದೆ. ಗೀತಾತ್ಮಕವಾದ No No Nanette ಎಂಬ ಪ್ರದರ್ಶನಕ್ಕೆ ಅವರು ನೀಡಿದ ಪ್ರತಿಕ್ರಿಯೆಯ ವಿವರ ನನ್ನನ್ನು ಬಹಳ ಮೋಹಗೊಳಿಸಿತು. ರಂಗಭೂಮಿಯ ಗೀಳು ಹಚ್ಚಿಕೊಂಡ ವ್ಯಕ್ತಿಯಿಂದ ಮಾತ್ರ ಇಂಥ ಪ್ರತಿಕ್ರಿಯೆ ಬರಲು ಸಾಧ್ಯವಿದೆ. ರಂಗಭೂಮಿಯೊಂದಿಗೆ ನನ್ನ ತಂದೆಯ ಸಂಬಂಧ ಅವರ ಬದುಕಿನಲ್ಲಿ ಎಲ್ಲಕ್ಕಿಂತ ಮಿಗಿಲಾದದ್ದಾಗಿತ್ತೆಂದು ನನಗೆ ಯಾವಾಗಲೂ ಗೊತ್ತಿತ್ತು. ಈ ಪುಸ್ತಕದ ಓದು ನನ್ನ ಆ ತಿಳುವಳಿಕೆಯನ್ನು ದೃಢಪಡಿಸಿತು.

ಅವರ ಶಾಲಾ ದಿನಗಳಿಗೆ ಸಂಬಂಧಿಸಿದ ಗದ್ಯಭಾಗದ ಕೊನೆಯ ಸಾಲು ಆ ಪುಸ್ತಕದಲ್ಲಿ ಅತ್ಯಂತ ಪ್ರಮುಖವಾದ ಹೇಳಿಕೆಗಳಲ್ಲಿ ಒಂದಾಗಿತ್ತು ಎಂದು ಭಾವಿಸುತ್ತೇನೆ. ಹೇಗೆ ಅವರು ತಮ್ಮ ಸ್ನೇಹಿತರೊಂದಿಗೆ ವಿಜಾಪುರದ ಸುತ್ತಲಿನ ಪಾಳುಬಿದ್ದ ಕೋಟೆಗಳ ಮೇಲೆ ಒಂದು ನಾಟಕವನ್ನು (ಅವರೇ ಸಿದ್ಧಗೊಳಿಸಿರುವಂಥದು....... ಬರದದ್ದಲ್ಲ) ಅಭಿನಯಿಸಿದ್ದರು ಎಂಬುದರ ಬಗ್ಗೆ ಪ್ರಸ್ತಾಪಿಸುತ್ತಾ ಅವರು ಹೀಗೆ ಬರೆಯುತ್ತಾರೆ. 'ನಾನೊಬ್ಬ ನಾಟಕಕಾರನಾಗಿದ್ದೆ ಎಂಬ ತಿಳುವಳಿಕೆ ನನಗೆ ಹೊಳೆಯಿತು'. ಇದು ಹದಿನಾಲ್ಕನೆಯ ವಯಸ್ಸಿನಲ್ಲಿ! ಅತ್ಯಲ್ಪ ಜನ ತಮ್ಮ ಜೀವನದಲ್ಲಿ ಇಂಥ ಜ್ಞಾನೋದಯದ ಕ್ಷಣಗಳನ್ನು ಅನುಭವಿಸುತ್ತಾರೆ.

ಲಂಡನ್ನಿನ ಎಪಿಸೊಡದ ನಂತರ ಬರುವ ಇನ್ನೊಂದು ಭಾಗದಲ್ಲಿ ನಾಟಕ ಪ್ರದರ್ಶನಗಳನ್ನು ನೋಡುವುದಕ್ಕಾಗಿ ಅವರು ಹಣ ಖರ್ಚು ಮಾಡುತ್ತಿದ್ದುದಕ್ಕೆ ಸಂಬಂಧಿಸಿದಂತೆ ಅವರು ಈ ಪ್ರಶ್ನೆಯನ್ನು ಕೇಳುತ್ತಾರೆ: ''ನನ್ನ ಎಲ್ಲ ಹಣ ವ್ಯಯ ಮಾಡಿ ನಾನು ಏನನ್ನು ಪಡೆದುಕೊಂಡೆ?'' ಉತ್ತರ ಅವರಿಗೆ ಸ್ಪುಟವಾಗಿತ್ತು. ಇದರಿಂದ ಇನ್ನಾವುದೇ ಲಾಭಾರ್ಥ ಧನ ವಿನಿಯೋಗಕ್ಕಿಂತಲೂ, ತಮ್ಮ ಶಿಕ್ಷಣಕ್ಕಾಗಿ ಅವರು ವ್ಯಯ ಮಾಡಿದ್ದಕ್ಕಿಂತಲೂ ಬಹಳ ಹೆಚ್ಚಿನ ಪ್ರತಿಫಲಗಳಿವೆ. ಏಕೆಂದರೆ ಲಂಡನ್ನಿನಲ್ಲಿ ಈ ನಾಟಕಗಳನ್ನು ನೋಡುವುದರ ಮೂಲಕ ರಂಗಭೂಮಿಯ ಶಕ್ತಿ ಎಂಥದು ಮತ್ತು ಇದು ಏನನ್ನು ಮಾಡಬಲ್ಲುದು ಎಂಬುದನ್ನು ಅವರು ತಿಳಿದುಕೊಂಡರು. ಅವರು ಅಲ್ಲಿ ನಾಟಕಕ್ಕೆ ತೆರೆದುಕೊಂಡಿದ್ದರ ಫಲವಾಗಿಯೇ ತಾವು ಒಬ್ಬ ಶ್ರೇಷ್ಠ ನಾಟಕಕಾರನಾಗಿ ರೂಪುಗೊಳ್ಳಲು ಅವರಿಗೆ ಸಾಧ್ಯವಾಯಿತು.

ಈ ಗದ್ಯಭಾಗಗಳ ಭಾಷಾಂತರವನ್ನು ಪೂರ್ಣಗೊಳಿಸಿ ಅದನ್ನು ಒಂದು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟಿಸಿದೆ. ಈ ಬರಹಕ್ಕೆ ಸಿಕ್ಕ ಪ್ರತಿಕ್ರಿಯೆ ನನ್ನನ್ನು ಸಂತೋಷಗೊಳಿಸಿತು. ಇದನ್ನು ಓದುತ್ತಿದ್ದಾಗ ಸ್ವತಃ ಅವರೇ ಮಾತನಾಡುತ್ತಿದ್ದುದನ್ನು ಕೇಳಿದ ಅನುಭವ ಉಂಟಾಯಿತು ಎಂದು ಒಬ್ಬ ಓದುಗ ಹೇಳಿದಾಗ ಇನ್ನೂ ಹೆಚ್ಚಿನ ಆನಂದ ಪಟ್ಟೆ. ಇನ್ನೊಮ್ಮೆ ಭಾಷಾಂತರದ ಕೆಲಸ ಕೈಗೆತ್ತಿಕೊಳ್ಳಲು ಅವರ ಪ್ರೋತ್ಸಾಹ ಪೂರ್ವಕ ಈ ಶಬ್ದಗಳು ನನ್ನನ್ನು ಪ್ರೇರೇಪಿಸಿದವು ಎಂದು ನಾನು ಭಾವಿಸುತ್ತೇನೆ. ಮಹಾತ್ವಾಕಾಂಕ್ಷಿಯಾಗಿ ಈ ಬಾರಿ ನಾನೊಂದು ನಾಟಕದ ಭಾಷಾಂತರಕ್ಕೆ ಕೈ ಹಾಕಲು ವಿಚಾರಿಸಿದೆ. ಅದೇ ವೇಳೆಗೆ ವ್ಯವಹಾರ ಬುದ್ಧಿವಂತಿಕೆಯಿಂದ ನನಗೆ ಬಹಳಷ್ಟು ತೊಂದರೆಗಳನ್ನು ಕೊಡದಂಥ ನಾಟಕವನ್ನು ನಾನು ಆಯ್ದುಕೊಂಡೆ. ಈ ಕಾರಣಕ್ಕಾಗಿ ನಾನು 'ಅಪರಾಧಗಳ ಕ್ಷಮಿಸೊ' ನಾಟಕವನ್ನು ಕೈಗೆತ್ತಿಕೊಂಡೆ. ಈ ನಾಟಕದ ಪ್ರದರ್ಶನವನ್ನು ನಾನು ಬೆಂಗಳೂರಿನಲ್ಲಿ ನೋಡಿದ್ದೆ, ಅದನ್ನು ಅಪಾರವಾಗಿ ಆನಂದಿಸಿದ್ದೆ ಎಂಬ ಸಂಗತಿ ಈ ಆಯ್ಕೆಗೆ ಕಾರಣವಾಗಿತ್ತು. ನಂತರ ನಟರ ಒಂದು ತಂಡ ಈ ಭಾಷಾಂತರವನ್ನು ಪ್ರೇಕ್ಷಕರೆದರು ಓದಿತು. ಪ್ರೇಕ್ಷಕರು ಅದಕ್ಕೆ ಉತ್ಸುಕತೆಯಿಂದ ಪ್ರತಿಕ್ರಿಯಿಸಿದರು. ಇದು ಭಾಷೆಗಳ ಎಲ್ಲೆಯನ್ನು ಮೀರಬಲ್ಲ ಸಾಮರ್ಥ್ಯವುಳ್ಳದ್ದು. ಅಲ್ಲದೆ ಇದು ಆ ಕಾಲದ ಮುಂದುವರಿದ ಸಮಕಾಲೀನತೆಯನ್ನು ಪ್ರಕಟಿಸುತ್ತದೆ.

ನಂತರ ಕಳೆದ ವರ್ಷ- ಅವರ ಶತಮಾನೋತ್ಸವದ ವರ್ಷದ ಆರಂಭದಲ್ಲಿ- ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯವರು ತಮ್ಮ ವಿಶೇಷ ಸಂಚಿಕೆಗಾಗಿ ಅವರ ಮೇಲೆ ಒಂದು ಚಿಕ್ಕ ಲೇಖನವನ್ನು ಬರೆದು ಕೊಡುವಂತೆ ನನ್ನನ್ನು ಕೇಳಿದರು. ರಂಗಭೂಮಿಗಾಗಿ ಮೀಸಲಾಗಿರುವ ಆ ಜರ್ನಲ್‌ನಲ್ಲಿ ವೈಯಕ್ತಿಕವಾದ ಲೇಖನ ಬರೆಯುವುದು ನನಗೆ ಬೇಕಾಗಿರಲಿಲ್ಲ. ಆದರೆ ನಾನು ಯಾವುದರ ಕುರಿತು ಬರೆಯಬಹುದೆಂದು ಆಲೋಚನೆ ಮಾಡುತ್ತಿದ್ದೆ. ನನಗೆ ಕೆಲವು ವಿಚಾರಗಳನ್ನು ಕೊಡಬಹುದೆಂದು ನಾನು ಆಸೆ ಮಾಡಿದ್ದ ಅವರ ಮೇಲಿನ ಜಿ.ಎಸ್. ಆಮೂರ ಅವರ ಪುಸ್ತಕವನ್ನು ಹುಡುಕುತ್ತಿದ್ದ ಸಂದರ್ಭದಲ್ಲಿ ಈ ''ನನ್ನ ನಾಟ್ಯ ನೆನಪುಗಳು'' ಎಂಬು ಪುಸ್ತಕ ನನ್ನ ಕಣ್ಣಿಗೆ ಬಿದ್ದಿತು. ಅದೊಂದು ಪುಸ್ತಕದ ಹಳೆಯ ಪ್ರತಿ; ಅದು rebound ಆಗಿದ್ದರಿಂದ ಅದರ ಮುಖಪುಟ ಅಸ್ತವ್ಯಸ್ತವಾಗಿತ್ತು. ಅದರ ಮೊದಲ ಪುಟದ ಮೇಲೇ ಶ್ರೀರಂಗರ ಹೆಸರನ್ನು ಬರೆಯಲಾಗಿತ್ತು. ಇದು 'ಶ್ರೀರಂಗ ಸರಸ್ವತ' ದಿಂದ (ಅವರು ಶ್ರೀರಂಗರೇ) ಪ್ರಕಟಗೊಂಡಿತ್ತು. ಇದರ ಬೆಲೆ ಒಂದು ರೂಪಾಯಿ ಐವತ್ತು ಪೈಸೆ ಇತ್ತು. ತಮ್ಮ 'ಪರಿಸ್ಥಿತಿ' ಎಂಬ ಮುನ್ನುಡಿಯಲ್ಲಿ ಅವರು ಪುಸ್ತಕದ ದರಿದ್ರ ಹೊದಿಕೆ ವಿನ್ಯಾಸಕ್ಕಾಗಿ ಕ್ಷಮೆ ಕೇಳುತ್ತಾರೆ. ಪ್ರಕಾಶಕರು ಸಾಹಿತ್ಯದ ಕೆಲವು ಪ್ರಕಾರಗಳನ್ನು ಮಾತ್ರ ಪ್ರಕಟಣೆಗಾಗಿ ಎತ್ತಿಕೊಳ್ಳಲು ಇಷ್ಟಪಡುವುದರಿಂದ ಇತರೆ ಪ್ರಕಾರಗಳ ಲೇಖಕರು ತಮ್ಮ ಕೃತಿಗಳನ್ನು ತಾವೇ ಪ್ರಕಟಿಸದೆ ಗತ್ಯಂತರವಿಲ್ಲ ಎಂಬ ಸಂಗತಿಯನ್ನು ಅವರು ತಮ್ಮ ಮುನ್ನುಡಿಯಲ್ಲಿ ವಿವರಿಸುತ್ತಾರೆ. ಈ ಸಂದಿಗ್ಧತೆ ಎಲ್ಲಿದೆಯೆಂದರೆ, ಅವರು ಹೇಳುತ್ತಾರೆ; ''ನೀವು ಪ್ರಕಟಿಸಿದರೆ ಜೀವಿಸಲಾರಿರಿ, ಪ್ರಕಟಿಸದಿದ್ದರೆ ಬದುಕಲಾರಿರಿ ಕೂಡ. ''ಆದರೆ ನಾನು, ಧೈರ್ಯ ಪ್ರದರ್ಶನದೊಂದಿಗೆ ಎರಡನ್ನೂ ಪೂರೈಸಲು ಬಯಸುತ್ತೇನೆ.'' ಎಂದು ಬರೆಯುತ್ತಾರೆ. ಈ ಕಾರಣದಿಂದಾಗಿ ಸ್ವಕೀಯ ಪ್ರಕಟಣೆಗೆ ತೊಡಗಿದರು. ಈ ನಿಕೃಷ್ಟ ಚಿಕ್ಕ ಪುಸ್ತಕವೇ ಅದರ ಫಲಶೃತಿ.

ಪುಸ್ತಕದ ಪ್ರವೇಶಕ್ಕೆ ಬರುವ ಈ ವಿಷಯ ಬಹಳ ಪ್ರಾಮಾಣಿಕವಾಗಿತ್ತು, ಅಸಾಮಾನ್ಯವಾಗಿತ್ತು ಮತ್ತು ಅದು ಬಹಳ ಭರವಸೆ ಹುಟ್ಟಿಸುವಂಥದ್ದಾಗಿತ್ತು. ಆ ಪುಸ್ತಕದ ಆರಂಭದಲ್ಲಿ ತಮ್ಮ ಎಳೆತನದಲ್ಲಿ ತಮ್ಮ ಹುಟ್ಟೂರು ಅಗರಖೇಡದಲ್ಲಿ ಅವರು ಹೊಂದಿದ ಅನುಭವಗಳ, ಅವರ ಅತ್ಯಂತ ಹಳೆಯ ನಾಟ್ಯ ನೆನಪುಗಳು ಪ್ರಸ್ತಾಪ ಮಾಡಿದ್ದಾರೆ. ಈ ಪುಸ್ತಕ ಆರಂಭದಿಂದಲೇ ಅವರ ರಂಗಭೂಮಿ ಗೀಳಿನ ಕುರಿತು ಹೇಳುತ್ತದೆ. ಈ ಪುಸ್ತಕದ ಮೊದಲಿನ ಭಾಗ ಒಬ್ಬ ಹುಡುಗನ ದಾಖಲೆಯಂತೆ ಓದಿಸಿಕೊಂಡು ಹೋಗುತ್ತದೆ ಮತ್ತು ಒಬ್ಬ ಲೇಖಕಿಯಾಗಿ ನಾನು ಏನು ಅಂದುಕೊಳ್ಳುತ್ತೇನೆಂದರೆ, ಒಂದು ವಿಶೇಷವಾದ ಕೌಶಲ್ಯ ಮಾತ್ರ ಬರಹವನ್ನು ಅಷ್ಟು ನಿಷ್ಕಪಟವಾಗಿ ಮತ್ತು ಮುಗ್ಧವಾಗಿ ಮಾಡಲು ಸಾಧ್ಯವಿದೆ. ರಾತ್ರಿ ಇಡೀ ಹಳ್ಳಿಗರು ನಡೆಸುತ್ತಿದ್ದ ಪ್ರದರ್ಶನಗಳಿಗೆ ಸಂಬಂಧಿಸಿದ ಅವರ ನೆನಪಿನ ತುಣುಕುಗಳು ಮತ್ತು ಅವರು ಚಿಕ್ಕ ಹುಡುಗನಿದ್ದಾಗ ಅರ್ಧ ನಿದ್ರಿಸುತ್ತ ಅರ್ಧ ಎಚ್ಚರದಲ್ಲಿ ನೋಡುತ್ತ ಇದ್ದಂತ ನಾಟಕ ಸನ್ನಿವೇಶಗಳು ಪ್ರಕೃತಿಯ ಮಡಿಲಲ್ಲಿನ ಸುಂದರ ಲೋಕೋಪಾಧಿಯ ಅನುಭವಗಳಂತೆ ತೋರುತ್ತವೆ. ಬಹುಬೇಗನೆ ಹುಟ್ಟಿಕೊಂಡ ತಮ್ಮ ಈ ಅಭಿರುಚಿಯನ್ನು ಯಾರೂ ಅಷ್ಟಾಗಿ ಪ್ರೋತ್ಸಾಹಿಸಲಿಲ್ಲ

ಎಂದು ಅವರು ಹೇಳುತ್ತಾರೆ. ಆದರೆ ಅವರ ತಾತ ಆ ಮಗುವಿನ ಆಸಕ್ತಿಯನ್ನು ಹಂಚಿಕೊಂಡರು. ಶಾಕುಂತಲ ನಾಟಕವನ್ನು ಪ್ರದರ್ಶನ ಮಾಡಿದ ಶಾಲೆಯ ಹೊರಗಿನ ಸ್ಥಳವೊಂದನ್ನು ಬಿಟ್ಟು ಪ್ರಾಥಮಿಕ ಶಾಲೆಗೆ ಸಂಬಂಧಿಸಿದ ಸಂಗತಿಗಳು ತಮಗೆ ಜ್ಞಾಪಕಕ್ಕೆ ಬರುತ್ತಿಲ್ಲವೆಂದು ಅವರು ಒಪ್ಪಿಕೊಳ್ಳುತ್ತಾರೆ. (ಆದಾಗ್ಯೂ ಅವರು ತಮ್ಮ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಈ ಪುಸ್ತಕದಲ್ಲಿ ಪ್ರಸ್ತಾಪಿಸುತ್ತಿಲ್ಲ ಎಂಬುದು ಓದುಗರ ಜ್ಞಾಪಕಕ್ಕೆ ತರಬಯಸುತ್ತಾರೆ. ಏಕೆಂದರೆ ರಂಗಭೂಮಿಗೆ ಸಂಬಂಧಿಸಿದ ನೆನಪುಗಳ ಕುರಿತಾಗಿ ಮಾತ್ರ ಬರೆಯುತ್ತಿದ್ದರು ಮತ್ತು ವಾಸ್ತವಿಕವಾಗಿ ಅವರು ಒಬ್ಬ ಒಳ್ಳೆಯ ವಿದ್ಯಾರ್ಥಿಯಾಗಿದ್ದು ತಮ್ಮ ಶಾಲೆಯಲ್ಲಿ, ನಂತರ ಕಾಲೇಜಿನಲ್ಲಿ ಕೂಡ ಒಳ್ಳೆಯ ಸಾಧನೆ ಮಾಡಿದ್ದುಂಟು) ನಂತರ ಅವರ ನೆನಪುಗಳು ತಾವು ಹಾಯ್‌ಸ್ಕೂಲ್ ಸೇರಿದ ಹಾಗೂ ಕಂಪನಿ ನಾಟಕಗಳನ್ನು ನೋಡಲು ಪ್ರಾರಂಭ ಮಾಡಿದ ವಿಜಾಪುರಕ್ಕೆ ಹೋಗುತ್ತವೆ. ಈ ಸ್ಥಳದಲ್ಲೇ ಅವರು ನಾಟಕದ ಕುರಿತಾಗಿ ವಿಶೇಷವಾಗಿ ಕಂಪನಿ ನಾಟಕಗಳ ಕುರಿತಾಗಿ ತಮ್ಮ ಬಹುತೇಕ ವಿಚಾರಗಳನ್ನು ರೂಪಿಸಿಕೊಂಡರು ಮತ್ತು ಅವು ಅವರ ಜೀವನದುದ್ದಕ್ಕೂ ಅವರೊಂದಿಗೆ ಉಳಿದುಕೊಂಡು ಬಂದವು. ಉದಾಹರಣೆಗೆ ಮರಾಠೀ ನಾಟಕಗಳ ನಕಲು ಆಗಿದ್ದ ಕನ್ನಡ ಕಂಪನಿ ನಾಟಕಗಳ ಕುರಿತಾದ ಅವರ ತಿರಸ್ಕಾರ ಹಾಗೂ ಈ ನಾಟಕಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿದ್ದ ಸಂಗೀತದ ಕುರಿತಾದ ಅವರ ಅಸಹನೆ ಇವು ಪ್ರಾರಂಭವಾದದ್ದು ಇಲ್ಲೇ. ಒಬ್ಬ ಪ್ರೇಕ್ಷಕನಾಗಿ ಮಾತ್ರವಲ್ಲದೇ ಒಬ್ಬ ನಾಟಕಕಾರನಾಗಿ ಕೂಡ ಅವರು ತಮ್ಮ ಪಯಣ ಶುರುಮಾಡಿದ್ದು ಇಲ್ಲೇ. ಆ ಹದಿಹರೆಯದ ಶಾಲಾಬಾಲಕ ಎರಡು ನಾಟಕಗಳನ್ನು ಬರೆದನು! ತಮ್ಮ ಆರಂಭಿಕ ಪ್ರಯೋಗಗಳ ಕುರಿತು ಅವರು ಅತ್ಯಂತ ವಿನೋದಭರಿತವಾಗಿ ಮಾತನಾಡುತ್ತಾರೆ. ಸುದೈವದಿಂದ ಆ ನಾಟಕಗಳು ನಂತರದಲ್ಲಿ ಕಳೆದುಹೋದವು ಎಂದು ಅವರು ಹೇಳುತ್ತಾರೆ. ಪುಣೆಯಲ್ಲಿನ ಡೆಕ್ಕನ್ ಕಾಲೇಜಿನಲ್ಲಿದ್ದ ಸಮಯದಲ್ಲಿ ಅವರು ಇನ್ನೆರಡು ನಾಟಕಗಳನ್ನು ಬರೆದರು. ಅವುಗಳಲ್ಲಿ ಒಂದು ಮರಾಠಿ ನಾಟಕದ ಅನುಕರಣೆಯಾಗಿತ್ತೆಂದು ಅವರು ಒಪ್ಪಿಕೊಳ್ಳುತ್ತಾರೆ. ಆದರೆ ಇನ್ನೊಂದು ನಾಟಕದ ಕುರಿತು ಅವರು ಹೆಮ್ಮೆ ಹಾಗೂ ಸಂತೋಷದಿಂದ ಮಾತನಾಡುತ್ತಾರೆ. ಅದು ಸಂಪೂರ್ಣವಾಗಿ ಸ್ವಕಲ್ಪಿತವಾಗಿತ್ತು ಹಾಗೂ ವಿನೋದಶೀಲವಾಗಿತ್ತು; ಹಾಸ್ಟೇಲ್‌ನಲ್ಲಿ ವಿವಿಧ ವಿದ್ಯಾರ್ಥಿಗಳು ಮಾತನಾಡುತ್ತಿದ್ದ ವಿಭಿನ್ನ ಪ್ರಕಾರದ ಕನ್ನಡ ಹಾಗೂ ಅದರಿಂದಾಗಿ ನಿರ್ಮಾಣವಾಗುತ್ತಿದ್ದ ತಪ್ಪು ತಿಳುವಳಿಕೆಗಳಿಂದ ಆ ಹಾಸ್ಯ ಹೊರಹೊಮ್ಮುತ್ತಿತ್ತು. ಆ ನಾಟಕ ಕಳೆದು ಹೋಗಿದ್ದಕ್ಕೆ ಅವರು ಪಶ್ಚಾತ್ತಾಪ ಪಡುತ್ತಾರೆ.

ನಂತರ ಅವರ ಲಂಡನ್ನಿನ ವಾಸಕ್ಕೆ ಸಂಬಂಧಿಸಿದ ಅಧ್ಯಾಯಗಳು ಬರುತ್ತವೆ. ನಾಟಕಗಳನ್ನು ನೋಡಬೇಕೆಂಬ ಬಹುದೊಡ್ಡ ಆಸೆ ಅವರಿಗೆ ಇತ್ತು. ಆದರೆ ಅವರು ಅಂಜು ಬುರುಕರಾಗಿದ್ದರು ಹಾಗೂ ಟಿಕೇಟಿನ ಬೆಲೆ ಬಹಳ ದುಬಾರಿ ಇದ್ದಿದ್ದರಿಂದ ಟಿಕೇಟು ಖರೀದಿಸಲು ಹೊಯ್ದಾಡುತ್ತಿದ್ದರು. ಕೊನೆಗೆ ಅವರು ಅದಕ್ಕೆ ವಶವಾದರು ಮತ್ತು ನಿಯಮಿತ ನಾಟಕ ಪ್ರೇಕ್ಷಕರಾದರು. ಈ ಅನುಭವ ಅವರ ಮೇಲೆ ಮಾಸದ ಪ್ರಭಾವ ಉಂಟು ಮಾಡಿತು. ನಾಟಕಗಳ ಗುಣಮಟ್ಟ, ಅಭಿನಯ ಪ್ರದರ್ಶನ, ದೃಶ್ಯಗಳು ವೇಶಭೂಷಣ ಮತ್ತು ಜನರ ನಾಟಕ

ವೀಕ್ಷಿಸುವ ಪ್ರವೃತ್ತಿ ಇವು ಅವರನ್ನು ಕೆರಳಿಸಿದವು. ಆದಾಗ್ಯೂ ಅಲ್ಲಿ ಪಶ್ಚಾತ್ತಾಪ ಕೂಡ ಇತ್ತು ಲಂಡನ್ನಿನಲ್ಲಿ ಪ್ರದರ್ಶನ ಆಗುತ್ತಿದ್ದ ನಾಟಕಗಳು ಮತ್ತು ಅವುಗಳ ಗುಣಮಟ್ಟವನ್ನು ತಾವು ಭಾರತದಲ್ಲಿ ನೋಡಿದ್ದ ನಾಟಕಗಳಿಗೆ ಹಾಗೂ ಅವುಗಳ ಗುಣಮಟ್ಟಕ್ಕೆ ಹೋಲಿಕೆ ಮಾಡುತ್ತ ಈ ಅವಧಿಯಲ್ಲಿ ತಮ್ಮ ಕುರಿತಾಗಿಯೇ ಅಸಂಖ್ಯಾತ ಪ್ರಶ್ನೆಗಳನ್ನು ಕೇಳಿಕೊಂಡರು. ನಂತರದಲ್ಲಿ ತಮ್ಮ ನಾಟಕಗಳ ಹಾಗೂ ಅವುಗಳ ಪ್ರದರ್ಶನದ ಮೂಲಕ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಪ್ರಾಯೋಗಿಕವಾಗಿ ಕಂಡುಕೊಳ್ಳಲು ಅವರಿಗೆ ಸಾಧ್ಯವಾಯಿತು. ಆದಾಗ್ಯೂ ಲಂಡನ್ನಿನಲ್ಲಿ ಅವರು ವಾಸಿಸುತ್ತಿದ್ದ ಸಮಯದಲ್ಲಿ ಅವರ ಒಳಗಿರುವ ನಾಟಕಕಾರ ಸುಪ್ತಾವಸ್ಥೆಯಲ್ಲಿ ಇದ್ದ ಮತ್ತು ಅವರು ಭಾರತಕ್ಕೆ ಮರಳಿದಾಗಲೇ ಆತ (ನಾಟಕಕಾರ) ಎಚ್ಚೆತ್ತುಕೊಂಡ. ಆದರೆ ಅವರು ವ್ಯಕ್ತಿಯಾಗಿ ನಿರುದ್ಯೋಗಿಯಾಗಿ, ಆಶಾಭಂಗವಾಗಿ, ಮಾನಸಿಕ ಮತ್ತು ದೈಹಿಕವಾದ ಕಷ್ಟಗಳನ್ನು ಅನುಭವಿಸಿದರು. ''ನಾನು ನಾಟಕಕಾರನಾಗಲು ಬಯಸಿರಲಿಲ್ಲ, ನಾಟಕವನ್ನು ಬರೆಯುವ ಆಸೆ ನನಗಿರಲಿಲ್ಲ ಅಥವಾ ನಾಟಕ ಬರೆಯುವ ಯಾವ ಉದ್ದೇಶವೂ ಇರಲಿಲ್ಲ; ನನಗೆ ಬೇಕಾಗಿದ್ದುದು ಒಂದು ಉದ್ಯೋಗ ಎಂದು'' ಅವರು ಪದೇ ಪದೇ ಹೇಳುತ್ತಾರೆ. ಈ ಕಾಲಕ್ಕೆ ಅವರು ಮುಂಬೈಯಲ್ಲಿದ್ದಾಗ ಬರೆದ ಮೂರು ನಾಟಕಗಳು ಅವರು ತಮ್ಮೊಂದಿಗೆ ತಾವು ನಡೆಸಿದ ಚರ್ಚೆಗಳಿಂದ, ತಮ್ಮೊಂದಿಗೆ ತಾವು ಆಡಿದ ಸಂಭಾಷಣೆಗಳಿಂದ ಹೊರಹೊಮ್ಮಿದ್ದವು. ''ನಾನು ಬರೆದುದ್ದು ನಾಟಕಗಳೇ ಎಂದು ನಾನು ಸ್ಪಷ್ಟವಾಗಿ ಗ್ರಹಿಸಿದ್ದಿಲ್ಲ''ವೆಂದು ಅವರು ಹೇಳುತ್ತಾರೆ.

ಎಷ್ಟೇ ಕಡಿಮೆ ಮಹತ್ವವನ್ನು ಅವರು ಈ ನಾಟಕಗಳಿಗೆ ಕೊಟ್ಟಿದ್ದಿರಲಿ, ಇವು ಅವರು ಬದುಕಿನಲ್ಲಿ ಹೊಸ ತಿರುವು ಉಂಟು ಮಾಡಿದವು. ಅವರ ಸ್ನೇಹಿತರ ಮೂಲಕ ಅವರ ಬರಹದ ಕುರಿತಾದ ಸಮಾಚಾರ ಹರಡಿತು. ಅವರು ಪಂಡಿತ ತಾರನಾಥರೆದರು ಅವರ ನಾಟಕಗಳು ಓದಿದರು. ಅಲ್ಲಿಂದ ಈ ಸಮಾಚಾರ ಧಾರವಾಡಕ್ಕೆ ತಲುಪಿತು. ಅದೇ ಹೊತ್ತಿಗೆ ಅವರು ಕರ್ನಾಟಕ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಂಡರು. ಅವರು ಕಾಲೇಜಕ್ಕೆ ಸೇರಿದ ಮೂರನೇ ತಿಂಗಳಲ್ಲಿ ಅವರ ನಾಟಕ ಅಲ್ಲಿ ಪ್ರದರ್ಶಿಸಲ್ಪಟ್ಟಿತು ಹಾಗು ತಮ್ಮ ೨೬ನೇ ವಯಸ್ಸಿನಲ್ಲಿ ಅವರು ನಾಟಕಕಾರರಾಗಿ ಗುರ್ತಿಸಲ್ಪಟ್ಟರು. ಅವರು 'ಹರಿಜನ್ವಾರ' ನಾಟಕ ಸಾರ್ವಜನಿಕ ಸಭೆಯಲ್ಲಿ ನಿಂದನೆಗೆ ಒಳಗಾದಾಗಲೂ, ಧಾರವಾಡದಲ್ಲಿ ಅವರಿಗೆ ಆರಂಭದಲ್ಲಿ ಸಮಸ್ಯೆಗಳು ಇದ್ದಾಗಲೂ, ತಮ್ಮನ್ನು ಒಬ್ಬ ನಾಟಕಕಾರನಾಗಿ ಗುರ್ತಿಸಿದ್ದಕ್ಕಾಗಿ ಕರ್ನಾಟಕ ಕಾಲೇಜಿಗೂ, ಧಾರವಾಡಕ್ಕೂ ಮತ್ತು ತಮ್ಮ ನಾಟಕಗಳನ್ನು ಪ್ರದರ್ಶನ ಮಾಡಿದ್ದಕ್ಕಾಗಿ ವಿದ್ಯಾರ್ಥಿಗಳಿಗೂ ಅವರು ಪೂರ್ಣ ಕ್ರೆಡಿಟ್ ಕೊಡುತ್ತಾರೆ. ಧಾರವಾಡದಲ್ಲೇ ಅವರಿಗೆ ಎಲ್ಲವೂ ಸಿಕ್ಕುತ್ತದೆ; ಅವರು ವರ್ಷವೊಂದಕ್ಕೆ ಎರಡು ಪೂರ್ಣಪ್ರಮಾಣದ ನಾಟಕಗಳನ್ನು ಬರೆದರು. ಆ ನಾಟಕಗಳನ್ನು ಮೊದಲು ವಿದ್ಯಾರ್ಥಿಗಳಿಂದ ರಂಗಭೂಮಿಯ ಮೇಲೆ ಪ್ರದರ್ಶಿಸುತ್ತಿದ್ದರು, ನಂತರ ತಾವೇ ಹುಟ್ಟುಹಾಕಿದ್ದ ಹವ್ಯಾಸಿ ಗುಂಪಿನಿಂದ ಪ್ರದರ್ಶಿಸುತ್ತಿದ್ದರು; ಆ ಗುಂಪಿನ ಜತೆ ಸ್ವತಃ ಅವರೇ ವಿವಿಧ ಸ್ಥಳಗಳಿಗೆ ಪಯಣಿಸುತ್ತಿದ್ದರು. ಎಲ್ಲಕ್ಕೂ ಮಿಗಿಲಾಗಿ, ಧಾರವಾಡದಲ್ಲೇ ಅವರು ಮೊಟ್ಟ ಮೊದಲ ಬಾರಿಗೆ ಒಬ್ಬ ನಾಟಕಕಾರರಾಗಿ ಗುರ್ತಿಸಲ್ಪಟ್ಟರು. ಮೇಲಿಂದ ಮೇಲೆ ತಮ್ಮ ಮೇಲಿರುವ

ಧಾರವಾಡದ ಋಣವನ್ನು ಅವರು ಸ್ಮರಿಸಿಕೊಳ್ಳುತ್ತಾರೆ. ಧಾರವಾಡ ತಮ್ಮನ್ನು ತೊಟ್ಟಿನಲ್ಲಿ ಹಾಕಿ (R.V. ಜಾಗಿರದಾರ) ತಮಗೆ ಶ್ರೀರಂಗ ಎಂದು ನಾಮಕರಣ ಮಾಡಿತು ಎಂದು ಅವರು ಅತ್ಯಂತ ಕಾವ್ಯಮಯವಾಗಿ ಹೇಳುತ್ತಾರೆ. ಇದೇ ಕಾವ್ಯನಾಮದಿಂದ ಕರ್ನಾಟಕದಾದ್ಯಂತ ಅವರು ಹೆಸರುವಾಸಿಯಾದರು.

ಈ ಪುಸ್ತಕ ಓದಿಯಾದ ಮೇಲೆ ನಾನು ಏನು ಮನಗಂಡೆನೆಂದರೆ ನನ್ನ ಜೀವನದಲ್ಲಿ ಹಿಂದೆಂದಿಗಿಂತಲೂ ನಾನು ನನ್ನ ತಂದೆಯನ್ನು ಈಗ ಹೆಚ್ಚು ಅರ್ಥಮಾಡಿಕೊಂಡೆನೆಂಬುದು. ಇದು ಹೋರಾಟದ ಕಥೆ. ಮೊದಲನೆಯ ಅಧ್ಯಾಯದಲ್ಲಿ ''ಏನಾದರೂ ಮಾಡಲು ಅತ್ಯಂತ ಬುದ್ಧಿಪೂರ್ವಕವಾಗಿ ಮಾಡುವ ಪ್ರಯತ್ನಗಳ ಕಥೆ; ಆದರೆ, ಎಲ್ಲಕ್ಕೂ ಮಿಗಿಲಾಗಿ, ಇದು ನನ್ನ ಕಥೆ''ಯೆಂದು ಅವರು ಹೇಳುತ್ತಾರೆ. ನಿಜ, ಇಡೀ ಪುಸ್ತಕ ರಂಗಭೂಮಿಗಾಗಿಯೇ ಜನ್ಮ ತಳೆದ ವ್ಯಕ್ತಿಯ ಕಥೆ. ಪ್ರತಿಯೊಂದು ಅಕ್ಷರ ಕೂಡ ಅವರ ರಂಗಭೂಮಿಯ ಕುರಿತಾದ ಗೀಳಿನ ಬಗ್ಗೆ ತಿಳಿಸುತ್ತದೆ. ಅತ್ಯಂತ ಮಹತ್ವದ್ದೇನೆಂದರೆ, ರಂಗಭೂಮಿಯ ಎಲ್ಲಾ ಮಗ್ಗಲುಗಳ ಬಗ್ಗೆ- ಉದಾಹರಣೆಗೆ ನಟರ ಸ್ಥಾನಮಾನದ ಬಗ್ಗೆ- ಅವರು ಹೊಂದಿದ್ದ ಕಾಳಜಿಗಳನ್ನು ಈ ಪುಸ್ತಕ ನಮ್ಮುಂದೆ ತೆರೆದಿಡುತ್ತದೆ. ನಟರಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನ ಇಲ್ಲವೆಂದು ಅವರು ವಿಷಾದದಿಂದ ಹೇಳುತ್ತಾರೆ. ತಮ್ಮ ಬಾಲ್ಯದಲ್ಲಿ ಅವರು ಇದನ್ನು ಅಗರಖೇಡದಲ್ಲಿ ಸ್ವತಃ ನೋಡಿದ್ದರು. ಮರಾಠಿ ನಟ ಗಣಪತ್‌ರಾವ ಜೋಶಿ ಬಹಳ ಕುಡಿಯುತ್ತಿದ್ದರೆಂಬುದನ್ನು ಅವರು ವಿನೋದಶೀಲ ಧಾಟಿಯಲ್ಲಿ ಹೇಳುತ್ತಾರೆ. ಈ ಜಗತ್ತು ಎಂದು ನಟನ ಕುರಿತು ಒಂದು ಒಳ್ಳೆಯ ಮಾತು ಆಡಿದ್ದಿದೆ? ದೇವರು ಸ್ವರ್ಗದಲ್ಲಿ ಗಣಪತ್‌ರಾವ್‌ಗೆ ಸಾಕಷ್ಟು ಸೆರೆ ಒದಗಿಸದಿದ್ದಲ್ಲಿ ಶ್ರೇಷ್ಠ ಅಭಿನಯವನ್ನು ನೋಡುವ ಅವಕಾಶ ಅವರಿಗೆ ಒದಗಿಬರಬಹುದಿತ್ತೆಂದು ಅವರು ಆಸೆ ಮಾಡುತ್ತಾರೆ. ಆದರೆ ಹೆಚ್ಚು ಗಂಭೀರ ಸ್ವರದಲ್ಲಿ ಅವರು ಸಮಾಜವನ್ನು ಜರಿಯುತ್ತಾರೆ. ನಟಿಯರ ಕಡೆಗೆ ಕಾಮಪೀಡಿತ ಕಣ್ಣುಗಳಿಂದ ನೋಡುವ, ಅವರನ್ನು ತಪ್ಪು ದಾರಿಗೆ ಎಳೆಯುವ ಹಾಗೂ ನಂತರದಲ್ಲಿ ಅವರನ್ನು ಅನೈತಿಕ ಬಾಳ್ವೆ ನಡೆಸುವಂಥವಳೆಂದು ಕರೆಯುವ ಪ್ರೇಕ್ಷಕ ವರ್ಗದಲ್ಲಿನ ಪುರುಷರನ್ನು ಅವರು ಜರಿಯುತ್ತಿದ್ದರು. ವಾಸ್ತವದಲ್ಲಿ ನಾನು ಕಂಡುಕೊಂಡ, ನನ್ನ ತಂದೆಯ ಕುರಿತಾಗಿ ನಾನು ಅರಿಯದಂಥ ವಿಷಯ ಏನೆಂದರೆ ವಿನೀತ ಮರ್ಯಾದಸ್ಥ ಸ್ತ್ರೀಯರು ರಂಗಭೂಮಿಯ ಮೇಲೆ ಬರುವುದನ್ನು ನೋಡುವ ಹಿರಿದಾದ ಆಸೆ ಅವರಿಗಿತ್ತೆಂಬುದು. ಇದನ್ನು ಸಾಧಿಸಲು ಉಪಯೋಗಿಸಿದ ವಿವಿಧ ಸಾಧನಗಳ ಕುರಿತು ಅವರು ಹೇಳುತ್ತಾರೆ; ಕೊನೆಗೆ ಅವರು ಇದನ್ನು ಸಾಧಿಸುವಲ್ಲಿ ಯಶಸ್ಸು ಕಂಡರು. ನಿಜಕ್ಕೂ ಇದೊಂದು ಕ್ರಾಂತಿ. ರಂಗಭೂಮಿಯನ್ನು ಮರ್ಯಾದಸ್ಥ ಸ್ಥಾನವನ್ನಾಗಿ ಮಾಡುವ, ಅದಕ್ಕೆ ಒಳ್ಳೆಯ ಪ್ರತಿಷ್ಠೆಯನ್ನು, ಸತ್ಕೀರ್ತಿಯನ್ನು ತಂದುಕೊಡುವ ಪ್ರಯತ್ನದ ಒಂದು ಭಾಗವಾಗಿ ಅವರು ಇದನ್ನು ಸಾಧಿಸಿ ತೋರಿಸಿದರು.

ವಿವಾದಗಳನ್ನು ಹುಟ್ಟು ಹಾಕಿದ ಮತ್ತು ವಿವಾದಗಳಲ್ಲಿ ಸಿಲುಕಿದ ವ್ಯಕ್ತಿಯಿಂದ ನಿರೀಕ್ಷಿಸುವಂತೆ ಈ ಪುಸ್ತಕದಲ್ಲಿ ನಾವು ಸಾಕಷ್ಟು ವಿವಾದದ ಸಂಗತಿಗಳನ್ನು ಕಾಣುತ್ತೇವೆ. ವೃತ್ತಿರಂಗಭೂಮಿ ಅವರಿಗೆ

ಸೇರಿಕೆಯಾಗಲಿಲ್ಲ ಹಾಗೂ ಅದರ ಬಗ್ಗೆ ಅವರಿಗೆ ತಿರಸ್ಕಾರವಿತ್ತು. ಆದರೆ ಇಂದು ಅದು ರಾಜಕೀಯವಾಗಿ ದೊಡ್ಡ ತಪ್ಪು ಆಗುತ್ತದೆ. ಆದರೆ ಅವರ ಈ ಮನೋವೃತ್ತಿಗೆ ತಮ್ಮದೇ ಆದ ಕಾರಣಗಳಿದ್ದವು. ಅವರಿಗೆ ಸೇರಿಕೆಯಾಗದಿದ್ದುದು ಅವರ ಸ್ವೋಪಜ್ಞತೆಯ ಅಭಾವ. ಅಲ್ಲದೆ, ವೃತ್ತಿರಂಗಭೂಮಿಯವರು ಅದೇ ಹಳೆಯ ನಾಟಕಗಳನ್ನೇ ದಶಕಗಳವರೆಗೆ ಪ್ರದರ್ಶಿಸುತ್ತ ನಡೆದರು; ಅವರು ತಿದ್ದಿಕೊಳ್ಳಲು ಮನಸ್ಸು ಮಾಡಲಿಲ್ಲ; ಅವರ ಭಾಷೆ ವಿಪರೀತ ಅಲಂಕಾರಿಕವಾಗಿತ್ತು, ಅವಾಸ್ತವಿಕವಾಗಿತ್ತು ಮತ್ತು ಅವರ ಒರಟುತನ ಹಲವು ಬಾರಿ ಅಶ್ಲೀಲತೆಯ ಅಂಚಿಗೆ ತಲುಪುತ್ತಿತ್ತು. ಇಷ್ಟಾಗಿಯೂ ಬೇರೆ ಉದ್ಯೋಗದಿಂದ ತನ್ನ ಹೊಟ್ಟೆಪಾಡನ್ನು ತುಂಬಿಕೊಳ್ಳುವವನಿಗೆ ತನ್ನ ಜೀವನೋಪಾಯಕ್ಕಾಗಿ ರಂಗಭೂಮಿಯನ್ನೇ ನೆಚ್ಚಿದವನನ್ನು ಟೀಕಿಸುವ ಹಕ್ಕು ಇಲ್ಲವೆಂದು ಅವರು ಒಪ್ಪಿಕೊಳ್ಳಲು ಸಿದ್ಧರಿದ್ದರು. ಹೀಗಾಗಿ ಒಬ್ಬ ಕಂಪನಿ ಮಾಲೀಕ 'ಅವರು ನಟರ ತಂಡವನ್ನು ರೂಪಿಸಲಿ, ಆಗ ಈ ಕೆಲಸ ಎಷ್ಟು ಪ್ರಯಾಸದಾಯಕವೆಂಬುದು ತಿಳಿಯುತ್ತೆ' ಎಂದು ಹೇಳಿದಾಗ, ನನ್ನ ತಂದೆ ಕೂಡಲೇ ಆ ಆಹ್ವಾನವನ್ನು ಸ್ವೀಕರಿಸಿ ಕರ್ನಾಟಕ ಹವ್ಯಾಸಿಗಳನ್ನು (Amatueurs) ಹುಟ್ಟು ಹಾಕಿದರು. ಅದರಿಂದಲೆ ಉತ್ತರ ಕರ್ನಾಟಕದಲ್ಲಿ ಹವ್ಯಾಸಿ ಚಳುವಳಿ ಪ್ರಾರಂಭಗೊಂಡಿತು. ಗ್ರಾಮೀಣ ಪ್ರದರ್ಶನಗಳನ್ನು ಅವುಗಳ ಸಂಗೀತದೊಂದಿಗೆ ನೋಡಿ ಖುಷಿ ಪಟ್ಟ ವ್ಯಕ್ತಿಗೆ ಕಂಪನಿ ನಾಟಕಗಳಲ್ಲಿನ ಸಂಗೀತ ಸೇರದಿರುವುದು ಸ್ವಲ್ಪ ಆಶ್ಚರ್ಯ ತರುತ್ತದೆ. ಆದರೆ ಅದಕ್ಕೆ ಅವರು ಕೊಡುವ ಕಾರಣವೇನೆಂದರೆ ವೃತ್ತಿರಂಗಭೂಮಿಯವರು ಸಂಗೀತಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದುದೇ ತಮ್ಮನ್ನು ಕುಪಿತರನ್ನಾಗಿ ಮಾಡಿತು ಯಾಕೆಂದರೆ, ಒಂದು ಹಾಡನ್ನು ಪುನರಾವರ್ತನೆ ಮಾಡುವ ಪ್ರಕ್ರಿಯೆಯಲ್ಲೇ ಸಿಲುಕಿಕೊಂಡರೆ ನಾಟಕ ಮುಂದುವರಿಯುವುದು ಹೇಗೆ ಸಾಧ್ಯವಿದೆಯೆಂದು ಅವರು ಕೇಳುತ್ತಾರೆ. ಆದಾಗ್ಯೂ ತಮ್ಮ ಸಹಜ ಪ್ರಾಮಾಣಿಕತೆಯಿಂದ ಅವರು ತಮ್ಮಲ್ಲಿದ್ದ ಸಂಗೀತದ ತಿಳುವಳಿಕೆಯ ಅಭಾವವನ್ನು ಒಪ್ಪಿಕೊಳ್ಳುತ್ತಾರೆ ಹಾಗೂ ಅವರಲ್ಲಿನ ಈ ಕೊರತೆಯೇ ಅವರು ಸಂಗೀತ ತಿರಸ್ಕರಿಸಲು ಕಾರಣವಾಗಿತ್ತೇನೊ ಎಂದು ಆಶ್ಚರ್ಯಪಡುತ್ತಾರೆ.

ಈ ಪುಸ್ತಕದಲ್ಲಿನ ಕೊನೆಯ ಮಾತುಗಳು ಬಹಳ ಕರುಣಾಜನಕವಾಗಿವೆ. ರಂಗಭೂಮಿಯ ಉತ್ತಮತೆಗಾಗಿ ತಾವು ಶ್ರಮಿಸಿದ್ದಾಗಿ ಹೇಳಲು ಒಂದು ಕಾಲಕ್ಕೆ ತಾವೇ ಬರೆದಿದ್ದ ಕವನದಿಂದ ಕೆಲವು ಸಾಲುಗಳನ್ನು ಅವರು ಉದ್ಧರಿಸುತ್ತಾರೆ. ಆ ಕೆಲಸವನ್ನು ಪೂರೈಸಲು ತಮಗೆ ಸಾಧ್ಯವಾಗಿದೆಯೇ? ಎಂದು ಕವನವೇ ಕೇಳುತ್ತದೆ. ತಮ್ಮ ಸಹಜ ಪ್ರಾಮಾಣಿಕ ಆತ್ಮಶೋಧದಿಂದ ಒಬ್ಬ ವ್ಯಕ್ತಿ ಏಕಾಂಗಿಯಾಗಿ ಇಂಥ ಕೆಲಸ ಮಾಡಲು ಸಾಧ್ಯವಿಲ್ಲ ಎಂಬ ಉತ್ತರವನ್ನು ಅವರು ಕಂಡುಕೊಳ್ಳುತ್ತಾರೆ. ಆದಾಗ್ಯೂ ಈ ಪುಸ್ತಕ ಸಕಾರಾತ್ಮಕವಾದ ನೆಲೆಯಲ್ಲಿ ಕೊನೆಗೊಳ್ಳುತ್ತದೆ. ನನಗೆ ದಣಿವು ಆಗಿಲ್ಲ, ನಾನು ಬರಹವನ್ನು ಮುಂದುವರಿಸುತ್ತೇನೆಂದು ಅವರು ಪ್ರತಿಪಾದಿಸುತ್ತಾರೆ. ನಿಜ, ಪರದೆ ಕೆಳಗಿಳಿಯಲು ಇನ್ನೂ ಸಾಕಷ್ಟು ಸಮಯವಿದೆ. ಅದೇ ಸತ್ಯವಾಗಿತ್ತು ಯಾಕೆಂದರೆ ಅಖಿಲ ಭಾರತದ ನಾಟಕಕಾರರನ್ನಾಗಿ ಅವರನ್ನು ಪ್ರತಿಷ್ಠಾಪಿಸಿದ, ಅತ್ಯಂತ ನಾವಿನ್ಯವಾದ (innovative)ಹಾಗೂ ಅತ್ಯಂತ ಪ್ರಸಿದ್ಧ ನಾಟಕಗಳನ್ನು ಅವರು ಬರೆಯುತ್ತ ನಡೆದರು.

ಇದು ವೃತ್ತಾಂತ ಗ್ರಂಥ. ಒಬ್ಬ ವ್ಯಕ್ತಿಯ ಅಚಲ ಹೋರಾಟದ ಹಾಗೂ ಅವನ ನಿರಂತರ ಆತ್ಮಾವಲೋಕದ ಕಥೆಯನ್ನು ನಾವು ಪಡೆಯುವಂತೆ ಭೂತಕಾಲದ, ಒಂದು ಯುಗದ ಹೊಳುವುಗಳನ್ನು ಅವರ ನೆನಪುಗಳಿಂದ ಪಡೆಯುತ್ತೇವೆ. ಇಡೀ ಪುಸ್ತಕದ ಶ್ರೇಷ್ಠತೆಯ ಹೆಗ್ಗುರುತು ಯಾವುದೆಂದರೆ ಅದರ ಪ್ರಾಮಾಣಿಕತೆ. ತಮ್ಮ ಬದುಕಿನಲ್ಲಿ ಎಲ್ಲಕ್ಕಿಂತ ಹೆಚ್ಚು ಪ್ರಾಧಾನ್ಯವಾಗಿದ್ದ ರಂಗಭೂಮಿಗೆ, ಕನ್ನಡ ರಂಗಭೂಮಿಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡ ಪ್ರಾಮಾಣಿಕತೆಯನ್ನು ಈ ಪುಸ್ತಕ ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ರಂಗಭೂಮಿಗೆ ಸಂಬಂಧಿಸಿದ ಅವರ ಹಲವು ವಿಚಾರಗಳನ್ನು ಒಳಗೊಂಡ ಕೊನೆಯ ಅಧ್ಯಾಯ ಅವರ ಕಾಳಜಿಗಳ ಆಳ ಹಾಗೂ ಅವರ ಸಂಪೂರ್ಣ involment ಅನ್ನು ಸೂಚಿಸುತ್ತದೆ. ಅವರು ತೀರಿಹೋದ ಎಷ್ಟೋ ವರ್ಷಗಳ ನಂತರ ಪ್ರಕಟಗೊಂಡ ಅವರದೊಂದು ಪುಸ್ತಕಕ್ಕೆ blurb ಬರೆಯುತ್ತ ಅವರನ್ನು ಸಂಪೂರ್ಣ ರಂಗಭೂಮಿಯ ವ್ಯಕ್ತಿ (complete man of the theatre) ಯೆಂದು ಕರೆದಿದ್ದೆ. ನಾನು ಈ ಪುಸ್ತಕ ಓದಿಯಾದ ಮೇಲೆ ಆ ಶಬ್ದಗಳು ಬಹಳ ನಿಜ ಹಾಗೂ ಅಷ್ಟೇ ಸಮಂಜಸ ಅನ್ನಿಸಿದವು. ರಂಗಭೂಮಿಯ ಎಲ್ಲಾ ಕ್ಷೇತ್ರಗಳಲ್ಲಿ ಇಷ್ಟೊಂದು ಸಕ್ರೀಯವಾಗಿ ದುಡಿದವರು ಕರ್ನಾಟಕದಲ್ಲಿ ಅಷ್ಟೆ ಅಲ್ಲ ಇಡೀ ಭಾರತದಲ್ಲೂ ಕೂಡ ಬೆರಳೆಣಿಕೆಯ ಸಂಖ್ಯೆಯಲ್ಲಿ ಇದ್ದಿರಬಹುದು. ಉತ್ತಮ ತರದ ನಾಟಕಗಳನ್ನು ಪಡೆಯುವುದು, ಉತ್ತಮ ತರದ ಪ್ರದರ್ಶನಗಳನ್ನು ಪಡೆಯುವುದು, ಉತ್ತಮ ತರದ ನಾಟಕ ಶಾಲೆಗಳನ್ನು (ರಂಗಮಂದಿರ) ಪಡೆಯುವುದು, ಉತ್ತಮ ತರದ ಪ್ರೇಕ್ಷಕರನ್ನು ಪಡೆಯುವುದು, ರಂಗಭೂಮಿ ಮತ್ತು ಅದರ ಕೆಲಸಗಾರರನ್ನು ಗೌರವಿಸುವಂತೆ ಜನರನ್ನು ತಯಾರು ಮಾಡುವುದು, ರಂಗ ಕಲಾವಿದರು ಮತ್ತು ನಿರ್ಮಾಪಕರು ತಮ್ಮ ಪ್ರೇಕ್ಷಕರನ್ನು ಗೌರವಿಸುವಂತೆ ಮಾಡುವುದು, ಇಂಥ ವಿಚಾರಗಳು ನಿರಂತರವಾಗಿ ಅವರ ತಲೆಯಲ್ಲಿರುತ್ತಿದ್ದವು. ನಾನು ಏನನ್ನೇ ಮಾಡಲಿ ನಾನು ರಂಗಭೂಮಿಗಾಗಿ ಏನನ್ನಾದರೂ ಒಳ್ಳೆಯದನ್ನು ಮಾಡುತ್ತಿದ್ದೇನೆಯೆ? ಎಂದು ಕೇಳಿಕೊಳ್ಳುವವನು ಯಾರೂ ಇರಲಿಲ್ಲ. ಆದರೆ ರಂಗಭೂಮಿಗಾಗಿ ಅವರ ಅಪರಿಮಿತ ಸಮರ್ಪಣೆಯನ್ನು ಸರಿಯಾಗಿ ಗುರ್ತಿಸುವ ಕೆಲಸ ಆಗಿಲ್ಲ. ಬಹುತೇಕ ಜನರು ಅವರೊಬ್ಬ ನಾಟಕಕಾರೆಂದು ಹೇಳುತ್ತಾರೆ, ಅವರ ಕುರಿತು ಮಾತನಾಡುವಾಗ ಅವರು (ಶ್ರೀರಂಗರ) ಬರೆದ ನಾಟಕಗಳ ಕುರಿತಾಗಿಯೇ ಪ್ರಸ್ತಾಪಿಸುತ್ತಾರೆ. ಹೀಗೆ ಮಾಡಿದಾಗ ಅವರ ಬರಹದ ಬಹುದೊಡ್ಡ ಪಾಲು ಪ್ರಸ್ತಾಪಗೊಳ್ಳದೆ ಹಾಗೇ ಉಳಿದುಬಿಡುತ್ತದೆ ಏಕೆಂದರೆ ಅವರ ಬದುಕಿನಲ್ಲಿ ಬಹು ಮಹತ್ವದ ಪಾತ್ರವಹಿಸಿದ ರಂಗಭೂಮಿಗಾಗಿನ ಅವರ ಕಾಣಿಕೆಯನ್ನು ಅವರು ನಿರ್ಲಕ್ಷಿಸುತ್ತಾರೆ.

ಭಾಷಾಂತರ ಸರಳವಾದ ಕೆಲಸ ಅಲ್ಲ. ಅದರಲ್ಲೂ ಭಾರತೀಯ ಭಾಷೆಯೊಂದರಿಂದ ಇಂಗ್ಲೀಷಿಗೆ ಭಾಷಾಂತರ ಮಾಡುವುದು ಹೆಚ್ಚಿನ ಕಷ್ಟದ ಕೆಲಸ. ನಾನು ಅನುವಾದಕಿ ಅಲ್ಲ. ಭಾಷಾಂತರದ ದೃಷ್ಟಿಯಿಂದ ಪರೀಕ್ಷಿಸಿದರೆ ನನ್ನ ಕನ್ನಡ ಭಾಷಾಜ್ಞಾನ ಅಷ್ಟು ಚೆನ್ನಾಗಿಲ್ಲ. ಇಂಥ ಪ್ರಯತ್ನಕ್ಕೆ ಕೈ ಹಾಕಿದ್ದುದು ಒಂದು ರೀತಿಯಲ್ಲಿ ನನ್ನ ಕೆಚ್ಚೆದೆಯಾಗಿತ್ತು ಎಂದು ನಾನು ಭಾವಿಸುತ್ತೇನೆ.

ಆದರೆ ಈ ಕಥೆಯನ್ನು ಹೆಚ್ಚಿನ ಓದುಗರಿಗೆ ತಲುಪಿಸಬೇಕೆಂಬ ಆಸೆ ನನ್ನನ್ನು ಈ ಕೆಲಸ ಕೈಗೆತ್ತಿಕೊಳ್ಳುವಂತೆ ಪ್ರೇರೇಪಿಸಿತು ಅಂತ ಕಾಣುತ್ತೆ. ನನಗನ್ನಿಸುತ್ತೆ ಇದು ಒಬ್ಬ ವ್ಯಕ್ತಿಯ ವೃತ್ತಾಂತ ಅಲ್ಲ, ಇದು ಕಲೆಯ ಗೀಳಿನ ಕಥೆಯಾಗಿದೆ, ಇದು ಸಕ್ರಿಯವಾದ ಹಾಗೂ ನಿರಂತರವಾದ ಒಂದು ಉದ್ದೇಶದೊಂದಿಗಿನ involvement ನ ಕಥೆಯಾಗಿದೆ. ಅವರ ಕನ್ನಡ ರಂಗಭೂಮಿಯ ಇತಿಹಾಸವನ್ನು ತಾವು ಬರೆಯುತ್ತಿಲ್ಲವೆಂಬುದನ್ನು ಬಹಳ ಒತ್ತುಕೊಟ್ಟು ಹೇಳುತ್ತಾರೆ. ಆದಾಗ್ಯೂ ಅವರು ಅತ್ಯಂತ ಬೆಲೆಯುಳ್ಳ ಕೆಲಸವನ್ನು ಮಾಡಿದ್ದಾರೆಂದು ಅನ್ನಿಸುತ್ತದೆ. ರಂಗಭೂಮಿ ಜಗತ್ತಿನಲ್ಲಿ, ಸುಮಾರು ೪ ದಶಕಗಳ ಅವಧಿಯಲ್ಲಿ ಸಾಧಾರಣ ಗ್ರಾಮೀಣ ಪ್ರದರ್ಶನಗಳಿಂದ ಆರಂಭಗೊಂಡು ಲಂಡನ್ನಿನ ವೆಸ್ಟ್ ಎಂಡ್ ಥಿಯಟರಿನ ಅತ್ಯಂತ ಕಲಾಕೌಶಲ್ಯದ ನಿರೂಪಣೆಯ ನಾಟಕದವರೆಗೆ, ಅಲ್ಲಿಂದ ಕರ್ನಾಟಕದಲ್ಲಿನ ಹವ್ಯಾಸಿ ರಂಗಭೂಮಿಯ ಆರಂಭದವರೆಗೆ ಒಬ್ಬ ವ್ಯಕ್ತಿ ಕೈಕೊಂಡ ಪ್ರವಾಸ ಕಥೆಯ ಮೂಲಕ ಅವರು ನಮಗೆ ಕರ್ನಾಟಕ ರಂಗಭೂಮಿ ಮಾತ್ರವಲ್ಲದೆ, ರಂಗಭೂಮಿಯ ಒಂದು ಜೀವಂತ dynamic ಚಿತ್ರಣವನ್ನು ಕೊಟ್ಟಿದ್ದಾರೆ, ಕರ್ನಾಟಕದ ಆಚೆಗೂ, ದೇಶದ ಇನ್ನಿತರ ಭಾಗಗಳಿಗೂ ಹೋಗಬಹುದಾದಂಥ ವಿಚಾರಗಳನ್ನು ಹಾಗೂ ಪ್ರಯೋಗಗಳನ್ನು ಈ ೧೭೯ ಪುಟಗಳ ಚಿಕ್ಕ ಪುಸ್ತಕ ಒಳಗೊಂಡಿದೆ. ಇದನ್ನು ಭಾಷಾಂತರ ಮಾಡುವಂಥ ನನ್ನ ಅಂತಿಮ ಉದ್ದೇಶ ಏನೆಂದರೆ ಇದು ಸಾಧ್ಯವಾಗಬೇಕೆನ್ನುವ ಆಸೆಯೇ ಸೈ.

ಡಾ. ಬಿ.ಪಿ. ಡೋಣೂರ, ಎಫ್. ೩೦, ಪಾವಟೆನಗರ, ಧಾರವಾಡ-೩.

ವಿಸ್ಲಾವಾ ಶಿಂಬೊರ್ಸ್ಕಾ-ಗದ್ದಲದ ನಡುವೆ ಒಂದು ಮೆಲು ದನಿ

ಹಿಂದೀ ಮೂಲ: **ವಿಜಯಕುಮಾರ**
ಅನುವಾದ: **ಆರ್.ಪಿ. ಹೆಗಡೆ**

ಕಳೆದ ಯುಗಗಳ ಯುದ್ಧಗಳೇ ನನ್ನನ್ನು ಕ್ಷಮಿಸಿ
ನಾನು ಹೂಗಳೊಂದಿಗೆ ಮನೆಗೆ ಮರಳುತ್ತಿದ್ದೇನೆ
ಬೆಳೆಯುತ್ತಿರುವ ಉಗುರುಗಳೇ ನನ್ನನ್ನು ಕ್ಷಮಿಸಿ
ನಾನು ನನ್ನ ಬೆರಳಲ್ಲಿ ಸೂಚಿ ಚುಚ್ಚಿಸಿಕೊಂಡು ಬಂದಿದ್ದೇನೆ
ನಾನು ಕ್ಷಮೆ ಯಾಚಿಸುತ್ತಿದ್ದೇನೆ ಅವರೊಡನೆ
ಒಂದು ಮಂದಗತಿಯ ನೃತ್ಯದ ಧುನ ರಿಕಾರ್ಡಗಾಗಿ ಕರೆಯುತ್ತಿದ್ದಾರೆ
ರೇಲ್ವೆ ಸ್ಟೇಶನ್ನಿನ ಜನರೊಡನೆ ಕ್ಷಮೆ ಬೇಡುತ್ತಿದ್ದೇನೆ
ಬೆಳಗಿನ ಐದುಗಂಟೆಗೆ ನಿದ್ದೆ ಮಾಡಲು
ನನ್ನನ್ನು ಕ್ಷಮಿಸಿ ಮುರಿದ ಭರವಸೆಗಳೇ
ಆಗಾಗ ಮುಗುಳ್ನಕ್ಕು ಬಿಡುತ್ತೇನೆ
ನನ್ನನ್ನು ಕ್ಷಮಿಸು ಮರುಭೂಮಿಯೇ
ಒಂದು ಚಮಚೆ ನೀರು ತೆಗೆದುಕೊಂಡು ಬರಲಾರದಾದೆ
ಕತ್ತರಿಸಿ ಹಾಕಿದ ಮರಗಳೇ
ನಾನು ನಿಮ್ಮಲ್ಲಿ ಕ್ಷಮಾ ಪ್ರಾರ್ಥಿಯಾಗಿದ್ದೇನೆ
ಮೇಜಿನ ನಾಲ್ಕು ಕಾಲುಗಳಿಗಾಗಿ

ದೊಡ್ಡ ಪ್ರಶ್ನೆಗಳೇ ಕ್ಷಮೆಯಾಚಿಸುವೆ
ಚಿಕ್ಕ ಉತ್ತರಗಳಿಗಾಗಿ

(ಒಂದು ಚಿಕ್ಕ ನಕ್ಷತ್ರದ ಕೆಳಗೆ)

ಪೋಲಿಶ್ ಕವಯಿತ್ರಿ ವಿಸ್ಲಾವಾ ಶಿಂಬೊರ್ಸ್ಕಾ ಕಳೆದ ಐವತ್ತು ವರ್ಷಗಳಲ್ಲಿ ಒಟ್ಟೂ ೨೫೦ ಕವಿತೆಗಳನ್ನು ಬರೆದಿದ್ದಾರೆ. ಅಂದರೆ ಪ್ರತಿವರ್ಷ ೪ ಅಥವಾ ೫ ಕವಿತೆಗಳು! ಆದರೆ ಇಷ್ಟರಿಂದಲೇ ಜಗತ್ತಿನ ಕವಿತೆಗಳಲ್ಲಿ ಅವರ ಸ್ಥಾನ ಅಪ್ರತಿಮವೆನಿಸಿತು. ಸುಮಾರಾಗಿ ಅವರ ಪ್ರತಿಯೊಂದು ಕವಿತೆಯೂ 'ಮಾಸ್ಟರ್ ಪೀಸ್' ಆಗಿದೆ. ಕಳೆದ ಹತ್ತು ವರ್ಷಗಳಲ್ಲಿ ವಿಶ್ವದ ಎಲ್ಲ ಭಾಷೆಗಳಲ್ಲಿ ಅವುಗಳ ಅನುವಾದವಾಗಿದೆ. ಸಾಕಷ್ಟು ಲೋಕಪ್ರಿಯತೆಯೂ ದಕ್ಕಿದೆ. ಅವರ ಕವನ ಸಂಕಲನಗಳು ಜನಪ್ರಿಯ ಕಾದಂಬರಿಗಳ ಹಾಗೆ ಮಾರಾಟವಾಗಿವೆ. ಆದರೆ ೧೯೯೬ ರಲ್ಲಿ ಅವರಿಗೆ ನೊಬೆಲ್ ಪುರಸ್ಕಾರ ಸಿಗುವವರೆಗೆ, ಪೋಲೆಂಡ್‌ನ ಹೊರಗಿನ ಬಹುಜನರಿಗೆ ಅವರ ಕವಿತೆಗಳು ಗೊತ್ತಿರಲಿಲ್ಲ ಪೋಲಿಶ್ ಭಾಷೆಯಲ್ಲಿ ಅವರ ಕವಿತಾ ಸಂಗ್ರಹ 'ನಾವು ಬದುಕಿರಲು ಇದೇ ಕಾರಣ' ೧೯೫೨ರಲ್ಲಿ ಪ್ರಕಾಶಿತವಾಯಿತು. ಅವರದೇ ಪೀಳಿಗೆಯ ಒಬ್ಬ ಕವಿ ಚೆಸ್ಲಾವ್ ಮಿವೊಶ್ 'ಪೋಸ್ಟವಾರ್ ಪೋಲಿಶ್ ಪೊಯೆಟ್ರಿ'ಯನ್ನು ೧೯೬೫ರಲ್ಲಿ ಇಂಗ್ಲೀಷನಲ್ಲಿ ಪ್ರಕಟಿಸಿದಾಗ, ಅದರಲ್ಲಿ ಶಿಂಬೊರ್ಸ್ಕಾ ಅವರ ಒಂದೇ ಒಂದು ಕವಿತೆ ಸೇರ್ಪಡೆಯಾಗಿತ್ತು. ನಂತರ ೧೯೮೧ರಲ್ಲಿ ಅವರ ಆಯ್ದ ಕವಿತೆಗಳ ಇಂಗ್ಲೀಷ್ ಅನುವಾದದ ಸಂಗ್ರಹ 'ಸೌಂಡ್, ಫೀಲಿಂಗ್ಸ್, ಥಾಟ್' ಪ್ರಕಟವಾದಾಗ ವಿಶ್ವದಲ್ಲೆಡೆಯ ಓದುಗರ ಗಮನವನ್ನು ಸೆಳೆಯಿತು. ಅವರಿಗೆ ನೊಬೆಲ್ ಪುರಸ್ಕಾರ ಸಿಗುವ ಮುನ್ನವೇ 'ಅಂತರ್ದೃಷ್ಟಿ' ಪತ್ರಿಕೆಯಲ್ಲಿ ೧೯೯೨ರಲ್ಲಿ ಆಸದ ಜೈದಿ ಅವರು ಶಿಂಬೊರ್ಸ್ಕಾ ಅವರ ಆರೇಳು ಕವಿತೆಗಳ ಸುಂದರ ಹಿಂದೀ ಅನುವಾದವನ್ನು ಪ್ರಕಟಿಸಿ ಪರಿಚಯಿಸಿದ್ದರು. ಬೇರೆ ಬೇರೆ ಅನುವಾದಗಳ ಮೂಲಕ ಶಿಂಬೊರ್ಸ್ಕಾ ಅವರ ಹೆಸರು ಪಾಬ್ಲೊ ನೆರೂಡಾ ಅಥವಾ ನಾಜಿಮ ಹಿಕಮತ್ ಅವರಂತೆಯೇ ಅತಿ ಪರಿಚಿತವಾಗಿದೆ.

ಶಿಂಬೊರ್ಸ್ಕಾ ಎಲ್ಲ ಜನಪ್ರಿಯತೆ, ಪ್ರಚಾರ - ಪ್ರಸಾರ, ಮತ್ತು 'ಸೆಲೆಬ್ರಿಟಿ'ಗಳ ಸಂಬಂಧದಿಂದ ಹೊರಗುಳಿದು, ತಮ್ಮ ಒಂದು ಅನಿವಾರ್ಯ ಏಕಾಂತವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ೧೯೯೬ರಲ್ಲಿ ನೊಬೆಲ್ ಪುರಸ್ಕಾರ ಸಿಕ್ಕ ನಂತರ ಇಂದಿಗೂ ಅವರ ನಿಜ ಜೀವನದ ವಿಚಾರವಾಗಿ ಬಹಳ ಕಡಿಮೆ ಮಾಹಿತಿ ಲಭ್ಯವಾಗಿದೆ. ನೊಬೆಲ್ ಪುರಸ್ಕಾರ ಸಿಕ್ಕರೂ ಇಂದಿನವರೆಗೆ ಅವರು ಯಾವುದೇ ಇಂಟರ್‌ವ್ಯೂ ಕೊಟ್ಟಿಲ್ಲ, ತಮ್ಮ ಕವಿತೆಗಳ ಬಗೆಗೆ ಯಾವುದೇ ಮಾತನ್ನಾಡಿಲ್ಲ. ಯಾವ ಸೆಮಿನಾರ್‌ಗೂ ಹೋಗಿಲ್ಲ. ಇಂದು ಅವರ ವಯಸ್ಸು ೮೫. ಈ ದೀರ್ಘ ಜೀವನಾವಧಿಯಲ್ಲಿ ಪೋಲೆಂಡ್ ಹೊರಗಡೆ ಅವರು ಹೋಗಿದ್ದು ಕಡಿಮೆ. ತಮ್ಮ ನಗರವಾದ ಕ್ರಾಕೋವ್‌ನಿಂದಲೂ ಹೆಚ್ಚಿಗೆ ಹೊರ ಹೊರಟಿಲ್ಲ. ಅವರು ವಾಸಿಸುವ ಹಳೆಯ ಕಟ್ಟಡದ ಐದನೆಯ ಮಹಡಿಗೆ ಲಿಫ್ಟ ಇಲ್ಲ. ಅವರಿಗೆ ೪-೬ ಜನ ಆಯ್ದ ಮಿತ್ರರಿದ್ದಾರೆ. ಅವರ ಅತಿಶಯವಾದ ವಿನೋದಪ್ರಿಯತೆ, ಲವಲವಿಕೆಗಳನ್ನು ಅವರು ಅರಿತುಕೊಂಡಿದ್ದಾರೆ. ಶಿಂಬೊರ್ಸ್ಕಾ

೮ ವರ್ಷದವರಿದ್ದಾಗ ತಮ್ಮ ಕುಟುಂಬ ವರ್ಗದವರೊಂದಿಗೆ ಕ್ರಾಕೋವ ನಗರಕ್ಕೆ ಬಂದವರು ಅಲ್ಲಿಯೆ ಉಳಿದರು. ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ನಾಜಿಗಳು ಪೋಲೆಂಡ್ ಮೇಲೆ ಅಧಿಕಾರ ಸ್ಥಾಪಿಸಿದಾಗ ಮಾಧ್ಯಮಿಕ ಶಾಲೆ - ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣ ಹೇರಿದ್ದರು. ಆಗ ಇವರು ಹೇಗೋ ಮರೆಯಲ್ಲಿ ತಮ್ಮ ಶಾಲಾಶಿಕ್ಷಣ ಮುಗಿಸಿದ್ದರು. ಯುದ್ಧಾನಂತರ ವಿಶ್ವವಿದ್ಯಾಲಯದಲ್ಲಿ ಪೋಲಿಷ್ ಸಾಹಿತ್ಯ ಹಾಗೂ ಸಮಾಜ ವಿಜ್ಞಾನವನ್ನು ಅಧ್ಯಯನ ಮಾಡಿದರು. ಫ್ರೆಂಚ್‌ನಿಂದ ಪೋಲಿಶ್‌ಗೆ ಅನುವಾದಗಳನ್ನು ಮಾಡಿದರು. ೧೯೪೮ ರಲ್ಲಿ ಕವಿ-ಸಂಪಾದಕ ಆ್ಯಡಮ್ ವ್ಲೋದಕ್ ಅವರೊಂದಿಗೆ ಶಿಂಬೊರ್ಸ್ಕಾ ವಿವಾಹವಾದರು. ಆರುವರ್ಷಗಳಲ್ಲಿಯೇ ದಾಂಪತ್ಯವು ವಿಚ್ಛೇದನದಲ್ಲಿ ಕೊನೆಗೊಂಡಿತು. ೧೯೫೨ ರಿಂದ ೧೯೮೧ರ ವರೆಗೆ ಸಾಂಸ್ಕೃತಿಕ ಪತ್ರಿಕೆ ''ಸಾಹಿತ್ಯಿಕ ಜೀವನ''ದಲ್ಲಿ ಒಂದು ಅಂಕಣ ಬರೆಯುತ್ತಿದ್ದರು. ಈ ೫೫ ವರ್ಷಗಳಲ್ಲಿ ಪೋಲಿಷ್ ಭಾಷೆಯಲ್ಲಿ ಶಿಂಬೊರ್ಸ್ಕಾ ಅವರ ೧೭ ಕವನ ಸಂಕಲನಗಳು ಹೊರಬಂದಿವೆ. ಅವರ ಇತ್ತೀಚಿನ ಕವಿತೆಗಳ ಇಂಗ್ಲೀಷ್ ಅನುವಾದಗಳ ಸಂಗ್ರಹ 'ಮೊನೊಲಾಗ್ ಆಫ್ ಎ ಡಾಗ್' ಕಳೆದ ವರ್ಷ ಪ್ರಕಟವಾಗಿದೆ. ಅವರ ಗದ್ಯದ ಇಂಗ್ಲೀಷ್ ಅನುವಾದ 'ನಾನ್ ರಿಕ್ವಾಯರ್ಡ್ ರೀಡಿಂಗ್' ಈಗ ತಾನೆ ಪ್ರಕಟವಾಗಿದೆ. ಈ ಪುಸ್ತಕ ಬರುವ ಮುನ್ನ, ಶಿಂಬೊರ್ಸ್ಕಾ ಇಷ್ಟೊಂದು ಅದ್ಭುತ ಗದ್ಯವನ್ನು ಬರೆದಿದ್ದಾರೆಂಬುದು ಹೆಚ್ಚಿನ ಜನರಿಗೆ ತಿಳಿದಿರಲಿಲ್ಲ.

ಗದ್ದಲ, ಆನಂದ, ಉದ್ವೇಗಗಳ ಹೆಚ್ಚಳದಿಂದಾಗಿ ಜನರು ಮೆಲುದನಿಯನ್ನು ಕೇಳುವುದನ್ನೇ ನಿಲ್ಲಿಸಿರುವ ಈ ಯುಗಮಾನದಲ್ಲಿ ಕವಯಿತ್ರಿಯಾಗಿದ್ದಾರೆ ಶಿಂಬೊರ್ಸ್ಕಾ. ಅವರು ಬಹುದೊಡ್ಡ ಪ್ರಶ್ನೆಗಳ ಎದುರು ಚಿಕ್ಕ ಚಿಕ್ಕ ಉತ್ತರಗಳನ್ನು ಪ್ರಸ್ತುತ ಪಡಿಸುವ ಕೌಶಲವನ್ನು ತೋರಿದ್ದಾರೆ. ಇದು ಎರಡು ಮಹಾಯುದ್ಧಗಳ ನಂತರದ ಜಗತ್ತು. ಮನುಷ್ಯನ ಮಹಾನ್ ಆವಿಷ್ಕಾರದೊಂದಿಗೆ ಮಹಾನ್ ಅಪರಾಧಗಳೂ ಒಟ್ಟಿಗೇ ಒಂದು ಇನ್ನೊಂದರ ಬದಿಯಲ್ಲಿ ಕುಳಿತಿವೆ. ದೊಡ್ಡ ದೊಡ್ಡ ಸಿದ್ಧಾಂತಗಳು, ವ್ಯೂಹ ರಚನೆಗಳು, ಯುಟೋಪಿಯಾ, ಉಪಭೋಗವಾದಗಳ ಬ್ಯಾರಕ್ಸಗಳಲ್ಲಿ ಅವರು ಸಾಮಾನ್ಯ ಮನುಷ್ಯನ ಜಗತ್ತನ್ನು ಇಡಬಯಸುತ್ತಾರೆ. ಅದರ ಸಾಮಾನ್ಯತೆ, ದೈನಂದಿನ ಹೋರಾಟ ಅದರಲ್ಲಿ ಬಂದಿಯಾದ ಬಯಕೆಗಳು. ಆಕಾಂಕ್ಷೆಗಳು, ಸ್ಮೃತಿಗಳು, ವಿಸ್ಮೃತಿಗಳು, ಕುತೂಹಲ, ವಿಸ್ಮಯ ವಿಡಂಬನೆಗಳು ಹಾಗೂ ವಕ್ರತೆಗಳು. ಈ ಕವಿತೆಗಳಲ್ಲಿ ಇತಿಹಾಸದ ಎಲ್ಲ ಸರಳೀಕರಣ ಹಾಗೂ ಕ್ಲೀಷೆಗಳೆದುರು ಬದುಕಿನ ಆಕಸ್ಮಿಕತೆಗಳು ಹಾಗೂ ಸಂಯೋಗಗಳ ವಿಚಾರಗಳಿವೆ. ಕೆಲವು ಬಿಡಿಸಲಾಗದ ಪ್ರಶ್ನೆಗಳಿವೆ. ಶಿಂಬೊರ್ಸ್ಕಾ ಅವರ ಸಂಗ್ರಹ 'ಚಮತ್ಕಾರ ಜಾತ್ರೆ'ಯ ಮುನ್ನುಡಿಯಲ್ಲಿ ಚೆಸ್ಲಾವ್ ಮಿವೋಶ್ ಬರೆದಿದ್ದಾರೆ. 'ಪ್ರೇಮ, ಸಂಘರ್ಷ, ನೋವಿನ ಭಯ, ಭರವಸೆ, ಸಂಗತಿಗಳು ವೇಗವಾಗಿ ಬದಲಾಗುವುದು, ಅಥವಾ ಮೃತ್ಯುವಿನ ಕುರಿತಾಗಿಯೇ ಇರಬಹುದು, ಒಂದು ಕವಿತೆ ಹೇಳಹೊರಟಿದ್ದರೆ ಆ ಅನುಭವ ನಮ್ಮಲ್ಲಿಯೇ ಯಾರದೋ ಒಬ್ಬರದು ಎಂಬಂತಹ ವಿಶ್ವಾಸವನ್ನು ಅವರು ಹುಟ್ಟಿಸುತ್ತಾರೆ. ಅವರು ನಮ್ಮ ಸಾಮೂಹಿಕ ನಿಯತಿಯ ಜೊತೆಗಾರರಾಗಿರುತ್ತಿರುತ್ತಾರೆ. ಅವರ ಕವಿತೆಯಲ್ಲಿ ಬರುವ 'ನಾನು' ಒಂದು ಸಾಮೂಹಿಕ ಏಕವಚನ.'

ನಮ್ಮ ಕಾಲದಲ್ಲಿ ಕವಿತೆ ಮತ್ತೇನಾಗಬಲ್ಲುದು? ಒಂದು ಕಡೆ ಅರ್ಥಹೀನ ಗದ್ದಲವಿದೆ, ಮತ್ತೊಂದು ಕಡೆ ಜಡ ಮೌನವಿದೆ. ಈ ಎರಡರ ನಡುವಣ ಗಡಿರೇಖೆಗಾಗಿ ಕವಿತೆ ಶೋಧ ನಡೆಸಿದೆ. ಕವಿತೆ ಈ ಎರಡೂ ಸ್ಥಿತಿಗಳ ನಡುವೆ ಇತಿಹಾಸದ ಎಲ್ಲ ವಿಡಂಬನೆಗಳು - ಭಯಗಳ ಮೂಲಕ ಹಾಯ್ದು ಎಲ್ಲ ಬಗೆಯ ಮೋಸಗಳು, ವಂಚನೆಗಳು, ಢೋಂಗಿತನ ಹಾಗೂ ದುಷ್ಟತೆಗಳನ್ನು ಎದುರಿಸುತ್ತ ಭರವಸೆಯ ಉಪಚಾರವನ್ನು ಬಯಸುತ್ತದೆ. ಮತ್ತು ಇವೆಲ್ಲ ಯಾಕೆ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತುತ್ತದೆ. ಈ ಗ್ರಹದ ಮೇಲಿನ ಜನ ನಾವು ಯಾರೂ? ಆದರೆ ಇದು ಸುಲಭದ ಕೆಲಸವಲ್ಲ ಎಂಬುದು ಗೊತ್ತಿರುವಂಥದೆ. ಮನುಷ್ಯ ಅಸ್ತಿತ್ವದ ಜಟಿಲತೆಗಳ ಸರಳ ಸಮಾಧಾನದಲ್ಲಿ ಶಿಂಬೊರ್ಸ್ಕಾ ಅವರಿಗೆ ವಿಶ್ವಾಸವಿಲ್ಲ. ಅವರ ಒಂದು ಕವಿತೆಯ ಪಂಕ್ತಿಗಳು ಇವು-

ಓ ವಾಣಿ, ನನ್ನಿಂದ ಜೀರ್ಣಿಸಲಾಗುವುದಿಲ್ಲ
ನಿನ್ನಿಂದ ಕಡ ತೆಗೆದುಕೊಂಡ ಬಂಡೆಯ ಭಾರೀ ಶಬ್ದವನ್ನ
ಮತ್ತು ಆಮೇಲೆ ಜೀವನವಿಡೀ ಅವುಗಳನ್ನು ಕತ್ತರಿಸುತ್ತ ಉಳಿದೆ
ಅವು ರೆಕ್ಕೆಗಿಂತ ಹಗುರವೆನಿಸಲೆಂಬ ಪ್ರಯತ್ನದಲ್ಲಿ....

ಶಿಂಬೊರ್ಸ್ಕಾ ಅವರಲ್ಲಿ ಒಂದು ಮೂಲಭೂತವಾದ ಸಂಶಯವಾದವಿದೆ. ಮತ್ತು ಪ್ರಶ್ನೆಯ ವ್ಯಾಕುಲತೆಯಿದೆ. ಆದರೆ ಇದರ ಸುತ್ತಲೂ ಅಂಟಿಕೊಂಡ ವಿನೋದಪ್ರಿಯತೆ, ವಕ್ರತೆ ಕೌತುಕ, ಮಿತಕಥನ ಮತ್ತು ಸಾರಗರ್ಭಿತ ಸ್ಥಿತಿಗಳ ಹೆಣಿಕೆಯಿದೆ. ಅವರ ಕವಿತೆಗಳು ಪ್ರಾಯಃ ದಾರ್ಶನಿಕ ಪ್ರಶ್ನೆಗಳಿಂದ ಪ್ರಾರಂಭವಾಗುತ್ತವೆ. ಎಲ್ಲ ಬಗೆಯ ವಿರೋಧಾಭಾಸ ಸ್ಥಿತಿ ಹಾಗೂ ಅಸಂಗತತೆಯ ನೆಲೆಗಳನ್ನು ತೆರೆಯುತ್ತ ಹೋಗುತ್ತವೆ. ಈ ಕವಿತೆಗಳಲ್ಲಿ ಇಪ್ಪತ್ತನೆಯ ಶತಮಾನದ ವಿಡಂಬನೆಗಳೊಡನೆ ಹೋರಾಡುವ ಕೆಲವು ದೊಡ್ಡ ಯುರೋಪೀಯ ಕವಿಗಳಂತೆ ಆತ್ಮಗತ ಮನಸ್ಥಿತಿಯಿಲ್ಲ ಮತ್ತು ಅವಚೇತನದ ದುರೂಹ್ಯ ಜಗತ್ತಿಲ್ಲ. ಆದರೆ ಒಂದು ತೀಕ್ಷ್ಮವಾದ ತರ್ಕವಾದವಿದೆ. ಶಿಂಬೊರ್ಸ್ಕಾ ಕವಿತೆಗಳಲ್ಲಿ ಪ್ರತ್ಯಕ್ಷ ಕಥನವಿದೆ. ಈ ಕವಿತೆಗಳು ಸ್ವಂತದ ಪರಿಸ್ಥಿತಿಯಿಂದಲೇ ಪ್ರಾರಂಭವಾಗುತ್ತವೆಯಾದರೂ ಒಂದು ತಣ್ಣಗಿನ ತಟಸ್ಥತೆಯೊಂದಿಗೆ ಅವು ಯಾವುದೇ ಸಾರ್ವಜನಿಕ ನಿಜವನ್ನು ತಲುಪಬಯಸುತ್ತವೆ. ಅವುಗಳಲ್ಲಿ ಆತ್ಮ ಸಂಲಗ್ನತೆ, ಅಲೆಮಾರಿತನ, ಭಾವನಾತ್ಮಕ ಹರಿವು ಬಹುಮಟ್ಟಿಗೆ ಇಲ್ಲ. ಆಧುನಿಕ ಜೀವನದ ಅತಿಹೆಚ್ಚಿನ ಅಂತರ್ವಿರೋಧಗಳು ಹಾಗೂ ಅಸಹನೀಯತೆಗಳ ಕಡೆಗೆ ಅವು ಸರಳವಾದ ಭಾಷೆಯಲ್ಲಿ ಸಾಗುತ್ತವೆ. ಇಲ್ಲಿ ಓದುಗನ ಗಮನ ಸೆಳೆಯುವುದು ಭಾಷೆಯ ಯಾವುದೇ ರೆಟರಿಕ್‌ನಿಂದಲ್ಲ. ಬದಲಿಗೆ ನೇರವಾದ ಆಳವಾದ ವಿಡಂಬನೆಯ ಅರಿವು ಹಾಗೂ ಪರಿಸ್ಥಿತಿಯ ವಕ್ರತೆಯಿಂದ ಕವಯಿತ್ರಿ ಎತ್ತುವ ಭೌತಿಕ ಸಂದರ್ಭಗಳಲಲ್ಲೆ ಹೆಚ್ಚಾಗಿ ಕೆಲವು ವಿನೋದಶೀಲ ಪರಿಸ್ಥಿತಿಗಳು ಹಾಗೂ ವಿನೋದಪೂರ್ಣಕೌತುಕದಲ್ಲಿ ಮಾನವೀಯ ಅಸ್ತಿತ್ವದ ಗಹನವಾದ ಜಟಿಲತೆಗಳು ಹೊರಹೊಮ್ಮಿವೆ. ಇವು ಎಚ್ಚೆತ್ತ ಮಿದುಳಿನ ತಿಕ್ಕುವಿಕೆಯಲ್ಲಿ ಹೊಮ್ಮಿದ ಕವಿತೆಗಳು. ಆದರೆ ಅವುಗಳಲ್ಲಿನ ವಕ್ರತೆ ಹಾಗೂ ಆಳವಾದ ಕಲ್ಪನಾಶೀಲತೆಗಳು ಯಾವಾಗಲೂ ಅವುಗಳನ್ನು ಬಯಸದ ದಿಕ್ಕುಗಳಿಗೆ ಕೊಂಡೊಯ್ಯುತ್ತವೆ.

ಬದಲಾಗಲಿಲ್ಲ ಏನೂ
ಈ ದೇಹ ಹಾಗೆಯೇ ನೋವಿನ ಬಾವಿ
ಇದು ಉಣ್ಣುವುದು, ಉಸಿರೆಳೆಯುವುದು ಹಾಗೂ ಮಲಗುವುದು
ಇದರ ಮೇಲಿರುವುದು ತೆಳುವಾದ ತೊಗಲು
ಹರಿವುದು ರಕ್ತ ಅದರ ಅಡಿಗೆ
ಇದಕ್ಕೆ ಇವೆ ಹಲ್ಲು-ಉಗುರುಗಳು
ಇದಕ್ಕಿರುವ ಎಲುಬುಗಳನ್ನು ಮುರಿಯಲೂಬಹುದು
ಸಂದುಗಳನ್ನು ಎಳೆಯಲೂಬಹುದು

ಬದಲಾಗಲಿಲ್ಲ ಏನೂ
ನದಿಗಳು, ಘಟ್ಟಗಳು, ಮರುಭೂಮಿಗಳು
ಹಾಗೂ ಹಿಮಶಿಲೆಗಳ ಆಕಾರಗಳ ಹೊರತಾಗಿ
ನಮ್ಮ ಚಿಕ್ಕ ಆತ್ಮ ಸಿಕ್ಕಲೆಲ್ಲ ಅಲೆಯುತ್ತ ತಿರುಗುತ್ತದೆ
ಕಳೆದುಹೋಗುತ್ತದೆ, ಮರಳಿ ಬರುತ್ತದೆ.
ಹತ್ತಿರ ಬರುತ್ತದೆ, ದೂರ ಹೋಗುತ್ತದೆ
ತನಗೆ ತಾನೇ ಅಪರಿಚಿತವಾಗುತ್ತ
ತನ್ನದೇ ಅಸ್ತಿತ್ವವನ್ನು ಒಮ್ಮೊಮ್ಮೆ ಸ್ವೀಕರಿಸುತ್ತ ಒಮ್ಮೊಮ್ಮೆ ನಿರಾಕರಿಸುತ್ತ
ಬಡಪಾಯಿ ದೇಹಕ್ಕೆ ಗೊತ್ತಿಲ್ಲದಿರುವಾಗ
ಹೋಗುವುದಾದರೂ ಎಲ್ಲಿಗೆ?

ಶಿಂಬೊರ್ಸ್ಕಾ ಅವರ ಕವಿತೆಗಳನ್ನು ಓದಿದಾಗ, ಸುತ್ತಲಿನ ಅಸ್ಥಿರತೆ, ಸಂವೇದನಾರಾಹಿತ್ಯ, ಆತಂಕ, ತುಳಿತ, ನೋವು, ವಿಸ್ಮೃತಿ, ಹಸಿವು ಹಾಗು ಮೃತ್ಯುವಿನ ನಡುವಣ ಸಾಧಾರಣ ಜೀವನದ ಅಸಾಧಾರಣ ಅನಿವಾರ್ಯತೆಗಳ ಉತ್ಸವ ಆಚರಿಸುವುದು ಈಗಲೂ ಸಂಭವವೆನಿಸುತ್ತದೆ. ಆ ಅನಿವಾರ್ಯತೆಗಳು ಈ ಜೀವನದ ಪುನಾರಚನೆ ಮಾಡುತ್ತವೆ ಅದರ ಆಕಾರವನ್ನು ರೂಪಿಸುತ್ತವೆ.

ಹೀಗಾಗಿದೆ, ನಾನು ಮರದ ಕೆಳಗೆ ಕೂತಿದ್ದೇನೆ.
ನದಿಯೊಂದರ ದಂಡೆಯಲಿ
ಒಂದು ಪ್ರಖರ ಬಿಸಿಲಿನ ದಿನ
ಇದೊಂದು ತೀರ ಸಾಮಾನ್ಯವೆನಿಸುವ ಘಟನೆ
ಇತಿಹಾಸದಲ್ಲಿ ದಾಖಲಾಗುವುದಿಲ್ಲ ಇದೇನೂ
ಇವೇನೂ ಯುದ್ಧಗಳಲ್ಲ, ಸಂಧಿಗಳೂ ಅಲ್ಲ
ಅವುಗಳ ಕಾರಣಗಳನ್ನು ಶೋಧಮಾಡುತ್ತಿರಲು
ಅಲ್ಲದೆ ನೆನಪಿಡಲು ಅತ್ಯಾಚಾರಿಗಳ ಹತ್ಯೆಗಳೂ ಅಲ್ಲ

ಶಿಂಬೊರ್ಸ್ಕಾ ನಮ್ಮ ಈ ಕ್ಷಣದ್ದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಅವರಲ್ಲಿ ಮೂರ್ತ ಪರಿಸ್ಥಿತಿಗಳು ಹಾಗೂ ಚಾಕ್ಷುಷ ಬಿಂಬಗಳಿವೆ. ಅವುಗಳ ಸಾರ್ವಭೌಮಿಕ ಮನವಿಯಿದೆ. ಅವರು ಸರಳ ಪರಿಹಾರ ಹಾಗೂ ಕ್ಲೀಷೆಗಳಿಂದ ಹೊರಬಂದು ಆಕಸ್ಮಿಕಗಳಲ್ಲಿ ಬದುಕಿನ ಅನಂತ ಸಾಧ್ಯತೆಗಳನ್ನು ಹುಡುಕುತ್ತಾರೆ. ''ಚಮತ್ಕಾರ ಜಾತ್ರೆ''ಯಂತಹ ಕವಿತೆಯಲ್ಲಿ ರಾತ್ರಿಯ ಮೌನದಲ್ಲಿ ಅದೃಶ್ಯ ನಾಯಿಗಳ ಬೊಗಳುವಿಕೆ ಒಂದು ಚಮತ್ಕಾರದ ರೀತಿಯಲ್ಲಿ ಘಟಿಸುತ್ತದೆ. ಒಂದು ತೆಳುವಾದ ಚಿಕ್ಕ ಮೋಡವು ದೊಡ್ಡ ಚಂದ್ರನನ್ನು ಮುಚ್ಚಿ ಬಿಡಬಹುದು. ನೀರಿನಲ್ಲಿ ಮರಗಳ ನೆರಳುಗಳು, ಗಾಳಿಯ ಮೆಲುಚಲನೆ, ಹಾಗೂ ಬಿರುಗಾಳಿಯಲ್ಲಿ ಅದು ತೀವ್ರವಾಗುವುದು. - ಈ ಎಲ್ಲ ಅಸಂಖ್ಯ ಚಮತ್ಕಾರಗಳಿಂದ ಈ ಜಗತ್ತು ತುಂಬಿದೆ. ಸಾಧಾರಣ ವಸ್ತುಗಳ ಒಳಗೆ ಯಾವಾಗಲೂ ಒಂದು ಅಸಾಧಾರಣತೆ ಇರುತ್ತದೆ. ಆದರೆ ವಸ್ತುನಿಷ್ಠ ನಿಯಮಗಳು ಹಾಗೂ ಸಾಮಾನ್ಯೀಕರಣಗಳಿಂದ ನಡೆಯುವ ಸತ್ಯಗಳು ಯಾವಾಗಲೂ 'ಏಕ'ವನ್ನು ನೋಡದಂತೆ ಮಾಡಿಬಿಡುತ್ತವೆ. 'ಯಾಸ್ಲೋ ಸಮೀಪದ ಹಸಿದ ಶಿಬಿರ' ದಂತಹ ಕವಿತೆಯಲ್ಲಿ ಶಿಂಬೊರ್ಸ್ಕಾ ಸಾಮಾನ್ಯೀಕರಣಗೊಳಿಸುವ ಶಕ್ತಿಗಳ ವಿರುದ್ಧ ಏಕಾಕಿ ವ್ಯಕ್ತಿತ್ವದ ಗರಿಮೆಯ ಸಮರ್ಥನೆಯನ್ನು ಮಾಡುತ್ತಿರುವಂತಿದೆ.

> ಇತಿಹಾಸವು ಎಲುಬಿನ ಗೂಡುಗಳ ಎಣಿಕೆಯನ್ನು ಪೂರ್ತಿಗೊಳಿಸುತ್ತದೆ ಶೂನ್ಯದಲ್ಲಿ
> ಒಂದು ಸಾವಿರದ ಒಂದು ಆದರೂ ಒಂದು ಸಾವಿರವೇ
> ಆ ಒಂದರ ಅಸ್ತಿತ್ವವೇ ಎಂದೂ ಯಾವಾಗಲೂ ಇರಲಿಲ್ಲ
> ಅದೊಂದು ಕಲ್ಪಿತ ಭ್ರೂಣ, ಒಂದು ಖಾಲಿ ತೂಗುಯ್ಯಾಲೆ
> . . . .
> ಖಾಲಿತನ ಮೆಟ್ಟಿಲುಗಳಿಂದ ಇಳಿಯುತ್ತ ವಾಟಿಕೆಗಳ ಕಡೆ ಹೋಗುತ್ತ
> ಸಾಲಿನಲಿ ಆ ಒಂದಕ್ಕೆ ಜಾಗವಿಲ್ಲ

ಸಂಖ್ಯೆಗಳನ್ನು ಅಳೆಯುವಿಕೆಯು ವೈಯಕ್ತಿಕ ಎಣಿಕೆಯನ್ನು ಗಮನಿಸುವುದೇ ಇಲ್ಲ. ಒಂದು ಸಾವಿರದ ಒಂದು ಕಳೆದು ಹೋಗದಂತೆ ಬಚಾವು ಮಾಡುವ ಜವಾಬ್ದಾರಿ ಕವಿಯದು. ಈ ಕವಿತೆಯು ಆ ಎಲ್ಲ ಎಸೆದ, ರದ್ದುಗೊಳಿಸಿದ, ನೋಡದಂತೆ ಮಾಡಿದ 'ಏಕ'ಕ್ಕೆ ಪುನರ್ವಾಸ ಕಲ್ಪಿಸ ಬಯಸುತ್ತದೆ. ಇದು ಶಿಂಬೊರ್ಸ್ಕಾ ಅವರ ಕವಿತೆಯ ಸ್ವಭಾವ. ಅವರು ಎಲ್ಲಕ್ಕಿಂತ ಹೆಚ್ಚು ಅಪ್ರಾಸಂಗಿಕ ಮತ್ತು ನಿರರ್ಥಕವೆಂದು ಭಾವಿಸಲಾದ ವಸ್ತುಗಳ ವಿವರಣೆ ಹಾಗೂ ವೃತ್ತಾಂತಗಳನ್ನು ಸಂಗ್ರಹಿಸುತ್ತಾರೆ. ಶಿಂಬೊರ್ಸ್ಕಾ ಅವರದು ವಿಶಿಷ್ಟ ರೀತಿಯ ಭಾಷೆ. ಅದು ತುಂಬ ಎಚ್ಚರದಿಂದ ತನ್ನನ್ನು ಐತಿಹಾಸಿಕ ಘಟನೆಗಳಿಂದ, ಸ್ಥೂಲ ತಥ್ಯಗಳಿಂದ, ಹಾಗೂ ಕವಿಯ ಸಾಮಾಜಿಕ ಜವಾಬ್ದಾರಿಯಂಥ ದೊಡ್ಡ ದೊಡ್ಡ ಮಾತುಗಳಿಂದ ದೂರವಿಟ್ಟಿದೆ. ತಪ್ಪೆಂದು ಭಾವಿಸಲಾದುದೆಲ್ಲವನ್ನು ಕುರಿತ ಕರುಣೆ ಅವರ ಭಾಷೆಯಲ್ಲಿದೆ. ಮನುಷ್ಯ ಜೀವನದಲ್ಲಿ ಉಳಿದುಕೊಂಡ ಯಾವುದೇ ಸಾಮಾನ್ಯ ಸಂತೋಷದ ಹಬ್ಬವನ್ನು ಆಚರಿಸುವುದು ಭಾರೀ ಚರ್ಚೆಗಳಿಗಿಂತ ಅವರಿಗೆ ಹೆಚ್ಚು ಬೆಲೆಯುಳ್ಳದ್ದಾಗಿದೆ. ಇದು ಮನುಷ್ಯನ ತರ್ಕಹೀನತೆ ಹಾಗೂ

ಕಷ್ಟಗಳನ್ನು ಹತ್ತಿರದಿಂದ ನೋಡುತ್ತದೆ. ವಿಡಂಬನೆಗಳಿಂದ, ವಿರೋಧಾಭಾಸಗಳಿಂದ, ಒಂದು ಇನ್ನೊಂದನ್ನು ಕತ್ತರಿಸುವ ಸ್ಥಿತಿಯಿಂದ, ಪರಸ್ಪರ ಘರ್ಷಿಸುವ ಸತ್ಯಗಳಿಂದ ಕವಯಿತ್ರಿಗೆ ಜೀವನದ ಅನಂತತೆಯ ಡ್ರಾಮಾವನ್ನು ನಿರೂಪಿಸುವುದಕ್ಕೆ ಆಧಾರ ದೊರೆಯುತ್ತದೆ. ಶಿಂಬೊರ್ಸ್ಕಾರ ಕವಿತೆಗಳು ಒಂದು ಪ್ರೇಕ್ಷಾಗೃಹ ಇದ್ದಹಾಗೆ ಭಾಸವಾಗುತ್ತಿದೆ. ಅದರಲ್ಲಿ ಅಬ್ಸರ್ಡ, ಕರುಣ, ಹಾಗೂ ತೀಕ್ಷ್ಣ ತಾರ್ಕಿಕತೆಯ ಮಿಶ್ರಣದಲ್ಲಿ ಹುಟ್ಟುವ ಒಂದು ಅದ್ಭುತವಾದ ರಂಗಕತೆ ಅಭಿನೀತವಾಗುತ್ತದೆ. ಅದರಲ್ಲಿ ನಾವೆಲ್ಲರೂ ಅತ್ಯಂತ ಗಟ್ಟಿಯಾದ ಪ್ರಹಸನದ ಅಭಿನೇತೃಗಳು, ಸರಿಯಾಗಿ ರಿಹರ್ಸಲ್ಲನ್ನೂ ಮಾಡದೇ ಒಮ್ಮೆಲೇ ರಂಗಕ್ಕೆ ನೂಕಲ್ಪಟ್ಟವರು. ಈ ಬಗೆಯ ಎಲ್ಲ ದೃಶ್ಯಗಳಿಂದ ತುಂಬಿದ ಈ ಕವಿತೆಗಳು ಕಟುವಾದ ರೀತಿಯ ವಿಡಂಬನೆಯ ಕಡೆಗೆ ನಮ್ಮನ್ನು ಒಯ್ಯುತ್ತವೆ. ಈ ಸಾಧಾರಣದಂತೆ ತೋರುವ ಮೂಲಭೂತ ಪ್ರಶ್ನೆಗಳು ಒಂದು ದುಃಸ್ವಪ್ನದಂತೆ ಅನಿಸುತ್ತದೆ, ಇತಿಹಾಸದ ಬಳಿ ಇವಕ್ಕೆ ಯಾವ ಉತ್ತರವೂ ಇಲ್ಲ.

ನಾನು ಪ್ರಶ್ನೆಗಳ ಒಂದು ಪಟ್ಟಿ ತಯಾರು ಮಾಡಿದ್ದೇನೆ.
ಅವುಗಳಲ್ಲಿ, ಉತ್ತರ ಪಡೆಯಲು ನಾನು ಜೀವಿತಳಿರುವುದಿಲ್ಲ,
ಯಾಕೆಂದರೆ ಅವುಗಳಿಗೆ ಬಹಳ ಅರ್ಜೆಂಟ ಇರಬಹುದು.
ಅಥವಾ ನಾನು ಅವುಗಳನ್ನು ತಿಳಿದುಕೊಳ್ಳಲಾರದಿರಬಹುದು
ವಾಸ್ತವಿಕ ಏನಿತ್ತು
ಮತ್ತು ಕೇವಲ ಹಾಗನಿಸಿತ್ತೆ
ಈ ವೇದಿಕೆಯ ಮೇಲೆ
ಯುದ್ಧ ಯಾವಾಗ ನಿಲ್ಲಬಹುದು.
ಹಾಗೂ ಅವುಗಳ ಸ್ಥಾನದಲ್ಲಿ ಏನು ಬರುವುದು
ಆ ಒಂದು ಡಜನ್ ಜನರಿಗೇನಾಯಿತು
ನಾವು ನಿಜವಾಗಿಯೂ ಒಬ್ಬರಿಗೊಬ್ಬರು ಗೊತ್ತಿದ್ದವರೆ?
ಯಾವ ಕೆಟ್ಟ ಸಂಗತಿಗಳನ್ನು
ನಾನು ಒಳ್ಳೆಯ ಸಂಗತಿಯೆಂದು ತಿಳಿದೆ
ಅಲ್ಲದೆ ನನಗೆ ಯಾವುದರ ಅವಶ್ಯಕತೆ ಇದೆ
ಯಾಕೆಂದರೆ ನಾನು ಮತ್ತೆ ತಪ್ಪು ಕಲ್ಪನೆಯಲ್ಲಿ ಬೀಳಬಾರದಲ್ಲ
ಕೆಲವು ಪ್ರಶ್ನೆಗಳನ್ನು ನಾನು ಟಿಪ್ಪಣಿ ಮಾಡಿದೆ
ತೂಕಡಿಸುವುದಕ್ಕೆ ನಿಮಿಷದಷ್ಟು ಮೊದಲು
ಎಚ್ಚರಾದ ಮೇಲೆ ನಾನು
ಅವುಗಳ ಬಗೆಗೆ ನಿರ್ಣಯ ಮಾಡದಾದೆ

ಶಿಂಬೊರ್ಸ್ಕಾ ಒಂದು ವಿಷಯವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಮತ್ತು ಅದರ ಸಮಸ್ತ ವಿರೋಧಾಭಾಸಗಳನ್ನು ಯಾವುದೋ ಗಣಿತೀಯ ತೀಕ್ಷ್ಣತೆಯೊಂದಿಗೆ ವಿಸ್ತರಿಸುತ್ತ ಹೋಗುತ್ತಾರೆ.

ಅವುಗಳಲ್ಲಿ ಚಲನೆಯ ಒಂದು ವಿಚಿತ್ರ ರಚನೆಯಿದೆ. ದಾರ್ಶನಿಕ ಜಿಜ್ಞಾಸೆಗಳು ಹೊಮ್ಮುತ್ತವೆ. ಮತ್ತು ಆಟದ ರೀತಿಯಲ್ಲಿ ಪೋಣಿಸಲಾಗುತ್ತದೆ. ಕವಿತೆ ಮುಂದುವರಿದಂತೆ ಹೇಳುವವ ಕೂಡ ಒಂದು ಶ್ರೇಣಿಯಿಂದ ಇನ್ನೊಂದು ಶ್ರೇಣಿಗೆ ಸ್ಥಾನಾಂತರಗೊಳ್ಳುವುದನ್ನು ನಾವು ನೋಡುತ್ತೇವೆ. ಇದರಲ್ಲಿ ಪ್ರತ್ಯಕ್ಷ ಕಥನ, ಸಂಭಾಷಣೆ, ಸ್ವಗತ - ಎಲ್ಲವೂ ಸೇರಿಕೊಂಡಿವೆ. ಸಾಮಾನ್ಯವಾಗಿ ನೋಡಿರದ ಸ್ಥಿತಿಯ ನಾಟಕೀಯತೆಯೂ ಇದೆ. ಕವಿತೆಗಳು ನಮ್ಮನ್ನು ಮತ್ತೆ ಮತ್ತೆ ಯಾವುದೋ ಮರೆತದ್ದರ ಕಡೆ ಕರೆದೊಯ್ಯಲು ಬಯಸುತ್ತವೆ. ಹಲವು ಬಾರಿ ಆಧುನಿಕ ಯುಗದ ಆತ್ಮಗ್ಲಾನಿಯೇ ಕವಿತೆಯ ಕೇಂದ್ರೀಯ ಭಾವವಾಗಿಬಿಟ್ಟಿದೆ. ಕವಯಿತ್ರಿ ಸಮಸ್ತ ಜಡವಸ್ತುಗಳು, ಧೋರಣೆಗಳು, ಸ್ಥಳಗಳು ಹಾಗೂ ಜನರಿಂದ ಕ್ಷಮಾಯಾಚನೆ ಮಾಡುವಂತೆ ತೋರುತ್ತದೆ -

ನಾನು ಬಯಸುವುದಿಲ್ಲ
ತೆರೆಗಳ ನೊರೆ ನನ್ನ ಸನ್ನೆಯ ಮೇಲೆ
ಹೊಮ್ಮಲಿ ಹಾಗೂ ಮುಳುಗಲಿ ಎಂದು
ನಾನು ಬಯಸುವುದಿಲ್ಲ
ಅಡವಿ ನನಗಾಗಿ ತನ್ನ ಬಣ್ಣ ಬದಲಿಸಲಿ
ಒಮ್ಮೆ ಹಸಿರು
ಒಮ್ಮೆ ನೀಲಿ
ಒಮ್ಮೆ ಕಂದು ಆಗುತ್ತಲಿರಲಿ
ಆದರೆ ಇದನ್ನೂ ನಾನು ಬಯಸುವುದಿಲ್ಲ
ನಾನು ಮತ್ತೆ ಮರಳಲಿ
ಈ ಸುಂದರ ಜಗತ್ತಿನಲ್ಲಿ
ನಾನು ಬಿಟ್ಟು ಹೋಗಬಯಸುತ್ತೇನೆ
ನನ್ನದಾಗುವ ಅಧಿಕಾರವನ್ನು

(ಒಂದು ದೃಶ್ಯದಿಂದ ಬೀಳ್ಕೊಡುಗೆ)

ಶಿಂಬೊರ್ಸ್ಕಾರ ಅವರ ಈ ಕವಿತೆಗಳು ತಮ್ಮ ಹೆಣಿಕೆಯಲ್ಲಿ ಯಾಕೆ ವಿಲಕ್ಷಣವಾಗಿವೆಯೆಂದರೆ, ಇವುಗಳಲ್ಲಿ ತತ್ವಚಿಂತನೆ ಹಾಗೂ ಸಾಂಸಾರಿಕ ತಥ್ಯಗಳು ಜೊತೆಜೊತೆಗೇ ಸಾಗುತ್ತವೆ. ವೃತ್ತಾಂತ ಹಾಗೂ ಮಂಥನಗಳೂ ಜೊತೆಗಿವೆ. ದೃಶ್ಯದ ನಾಟಕ ಪ್ರತಿಯೊಂದು ಕವಿತೆಯಲ್ಲಿದೆ. 'ಸಂಗ್ರಹಾಲಯ' ಎಂಬ ಕವಿತೆಯು ಧ್ವಂಸದ ಎಷ್ಟೊಂದು ಆಯಾಮಗಳನ್ನು ರಚಿಸುತ್ತದೆ ನೋಡಿ-

ತಟ್ಟೆಗಳು ಎದುರಿಗಿವೆ ಆದರೆ ಹಸಿವೆಯಿಲ್ಲ
ಮದುವೆಯ ಉಂಗುರಗಳಿವೆ ಆದರೆ
ಅವುಗಳ ವಿನಿಮಯ ಇಲ್ಲ
ಕಡಿಮೆಯೆಂದರೆ ಮೂರು ನೂರು ವರ್ಷಗಳಿಂದ

ಮೃದು ಬಟ್ಟೆ ಬಿದ್ದಿದೆ - ಎಲ್ಲಿದೆ ಗುಲಾಬಿ ಗಲ್ಲ?
ಕತ್ತಿಗಳಿವೆ ಎಲ್ಲಿ ಹೋಯಿತು ಸಿಟ್ಟು
ಸೂರ್ಯಾಸ್ತದ ವೇಳೆ ಬಾರಿಸುವುದಿಲ್ಲ ಈಗ ಈ ಕೊಳಲು
ಮಕುಟ ಉಳಿದುಕೊಂಡಿದೆ ತಲೆ ಎಂದೋ ಹೋಗಿಬಿಟ್ಟಿದೆ
ಕೈ ಚೀಲ ಉಳಿದುಕೊಂಡಿದೆ ಕೈಗಳು ಉಳಿದಿಲ್ಲ
ಪಾದರಕ್ಷೆಯಿದೆ, ಕಾಲು ಸೋತು ಹೋಗಿದೆ
ಮತ್ತು ನಾನು, ನಿಜ ಅರಿತುಕೊಳ್ಳಿ, ನಾನು ಇನ್ನೂ ಬದುಕಿದ್ದೇನೆ
ನನ್ನ ಉಡುಪಿನೊಂದಿಗೆ ನನ್ನ ಪ್ರತಿಸ್ಪರ್ಧೆ ಮುಂದುವರಿದಿದೆ.
ತಮಗೆ ಅಂದಾಜಿಲ್ಲ ನನ್ನ ಈ ಪ್ರತಿದ್ವಂದ್ವಿಯದು
ಗೆಲ್ಲುವ ಬಯಕೆಯದು
ಮುಂದೆ ಹೊರಟು ಹೋಗುವ ಇಚ್ಛೆಯದು

ಶಿಂಬೊರ್ಸ್ಕಾ 'ಪೋಲಿಶ್ ಸ್ಕೂಲ್ ಆಫ್ ಪೊಯೆಟ್ರಿ' ತಲೆಮಾರಿಗೆ ಸೇರಿದವರು. ಯುದ್ಧೋತ್ತರ ಪೊಲೆಂಡಿನ ಕವಿಗಳ ಒಂದು ತಲೆಮಾರು ಇಪ್ಪತ್ತನೆಯ ಶತಮಾನದ ಇತಿಹಾಸದ ಎರಡು ಬಹುದೊಡ್ಡ ಅನುಭವದ ಮೂಲಕ ಹಾದು ಹೋಗುತ್ತದೆ - ಎರಡನೆಯ ಮಹಾಯುದ್ಧ ಹಾಗೂ ಕಮ್ಯುನಿಜಂ. ಅವರು ಮೊದಲು ಹಿಟ್ಲರನ ನಿರಂಕುಶ ಪ್ರಭುತ್ವವನ್ನು ಅನುಭವಿಸಿದರು, ಅನಂತರ ಸ್ಟಾಲಿನ್‌ನ ಕಾಲವನ್ನು. ಶಾಸನ ಹಾಗೂ ಶಕ್ತಿಯ ಮೂಲಭೂತ ಬರ್ಬರ ಸ್ಥಿತಿಯನ್ನು, ರಾಜನೈತಿಕ ಶಕ್ತಿಗಳ ಎದುರು ಸಾಮಾನ್ಯ ಮನುಷ್ಯನ ಜೀವನ ಸ್ಥಿತಿಯನ್ನು ಪ್ರಚಾರ ಆಧಾರಿತ ನಿಜದ ಪೊಳ್ಳುತನಗಳ ಜಗತ್ತನ್ನು ಈ ಪೀಳಿಗೆ ಕಂಡಿದೆ. ಮತ್ತು ಅದಕ್ಕಾಗಿ ಕವಿಕರ್ಮದ ಅನಿವಾರ್ಯತೆಯನ್ನು ತನ್ನದೇ ರೀತಿಯಲ್ಲಿ ಶೋಧಿಸಿಕೊಂಡಿದೆ. ಆ ಕಾಲದ ಪ್ರಮುಖ ಕವಿಗಳಲ್ಲಿ ಸಾರ್ವಕಾಲಿಕ-ಸಾರ್ವಭೌಮಿಕ ಸಂವೇದನೆಗಳಿವೆ. ಆದರೆ ಶಿಂಬೊರ್ಸ್ಕಾ ಎಲ್ಲ ವಿರುದ್ಧ ಸ್ವಭಾವಗಳ ಸಂಗತಿಗಳನ್ನು ಅದ್ಭುತವಾದ ರೀತಿಯಲ್ಲಿ ಬೆಸೆಯುತ್ತಾರೆ. ವಾಸ್ತವ ಮತ್ತು ಭ್ರಮೆ, ಸಮಯ ಹಾಗೂ ಸಮಯಹೀನತೆ, ಇತಿಹಾಸ ಹಾಗೂ ಶಾಶ್ವತತೆ, ಸಾಮುದಾಯಿಕ ಹಾಗೂ ವೈಯಕ್ತಿಕ, ವಿಷಾದ ಹಾಗೂ ಜೀವನಪ್ರೀತಿ, ಗಾಂಭೀರ್ಯ ಮತ್ತು ಕ್ರೀಡಾಭಾವ - ಎಲ್ಲವೂ ಒಟ್ಟೊಟ್ಟಿಗೆ ಇಲ್ಲಿ ಕಾಣುತ್ತವೆ.

ನಾನು ವಿಶ್ವದ ಒಂದು ಹೊಸ ಸಂಶೋಧಿತ ಸಂಸ್ಕರಣ ತಯಾರಿಸುತ್ತಿದ್ದೇನೆ
ಅದರಲ್ಲಿ ಮೂರ್ಖರಿಗಾಗಿ ವಿನೋದ
ಉದಾಸ ವ್ಯಕ್ತಿಗಳಿಗಾಗಿ ವಿಷಾದ
ಬೋಳು ತಲೆಯವರಿಗಾಗಿ ಹೆಗಲು
ಮತ್ತು ಮುದಿ ನಾಯಿಗಳಿಗಾಗಿ ಕೆಲಸ ಇರುತ್ತವೆ

(ಯಾವ ಶೀರ್ಷಿಕೆಯೂ ಇಲ್ಲ)

ನಿರಾಯಾಸ, ಸರಳತೆ, ಲಘುತನ, ಅನೌಪಚಾರಿಕತೆಯ ವಿನ್ಯಾಸವನ್ನು ಅವರು ಸಾಧಿಸಿದ್ದಾರೆ. ಭಾಷೆಯ ಆಂತರಿಕ ನೆಲೆಯಲ್ಲಿ ಅವು ವಿಶೇಷವಾಗಿ ಕಳಾಹೀನವಾಗಿವೆ. ವಿಕಲತೆ, ಸೆನ್ಸ್ ಆಫ್ ಹ್ಯೂಮರ್, ತಮಾಷೆಗಳ ಅದ್ಭುತವಾದ ಸಂಯೋಗವು ಶಕ್ತಿಯ ಈ ಜಗತ್ತಿನಲ್ಲಿ ನೈತಿಕ ಪ್ರತಿರೋಧದ ಒಂದು ಅನಿವಾರ್ಯ ಭಾಗವಾಗಿ ಭಾಸವಾಗುತ್ತದೆ. ಈ ಸರಳತೆಯಲ್ಲಿನ ಬಿಗಿತ ಹಾಗೂ ಜಾಗೃತಿಗಳು ಒಂದು ನಿಡಿದಾದ ಆತ್ಮ ಸಂಘರ್ಷದಿಂದ ಬಂದದ್ದಾಗಿದೆ. ಕವಯಿತ್ರಿ ತುಂಬ ಸರಳ ಹಾಗೂ ನಿರಾಯಾಸ ರೀತಿಯಲ್ಲಿ ಹೇಳಿದಂತೆ ಭಾಸವಾದರೂ, ಈ ಜಗತ್ತಿನಲ್ಲಿ ಈಗ ಯಾವುದೂ ನೇರ ಹಾಗೂ ಸರಳ ಇಲ್ಲವೆಂಬುದು ಅವಳಿಗೆ ಗೊತ್ತಿದೆ. ಅವಳು ಹೇಳುತ್ತಾಳೆ - "ನಿಶ್ಚಿತತೆ ಸುಂದರವಾಗಿದೆ, ಆದರೆ ಅನಿಶ್ಚಿತತೆ ಅದಕ್ಕಿಂತ ಸುಂದರವಾಗಿದೆ." ನೊಬೆಲ್ ಪುರಸ್ಕಾರದ ಸಂದರ್ಭದಲ್ಲಿ ಶಿಂಬೊರ್ಸ್ಕಾ ನೀಡಿದ ಭಾಷಣದಲ್ಲಿ - 'ಇಂದು ಎಲ್ಲ ಬಗೆಯ ಅತ್ಯಾಚಾರಿಗಳು, ನಿರಂಕುಶರು, ದುರಾಗ್ರಹಿಗಳು ಮತ್ತು ಜನನಾಯಕರೆಂಬವರು ಭಯಂಕರವಾದ ಆತ್ಮವಿಶ್ವಾಸದಿಂದ ತುಂಬಿಹೋಗಿದ್ದಾರೆ ಮತ್ತು ಪ್ರಚಂಡ ಉನ್ಮಾದದೊಂದಿಗೆ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದಾರೆ. ಅವರು ತೆಗೆದ ಅಸಂಖ್ಯ ಪ್ರಾಣಗಳು ಅವರಿಗೂ ಎಲ್ಲರಿಗೂ ಸಾಕಷ್ಟು ಆಗಿವೆ'- ಎಂಬ ಸಾಲುಗಳನ್ನು ರೇಖಾಂಕಿತಗೊಳಿಸಲಾಗಿತ್ತು. ಶಕ್ತಿಯ ಜಗತ್ತಿನಲ್ಲಿ ಪಾಶವಿಕತೆ ಹಾಗೂ ಆತ್ಮವಿಶ್ವಾಸಗಳ ಈ ಥೀಸಿಸನ್ನು ಶಿಂಬೊರ್ಸ್ಕಾ ಬಹಳ ಅಪೂರ್ವವಾದ ರೀತಿಯಲ್ಲಿ ಎತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಕವಿತೆಯ ಕೆಲವು ಸಾಲುಗಳು ಗಮನಾರ್ಹವಾಗಿವೆ.

ಯಾವ ಗಿಡುಗವಾದರೂ ತನ್ನ ಅಪರಾಧ ಒಪ್ಪಿಕೊಂಡಿದ್ದಿದೆಯೇ?
ಬೇಟೆಯ ಮೇಲೆ ಜಿಗಿಯುವ ಮುನ್ನ ಎಂದಾದರೂ ಹಿಂಜರಿದಿದೆಯೇ ಚಿರತೆ?
ಕೊಂಡಿಯಿಂದ ಕುಟುಕುವಾಗ ಚೇಳು ನಾಚಿಕೊಂಡಿರಲಿಲ್ಲ
ಸರ್ಪಕ್ಕೆ ಕೈಗಳಿದ್ದಿದ್ದರೆ
ಅದು ಅವುಗಳನ್ನು ನಿರಪರಾಧಿಯೆಂದೇ ಹೇಳುತ್ತಿತ್ತು
ನರಭಕ್ಷಿ ವ್ಹೇಲ್‌ದ ಹೃದಯ
ಒಂದು ಟನ್ನಿನದೇ ಇರಬಹುದು
ಸೂರ್ಯಮಾಲೆಯ ಈ ಮೂರನೆಯ ಗ್ರಹದ ಮೇಲೆ
ಪಶುತ್ವದ ಮೊದಲ ಲಕ್ಷಣ
ನಿರ್ದ್ವಂದ್ವ ಆತ್ಮ ಹಾಗೂ ಅಚಲ ವಿಶ್ವಾಸ

(ಆತ್ಮಗ್ಲಾನಿಯ ಹಕ್ಕಿನಲ್ಲಿ)

ಶಿಂಬೊರ್ಸ್ಕಾ ನೊಬೆಲ್ ಪುರಸ್ಕಾರದ ತನ್ನ ಭಾಷಣದಲ್ಲಿ ಮುಂದುವರಿದು ಹೇಳುತ್ತಾಳೆ - "ಯಾವನಾದರೂ ನಿಜವಾದ ಕವಿಯಾದರೆ ಯಾವಾಗಲೂ 'ನನಗೆ ಗೊತ್ತಿಲ' ಎಂಬ ಮಾತನ್ನು ಮರುಕಳಿಸುತ್ತಾನೆ. ಕವಿಯು ಯಾವಾಗಲಾದರೂ ಪೂರ್ಣತೆಯತ್ತ ಬಂದರೂ ಮತ್ತೆ ಅಪೂರ್ಣತೆ

- ಅಪರ್ಯಾಪ್ತತೆಯನ್ನೇ ಆಯ್ಕೆ ಮಾಡಿಕೊಳ್ಳುತ್ತಾನೆ. ಈ ಸಂಶಯ, ಅಶಾಂತಿ ಹಾಗೂ ಸತತ ಪ್ರಶ್ನೆಯ ವ್ಯಾಕುಲತೆಯೇ ಅವನಿಗೆ ಮೂಲಭೂತ ಸಂಗತಿಗಳಾಗಿವೆ.

ಶಿಂಬೊರ್ಸ್ಕಾರ ಒಂದು ಕವಿತೆಯ ಸಾಲುಗಳು ಇವು.

ಕವಿತೆ
ಆದರೆ ಕವಿತೆಯೆಂದರೇನು
ಒಂದು ದುರ್ಬಲ ಉತ್ತರವಷ್ಟೇ ಆಕರ್ಷಿಸಿತು
ಈ ಪ್ರಶ್ನೆಯಿಂದ
ಆದರೆ ನನಗೆ ಮತ್ತೇನೂ ಗೊತ್ತಿಲ್ಲ, ಮತ್ತೇನೂ ಗೊತ್ತಿಲ್ಲ
ನಾನು ಅದನ್ನು ಹಿಡಿದುಕೊಂಡಿದ್ದೇನೆ
ಮುಕ್ತಿದಾಯಿ ಬದುಕುವ ರೇಲಿಂಗ್ ರೀತಿಯಲ್ಲಿ

ತನ್ನ ಅಪೂರ್ಣತೆಯ ಈ ಒಪ್ಪಿಗೆಯು, ಕಲೆಯಲ್ಲಿ ಎಷ್ಟೊಂದು ಮಾನವೀಯ ಅರ್ಥಗಳನ್ನು ರಚಿಸಬಲ್ಲುದು. ಶಿಂಬೊರ್ಸ್ಕಾರ ಹೊಸ ಕವಿತಾಸಂಕಲನ 'ಒಂದು ನಾಯಿಯ ಒಂಟಿ ದನಿ'ಯಲ್ಲಿ ಸೆಪ್ಟೆಂಬರ ೧೧ ರಂದು ನ್ಯೂಯಾರ್ಕನ ವರ್ಲ್ಡ ಟ್ರೇಡ ಸೆಂಟರನ ಗಗನಚುಂಬಿ ಇಮಾರತಿನ ಮೇಲೆ ನಡೆದ ಆತಂಕವಾದಿಗಳ ಆಕ್ರಮಣದ ಬಗ್ಗೆ ಒಂದು ಕವಿತೆಯಿದೆ. 'ಸೆಪ್ಟೆಂಬರ್ ಹನ್ನೊಂದರ ಫೋಟೋಗ್ರಾಪ್' ಜೀವವುಳಿಸಿಕೊಳ್ಳಲು ಇಮಾರತಿನಿಂದ ಜಿಗಿಯುವ ಜನರನ್ನು ಒಂದು ಸ್ಥಿರ ಚಿತ್ರದಲ್ಲಿ ಅವರು ನೋಡುತ್ತಿದ್ದಾರೆ. ಅವರೆಲ್ಲ ಗಗನಚುಂಬಿ ಕಟ್ಟಡದಿಂದ ಜಿಗಿಯುತ್ತಿದ್ದಾರೆ ಮತ್ತು ಶಿಂಬೊರ್ಸ್ಕಾ ಆಗಲೇ ಕವಿತೆಯನ್ನು 'ಫ್ರೀಜ್' ಮಾಡಿದ್ದಾರೆ. ಯಾಕೆಂದರೆ ಅಲ್ಲಿ ಈಗಲೂ ಜೀವನ ಉಳಿದುಕೊಂಡಿದೆ. ಕವಿತೆಯಲ್ಲಿನ ಅಪೂರ್ಣತೆಯ ಆಶಯ ಎಷ್ಟೊಂದು ಮಾರ್ಮಿಕ!

ಅವರಿನ್ನೂ ಗಾಳಿಯ ಸುಳಿಯಲ್ಲಿದ್ದಾರೆ
ಪಕ್ಕದ ಆ ಸ್ಥಳದಲ್ಲಿ
ಇನ್ನೂ ಇನ್ನೂ ತೆರೆದಿರುವಲ್ಲಿ
ನಾನು ಕೇವಲ ಎರಡು ಸಂಗತಿಗಳನ್ನು ಮಾಡಬಲ್ಲೆ ಅವರಿಗಾಗಿ
ಹಾರುವುದನ್ನು ವರ್ಣಿಸುವುದು
ಮತ್ತು ಕೊನೆಯ ಸಾಲನ್ನು ಜೋಡಿಸದಿರುವುದು.

ಆರ್.ಪಿ. ಹೆಗಡೆ, ೨೩೪, 'ಸೃಷ್ಟಿ', ಕಾಲೇಜ ಸ್ಟಾಫ ಹೌಸಿಂಗ್ ಕಾಲನಿ, ಅವರಗುಪ್ಪಾ, ಸಿದ್ದಾಪುರ(ಉಕ)
೫೮೧೩೫೫

ನೀರ ನೆಳಲನು ಕಡಿದು (ಕಥೆ)

ಡಾ.ಹಳೀಮನೆ ರಾಜಶೇಖರ

ಮುಂಜಾನೆಯಿಂದ ಸದಾಶಿವಪ್ಪಗೌಡನ ಮನೆ ಮುಂದೆ ಕುಂತಿದ್ದ ಚೆಟ್ಟಯ್ಯ ಮಧ್ಯಾಹ್ನ ಆದರೂ ಎದ್ದಿರಲಿಲ್ಲ. ಒಂದೇ ಸಮ ಒಂದರಿಂದ ಒಂದು ಬೀಡಿ ಸೇದುತ್ತಿದ್ದ. ಸದಾಶಿವಪ್ಪಗೌಡನ ಮೇಲೆ ಸಿಟ್ಟಿನಿಂದಲೊ, ಇಲ್ಲ ಹೆಂಡತಿ ಸತ್ತ ಸಂಕಟ ಮರೆಯಲೊ ಬೀಡಿಯನ್ನು ನಿರ್ಧಯವಾಗಿ ಬೂದಿ ಮಾಡುತ್ತಿದ್ದ. ಕುದಿವ ಸುಣ್ಣದಂತೆ ಬಿಸಿಲು ಸುರಿಯುತ್ತಿತ್ತು. ಸೂರ್ಯ ಬೆಂಕಿ ಉಂಡೆಯನ್ನು ಉಗುಳುತ್ತಿದ್ದ. ಸೂರ್ಯನ ಝಳಕ್ಕೆ ಮೋಡ ಕರಗಿ ಕೆಂಡದ ಮಳೆಯಾಗಿ ಸುರಿಯುತ್ತಿತ್ತು. ಸುರಿಯುವ ಬಿಸಿಲಿಗೆ ಚೆಟ್ಟಯ್ಯನ ದೇಹ ಬೆಂಕಿಯಲ್ಲಿ ಬೆಂದಂತಾಗಿತ್ತು. ಕಣ್ಣು ಪಿಸಿರುಗಟ್ಟಿದ್ದವು. ತಲೆ ತಿಪ್ಪೆಗುಂಡೆಯಾಗಿತ್ತು.

ತಾಸತ್ತಿಗೊಮ್ಮೆ ತಲೆಯನ್ನು ಪರಪರ ಕೆರಕಂಡು, ಮೈಯೆಲ್ಲ ಪರಚಿಕೊಂಡು 'ಯಪ್ಪೋ...... ನನ್ನ ಮಾತು ಕಿವಿಗಿ ಹಾಕ್ಕೆಳ್ರಿಪ್ಪೋ..... ನೀವೆ ಮಾತು ಕೊಟ್ಟೀರಿ...... ಮಾತಿನಂಗ ನಡಕರಿ' ಎಂದು ಕೂಗುತ್ತಿದ್ದ. ನೆಲ ಗುದ್ದಿ ಗುದ್ದಿ ಅಬ್ಬರಿಸುತ್ತಿದ್ದ. 'ಯಪ್ಪೋ ..... ಗೌರಮ್ಮ ಗೌಡಸಾನಿ ನೀನರಾ ಕೇಳವ್ವೋ..... ನಿನ ಮಗಳು ಸತ್ತೋದ್ಲಂಗೆ' ಎಂದು ಮುಗಿಲು ಹರಿಯುವಂತೆ ಅಳುತ್ತಿದ್ದ. ಗುರುಪಾದಪ್ಪ ಇವನ ಗೋಳು ಕೇಳಲಾರದೆ ಹೊರಗ ಬಂದು 'ಸುಮ್ನೆ ಕುಂದ್ರಲೆ ದೊಡ್ಡ ಗೌಡರಿಗೆ ಆರಾಮಿಲ್ಲ, ಅಳೋದು, ಕೂಗೋದು ಮಾಡಬ್ಯಾಡ ಎಂದು ಬಯ್ದು ಹೋಗಿದ್ದ. 'ಅಂಗಂದರ ಯಂಗಪ್ಪೋ...... ನಾಲಿಗಿ ನುಡಿದಂಗ ನಡಿಬೇಕು. ನೀವು ಹೇಳಿದಂಗ ಕೇಳೀವಿ ಮಾಡಂದದ್ದು ಮಾಡೀವಿ. ನೀವು ಹೇಳಿದಂಗ ನಡಕಬೇಕಪ್ಪೋ......' ಎಂದು ಅಂಗಲಾಚಿದ್ದ.

ಚೆಟ್ಟಯ್ಯನ ಕಣ್ಣುಗಳು ನೆಟ್ಟ ಬಾಣದಂತೆ ಸದಾಶಿವಪ್ಪಗೌಡನ ಬಂಗ್ಲೆ ಕಡೆನೆ ನೋಡುತ್ತಿದ್ದವು. ಅವನ ಕಣ್ಣೋಟಕ್ಕೆ ಸೂರ್ಯನೆ ಬೆದರಿ ಬಿಸಿಲನ್ನು ಇನ್ನಷ್ಟು ಪ್ರಖರಗೊಳಿಸಿದ್ದ. ಕುಂತು ಕುಂತು ಸಾಕಾಗಿ ನಡುವು ನೋಯುತ್ತಿದ್ದವು. ನರ ಹೊಡಿತಿದ್ದವು. ಉಸಿರಾಡಿದಂತೆಲ್ಲ ಸಂಕಟ ಆಗುತ್ತಿತ್ತು. ಒಂದೇ ಸಮ ಬೀಡಿ ಸೇದುತ್ತಿದ್ದರಿಂದ ಉಸಿರಿಗೆ ಉಸಿರೆ ತಂಬಾಕಿನ ವಾಸನೆಯಾಗಿತ್ತು. ಹೊಟ್ಟೆಗೆ ಏನು ಬಿದ್ದಿರದಿದ್ದರಿಂದ ಕರಳು ಚುರ್‍ರುಗುಟ್ಟುತಿದ್ದವು. ಕರಳು ಚುರ್‍ರುಗುಟ್ಟಿದಂತೆಲ್ಲ ಚೆಟ್ಟಯ್ಯ ಮನೆ ಬಾಗಿಲಿಗೆ ಮುಖ ಮಾಡಿ 'ನಿಮ್ಮ ಮನೆ ಮಗಳು ಸತ್ತಾಳಪೋ...... ಹೊರಗ ಬರ್‍ರಪೋ ಗೌಡ' ಎನ್ನುತ್ತಿದ್ದ.

ಚೆಟ್ಟಯ್ಯ ಬಂದು ಕುಂತಾಗಿನಿಂದಲೂ ಗುರುಪಾದಪ್ಪನಿಗೆ ಕುದಿವ ಎಣ್ಣೆಯಲ್ಲಿ ಬಿದ್ದಂತಾಗಿತ್ತು. ಕುಂಡೆ ಸುಟ್ಟ ಬೆಕ್ಕಿನಂತೆ ಓಡಾಡುತ್ತಿದ್ದ. ಸದಾಶಿವಪ್ಪಗೌಡನ ಜತೆಗೆ ತಾಸುಗಟ್ಟಲೆ ಮಾತಾಡಿದ್ದ. ತಮಗೆ ಗೊತ್ತಿದ್ದೋರಿಗೆಲ್ಲ ಫೋನ ಮಾಡಿದ್ದ. ಯಾರು ಮನಸಿಗಚಿಗಂಡು ಮಾತಾಡಲಿಲ್ಲ. ಚೆಟ್ಟಯ್ಯನ ಸಮಸ್ಯೆಯನ್ನು ಯಾರು ಗಂಭೀರವಾಗಿ ಪರಿಗಣಿಸಲಿಲ್ಲ. 'ನೀವು ಮಾತು ಕೊಟ್ಟೀರಿ ಅಂದಮ್ಯಾಲ ನೀವ ಈಡೇರಿಸಬೇಕು. ನಾವಂತು ಜಾಗ ಕೊಡಾಕ ತಯಾರಿಲ್ಲ'! ಅಂದಿದ್ದರು. 'ನಮ್ಮ ಮಂದಿನೆ ಮನೆ ಹಾಳು ಮಾಡೋದಾದ್ರಗ ಯಾರನ ನಂಬಬೇಕನು. ಎಲ್ಲಾರು ಕುಂತು ಮಾತಾಡುವಾಗ ಜಾಗ ಕೊಡ್ತೀವಿ ಅಂದಾರ. ಈಗ ನೋಡದರ ಹೀಂಗ ಮಾತಾಡುತಾರ. ಮಾತಿನ್ಯಾಗ ಮಾತಿಲ್ಲದ ಸೂಳೆಯ ಮಕ್ಕಳು' ಎಂದು ಸದಾಶಿವಪ್ಪಗೌಡನ ಮುಂದ ಒದರಾಡಿದ. 'ಗುರುಪಾದಪ್ಪ ಈ ಸಮುದ್ರಕ್ಕ ಹಾಕಿದವನ ನೀನು. ಈಗ ಸಮುದ್ರ ಈಜಬೇಕು ಅಷ್ಟೇ' ಎಂದು ಸದಾಶಿವಪ್ಪಗೌಡ ಏನೋ ಗಹನ ವಿಚಾರದಲ್ಲಿ ಮುಳುಗಿದ್ದ. 'ಎಲ್ಲಾರು ಮನಿಗ್ಯಾರ ಹೋಗಿ ಕೇಳಿ ಬರ್ತೀನಪ್ಪ. ಅವಾಗರ ಏನರ ಬಾಯಿ ಬುಡ್ತಾರನು ನೋಡಮು' ಎಂದು ಎಲ್ಲಾರ ಮನೆಗಳಿಗೆ ಅಡ್ಡಾಡಿ ಬಂದಿದ್ದ. 'ಅಪ್ಪಗ ಬ್ಯಾರೆ ಆರಾಮಿಲ್ಲ. ವಿಷಯ ಬಾಳ ಸೂಕ್ಷ್ಮ ಐತಿ. ಮೊದಲು ನೀನು ಅವನ ಬಾಯಿ ಮುಚ್ಚಿಸು ಆ ಮೇಲೆ ಏನಾರ ಮಾಡಮು. ಸದಾಶಿವಪ್ಪಗೌಡ ಅಂದಿದ್ದ. 'ಅಲ್ಲಪಾ ಆ ಮ್ಯಾಗಳ, ಹೊಲದಾಗ ಜಾಗ ಕೊಟ್ಟರಾಯಿತು. ಬಾಳ ಅಂದರ ಎರಡು ಮಳ ಜಾಗ ಅಷ್ಟೆ. ಸಲಹೆ ಮುಂದಿಟ್ಟಿದ್ದ. 'ಅಪ್ಪ ಅಮ್ಮ ಒಪ್ಪುತಾರನು. ಈಗ ಒಬ್ಬನಿಗೆ ಕೊಟ್ಟರ, ನಾಳೆ ಎಲ್ಲಾರು ಕೇಳ್ತಾರ. ಆ ಹೊಲ ಎಲ್ಲಾ ಸುಡಗಾಡು ಮಾಡಿಡ್ತಾರ.' ಸಲಹೆಯನ್ನು ಗೌಡ ನಿರಾಕರಿಸಿದ್ದ. ಮುಂದಿನ ದಿನಗಳಲ್ಲಿ ಏನೇನೋ ಆಗಬೇಕೆಂದು ಯೋಚನೆ ನಡೆಸಿದ್ದ ಗುರುಪಾದಪ್ಪನಿಗೆ ಏನು ಮಾಡಬೇಕೊ ತಲೆ ಚಿಟ್ಟು ಹಿಡಿದಿತ್ತು.

ಬೆಂಕಿ ಸುರಿಯುತ್ತಿದ್ದ ಬಿಸಿಲಲ್ಲಿ ಚೆಟ್ಟಯ್ಯ ಮಕ್ಕಳು ಓಡೋಡಿ ಬಂದು ಚೆಟ್ಟಯ್ಯನ ಮೈಮೇಲೆ ಬಿದ್ದು ದುಃಖಿಸಿ ದುಃಖಿಸಿ ಅತ್ತವು. 'ಯಪ್ಪಾ ನಮ್ಮ ಗುಡುಸಿಲಿತಾಕ ಹದ್ದು, ಕಾಗಿ ಬಂದು ಕುಂತಾವ. ಅವ್ವನ ಮೈಮ್ಯಾಗ ಬರ್ತಾವಪೋ ನಮಗ ಅಂಜಿಕಿ ಬರುತೈತಿ. ನೀನು ಬಾರಪೋ....' ಮತ್ತಷ್ಟು ಮೈಯಿಗಿ ಒರಕಂಡು ಗೊಳೋ ಅಂತ ಅಳಕತ್ತಿದವು. ಮಕ್ಕಳು ಅಳೋದು ನೋಡಿ ಸಂಕಟ ಉಕ್ಕಿತು. ಕರಳು ಕರಗಿದವು. ದುಃಖ ಉಮ್ಮಳಿಸಿ ಬಂತು. ಬಿಸಿಲಿಗೆ

ಕಣ್ಣೀರು ಬತ್ತಿದ್ದರಿಂದ ಕಣ್ಣೀರು ಬರಲೇ ಇಲ್ಲ. ಸಿಟ್ಟು ನೆತ್ತಿಗೇರಿತು. 'ಯಂಗ ಮಾಡಲೋ....' ಎಂದು ಹಲ್ಲು ಹಲ್ಲು ಕಡಿದು ಮಕ್ಕಳನ್ನು ಅವುಚಿಕೊಂಡು 'ಗೌಡ ಹೊರಗರ ಬಾರಪ್ಪೋ..... ನನ್ನ ಹೆಂಣ್ತಿನ್ನ ಹದ್ದು ಕಾಗಿ ತಿಂತಾವಂತಪ್ಪೋ.....' ಅಬ್ಬರಿಸಿ ನಿಂತಗಂಡ.

ಸುಡಗಾಡು ಸಮೀಪ ವಾಸ ಮಾಡುತ್ತಿದ್ದ ಚೆಟ್ಟಯ್ಯಾ ಕುಟುಂಬದ ಜೊತೆಗೆ ಹತ್ತು ಹನ್ನೆರಡು ಕುಟುಂಬ ವಾಸ ಮಾಡುತ್ತಿದ್ದವು. ಚೆಟ್ಟಯ್ಯ ಹೆಂಡತಿ ಸತ್ತಿದ್ದರಿಂದ ಯಾರು ದಗದಕ್ಕೆ ಹೋಗದೆ ಹೆಣದ ಮುಂದೆ ಕುಂತಿದ್ದರು. ಚೆಟ್ಟಯ್ಯ ಒಂದೆರಡು ತಾಸು ಹೆಣದ ಮುಂದೆ ಇದ್ದು ಲೋಕ ಅದುರುವಂತೆ ಅತ್ತು ಕಣ್ಣೀರಿಟ್ಟಿದ್ದ. ಸದಾಶಿವಪ್ಪಗೌಡ ನಾಲ್ಕು ವರ್ಷದ ಹಿಂದ 'ನಿಮ್ಮಂದಿಯಲ್ಲಿ ಯಾರೆ ಸಾಯಿಲಿ ಹೂಳಾಕ ಜಾಗ ಕೊಡ್ತೀನಿ' ಅಂದಿದ್ದ. ಅಲ್ಲಿ ಸಮೀಪಿದ್ದ ಸುಡುಗಾಡದಲ್ಲಿ ಹೂಳಲು ಕುಣಿ ತೋಡಲು ಹೋಗಿದ್ದ. ಕುಣಿ ತೋಡದಕಿಂತ ಮುಂಚೆನೆ ಗುರುಪಾದಪ್ಪ ಬಂದು 'ಅಲ್ಲಿ ಕುಣಿ ತೋಡಬಾಡಲೆ. ನಮ್ಮಂದಿ ನನ್ನ ಹೆಣ ಮಾಡ್ತಾರ' ಎಂದು ತಡೆದಿದ್ದ. 'ಗೌಡ ಮಾತು ಕೊಟ್ಟಾನ. ಗೌಡನ್ನ ಕೇಳಿದ್ರಾಯ್ತು' ಎಂದು ಎಷ್ಟೂತ್ತಿನಿಂದ ಮನೆ ಮುಂದ ಬಂದು ಕುಂತಿದ್ದ. ಸದಾಶಿವಪ್ಪಗೌಡನ ದೊಡ್ಡ ಬಂಗ್ಲೆಯಿಂದ ಯಾವ ಉಸಿರು ಬಂದಿರಲಿಲ್ಲ. ಗೌಡ ಯಾಕ ಅಂತ ಕೇಳಿರಲಿಲ್ಲ. ಗೌಡನ ತಾಯಿ ಗೌರಮ್ಮಳಿಗೆ ಚೆಟ್ಟಯ್ಯ ಬಂದು ಕುಂತದ್ದು ಗೊತ್ತಿದ್ದರೂ ಮಗನ ಅಂಜಿಕೆಗೆ ಹೊರಗ ಬಂದಿರಲಿಲ್ಲ. ಬೆಳತನಕ ನಿದ್ದಿ ಮಾಡಿರದ ದೊಡ್ಡಗೌಡ ಇನ್ನೂ ಮಲಗಿದ್ದರು.

ದೊಡ್ಡ ಬಂಗ್ಲೆಯಿಂದ ಯಾರು ಹೊರಗ ಬರಲಾರದ್ದು ನೋಡಿ ಚೆಟ್ಟಯ್ಯ ತಲೆ ಸಿಡಿಯಿತು. ಧಗ ಧಗಿಸುವ ಉರಿ ಮೈಯಲ್ಲಿ ಹೊಕ್ಕಂತಾಗಿ ಸಣ್ಣ ಮಗಳನ್ನು ಹೆಗಲ ಮೇಲೆ ಹೊತ್ತುಕೊಂಡು, ದೊಡ್ಡ ಮಗನನ್ನು ಕೈಯಲ್ಲಿ ಹಿಡಕಂಡು ದುಮುಗುಡುತ್ತ ತಲಬಾಗಿಲ ಮುಂದಕ್ಕೆ ಹೋದ. ಮೈಯಲ್ಲಿ ರಕ್ತ ಕುದಿಯುತ್ತಿತ್ತು. ರೋಮ ಕಂಪಿಸುತ್ತಿದ್ದವು. ನರಗಳು ಉರಿಗೊಂಡು ಅವುಡುಗಚ್ಚಿ ಸಿಡಿಲೊಡೆದಂತೆ 'ನಾನು ಕುಣಿ ತೋಡುತೀನಪೋ.....' ಎಂದು ಕೂಗಿದ. ನೆಲ ಸೀಳುವಂತ ಧ್ವನಿ ದೊಡ್ಡ ಬಂಗ್ಲೆ ತುಂಬಿಕೊಂಡಿತು.

ಗಾಢ ಮಾತುಕತೆಯಲ್ಲಿ ತೊಡಗಿದ್ದ ಗುರುಪಾದಪ್ಪ, ಸದಾಶಿವಪ್ಪಗೌಡ ಮುಗಿಲು ಹರಿದು ಬಿದ್ದಂತೆ ಬೆಚ್ಚಿಬಿದ್ದರು. ದೊಡ್ಡಗೌಡರಿಗೆ ಗಾಳಿ ಬೀಸುತ್ತಿದ್ದ ಗೌರಮ್ಮಳಿಗೆ ಚೆಟ್ಟಯ್ಯನ ಆರ್ದ್ರಧ್ವನಿ ದಿಗಿಲುಗೊಳಿಸಿತು. ಕಲೆಗೆರಕ 'ಹೂಂಕರಿಸಿದಂತೆ ಅನಿಸಿ ಅಪಶಕುನ ಅಂದುಕೊಂಡು ಮನದಲ್ಲಿಯೆ ಅಡವಿ ಅಮರೇಶನನ್ನು ನೆನೆದು ಈ ಅಮಾಸಿಗೆ ಬೆಳ್ಳಿ ಮುಡುಪು ಕಟ್ಟುತ್ತೇನೆಂದು ಬೇಡಿಕೊಂಡಳು. 'ಇವನೋಸುರಿಯಾ ಸುಡುಗಾಡು ಮಾರೆವನು ಜೀವ ಝಲ್ಲಂನಂಗ ಕೂಗಿತಾನಲ್ಲ' ಎಂದು ಆತಂಕಗೊಂಡಳು. ಗಂಡನ ಮುಖ ನೋಡಿದಳು. ಪ್ರಶಾಂತವಾಗಿದ್ದದ್ದು ಕಂಡು ನಿಟ್ಟುಸಿರು ಬಿಟ್ಟಳು. ಮುಂಜಾನೆ ಚೆಟ್ಟಯ್ಯ ಬಂದಾಗಲೆ ಸಮಧಾನ ಮಾಡಿ ಕಳಿಸಬೇಕಂತ ಮಾಡಿದ್ದಳು. ಮಗ ಹೊರಗೆ ಕಾಲಿಡದಂತೆ ತಾಕೀತು ಮಾಡಿದ್ದರಿಂದ ಜೀವ ಹಿಡಕಂಡು ಸುಮ್ಮನೆ ಕುಂತಿದ್ದಳು. ಅವನು ಕೂಗೋದು, ಅಳೋದು ಕೇಳಲಾರದ

'ಮೊದಲೆ ಹೆಂಡತಿ ಸತ್ತಿದ್ದರಿಂದ ಗೋಳಾಡುತನ. ಮತ್ತೆ ನೀವು ಗೊಳಾಡಿಸಿದರ ಯಂಗಪ. ಸತ್ತೋರು ಮನೆಮುಂದ ಕುಂತರ ಒಳ್ಳೆದಾತದನು. ನಿಮಪ್ಪ ನೋಡಿದರ ತಿಂಗಳಾಯಿತು ಮಕ್ಕಂಡಲ್ಲೇ ಮಕ್ಕಂಡಾನ. ಸ್ವಲ್ಪ ಗಟ್ಟಿ ಧ್ವನಿಯಾದರೂ ಬೆಚ್ಚಿ ಬೀಳ್ತಾನ. ಅವನಿಗೆ ಏನರ ಹೇಳಿ ಕಳುಸರಿ. ಇಲ್ಲ ಹಳ್ಳದ ಗಡ್ಡೆಮ್ಯಾಗ ಹೂಳರಿ ಅಂತ ಹೇಳಿರಿ' ಅಂದಿದ್ದಳು. 'ಅದು ನಮ್ಮದೊಂದೆ ಸಮಸ್ಯೆ ಅಲ್ಲಂಗೆ. ಅದಕ್ಕೆ ನಮ್ಮ ಮಂದಿ ಎಲ್ಲಾರು ಒಪ್ಪಬೇಕು. ಮಿಂಡ್ರಗುಡಿದೋರು ಮೊದಲು ಮಾತು ಕೊಟ್ಟಿದ್ದರು. ಈಗ ನೋಡಿದರ ಅಡ್ಡಗಂಟುಗ ಆಗ್ಯಾರ. ಅದೆಲ್ಲ ನಿಮಗ ತಿಳೀದಿಲ್ಲಂಗೆ' ಗುರುಪಾದಪ್ಪ ಅಂದಿದ್ದ. 'ಮೊದಲೇ ನಿಮಗ ಹೇಳಿದ್ನೆಪ. ಈ ಮಂದಿಗೂಡ ಹೋಗಬಾಡರಪ. ನಮ್ಮ ಮನ್ಯಾಗ ನಾವಿದ್ದರ ಸಾಕು. ನಮ್ಮಂದಿ ಒಬ್ಬರನ, ಮುಂದ ಮಾಡಿ ಹಳ್ಳಕ್ಕೆ ದೂಡಿ ಆಳ ನೋಡ್ತಾರ ಅಂದರೂ ಕೇಳಲಿಲ್ಲ' ತನ್ನ ಸಮಧಾನಕ್ಕೆ ಅಂದುಕೊಂಡಿದ್ದಳು. ನಾಲ್ಕು ವರ್ಷದಿಂದಲೂ ಇವೆ ಮಾತುಗಳನ್ನು ಮಗನಿಗೆ ಹೇಳುತ್ತಿದ್ದಳು. ಕೇಳಿ ಕೇಳಿ ಅವರ ಕಿವಿ ಕಿವುಡಾಗಿದ್ದವು.

'ಈ ಸೂಳೆ ಮಗ ಇಲ್ಲಿವರೆಗೂ ಬಂದನನು' ಎಂದು ಗುರುಪಾದಪ್ಪ ಕುಂತಲ್ಲೇ ಹಲ್ಲು ಕಡಿದ. 'ಅಲ್ಲಪ, ಅವನೌವುನ ಅವನ್ನ ಮನೆ ಮುಂದ ಕುಡುದು ಗಲಾಟೆ ಮಾಡ್ತಾನಂತೇಳಿ ಪೋಲೀಷರ ಕೂಡ ಒತಒದಿಸಿ ಸ್ಟೇಷನ್‌ಗೆ ಹಾಕಿಸಿಬಿಡಲನು. ಯಾರೇನು ಮಾಡ್ತಾರ ನೋಡಮು' ಚೆಟ್ಟಯ್ಯನ್ನ ತಿಂದುಬುಡುವಷ್ಟು ಕೋಪ ಬಂದಿತ್ತು. 'ಗುರುಪಾದ ನಿನಗ ತೆಲೆಕೆಟ್ಟದನು. ಅವನನ್ನ ಸ್ಟೇಷನ್‌ಗೆ ಹಾಕಿದರ ಊರೆ ಉರಿದು ಹೋತದ. ಈಗ ಬೇಕಾದಷ್ಟು ಮಸಲತ್ತು ನಡೆಸಿರ್ತಾರ. ಅಂತದ್ರಾಗ ಇಂತದೊಂದು ಮಾಡಿ ಕುಂತುಗಂಡಿ ಅಂದರ ಮುಂದ ಬಾಳ ತಿಪ್ಪಲಾತದ. ಆ ಮಾಲೀಪಾಟೀಲರ ಮಗ ವೀರೇಶ ಊರಾಗ ಐದನನು.' ಗಾಢ ಚಿಂತೆಯಲ್ಲಿ ಮುಳಿಗಿದವರಂತೆ ಗೌಡ ಮಾತಾಡಿದ. 'ಇಲ್ಲಪ ಊರುಬುಟ್ಟು ಎಂಟು ದಿನ ಆಯಿತಂತ' ಆ ದರಿದ್ರದವನು ಬಾಗಿಲಿಗಿ ಬಂದಾನ. ಅವುನ್ನ ಕಳಿಸಿ ಬರ್ತೀನಿ' ಎಂದು ಎದ್ದು ಹೊರಗ ಬಂದ.

ಕಳೆಬರದಂತೆ ನಿಂತಿದ್ದ ಚೆಟ್ಟಯ್ಯನನ್ನ ನೋಡಿ ಭಯಗೊಂಡ. ಕಣ್ಣು ಕೆಂಪಗಾಗಿ ಪಿಸಿರುಗಟ್ಟಿದ್ದವು. ಬಿಟ್ಟ ಕಣ್ಣಿನಿಂದ ನೋಡುತ್ತಿದ್ದ ಚೆಟ್ಟಯ್ಯ ಎಲುಬಿನ ಗೂಡಾಗಿದ್ದ. ಮಕ್ಕಳು ಗುರುಪಾದಪ್ಪನನ್ನು ನುಂಗುವಂತೆ ನೋಡಿದವು. ಚೆಟ್ಟಯ್ಯ ಸುಡುಗಾಡದಿಂದ ಎದ್ದ ಬಂದ ಹೆಣದಂತೆ ಕಂಡ.

''ಯಪ್ಪಾ .... ಸುಡುಗಾಡದಾಗ ಜಾಗ ಕೊಡ್ತೀವಿ ಅಂದಿರಿ.... ಹದ್ದು, ಕಾಗಿ, ನಾಯಿ ಬಂದು ಕುಂತಾವಂತ. ಮಕ್ಕಳು ಅಜಿಕಂಡ ಯಂಗಗ್ಯಾವ ನೋಡಪಾ.....'' ''ಅದನ್ನ ಮಾತಾಡಕತ್ತೀವಲೆ. ಸ್ವಲ್ಪ ತಡಕ ಜಾಗ ಕೊಡ್ತೀವಿ. ಎಲ್ಲಿಗೆ ಓಡಿ ಹೋಗದಿಲ್ಲ''.

''ಮುಂಜಾನೆಯಿಂದ ಕುಂತೀನಿ. ಎಷ್ಟೊತ್ತು ಮಾತಾಡುತೀರೆಪ. ಮಕ್ಕಳು ಅತ್ತು ಅತ್ತು ಬೆಂದು ಹೋಗ್ಯಾವ. ಇನ್ನೂ ಸ್ವಲ್ಪ ಹೊತ್ತು ಆದರ ಇವು ಹೆಣ ಆತವಪೋ''

''ಏನು ಮಾಡಬೇಕಲೆ ಊರಾಗ ಒಂದಿಸು ಮಂದಿ ಎದುರಾಗಿ ಕುಂತಾರ. ಏನಾರ ಮಾಡಬೇಕಂದರ ಅಡ್ಡಗಾಲು ಹಾಕ್ತಾರ''.

''ನೀವು ಯಂಗರ ಮಾಡಿಕೆರಪ. ನಮ್ಮಂದಿ ಯಾರು ಹೊಲಿಗೆ ಬೆಂಕಿ ಹಾಕಿಲ್ಲ ಪೋ. ಹೆಣದ ಮುಂದ ಕುಂತಾರ. ಮಣ್ಣು ಮಾಡಿದ ಮ್ಯಾಲ ಹೊಲಿಗಿ ಬೆಂಕಿ ಕಾಲಾಸ್ತಾರಪ.''

''ಅದೇ ಸುಡುಗಾಡದಾಗ ಯಾಕ ಮಣ್ಣು ಮಾಡ್ತಿರೆಲೆ. ಹಳ್ಳದ ದಂಡಿಗಿ ಹೂಳೂರಿ'' ''ಯಪ್ಪೋ.... ನಿಮಗ ಗೊತ್ತೈತಿ. ಮಹದೇವಪ್ಪಗೌಡ ಹಳ್ಳಕ್ಕ ದೊಡ್ಡ ಕೆರೆ ಕಟ್ಟುಸ್ತಾನಂತ. ಅಲ್ಲಿ ಮಂದಿನ್ನ ಅಡ್ಡಾಡಕ ಬುಡಾದಿಲ್ಲ. ಇನ್ನಾ ಹೆಣ ಹೂಳಾಕ ಬುಡ್ತಾನನು. ನನ್ನೆಡ್ತಿ ನಿಮ್ಮ ಮನೆ ಹೆಂಡೆಗಸ ಬಳದಾಳ. ಮನೆ ಮಗಳ್ಹಂಗ ದಗದ ಮಾಡ್ಯಾಳಪ. ಆಕಿನ್ನ ನಿಮ್ಮ ಮಗಳಂತ ತಿಳಕರೆಪ. ದಳ ದಳ ಕಣ್ಣೀರು ಸುರುಸಿದ. ಇವರು ಮಾತಾಡದು ಕೇಳಿ ಹೆಗಲಮ್ಯಾಗ ಕುಂತಿದ್ದ ಹುಡುಗಿಗೆ ಸಾಕಾಯ್ತು. ಬಿಸಿಲಿನ ಝಳಕ್ಕೆ ಬಸವಳಿದಿದ್ದ ಹುಡುಗಿಯ ಎಲುಬುಗಳು ಕಾವೇರಿದ್ದವು. ಅತ್ತೂ ಅತ್ತೂ ಗಂಟಲು ಒಣಗಿ ನಾಲಿಗೆ ತೇವ ಕಳಕಂಡಿತ್ತು. ಉಸಿರಾಡಲು ತ್ರಾಸು ಆಗುತ್ತಿತ್ತು. ಉಸಿರು ಒಳಗ ಹೊರಗ ಆಡಿದಂಗೆಲ್ಲ ಬೆಂಕಿ ನುಂಗಿದಂಗ ಆಗುತ್ತಿತ್ತು. ಹುಡುಗಿಗೆ ಕಣ್ಣು ಮಂಜು ಮಂಜಾಗಿ ಕಳ್ಳಿಗೆ ಭಗ್ಗನೆ ಬೆಂಕಿ ಹತ್ತಿಕೊಂಡಂತೆ ಸಂಕಟಗೊಂಡಿತು. ಹೊಟ್ಟೆಯಲ್ಲಿ ಕೆಂಡ ಸುರಿವಿದಂತಾಗಿ 'ಅವ್ವಯ್ಯ.....' ಅಂತ ಚಿಟ್ಟನೆ ಚೀರಿತು. ಹುಡುಗಿ ಚೀರಿದ್ದೆ ಗುರುಪಾದಪ್ಪ ಕ್ಷಣ ನಡುಗಿದ. ದಿಗಿಲುಗೊಂಡ ಚಿಟ್ಟಯ್ಯ ಮಗಳನ್ನ ಹೆಗಲಿನಿಂದ ತೆಕ್ಕ್ಯಾಗ ತಗಂಡು ಅವುಚಿಗೊಂಡ. ಕೈ ಹಿಡಕಂಡು ನಿಂತಿದ್ದ ಹುಡುಗ ಗಡ ಗಡ ನಡುಗಿ ಚೆಡ್ಡಿಯಲ್ಲಿ ಉಚ್ಚೆ ಒಯ್ಯುಕೊಂಡಿತು. ಉಚ್ಚೆ ಬಿಸಿನೀರಿನಂತಾಗಿದ್ದರಿಂದ ಹುಡುಗ ತಕ ತಕೆ ಕುಣುದಾಡಿದ. 'ಯವ್ವಾ... ಮಗಳೇ .. ಏನಾಯ್ತು' ಅಂತ ಚಿಟ್ಟಯ್ಯ ಕರಳು ಕಿತ್ತಿ ಬರಂಗ ಅಳಾಕತ್ತಿದ. ದೊಡ್ಡಗೌಡರಿಗೆ ಗಾಳಿ ಬೀಸುತ್ತಿದ್ದ ಗೌರಮ್ಮ ಮನಸ್ಸು ತಡಿಲಿಲ್ಲ. ಚಿಟ್ಟಯ್ಯ ಅತ್ತೇಲಿಗೆ ದಿಗ್ಗನೆ ಎದ್ದು ಹೊರಗ ಓಡಿ ಬಂದಳು. ಚಿಟ್ಟಯ್ಯ ಮಕ್ಕಳನ್ನು ನೋಡಿ ಕರುಳು ಮಿಡಿಯಿತು. ತಾನು ಹೊರಗ ಹೋದರೆ ಮಗ ದೊಡ್ಡಬಾಯಿ ಮಾಡ್ತಾನಂತ ಗೊತ್ತಿದ್ದರೂ ಅರಿವಿಲ್ಲದೆ ಹುಡುಗಿಯ ಕರುಳಿರಿಯುವ ಆರ್ತನಾದಕ್ಕೆ ಹೊರಗ ಓಡಿ ಬಂದಿದ್ದಳು.

ಗೌರಮ್ಮ ಗೌಡಸಾನಿಯನ್ನು ನೋಡಿದ್ದೆ ಚಿಟ್ಟಯ್ಯನಿಗೆ ಮತ್ತಷ್ಟು ದುಃಖ ಉಮ್ಮಳಿಸಿ ಬಂತು. ''ಯಮ್ಮಂಗೆ ನಿನ ಮಗಳು ಹೋದ್ಲಂಗೆ.... ಮಕ್ಕಳು ನೋಡಂಗೆ ಯಂಗಗ್ಯಾವ. ನಾ ಯಂಗ ಮಾಡಲಂಗೆ... ಯವ್ವೋ.... ತಾಯಿಯಿಲ್ಲದ ಮಕ್ಕಳಾದವವ್ವೋ...' ಅಬ್ಬ ಅಬ್ಬರಿಸಿ ಅಳಾಕತ್ತಿದ. ಮಗನಿಗೆ ಸಿಟ್ಟು ನೆತ್ತಿಗೇರಿತು. 'ಅಮ್ಮಗ ತಲೆಯಿಲ್ಲ. ಅವನ್ನ ಮಾತಾಡಿಸಬಾರದಂದರೂ, ಮಾತಾಡಿಸಿ ಮಂದಿ ಇನ್ನಷ್ಟು ನೋಡಂಗ ಮಾಡ್ತಾಳ.' ಕುಂತಲ್ಲೇ ಹಲ್ಲು ಹಲ್ಲು ಕಡಿದ. ಕುಂತಲ್ಲಿಂದಲೇ ಕೂಗಿ ಕರಿಬೇಕಂದುಕೊಂಡ ಯಾಕೋ ಧ್ವನಿಯೆ ಹೊರಗ ಬರಲಿಲ್ಲ.

''ಅಳುಬಾಡಲೋ ಬೋಡಿ. ಮುಂಜಾನೆಯಿಂದ ಮಕ್ಕಳು ಏನು ತಿಂದಿಲ್ಲಂತ ಕಾಣ್ತದ. ಅವುಕ್ಕ ಈಸು ನೀರು ಕುಡಿಸಿ ಏನರ ತಿನಿಸು. ಈ ಬಿಸಲಾಗ ಅವುನ್ನ ಸಾಯಿಬಡಿದಿಗಿ'' ಅಡುಗೆ

ಮನೆಗೆ ಹೋಗಿ ನೀರು, ಅನ್ನ ಮಜ್ಜಿಗೆ ತಂದಳು. ನೀರು ತೆಂಬಿಗ್ಗೆ ಸುರುವಿ, ಅನ್ನ ಮಜ್ಜಿಗೆ ಗಂಗಾಳಕ್ಕೆ ಹಾಕಿದಳು.

ಅನ್ನ ಮಜ್ಜಿಗೆ ನೋಡಿದ್ದೆ ಹುಡುಗರು ಕೈಯ್ಯಾಗ ತಾಟು ತಗಂಡು ಗಬ ಗಬ ತಿಂದವು. ಉಸಿರು ಬುಡುವುದರಲ್ಲಿ ತಿಂದು ಮುಗಿಸಿದವು. ಮತ್ತಷ್ಟು ಮಜ್ಜಿಗೆ ತಂದು ಹಾಕಿದಳು. ಮಜ್ಜಿಗೆ ಗಟ ಗಟ ಕುಡಿದವು. ಗುರುಪಾದಪ್ಪ ನೋಡಿ ದಂಗಾದ.

''ನೀನೊಂದಿಷ್ಟು ಮಜ್ಜಿಗೆ ಕುಡೆಲೋ. ಮಾರೆ ನೋಡು ಯಂಗಾಗ್ಯಾದ ಸತ್ತುಗಿತ್ತು ಹೋದೀಗಿ''.

''ಯಮ್ಮಾ.... ನನ್ನ ಒಡಲಾಗಿದ್ದ ಆಕಿನೆ ಹೋಗ್ಯಾಳಂಗೆ... ಖೂಳು ನೀರು ಏನು ಹೋಗವಲ್ತಂಗೆ''

''ದೇವರ ಇಚ್ಛೆಗೆ ಯಾರೇನು ಮಾಡ್ತಾರಲೋ..... ಇರಲಿ ಈಸು ಮಜ್ಜಿಗಿ ಕುಡಿ ತನುವಿಗೆ ಹಿತ ಆತದ'' ಎಂದು ಮಜ್ಜಿಗೆ ತುಂಬಿಗೆಯನ್ನು ಕೈಯಲ್ಲಿಟ್ಟಳು. ಅಮೃತ ಎಂಬಂತೆ ಕುಡಿದು ದೀರ್ಘ ಉಸಿರುಬಿಟ್ಟ. ''ಮೂರು ದಿನದ ಹಿಂದ ಹೆಂಡೆಗಸ ಬಳ್ಯಾಕ ಬಂದಿದ್ದಳು. ಇದ್ದಕ್ಕಿದ್ದಂಗ ಏನಾಯ್ತು''

''ಏನನಂಗೆ ಉಸುರಾಡಾಕ ತ್ರಾಸು ಆತದ ಅದ್ಲಂಗೆ. ಒಂದೆರಡು ದಿವಸ ಆರಾಮ ತಗಂಡರ ಸರಿಹೋತದಂದು ಮಕ್ಕಾಂಡ್ಲಂಗೆ. ನಿನ್ನೆ ರಾತ್ರಿ ಹೊಟ್ಟೆ ಕಡಿ ತದಂದು ಉಣುಲಿಲ್ಲಂಗೆ. ಮುಂಜಾನೆ ನೋಡಿದರ ಕಣ್ಣು ಮುಚ್ಚಿದ್ಯಂಗೆ ಯವ್ವಾ.... ಹುಡುಗರು ಸಣ್ಣವು ಎದಾವಂಗೆ.... ಯಂಗ ಮಾಡಲಿ. ನನ್ನ ಅರಣ್ಯದಾಗ ಹೊಗದು ಹೋದ್ಲಂಗೆ'.

''ಇರ್ಲೇಳು ಸಾಯೋದು ಹುಟ್ಟೊಂದು ಯಾರ ಕೈಯ್ಯಾಗೈತಿ. ದೇವರಿಟ್ಟಂಗ ಆತದ. ಮಕ್ಕಳ ಮಾರೆ ನೋಡಿ ಧೈರ್ಯ ತಂದಕ.''

''ನಿನಗಾ ಗೊತ್ತಲಂಗೆ. ನನ್ಹೆಡ್ತಿ ಬಂಗಾರ ಇದ್ದಂಗ ಇದ್ಲು. ಒಂದಿನಾರ ಜಗಳಾಡಿದಾರಲ್ಲ. ಆರೆಗಿ ನಾ ಅಂದಿಲ್ಲ. ಆಕಿ ನನಗ ಅಂದಿಲ್ಲ. ಯವ್ವಾ.... ನನಗ ಉಸಿರು ನಿಂತಂಗ ಆಗ್ಯಾದಂಗೆ''

''ಅಳುಬಾಡಲೋ ಬೋಡಿ. ಸತ್ತಾರೆ ಬರ್ತಾಳನು. ನಿಮ್ಮ ಗೌಡುಗ ಆರಾಮಿಲ್ಲ. ಕಣ್ಣೀರು ಹಾಕಬಾಡ. ನೀನು ಕಣ್ಣೀರು ಹಾಕಿದರ ನಮಗ ಒಳ್ಳೇದು ಆಗುದಿಲ್ಲ. ಹೋಗು ಹೆಣ್ತನ್ನ ಮಣ್ಣು ಮಾಡು. ಬಾಳ ಹೊತ್ತು ಬುಟ್ಟರ ಹೊಟ್ಟೆ ಉಬ್ಬಿ ವಾಸನೆ ಬರುತೈತಿ.''

''ಯವ್ವೋ.... ಎಲ್ಲಿ ಮಣ್ಣು ಮಾಡ್ಲಂಗೆ. ನಮಗೆ ಜಾಗಿಲ್ಲ. ಗೌಡನೆ ಜಾಗ ಕೊಡ್ತೀನಿ ಅಂದಿದ್ದ. ಅಲ್ಲೆ ಸುಡುಗಾಡದಾಗ ಮುಂಜಾನೆ ಕುಣಿ ತೋಡು ತಿದ್ನೆಂಗೆ. ಗೌಡನೆ ಬ್ಯಾಡಂತ ಹೇಳಿಕಳಿಸಿದ್ನಂಗೆ. ಎಲ್ಲಿ ಮಣ್ಣು ಮಾಡಲೋ ಯವ್ವೋ....'' ''ನಿನ ಜೇರಾಗಿ ಜಗ್ಗ. ಮನೆ

ಮುಂದ ಕಣ್ಣೀರು ಹಾಕಬಾಡಲೋ. ಮೊದಲು ಇಲ್ಲಿಂದ ಹೋಗು. ಮುಂದ ದೇವರ ನೋಡಿಕಂತಾನ. ನಾನೊಂದೀಸು ಕಾಳು ಕಡಿ ಕೊಡ್ತೀನಿ. ಏನು ಚಿಂತಿ ಮಾಡಬ್ಯಾಡ.''

ಗುರುಪಾದಪ್ಪನಿಗೆ ಸಾಕಾಯ್ತು. ನಿಂತಲ್ಲೆ ಚಡಪಡಿಸಿದ. ಕೈ ಕೈ ಹಿಸಿಕಿಕೊಂಡ.' ಈ ಸೂಳಿಮಗ ಗೋಳು ಹೊಯ್ಕ್ಯಾಂಡು ಈ ಮನೆನೆ ಸ್ಮಶಾನ ಮಾಡ್ತಾನ. 'ಈ ಹೋಗಲೆ ತಾಸುಬುಟ್ಟ ನಾನೆ ಬರ್ತೀನಿ.' ಗದುರಿಸಿದ.

ಮೂರು ನಾಲ್ಕು ಕಾಗೆ 'ಕೊರ್ರ್..... ಕೊರ್ರ್.....' ಅಂತ ಮನೆಗೇಟಿನ ಮ್ಯಾಗ ಬಂದು ಕುಂತವು. ಒಂದೇ ಸವನೆ ಕೂಗಕ್ಕತ್ತಿದವು. ಮನೆ ಮೇಲೆ ಹದ್ದು ಹಾರಾಡಿತು. ಕಾಗೆ, ಹದ್ದುಗಳನ್ನು ನೋಡಿ ಮನೆ ನಾಯಿ ''ಬೋ..... ಎಂದು ಸುತಿ ಹಿಡಿಯಿತು. 'ಇದೇನು ಬಂತಪ' ಗೌರಮ್ಮ ಗಾಬರಿಯಾದಳು. 'ಹೋಗಲೋ.... ನಿನ ಸುಡುಗಾಡಿಗೆ ಇಡಲಿ. ಹದ್ದು ಕಾಗಿ ಇಲ್ಲಿತನಕ ಬಂದಾವ ಎಂದು ತಲ್ಲಣಿಸಿದಳು. ಚಿಟ್ಟಯ್ಯ ಇಲ್ಲೆ ಇದ್ದರೆ ಏನೇನು ಅನಾಹುತ ಸಂಭವಿಸು ತದೋ ಗುರುಪಾದಪ್ಪ ಯೋಚಿಸಿದ.

★★★★

ಚಿಟ್ಟಯ್ಯ ಸುಡುಗಾಡದಲ್ಲಿ ಕುಣಿ ತೋಡದನ್ನ ತಡಿಬೇಕೆಂದು ಮಲ್ಲಪ್ಪ ಸಾಹುಕಾರ ಗುರುಪಾದಪ್ಪನಿಗೆ ಹೇಳಿದ್ದ. ಗುರುಪಾದಪ್ಪ ಹೋಗಿ ಕುಣಿ ತೋಡದನ್ನ ನಿಲ್ಲಿಸಿ, ಸದಾಶಿವಪ್ಪಗೌಡನಿಗೆ ವಿಷಯ ತಿಳಿಸಿದ್ದ. 'ನಮ್ಮಂದಿ ಇದನ್ನ ದೊಡ್ಡ ವಿಷಯ ಮಾಡ್ತಾರ. ನನ್ನ ವಿರುದ್ಧ ಹಲ್ಲು ಮಸ್ಯಾಕ ಹತ್ಯಾರ. ನಮ್ಮಂದಿ ಏನಂತರಾ ಮೊದಲು ಎಲ್ಲಾರನ್ನ ಭೇಟಿಯಾಗಿ ಬಾ' ಎಂದು ಹೇಳಿದ್ದ. ಗುರುಪಾದಪ್ಪ ಒಂದು ಸುತ್ತ ತಮಗ ಬೆಂಬಲ ನೀಡಿದ್ದ ತಮ್ಮಂದಿನ್ನ ಭೇಟಿಯಾದ. ಯಾರು ಆದರದಿಂದ ಸ್ವಾಗತ ಮಾಡಲಿಲ್ಲ.'ಸಾಹೇಬರಿಗೆ ಈಗ ನೆನಪಾಯ್ತು ಅಂತ ಕಣ್ತಾದ' ಎಂದು ವ್ಯಂಗ್ಯ ಮಾಡಿದ್ದರು. ಮೊದಲೆ ಈ ಮಾತುಗಳನ್ನು ನಿರೀಕ್ಷಿಸಿದ್ದರಿಂದ ಮನಸ್ಸಿಗೆ ಬೇಸರ ಆಗಲಿಲ್ಲ. ಮಲ್ಲಪ್ಪ ಸಾಹುಕಾರಂತು, ನೋಡು ಗುರುಪಾದಪ್ಪ ಸದಾಶಿವಪ್ಪ ನಮ್ಮಂದಿ ಹುಡುಗ. ಆಸ್ತಿವಂತ ಮೇಲಾಗಿ ವಿದ್ಯಾವಂತ ಅಂತ ಮಂಡಲ ಪಂಚಾಯತಿ ಅಧ್ಯಕ್ಷನ್ನ ಮಾಡಿದಿವಿ. ನಾಲ್ಕೊರ್ಷ ಆಯಿತು ನಮ್ಮಂದಿಗೆ ಏನು ಮಾಡ್ಯಾನಪ. ನಮ್ಮುಡುಗುರಿಗೆ ಒಂದು ರೋಡ್ ಕಂಟ್ರ್ಯಾಕ್ಟ ಕೊಡುಸಂದ್ರ ಕೊಡುಸಲಿಲ್ಲ. ವೀರಶೈವ ಕಾಲೇಜಿನ್ಯಾಗ ನನ ಮಗಳಿಗೆ ಸೀಟು ಕೊಡುಸಲಿಲ್ಲ. ಹೋಗಲಿ ನಮ್ಮ ಓಣಿಗಳಿಗೆ ಬಂಡೆ ಹಾಸಂದರೂ ಹಾಸಲಿಲ್ಲ. ತನಗೇನು ಬೇಕೊ ಅದನ್ನ ಮಾಡಿಕಂಡು ತನ್ನ ವರ್ಚಸ್ಸು ಬೆಳಸಿಗಂಬಾಕ ನೋಡಿದ. ಇಂತಾತನ್ನ ಕಟಿಗಂಡು ಏನು ಮಾಡಮು. ನೋಡಪಾ ನಾವಂತು ಸುಡುಗಾಡದಾಗ ಚಿಟ್ಟಯ್ಯಗ ಜಾಗ ಕೊಡದಿಲ್ಲ. ನಮ್ಮ ಹಿರಿಯರ ಹೆಣಗಳು ಮೈಲಿಗಿ ಆತಾವ. ಬೇಕಿತ್ತಂದರ ತನ್ನೊಲದಾಗ ಜಾಗ ಕೊಡಲಿ. ಈಗ ಮಾತಾಡಿದರ ಒಂದಕ್ಕೊಂದು ಮಾತು ಬೆಳಿತಾವಂದು ಗುರುಪಾದಪ್ಪ ಬಾಯಿ ಮುಚಿಗಂಡಿದ್ದ. ಬಣಜೇರು ಶಾಣಪ್ಪ, ಮಾಲೀಪಾಟೀಲ ಮಲ್ಲಿಕಾರ್ಜುನಪ್ಪ, ಸುದನ್ವ ದೇಸಾಯಿ ಇವೆ ಮಾತು ಅಂದು ಕಳಿಸಿದ್ದರು. ಊರಲ್ಲಿ ಸಾಕಷ್ಟು ಆಸ್ತಿ ಹೊಂದಿದ್ದ ಇವರ ಕಡೆ ಸದಾಶಿವಪ್ಪಗೌಡ

ಅಷ್ಟೊಂದು ಲಕ್ಷ್ಯ ಕೊಟ್ಟಿರಲಿಲ್ಲ. ಮುಂದೆ ಇವರೆ ತಮಗೆ ಪ್ರತಿಸ್ಪರ್ಧಿ ಆಗುವವರೆಂದು ದೂರ ಇಡಲು ಪ್ರಯತ್ನಿಸಿದ್ದ. ಈ ಸಾರಿ ಜಿಲ್ಲಾ ಪಂಚಾಯಿತಿ ತನ್ನದಾಗಬೇಕೆಂದು ಯೋಜನೆ ರೂಪಿಸಿದ್ದ. ಇವರ ಬೆಂಬಲ ಇದ್ದರೆ ಜಿಲ್ಲಾ ಪಂಚಾಯಿತಿ ಅಧ್ಯಕ್ಷನಾಗುವುದು ಸಾಧ್ಯವಿರಲಿಲ್ಲ. ಅದಕ್ಕೆ ತನಗೆ ನಿಷ್ಠೆಯಿಂದಿರುವ ಸ್ಪರ್ಧಾಳುಗಳನ್ನು ಆಯಾ ಊರಲ್ಲಿ ಬೆಳೆಸುತ್ತಿದ್ದ. ಇದೆಲ್ಲ ಇವರಿಗೆ ಗೊತ್ತಿದ್ದರು ಅಧಿಕಾರ ಇರಲಿಲ್ಲ. ಒಳಗೆ ಹಲ್ಲು ಮಸಿಯುತ್ತಿದ್ದವರು. ಸದಾಶಿವಪ್ಪಗೌಡನನ್ನು ಹೇಗಾದರೂ ಮಾಡಿ ಇಕ್ಕಟ್ಟಿನಲ್ಲಿ ಸಿಕ್ಕಿಸಿ ಕೆಟ್ಟ ಹೆಸರು ತರಬೇಕೆಂದು ಪ್ರಯತ್ನಿಸುತ್ತಿದ್ದರು. ಈತನಿಗೆ ಪ್ರತಿಯಾಗಿ ಮಲ್ಲಪ್ಪ ಸಾಹುಕಾರನ ಮಗ ವೀರೇಶನನ್ನು ಬೆಳೆಸುತ್ತಿದ್ದರು.

ಕಾಲೇಜು ಬುಟ್ಟು ಅಪ್ಪನ ಜಮೀನು ನೋಡಿಕೊಳ್ಳಲು ಊರಿಗೆ ಬಂದಿದ್ದ ಸದಾಶಿವಪ್ಪಗೌಡನನ್ನು ಚುನಾವಣೆಗೆ ನಿಲ್ಲುವಂತೆ ಮಾಡಿದ್ದೆ ಗುರುಪಾದಪ್ಪ. ಗೌರಮ್ಮನ ಸೋದರ ಸಂಬಂಧಿಯಾದ ಗುರುಪಾದಪ್ಪ ಸದಾಶಿವಪ್ಪನ ಜೊತೆಗೆ ಇರಲೆಂದು ಕರಿಸಿಕೊಂಡಿದ್ದರು. ಚಾಲಕಿ ವ್ಯಕ್ತಿಯಾದ ಗುರುಪಾದಪ್ಪ ಊರಿನ ಪ್ರಮುಖರೊಂದಿಗೆ ಸ್ನೇಹ ಬೆಳಸಿದ. ಸದಾಶಿವಪ್ಪಗೌಡನನ್ನು ಚುನಾವಣೆಗೆ ನಿಲ್ಲುವಂತೆ ಒತ್ತಾಯಿಸಿದ್ದ. ಗೌರಮ್ಮ, ದೊಡ್ಡಗೌಡ ಬ್ಯಾಡಂದಿದ್ದರಿಂದ ಮನಸ್ಸು ಮಾಡಿರಲಿಲ್ಲ. ಮಲ್ಲಪ್ಪ ಸಾಹುಕಾರ, ಬಣಜೇರು ಶಾಣಪ್ಪ, ಮಾಲೀಪಾಟೀಲ ಮಲ್ಲಿಕಾರ್ಜುನಪ್ಪ, ಸುದನ್ವ ದೇಸಾಯಿ ಮನೆಗೆ ಬಂದು ನಿನ್ನ ಹಿಂದ ನಾವು ಇರ್‍ತೀವಂತ ಹೇಳಿದ ಮೇಲೆ ನಿಂತಿದ್ದ.

ಮಗ ಚುನಾವಣೆಗೆ ನಿಲ್ಲುವುದು ದೊಡ್ಡಗೌಡ ಗೌರಮ್ಮರಿಗೆ ಬೇಕಿರಲಿಲ್ಲ. ಹೊಲಮನೆ ನೋಡಿಕೊಂಡು ನಮ್ಮ ಮನ್ಯಾಗ ನಾವು ಇದ್ದರ ಸಾಕೆಂದು ಹೇಳಿದ್ದರು. ಅದಕ್ಕಾಗಿ ಗುರುಪಾದಪ್ಪ, ಈಗ ಹೊಲಮನೆ ಉಳಿಬೇಕೆಂದರ ಅಧಿಕಾರ ಬೇಕಂಗೆ. ಇಲ್ಲಂದರ ಹೊಲದಾಗ ಬೆಳೆ ಉಳೇದಿಲ್ಲ. ಹೊಲದಾಗ ಕಾಳು ಉಳೇದಿಲ್ಲ. ಮೊದಲಂಗ ಮಂದಿ ವಿಶ್ವಾಸಕ್ಕೆ ಬಗ್ಗಾದಿಲ್ಲ. ಅಧಿಕಾರಕ್ಕೆ ಬಗ್ಗುತಾರ. ನಿಮ್ಮ ಕಾಲ ಹೋಯಿತು. ಈಗಿನ ಕಾಲ ಬ್ಯಾರೈತಿ. ಅದೆಲ್ಲ ನಿಮಗ ತಿಳೇದಿಲ್ಲಂಗೆ' ಎಂದು ಗೌರಮ್ಮ ದೊಡ್ಡಗೌಡರ ಬಾಯಿ ಮುಚ್ಚಿಸಿದ್ದ.

ಸದಾಶಿವಪ್ಪಗೌಡ ಚುನಾವಣೆಗೆ ನಿಂತಾಗ ಎಲ್ಲಾ ದುಡಿಯುವರಿಗೆ ಹೆಂಡ, ಸೀರೆ, ಪಂಚೆ, ಹಣ ಹಂಚುವಂತೆ ಚೆಟ್ಟಯ್ಯನ ಮಂದಿಗೆ ಹಂಚಿದ್ದ. ಆದರೂ ಚೆಟ್ಟಯ್ಯ ತಮ್ಮಂದಿ ಪರವಾಗಿ ಬೇಡಿಕೆಯೊಂದನ್ನು ಮುಂದಿಟ್ಟಿದ್ದ. ಗೌಡರ ಮನೆಯಲ್ಲಿ ಹೆಂಡತಿ ಹೆಂಡೆಗಸ ಬಳಿಯುತ್ತಿದ್ದರಿಂದ ಸಲುಗೆಯು ಬೆಳೆದಿತ್ತು. 'ನಮ್ಮಂದ್ಯಾಗ ಯಾರನ ಸತ್ತರ ಹೂಳಾಕ ಜಾಗಿಲ್ಲ. ತಮ್ಮಂದಿ ಸುಡುಗಾಡದಾಗ ನಮಗೊಂದೀಟು ಜಾಗ ಕೊಟ್ಟರ ನಿಮ್ಮ ರಿಣದಾಗ ಇರ್‍ತೀವಿ. ಸಾಯತನಕ ನಿಮಗೆ ಓಟು ಹಾಕ್ತೀವಿ' ಎಂದು ಅಂಗಲಾಚಿದ್ದ. ಆ ಕ್ಷಣಕ್ಕೆ ಓಟು ಬಂದರ ಸಾಕೆಂದು ಎಲ್ಲಾರು 'ಅದಕ್ಕೇನು ಜಾಗ ಕೊಡ್ತೀವಿ' ಎಂದು ಹಿಂದು ಮುಂದು ಯೋಚಿಸದೆ ಅಂದಿದ್ದರು. ಇವರ ಓಟಿನ ಸಂಖ್ಯೆಯ ಬಲದ ಮೇಲೆಯೆ ಸದಾಶಿವಪ್ಪಗೌಡ ಗೆದ್ದಿದ್ದ. ಇವರವು ನೂರು ಓಟು ಇದ್ದವು. ಮಂಡಲ ಪಂಚಾಯತಿ ಚುನಾವಣೆಯಲ್ಲಿ ಪ್ರತಿಯೊಂದು ಓಟು ಮುಖ್ಯವಾಗಿರುತ್ತದೆ. ಎಲ್ಲಾರು ಕೂಡಿ ಸದಾಶಿವಪ್ಪಗೌಡನನ್ನೇ ಮಂಡಲ ಪಂಚಾಯಿತಿ ಅಧ್ಯಕ್ಷನನ್ನಾಗಿ ಆಯ್ಕೆ ಮಾಡಿದ್ದರು.

ಸದಾಶಿವಪ್ಪಗೌಡ ಮಂಡಲ ಪಂಚಾಯತಿ ಅಧ್ಯಕ್ಷನಾದ ಮೇಲೆ ಜನ ನೋಡುವ ದೃಷ್ಟಿಕೋನವೆ ಬದಲಾಯಿತು. ಮೊದಲಿಗಿಂತಲೂ ಹೆಚ್ಚಿನ ಗೌರವ, ಮರ್ಯಾದೆ ಸಿಗಲಾರಂಭಿಸಿತು. ಇದು ಹೊಸ ಅನುಭವವಾಯಿತು. ಅಧಿಕಾರದ ರುಚಿಯು ಹತ್ತಿತು. ಎಲ್ಲವನ್ನು ರಾಜಕೀಯ ಲೆಕ್ಕಾಚಾರದಲ್ಲಿಯೆ ನೋಡಲಾರಂಭಿಸಿದ.

★ ★ ★ ★

ಗಾಳಿ ಕಟ್ಟಾಗಿದ್ದರಿಂದ. ಬಿಸಿಲು ಏರುತ್ತಿತ್ತು. ಮೋಡ ಸೂರ್ಯನ ಝಳಕ್ಕೆ ಕರಗಿ ಕೆಂಡದ ತುಣುಕುಗಳನ್ನು ಉಗುಳುತ್ತಿತ್ತು. ಗಿಡ-ಮರಗಳು ಬೆಂಕಿ ಹತ್ತಿಕೊಂಡಂತೆ ಕಾಣುತ್ತಿದ್ದವು. ನೆಲ ಕಾದು ಉಗಿ ಉಗಿಯಾಡುತ್ತಿತ್ತು. ಇಡೀ ವಾತಾವರಣ ಧಗ ಧಗ ಉರಿಯುವ ಬೆಂಕಿ ಜ್ವಾಲೆಯಾಗಿತ್ತು. ಈ ಉರಿಯಲ್ಲ ಐದಾರು ಜನ ಸದಾಶಿವಪ್ಪಗೌಡನ ಮನೆ ಕಡೆ ಓಡೋಡಿ ಬರುತ್ತಿದ್ದರು. ಅವರ ಮೇಲೆ ಮೂರು ನಾಲ್ಕು ಕಾಗೆ ಹಾರಾಡುತ್ತಿದ್ದವು. ಬಿಸಿಲು ತಾಳಲಾರದೆ ಎಲ್ಲೆಲ್ಲೊ ನೆರಳಿಗೆ ಮೈಯೊಡ್ಡಿದ್ದ ನಾಯಿಗಳು ಅವರು ಓಡಿ ಬರುವ ರಭಸಕ್ಕೆ ಹೆದರಿ 'ಬೋ .....' ಎಂದು ಒದರಿದವು. ಕಾಗೆಗಳು ಗೌಡರ ಮನೆ ಕಡೆ ಬರುವುದನ್ನು ನೋಡಿ ಕೆಲವು ನಾಯಿಗಳು ಹಿಡಿಯಲು ಪ್ರಯತ್ನಿಸಿದವು. 'ಕಾವ್.... ಕಾವ್..... 'ಎಂದು ನಾಯಿಗಳ ತಲೆಗಳ ಮೇಲೆ ಕುಂತಂತೆ ಮಾಡಿ ಎದ್ದೋಗುತ್ತಿದ್ದವು. ನಾಯಿಗಳಿಗೆ ಇದು ಅತ್ಯಂತ ಅಪಮಾನ ಅನಿಸಿ ಆಕ್ರೋಶಗೊಂಡು ನಾಯಿಗಳು ಕಾಗೆಗಳನ್ನು ಹಿಡಿಯಲು ಹೋಗಿ ಸೋತವು. ಬಿಸಿಲಿನ ಆರ್ಭಟಕ್ಕೆ ಸಾಕಾಗಿ 'ಕೊಯ್..... ಕೊಯ್.....' ಅಂತ ಬಾಲ ಮುದುರಿಕೊಂಡು ನೆರಳಿಗೆ ಬಂದು ಮೈ ಚಾಚಿದವು. ಕಾಗೆಗಳು ಸದಾಶಿವಪ್ಪಗೌಡನ ಮಾಳಿಗೆ ಮೇಲೆ ಬಂದು ಕುಂತವು. ಗೌರಮ್ಮನಿಗೆ ಮತ್ತಷ್ಟು ದಿಗಿಲಾಯಿತು.

ಓಡಿ ಬಂದವರು ಏದುಸಿರು ಬುಡುತ್ತಾ''ಲೇ ಚೆಟ್ಟಯ್ಯ..... ನಿನ್ನೆಡ್ತಿ ಹೊಟ್ಟೆ ಉಬ್ಬಾಕ ಹತ್ತೈತಿ.... ಕಾಗೆ, ಹದ್ದುಗಳು ಬಂದು ಗುಡುಸಲಿ ಮ್ಯಾಗ ಕುಂತಾವ. ಬಾರಲೆ ಜಲ್ದಿ ಮಣ್ಣು ಮಾಡಮು'' ಎಂದು ನಿಂತರು. ಬೆವರು ಮೈಮೇಲೆ ನೀರಿನಂತೆ ಹರಿಯುತ್ತಿತ್ತು. ಉರಿಗೆ ಸಿಕ್ಕ ಕಟ್ಟಿಗೆಯಂತೆ ಮುಖಗಳು ಕಪ್ಪಾಗಿದ್ದವು. ಬೆವರು ಬಿಸಿಲಿನ ತಾಪಕ್ಕೆ ಆವಿಯಾಗುತ್ತಿತ್ತು. ಬೆವರು ಆವಿಯಾದಂತೆ ಮೈಯಿಗೆ ಕಾದ ಕೆಬ್ಬಣದಿಂದ ಚುಚ್ಚಿದಂತಾಗುತ್ತಿತ್ತು. ನಿಂತಲ್ಲೇ ನರಳುತ್ತಿದ್ದ. ಗೌರಮ್ಮನಿಗೆ ಸುಡುಗಾಡದಿಂದ ಎದ್ದ ಬಂದ ಹೆಣದಂತೆ ಕಂಡರು. ನೋಡಿ ಅಂಜಿಕೊಂಡು ಒಳಗೆ ಹೋದಳು.

ಚೆಟ್ಟಯ್ಯನ ನೆತ್ತಿಗೆ ಬರೆ ಇಟ್ಟಂತಾಯಿತು. 'ಯಪ್ಪೋ .... ಗೌಡ ಮೊಳ ಜಾಗ ಕೊಡಪ್ಪೋ....., ''ಎಂದು ಕೀರಲು ಕಿರಚಿ ಗುರುಪಾದಪ್ಪನ ಕಾಲು ಗಟ್ಟಿಗಿ ಹಿಡಕಂಡ. ಗುರುಪಾದಪ್ಪನಿಗೆ ಜೀವ ಹೋದಂತಾಯಿತು. 'ಬುಡಲೇ ನಿಮ್ಮವನ' ಅಂದು ಕಾಲು ಬಿಡಿಸಿಗಂಡು ಮನ್ಯಾಗ ಓಡಿದ.

ಸೊಂಪಾಗಿ ನಿದ್ದೆ ಮಾಡುತ್ತಿದ್ದ ದೊಡ್ಡಗೌಡರು ಬೆಚ್ಚಿ ಎದ್ದು ಕುಳಿತರು. ಗೌರಮ್ಮ ಬೆದರಿ ಎದ್ದಾತನ್ನ ಬೆನ್ನು ಹಿಡಕಂಡಳು. ದೊಡ್ಡಗೌಡರಿಗೆ ಮಾತಾಡಲು ಬರುತ್ತಿರಲಿಲ್ಲ. ನರಗಳು ಶಕ್ತಿ

ಕಳಕೊಂಡಿದ್ದವು. 'ಚೆಟ್ಟಯ್ಯನ ಹೆಂಡತಿ ಹೆಂಡೆಗಸ ಬಳ್ಯಾಕ ಬರುತ್ತಿದಲ್ಲ. ಪಾಪ ಇವತ್ತೂ ಮುಂಜಾನೆ ಸತ್ತೋದ್ಲಂತ. ನಮ್ಮಂದಿ ಸುಡುಗಾಡದಾಗ ಜಾಗ ಕೇಳಾಕ ಬಂದಾರ'. ಕಿವ್ಯಾಗ ಸಣ್ಣಾಗಿ ಹೇಳಿದಳು. ಆತನಿಗೆ ಏನನಿಸಿತೊ ಕೊರಳಾಗಿನ ಲಿಂಗಪ್ಪ ತೆಗೆದು ಸಣಮಾಡಿ ವಿಭೂತಿ ಕೊಡುವಂತೆ ಸನ್ನೆ ಮಾಡಿದ. ಲಿಂಗಪ್ಪಕ್ಕೆ ವಿಭೂತಿ ಹಚ್ಚಿ, ಹಣೆಗೆ ಹಚಿಗೊಂಡು ಮಕ್ಕಂಡ. ಮಗನ ಕೋಣೆ ಕಡೆ ಕೈತೋರಿಸಿದ. ಗೌರಮ್ಮ ಮಗನ್ನ ಕರಿಬೇಕಂತ ಎದ್ದಳು.

ಚೆಟ್ಟಯ್ಯನಿಗೆ ಸಾಕಾಯ್ತು. 'ನೀವು ಮಾತು ಕೊಟ್ಟೀರಿ. ನಾವು ಕುಣಿ ತೋಡುತೀವಪೊ' ಎಂದು ಅಬ್ಬರಿಸಿ ತನ್ನೆರಡು ಮಕ್ಕಳನ್ನು ಹೊತಗೊಂಡ. ಬಂದವರು ಹಿಂದೆ ಬಂದರು. ಗುರುಪಾದಪ್ಪ ಕೋಣ್ಯಾಗಿನಿಂದ ಓಡಿ ಬಂದು 'ನಿಂದ್ರಲೇ.... ಚೆಟ್ಟಯ್ಯ. ನಿಮ್ಮವನ ಕುಣಿ ತೋಡಿದಂದರ ನಿನ್ನ ಹೆಣ ಬೂಳುತದಲೇ' ಎಂದ. ಕೇಳಿದರೂ ಕೇಳದಂತೆ ಮಿಂಚಿನಂತೆ ಹೋಗುತ್ತಿದ್ದ. ಪಾಂಟಣಿಗಿ ಇಳಿಯುತ್ತಿದ್ದಂತೆ ಇಪ್ಪತ್ತು ಮೂವತ್ತು ಮಂದಿ 'ಸದಾಶಿವಪ್ಪಗೌಡನಿಗೆ ಧಿಕ್ಕಾರ' ಎಂದು ಕೂಗುತ್ತ ಬಂದರು.

ಚೆಟ್ಟಯ್ಯ ಗಾಬರಿಯಾಗಿ ಗಕ್ಕನ ನಿಂತ. ನೋಡು ನೋಡುತ್ತಿದ್ದಂತೆ ಚೆಟ್ಟಯ್ಯನ ಮಕ್ಕಳನ್ನು ಯಾರೋ ಒಂದಿಬ್ಬರು ಎತಿಗಂಡರು. ಕರ್‍ರಗಿದ್ದ ದಪ್ಪನ ಮನುಷ್ಯ ಚೆಟ್ಟಯ್ಯನನ್ನ ಹೆಗಲ ಮೇಲೆ ಹೊತಗೊಂಡ. ಪಾಂಟಣಗಿ ಏರುತ್ತಾ 'ಸದಾಶಿವಪ್ಪಗೌಡನಿಗೆ ಧಿಕ್ಕಾರ' 'ಚೆಟ್ಟಯ್ಯನಿಗೆ ಜಯವಾಗಲಿ' ಎಂದು ಜೋರಾಗಿ ಕೂಗುತ್ತಿದ್ದ. ಅವನ ಹಿಂದಿನ ಜನ 'ದಿಕ್ಕಾರ' 'ಜಯವಾಗಲಿ' ಎನ್ನುತ್ತಿದ್ದರು. ಇದೇನು ಚೆಟ್ಟಯ್ಯನಿಗೆ ತಿಳಿಯದಾಯಿತು. ಮಕ್ಕಳನ್ನು ನೋಡಿದ ಕಾಣಲಿಲ್ಲ. ಅವನನ್ನ ಕರೆಯಲು ಬಂದೋರು ಕಾಣಲಿಲ್ಲ. 'ಯಾಕ ಹೊತುಗಂಡೀರಿ, ಇಳುಸರಪೋ.... ನನ್ನ' ಎಂದ 'ನಿನ್ನ ಇಳಿಸಿದರ ಹೆಂಗಲೇ. ಇವತ್ತಿನ ಮಹರಾಜ ನೀನು. ಗಂಡುಗಲೆಲೆ ನೀನು ಎಂದು ಪಾಂಟಣಗಿ ಏರಿ ತಲಬಾಗಲಿಗೆ ಬಂದರು. ಬಂದೋರು ಕಂಠಮಟ್ಟ ಸರಾಯಿ ಕುಡಿದಿದ್ದರಿಂದ ವಾಸನೆ ಚೆಟ್ಟಯ್ಯನಿಗೆ ಮತ್ತೇರಿಸಿದಂತಾಗುತ್ತಿತ್ತು. ಇಳಿಬೇಕೆಂದರೂ ಇಳಿಗೊಡಲಿಲ್ಲ. ಹೆಗಲ ಮೇಲೆ ಹೊತಗಂಡವನು ಕಾಲಗಳನ್ನು ಗಟ್ಟಿಯಾಗಿ ಹಿಡಕಂಡಿದ್ದ. ಬಾಗಲ ಮುಂದೆ ಹೋದವನೆ ಜೋರಾಗಿ 'ಚೆಟ್ಟಯ್ಯಾಗ ಬೆಲೆ ಇಲ್ಲನು ಗುಡುಸಲಿ ಮುಂದ ಹೆಣ ಬುಟ್ಟು ಬಂದಾನ. ಹೆಣನ್ನ ನಾಯಿ, ನರಿ ತಿಂತಾವಂದರೂ ಅಧ್ಯಕ್ಷರು ಕಿವ್ಯಾಗ ಹಾಕ್ಕೆವಲ್ಲರು. ಹೊರಗ ಬಂದು ಮುಖ ತೋರಿಸಿ ಮಾತಾಡಾಪ ಇಟು' ಬಾಗಿಲು ಮುರಿಯುವಂತೆ ಮುನ್ನುಗ್ಗಿದ.

'ಅಧ್ಯಕ್ಷರು ಹೊರಗ ಬರಲಿ. ಮಾತಿನಂಗ ಹೆಣ ಹೂಳಾಕ ಜಾಗ ಕೊಡಲಿ' ಎಂದು ಕೂಗುತ್ತಿದ್ದರು. ಬಾಗಲಿಗೆ ಅಡ್ಡ ನಿಂತಿದ್ದ ಗುರುಪಾದಪ್ಪ ಅದುರಿದ. ಹೀಗಾಗುತ್ತದೆ ಎಂದು ಊಹಿಸಿರಲಿಲ್ಲ. ಬಂದವರಲ್ಲಿ ತಮ್ಮ ಊರಿನವರು ಯಾರು ಕಾಣಲಿಲ್ಲ. ಬೇರೆ ಬೇರೆ ಹಳ್ಳಿಯಿಂದ ಬಂದವರಿದ್ದರು. ಒಬ್ಬರ ಮುಖ ಕೂನ ಸಿಗಲಿಲ್ಲ. ಮತ್ತೆ ಮಂದಿ ಕಡೆ ದಿಟ್ಟಿಸಿ ನೋಡಿದ. ಮಂದಿ ನಡುವ ಮಾಲೀಪಾಟೀಲ ಮಲ್ಲಪ್ಪನ ಮಗ ವೀರೇಶ ಕಂಡ.

ಗುರುಪಾದಪ್ಪನಿಗೆ ಎಲ್ಲಾ ನಿಚ್ಚಳ ಆಯಿತು. ಇದರ ಸುಳಿವು ಮೊದಲೆ ಗೊತ್ತಿದ್ದರ ಏನಾರ ಮಾಡುತಿದ್ದ. ಗುರುಪಾದಪ್ಪನಿಗೆ ದಿಕ್ಕು ತೋಚದಾಯಿತು. ಆದರೂ ಗತ್ತಿನಿಂದ 'ನೋಡ್ರಪಾ, ಏನು ತಿಳಿಲಾರದ ಸುಮ್ಮನೆ ಕೂಗುಬಾಡ್ರಿ, ಅಧ್ಯಕ್ಷರು ಹೊರಗ ಬರ್ತಾರ. ಚೆಟ್ಟಯ್ಯನ ಹೊಲಾಕ ಜಾಗ ಕೊಡ್ತಾರ. ದೊಡ್ಡಗೌಡುಗ ಆರಾಮಿಲ್ಲ. ಕೂಗಿ ಗಲಾಟೆ ಮಾಡಬಾಡ್ರಿ' ಅಂದ. ಜನ ಈತನ ಮಾತಿಗೆ ಕಿವಿಗೊಡದೆ ಮತ್ತಷ್ಟು ಕೂಗಿದರು ಹೇ...... ಚೆಟ್ಟಯ್ಯ ಗೊಂದೇ ಜಾಗ ಕೊಟ್ಟರ ಹೆಂಗ ಎಲ್ಲಾರಿಗೂ ಕೊಡಬೇಕು...... ಹೋ.....' ಎಂದು ಗಲಾಟೆ ಸುರುವಿಟ್ಟರು. ಗೌರಮ್ಮ ಜನ ಕೂಗೊದು ಚೀರೊದು ನೋಡಿ ಹೊರಗ ಬಂದಳು. ಅಷ್ಟು ಜನನ್ನ ನೋಡಿ ಎದೆಯೊಡೆದಳು. 'ಇದೇನು ಸುಡುಗಾಡು ಬಂತಪ' ಎಂದು ಸೀದಾ ಮಗನ ಕೋಣೆಗೆ ಹೋದಳು.'ಇದೇನು ತಂದೆಪಾ..... ನೋಡಲ್ಲಿ ಹೊರಗ ಹೋಗು. ಅವರಿಗೇನರಾ ಹೇಳಿ ಕಳಿಸು. ನಮ್ಮ ಮನೆತನದಾಗ ಇಂತದು ಎಂದೂ ಬಂದಿರಲಿಲ್ಲ. ಮನೆತನಕ ಮಂದಿ ಬಂದು ಒದರಂಗ ಮಾಡಿದಿರಿ' ಎಂದು ಕಣ್ಣೀರುಗರೆದಳು. ಸದಾಶಿವಪ್ಪಗೌಡನಿಗೂ ಇದು ಅನಿರೀಕ್ಷಿತ ಆಗಿತ್ತು. ಗುರುಪಾದಪ್ಪನು ಅಲ್ಲಿಗೆ ಬಂದ. 'ಏನು ಮಾಡಬೇಕಪಾ . ಆ ವೀರೇಶ ಇಷ್ಟು ಮುಂದುವರೆತ ನಂತ ಗೊತ್ತಿರಲಿಲ್ಲ' ಚಡಪಡಿಸಿದ. ಗುರುಪಾದಪ್ಪನ ಹತ್ತಿರ ಕರಿದು ಕಿವಿಯಲ್ಲಿ ಗೌಡ ಏನೋ ಹೇಳಿದ. ಕೇಳಿದ್ದೆ ಉಮೇದಿಗೊಂಡವನಂತೆ ಹುರುಪಿನಿಂದ ಹಿಂದಿನ ಬಾಗಲಿನಿಂದ ಹೊರಗೆ ಹೋದ.

ಹುಡುಗರಿಗೆ ಸರಾಯಿ ನಾತದಿಂದ ಉಸಿರುಗಟ್ಟಿದಂತಾಯಿತು. 'ಯಪ್ಪೋ.....' ಎಂದು ಕೂಗಿದವು. 'ಇಳುಸ್ರರಪ್ಪೋ.... ನಾನು ಗುಡುಸಲಿಗೆ ಹೋಗಬೇಕು. ನನ್ನ ಮಕ್ಕಳು ಕಾಣವಲ್ಲವು. ಹೆಣದ ಗತಿ ಏನಾಗೆತನು....' 'ಏ.... ಸುಮ್ಮೆ ಕುಂದ್ರಲೆ ನಿನ್ನ ಗುಡುಸಲಿಗೆದುಕ ಅರಮನೆಗೆ ಕಳುಸ್ತೀವಿ' ಎಂದು ಹೊತಗಂಡವನು ಕುಣಿದ. ಇನ್ನೊಬ್ಬನು ಯಾರೊ 'ಅದಕ್ಯಾಕಲೆ ಗುಡುಸಲನೆ ಇಲ್ಲಿಗೆ ತರ್ತೀವಿ. ಗೌಡ ಜಾಗ ಕೊಡಲಿಲ್ಲ ಅಂದರ ನಿನ್ನ ಹೆಂಡತಿ ಹೆಣನ್ನ ಇಲ್ಲೇ ಮಣ್ಣು ಮಾಡಮು' ಅಂದದ್ದೆ 'ಹೌದಲೇ....' ಜನ ಅರಚಿದರು.

'ಚೆಟ್ಟಯ್ಯನಿಗೆ ಜಯವಾಗಲಿ.....'

'ಸದಾಶಿವಪ್ಪಗೌಡರಿಗೆ ದಿಕ್ಕಾರ' ಎಂದು ಕೂಗುತ್ತಲೆ ಇದ್ದರು.

ಸದಾಶಿವಪ್ಪಗೌಡ ಎದ್ದು ಹೊರಗ ಬರಬೆಂಕನ್ನದ್ರಾಗ ಗೌರಮ್ಮ ಮುಗುಲು ಹರ್‍ರಂಗ ಅಳಾಕತ್ತಿದಳು. 'ಯಪ್ಪೋ...... ಮಗನೇ.... ನಿಮಪ್ಪ ಹೋದನಪ್ಪೋ..... ಗುರುಪಾದಪ್ಪ ನಿಮ್ಮ ಮಾಮ ಕೈಬುಟ್ಟುನಪ್ಪೋ' ಎಂದು ಎದೆ ಎದೆ ಬಡಕಂಡು ಕಣ್ಣೀರುಗರೆದಳು. ಗೌಡ ಸ್ತಬ್ದ ಆದ. ಜನ ಕೂಗದು ನಿಲ್ಲಿಸಿದರು. ಗೌರಮ್ಮನ ರೋದನ ಕಲತ ಜನರ ಕಿವಿ ಹೊಕ್ಕಿತು. ಮನ ಮರಗಿದವು. ಕುಡುದು ನಿಶೆ ಇಳಿದಂತಾಗಿ ರೋದನದಲ್ಲಿ ಒಂದಾದರು. ವೀರೇಶನಿಗೆ ರಕ್ತವೇ ನಿಂತಿತು. 'ಘಾತ ಆತಲೆ. ದೊಡ್ಡಗೌಡ ಇವತ್ತೊಂದು ದಿನ ಬದುಕಿದ್ದರ ಸಾಕಿತ್ತಲೆ ಅವುನೌವುನ ಸದಾಶಿವಪ್ಪಗೌಡನ ಮರ್ಯಾದೆ ಮೂರು ಕಾಸು ಮಾಡುತಿದ್ದೆ' ಅಂದುಕೊಂಡ. ಚೆಟ್ಟಯ್ಯನ್ನ

ಹೊತಗಂಡವನು ಕೆಳಗ ಬಿಸಾಕಿದ. ನಿತ್ರಾಣಗೊಂಡಿದ್ದ ಚೆಟ್ಟಯ್ಯ ಎದ್ದೇಳಾದಾಗಲಿಲ್ಲ. ಚೆಟ್ಟಯ್ಯನನ್ನ ಯಾರು ಗಮನಿಸಲಿಲ್ಲ. ಒಬ್ಬರಿಗೊಬ್ಬರು ಕಾಲು ತುಳುಕಂತ ಜಾಗ ಖಾಲಿ ಮಾಡಿದರು. ಮಕ್ಕಳು ಅವರಪ್ಪನ ಹುಡುಕುತ್ತಿದ್ದವು. 'ಯಪ್ಪಾ..... ' ಅಂತ ಅಳುತ್ತಿದ್ದವು. ಅಳು ಜನರ ಗಲಾಟೆಯಲ್ಲಿ ಕೇಳುತ್ತಿರಲಿಲ್ಲ. ಚೆಟ್ಟಯ್ಯ 'ಮಕ್ಕಳು ಎಲ್ಲಿದುವೋ.....' ಕಂಗಾಲಾದ. ಕೆಳಗ ಬಿದ್ದವನು ಎದ್ದೇಳಬೇಕನ್ನದ್ರಾಗ ಕೈ ಕಾಲು ತುಳಿದರು. 'ಯಪ್ಪೋ.... ' ಅಂತ ಬಿದ್ದಲ್ಲೇ ಒದ್ದಾಡುತ್ತಿದ್ದ. ಮಕ್ಕಳು ಯಂಗೋ ಮಂದ್ಯಾಗ ಪಾರಾಗಿ 'ಯಪ್ಪೋ....' ಅಂತ ಬಂದು ತಬ್ಬಿಕೊಂಡವು. ಮಕ್ಕಳು ಬಂದದ್ದೆ ಮೈಗೆ ಸತುವು ಬಂದಂಗಾಗಿ ಮಕ್ಕಳನ್ನು ಅನಾಮತ್ತಾಗಿ ಹೊತಗಂಡು ದಿಗ್ಗನೆದ್ದು ಓಡಿದ.

ಗುಡಿಸಲು ಸಮೀಪ ಬರುತ್ತಲೆ ಗುಡುಸಲುಗಳು ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದವು. ಚೆಟ್ಟಯ್ಯನಿಗೆ ಜನ ಅಳೋದು, ಚೀರೋದು ಕೇಳಿಸುತ್ತಿತ್ತು. ಗುರುಪಾದಪ್ಪ ಗಾಬರಿಯಿಂದ ಓಡಿ ಬರುತ್ತಿದ್ದ. ಮಕ್ಕಳನ್ನು ಅಪ್ಪಿಕೊಂಡ ಚೆಟ್ಟಯ್ಯ ಕುಸಿದು ಕುಂತ.

ಡಾ.ಹಳೆಮನಿ ರಾಜಶೇಖರ, ಅತಿಥಿ ಉಪನ್ಯಾಸಕರು, ಕನ್ನಡ ಅಧ್ಯಯನ ಸಂಸ್ಥೆ ಸ್ನಾತಕೋತ್ತರ ಕೇಂದ್ರ, ನಂದಿಹಳ್ಳಿ, ತಾ. ಸಂಡೂರು-೫೮೩೧೧೯. (ಜಿ.) ಬಳ್ಳಾರಿ

ಕತ್ತಲ ಸುರಂಗ (ಕಥೆ)

ಎಂ. ನಂಜುಂಡಸ್ವಾಮಿ

ನಾನು ಓಡುತ್ತಾ ಇದ್ದೆ. ಓಡುತ್ತಾ-ಓಡುತ್ತಾ ಇದ್ದೆ. ಏಕೆ ಓಡುತ್ತಿದ್ದೇನೆ ಮತ್ತು ಎಲ್ಲಿಗೆ ಓಡುತ್ತಿದ್ದೇನೆ ಎಂಬುದೂ ಗೊತ್ತಿಲ್ಲದೆ ಸುಮಾರು ಮೂವತ್ತೇಳು ವರುಷಗಳ ಕಾಲ ಓಡಿದ ಮೇಲೆ ನಾನೊಂದು ಕತ್ತಲ ಸುರಂಗದಲ್ಲಿ ಓಡುತ್ತಿದ್ದೇನೆ ಎಂಬ ಅರಿವು ನನಗಾಯಿತು.

ನಾನು ಸುರಂಗದಲ್ಲೇ ಹುಟ್ಟಿರಬಹುದು. ಏಕೆಂದರೆ ನಾನು ಹುಟ್ಟಿದ್ದು ನನಗೆ ನೆನಪಿಲ್ಲ. ಆದರೆ ನನ್ನೊಡನೆ ಓಡುತ್ತಿದ್ದ ಜನರಲ್ಲಿ ಕೆಲವರ ಮಾತುಗಳಿಂದ ತಿಳಿದು ಬಂದಿದ್ದೇನೆಂದರೆ ನಾನು ಆ ಸುರಂಗದ ಯಾವುದೋ ಒಂದು ಭಾಗದಲ್ಲಿ ಹುಟ್ಟಿ ಓಡಲಾರಂಭಿಸಿದೆನಂತೆ.

ನನ್ನೊಡನೆ ಹೆಂಗಸರು, ಗಂಡಸರು, ಮುದುಕರು, ಮಕ್ಕಳು ಮತ್ತು ಮೋಟರು ಒಟ್ಟಿನಲ್ಲಿ ಕೋಟ್ಯಾಂತರ ಜನ ಓಡುತ್ತಿದ್ದರು. ಅವರಲ್ಲಿ ನಾನು ಸಾವಿರಾರು ಜನರ ಪರಿಚಯ ಮಾಡಿಕೊಂಡೆ. ಅವರಲ್ಲಿ ಕೆಲವರು ನನ್ನ ಆತ್ಮೀಯರಾದರು ಮತ್ತು ಕೆಲವರು ನನ್ನ ಆತ್ಮೀಯರಾಗದಿದ್ದರೂ ನನ್ನ ಹುಟ್ಟಿದ ಸ್ಥಳದಿಂದ ನನ್ನೊಡನೆ ಓಡುತ್ತಿದ್ದೇವೆ ಎಂಬ ಕಾರಣದಿಂದ ನನ್ನ ಸುತ್ತಮುತ್ತಲೇ ಓಡುತ್ತಿದ್ದರು.

ಆ ಸುರಂಗದ ಓಟದಲ್ಲಿ ದಾರಿಕಾಣದೆ ಹಲವು ಬಾರಿ ನಾನು ಬಿದ್ದೆ. ನನ್ನೊಡನೆ ಇದ್ದವರಲ್ಲಿ ಹಲವರೂ ಬಿದ್ದರು. ಬೀಳುತ್ತಾ ಏಳುತ್ತಾ ಓಡುವುದರಲ್ಲಿ ದುಃಖ-ಸುಖವನ್ನು ಕಾಣುತ್ತಾ ಓಡುತ್ತಾ ಓಡುತ್ತಾ ಇದ್ದೆವು. ಆ ಓಟ ಕೊನೆಯಿಲ್ಲದ ಓಟವೋ ಎಂಬಂತೆ ನಾವೆಲ್ಲಾ ಓಡುತ್ತಿದ್ದೆವು. ಆ ಓಟದಲ್ಲಿ ಜಯಶೀಲರಾಗಿ ಮಿಂಚಲು ನಮಗೆ ಕೊನೆ ಎಲ್ಲಿದೆ ಎಂಬುದೇ

ಗೊತ್ತಿಲ್ಲದೆ ಓಡುತ್ತಿದ್ದೆವು. ಆ ಕತ್ತಲಲ್ಲಿ ಒಬ್ಬರ ಮುಖ ಇನ್ನೊಬ್ಬರಿಗೆ ಕಾಣದಿದ್ದರೂ ಅವರ ಇರುವಿಕೆಯ ಊಹಿಸಿಕೊಂಡು ಓಡುತ್ತಿದ್ದೆವು.

ದಾರಿಯಲ್ಲಿ ನಮಗೆ ತೊಡಕಾಗಿ ಹಲವತ್ತು ಪ್ರಾಣಿಗಳು, ವಸ್ತುಗಳು, ಒಡವೆಗಳು ಮತ್ತು ಮಾನವರು ನಮ್ಮ ಬೀಳಿಸುತ್ತಿದ್ದವು ಮತ್ತು ಗೊತ್ತಿಲ್ಲದ ಹಾದಿಯಲ್ಲಿ ಓಡುತ್ತಿದ್ದ ನಮ್ಮ ಮನದಲ್ಲಿ ಗೊಂದಲದ ಗೋಜಲನ್ನುಟ್ಟು ಹಾಕುತ್ತಿದ್ದವು ಹಾಗೂ ನಮ್ಮ ಹಾದಿಯು ನಮಗೆ ಎಲ್ಲೂ ತಲುಪಿಸದಂತೆ ಮಾಡುತ್ತಿದ್ದವು. ಅವುಗಳಿಂದ ತಪ್ಪಿಸಿಕೊಂಡು ಓಡುವುದೇ ನಮ್ಮ ಕಾಯಕವಾಗಿತ್ತು. ನಾವು ಓಡುತ್ತಿದ್ದ ಆ ಸುರಂಗಕ್ಕೆ ಬೆಳಕೇ ಇರಲಿಲ್ಲ. ಆದರೆ ಕಾಲಿಗೆ ತೊಡರಿ ಸಿಕ್ಕುತ್ತಿದ್ದ ಕೆಲವು ವಸ್ತುಗಳು ಬೆಳಕನ್ನು ಚಿಮ್ಮಿ ನಾವು ಎಲ್ಲಿ ಓಡುತ್ತಿದ್ದೆವೋ ಅಲ್ಲಿನ ಕ್ಷಣ ಮಾತ್ರದ ನೋಟವ ನೋಡಲು ಸಹಾಯ ಮಾಡುತ್ತಿದ್ದವು. ಆ ಅಲ್ಪಕಾಲೀನ ಬೆಳಕು ಮತ್ತೆ ಹೊಮ್ಮುವುದೇನೋ, ಅದರಡಿ ನಾವು ಮತ್ತೆ ಏನನ್ನಾದರೂ ನೋಡುವ ಸೌಭಾಗ್ಯ ನಮಗೆ ದೊರಕುವುದೆನೋ ಎಂದು ನಾವು ಎಷ್ಟೇ ಹಂಬಲಿಸಿದರೂ ಆ ಬೆಳಕು ನಮಗೆ ಬೇಕಾದಷ್ಟು ಸಿಗುತ್ತಿರಲಿಲ್ಲ. ಅದನ್ನು ಬೆನ್ನ ಹತ್ತಿ ನಾವು ಓಡಿದಾಗ ಅದು ದೂರದಲ್ಲಿ ಆಗಾಗ ಮಿಂಚಿ ನಮ್ಮ ದಣಿಸಿ ಅಟ್ಟಹಾಸಗೈಯುತ್ತಿತ್ತು ಮತ್ತು ನೊಂದ ಮನಕ್ಕೆ ಗಾಯವನ್ನುಂಟು ಮಾಡುತ್ತಿತ್ತು.

ಆ ಸುರಂಗದಲ್ಲಿನ ನನ್ನ ಅನುಭವಗಳು ಸುಖಮಯವೋ ಅಥವಾ ದುಃಖಮಯವೋ ಎಂದು ಹೇಳುವುದು ಕಷ್ಟ. ಆದರೆ ಒಂದಂತೂ ನಿಜ, ಅದು ಕತ್ತಲುಮಯ.

ಆ ಸುರಂಗದಲ್ಲಿ ಓಡಿ-ಓಡಿ ಬೆವರಿ ಬೆದರಿರುವಾಗ ಕೆಲವರ ಮಾತುಗಳು ನನಗೆ ಸಾಂತ್ವನವ ನೀಡಿದರೆ ಇನ್ನೂ ಕೆಲವರ ಮಾತುಗಳು ನನಗೆ ತುಂಬಾ ಹೆದರಿಕೆಯನ್ನುಂಟು ಮಾಡಿದ್ದವು.

ಆ ಸುರಂಗದಲ್ಲಿ ಯಾರು ಯಾವುದಕ್ಕಾಗಿ ಓಡಾತ್ತಿದ್ದಾರೆಂಬುದೇ ಗೊತ್ತಾಗುತ್ತಿರಲಿಲ್ಲ. ಅಲ್ಲಿ ನಮಗೆ ಓಡುವುದನ್ನು ಬಿಟ್ಟು ನಿಲ್ಲಲಿಕ್ಕೆ ಬರುವುದಿಲ್ಲವೋ ಏನೋ ಎಂಬಂತೆ ನಾವು ಓಡುತ್ತಿದ್ದೆವು. ಕೆಲವರು ತಾವು ಓಡುತ್ತಿರುವುದು ನೆಮ್ಮದಿಯ ತಾಣವ ಹುಡುಕಲು ಎನ್ನುತ್ತಿದ್ದರು. ಮತ್ತೆ ಕೆಲವರು ತಾವು ಓಡುತ್ತಿರುವುದು ಆ ಸುರಂಗದಲ್ಲಿ ಸಿಗುವ ಮಿಂಚುವ ವಸ್ತುಗಳು ಸಂಗ್ರಹಿಸಲು ಎನ್ನುತ್ತಿದ್ದರು. ಇನ್ನೂ ಕೆಲವರು ತಾವು ಎಲ್ಲರಿಗಿಂತಲೂ ಚೆನ್ನಾಗಿ ಓಡುತ್ತೇವೆಂದು ಸುರಂಗದಲ್ಲಿದ್ದವರಿಗೆಲ್ಲರಿಗೂ ಮನವರಿಕೆ ಮಾಡಿಕೊಡಲು ಎನ್ನುತ್ತಿದ್ದರು. ಕೆಲವರಂತೂ ಕತ್ತಲ ಸುರಂಗದಲ್ಲಿ ಸಿಕ್ಕಿದ್ದ ಕೆಲವು ವಸ್ತುಗಳನ್ನು ತಮ್ಮ ಮೈ ಮೇಲೆ ಹಾಕಿಕೊಂಡು ಮತ್ತು ಕೆಲವನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಆ ವಸ್ತುಗಳ ಭಾರದಿಂದ ತುಂಬಾ ದಣಿದವರಾಗಿ ಓಡುತ್ತಿದ್ದರು. ಅವರಿಗೆ ಆ ಭಾರಗಳ ಇಳಿಸಿ ಓಡಿರಿ ಎಂದರೆ ನನ್ನ ಮೇಲೆ ಸಿಟ್ಟು ಮಾಡಿಕೊಂಡು ಓಡುತ್ತಿದ್ದರು ಮತ್ತು ದಣಿ-ದಣಿದು ಬಸವಳಿಯುತ್ತಿದ್ದರು. ನಿನಗೆ ಇಷ್ಟ ಬಂದದನ್ನು ನೀನು ಮಾಡು ನಮಗೆ ಇಷ್ಟ ಬಂದುದನ್ನು ನಾವು ಮಾಡ್ತಿವಿ ಎಂದು ಅವರು ಕಷ್ಟಗಳ ಮಾಲೆಗಳ ಹೊತ್ತು ಕತ್ತಲ ಸುರಂಗದಲ್ಲಿ ಎಡವುತ್ತಾ ಓಡುತ್ತಿದ್ದರು. ಇನ್ನೂ ಕೆಲವರು ಕತ್ತಲ ಸುರಂಗದಲ್ಲಿ ಓಡುವವರಿಗೆ

ತೊಡರುಗಾಲು ಹಾಕಿ ಬೀಳಿಸಿ ವಿಕಟ ಹಾಸ್ಯದಿಂದ ನಗುತ್ತಿದ್ದರು. ''ಆ ರೀತಿ ತೊಂದರೆಯಲ್ಲಿರುವವರಿಗೆ ತೊಂದರೆ ಕೊಟ್ಟು ಜನರನ್ನು ಅಪಹಾಸ್ಯಕ್ಕೆ ಒಳಪಡಿಸುವುದು ಒಳ್ಳೆಯದಲ್ಲ'' ಎಂದವರಿಗೆ ಹೊಡೆದು ಬಡೆದು ಹಾಕುತ್ತಿದ್ದರು.

ಕೆಲವರು ಆ ನಿಸರ್ಗ ನಿರ್ಮಿತ ಕತ್ತಲ ಸುರಂಗದಲ್ಲೇ ಕೆಲವು ಸುರಂಗಗಳನ್ನು ಮತ್ತು ಗವಿಗಳನ್ನು ಕೊರೆದು, ತಾವು ಕೊರೆದ ಸುರಂಗಗಳು ಮತ್ತು ಗವಿಗಳು ಶ್ರೇಷ್ಠ ಎನ್ನುತ್ತಾ ಓಡುವ ಜನರ ಕರೆದು ಮಿಂಚುವ ವಸ್ತುಗಳ ಬೆಳಕಲ್ಲಿ ಅವನ್ನು ತೋರಿ ಖುಷಿ ಪಡುತ್ತಿದ್ದರು. ಆಗ ಅವರು ತಾವಿರುವುದು ಕತ್ತಲ ಸುರಂಗದಲ್ಲಿ ಎಂಬುದನ್ನು ಮರೆತು ಸ್ವರ್ಗದಲ್ಲಿರುವೆವೋ ಎಂಬಂತೆ ಓಡಾಡುತ್ತಿದ್ದರು ಮತ್ತು ಆ ಕತ್ತಲ ಸುರಂಗವೇ ವಿಶ್ವವೆಂಬಂತೆ ಅಲ್ಲೇ ಬದುಕುಳಿಯಲು ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು.

ಕತ್ತಲ ಸುರಂಗದಲ್ಲಿ ಓಡುತ್ತಿದ್ದ ಗಂಡಸರು ಮತ್ತು ಹೆಂಗಸರು ತಳಕು ಬಿದ್ದು ತಮ್ಮಂತೆ ಇದ್ದ ಮಕ್ಕಳ ಹೆತ್ತು ಅವನ್ನೂ ಆ ಕತ್ತಲ ಸುರಂಗದಲ್ಲಿ ಓಡಲು ಬಿಡುತ್ತಿದ್ದರು. ನಾವು ಓಡಲು ಮಾತ್ರ ಹುಟ್ಟಿರುವೆವೋ ಏನೋ ಎಂಬಂತೆ ನಾವೆಲ್ಲರೂ ಅಲ್ಲಿ ಓಡುತ್ತಲೇ ಇದ್ದೆವು.

ಕೆಲವರು ಕತ್ತಲಿನಿಂದ ಬೆಳಕಿನೆಡೆಗೆ ಕರೆದೊಯ್ಯುತ್ತೇವೆ ನಮ್ಮನ್ನು ಅನುಸರಿಸಿರಿ ಎಂದು ಜನರಿಗೆ ಹೇಳುತ್ತಾ ತಮ್ಮದೆ ಆದ ಅನುಯಾಯಿಗಳ ತಂಡಗಳ ಕಟ್ಟಿಕೊಂಡು ತಮ್ಮನ್ನು ಅನುಸರಿಸದ ಜನರಿಗೆ ತಮ್ಮ ಅನುಯಾಯಿಗಳಿಂದ ತೊಂದರೆ ಕೊಡಿಸುತ್ತಿದ್ದರು ಹಾಗೂ ತಮ್ಮ ಅನುಯಾಯಿಗಳಿಗೆ ಕತ್ತಲ ಸುರಂಗದಲ್ಲಿ ಮತ್ತಷ್ಟು ದಾರಿ ತಪ್ಪಿಸಿ ಅವರನ್ನು ತಮ್ಮ ಗುಲಾಮರಂತೆ ಇಟ್ಟುಕೊಂಡಿದ್ದರು. ಆ ಗುಲಾಮರಿಗಾಗಿ ಆಗಾಗ ಆ ಮಾರ್ಗದರ್ಶಕರು ದೊಡ್ಡ ದೊಡ್ಡ ಯುದ್ಧಗಳನ್ನೆ ಮಾಡುತ್ತಿದ್ದರು.

ಒಂದು ದಿನ ಓಡುತ್ತಾ ಓಡುತ್ತಾ ಏಕೋ ಏನೋ ಓಡುವುದರ ಬಗ್ಗೆ ಜಿಗುಪ್ಸೆ ತಾಳಿ ನಾನು ನಿಂತು ಬಿಟ್ಟೆ. ಅಲ್ಲಿಯೇ ಸುರಂಗ ಕೊನೆಗೊಂಡಿತು. ಕತ್ತಲು ಮಾಯವಾಯಿತು. ಅಲ್ಲಿ ಭವ್ಯ ಬೆಳಕಿತ್ತು ಮತ್ತು ದಿವ್ಯ ಜೀವನವಿತ್ತು.

ಎಂ. ನಂಜುಂಡಸ್ವಾಮಿ, ಅಸಿಸ್ಟಂಟ. ಆಯ್.ಜಿ.ಪಿ.(ಕ್ರಿಮಿನಲ್) ಪೋಲಿಸ್ ಹೆಡ್ ಕ್ವಾಟರ್ಸ್, ನೃಪತುಂಗ ರಸ್ತೆ ಬೆಂಗಳೂರು.

ಬದುಕುವ ಬಗೆಗೆ (ಕವಿತೆ)

ವಾಸುದೇವ ನಾಡಿಗ್

ಬಯಕೆ ಕಟ್ಟಿಕೊಂಡವರ ಚರಿತೆ
ಗೆ ಕಾಲಗಳೆಂಬ ರೆಕ್ಕೆಗಳು
ಗಾವುದ ಗಾವುದ ಹಾರಿದರೂ
ತಣಿಯದ ಜೀವ, ತೀರದ ದಾಹ
ಕಣ್ಣು ತೆರೆದಲ್ಲೆಲ್ಲಾ ಸವಾಲುಗಳು

ಬಗೆದು ತಂದು ಬದಲಾಯಿಸಿಬಿಟ್ಟರು!
ಬದುಕ, ಹಾಗೆಂಬ ಕುಹಕ
ಸುಮ್ಮನೆ ನೆಲದಲಿ ಮಲಗಿದ್ದುದ
ಯಾಕೆ ಕೆಣಕಬೇಕಿತ್ತು?
ಅಹರ್ನಿಷಿ ತಿಣುಕಬೇಕಿತ್ತು?

ಮಣ್ಣ ಬಗೆದ ಮಾರನೆಯ ದಿನವೇ
ಬಣ್ಣ ಬದಲಾಗಿಬಿಟ್ಟಿತು ಮುಖಕೆ
ತಾಮ್ರ ತವರ ಹೊನ್ನ ಅದಿರ
ಒಳಹೊಕ್ಕು ಹೊರಬಂದವರ
ಎದೆಯ ತುಂಬ ಭರವಸೆಯ ಕೆನೆತ

ಇಲ್ಲಿ ಮೆಟ್ಟಿಲನ್ನು ಮೆಟ್ಟಿದಷ್ಟೂ
ಮುಟ್ಟಲಾರದ ಎತ್ತರ, ಉತ್ತರಗಳ
ಹೆಕ್ಕಿದಷ್ಟೂ ಬರಿದಾಗದ ವಿಸ್ಮಯ!
ದಾಹದ ಬೆನ್ನು ಹತ್ತಿದವರು ದಾರಿಗಳ
ಹರವಿ ಕೂತರು, ದಡ ಹಿಗ್ಗಿಸಿದರು

ಮಣ್ಣಬಗೆದು ಒಳಗಣ್ಣ ಕಳೆದುಕೊಂಡರೆ
ನಮ್ಮ ಮಧ್ಯೆ ಎಲ್ಲ ಬರಿ ಶಬ್ದ
ಮನದ ಕಿಟಕಿಯ ಮುಚ್ಚಿ ಮನೆಯ
ಗೋಡೆ ಹಿಗ್ಗಿಸುವ ವ್ಯಸನಕ್ಕೆ
ಬದಲಾದವರು ಬರಿದಾದರು!

ಪ್ರಶ್ನೆಗಳು

ನೋಡಿ,
ಮಣ್ಣಿಗೆ ನೀರು ಸೇರಿ
ಕೆಸರಾದರೂ ಸೈ
ಈ ಬೇರುಗಳು
ನೀರನ್ನಷ್ಟೇ ಸಲೀಸಾಗಿ ಹೇಗೆ ಹೀರಿ
ಮುಗಿಲಿಗೆ ಹಾರಿಬಿಡುತ್ತವೆ.

ನೀರಿಗೆ ತೊಟ್ಟು ಧೂಳು
ಬಿದ್ದರೂ ಸರಿ
ವಾಕರಿಸಿಕೊಂಡು
ಎದ್ದು ಹೊರಟು ಬಿಡುತ್ತಾರೆ
ಈ ಮನುಷ್ಯರು

ಬಿದ್ದುರುಳುವ ಮರಗಳು
ಮಣ್ಣ ಸೇರಿಬಿಡುತ್ತವೆ

ಮನುಷ್ಯರಂತೆ,
ಕೊಳೆತು ಹೋಗುವ ಎಲೆಗಳು
ಮುಗಿಲ ಮಳೆಯಾಗಿ
ಮಿನುಗುತ್ತವೆ
ಬದಿಯ ಹೊಲಗದ್ದೆಗಳಲಿ
ಹೊಳೆಯುತ್ತವೆ

ಮಣ್ಣಲ್ಲಿ ಕೈ ಕಾಲು ಚೆಲ್ಲಿ
ಮಲಗಿಬಿಡುವ ಮನುಷ್ಯರು
ಏನಾದರು?

ಹೆದ್ದಾರಿಗಳು

ಪುಟ್ಟ ಪುಟ್ಟ ಹಳ್ಳಿ,
ಗಲ್ಲಿ
ಹಟ್ಟಿ, ಊರು ಕೇರಿಗಳ
ದಾಟಿಯೇ
ಸಾಗುತ್ತವೆ ಹೆದ್ದಾರಿಗಳು
ಚಕ್ರ, ಹೆಗ್ಗಾಡಿಗಳ ಮೈ
ಮೇಲೆ ಬಿಟ್ಟುಕೊಂಡು
ಎಷ್ಟೊಂದು ಕ್ಲೀಷೆಗಳನ್ನು ಸಹಿಸಿಕೊಂಡು
ಹುಟ್ಟುತ್ತದೆ ಈ ಕಾವ್ಯಗಳ ಕೊನೆಸಾಲು
ಹಾಗೆ,
ತುದಿಗೆ ಗುಡಿಸಲು, ಮನೆ, ಮಹಲು
ಅಂಟಿಸಿಕೊಂಡು
ಉದ್ದಕ್ಕೂ ಮಲಗಿಬಿಟ್ಟ
ಸಂಯಮದ ಒಡಲು
ತುದಿ ಮೊದಲೆಂಬ ರಗಳೆಯೆಲ್ಲ ಬೇಡ

ಎಷ್ಟೊಂದು ಮನೆಯೂರುಗಳ
ಒಗ್ಗೂಡಿಸಿವೆ

ಬೆಟ್ಟ ಗುಡ್ಡ ಕಲ್ಲು ಮುಳ್ಳುಗಳ ಹತ್ತಿಕ್ಕಿ
ಚಾಚಿಕೊಂಡ ಬಾಹುಗಳಿಗೆ
ಹತ್ತೂ ದಿಕ್ಕುಗಳ ಬೆಸೆಯುವ ಮನಸು
ಈ ಮುಂಚೆ ಹೆದ್ದಾರಿ ಹೆಜ್ಜೆಯೂರುವ ಭರದಲ್ಲಿ
ಸಸಿ, ತೋಟ, ಹೆಳಲ ನೆರಳು
ಬಟ್ಟ ಬರಿದಾದವು!
ಕಾಡ ನಡುವೆ ಹೆಜ್ಜೆ ಪಡಿಮೂಡಿದಾಗಲೇ
ಮುಗಿಲ ಮೋಡದ ಕೂಡ ಸಂಗ

ಮೈಗೆ ಮೈ ಮನಸಿಗೆ ಮನಸು
ಹಾಸಿಟ್ಟ ಬದುಕಾಗಿದೆ
ತೆರೆದ ಕನ್ನಡಿಗೇಕೆ ಬೇಕು ಹುಸಿ
ಆಡಂಬರದ ಪರದೆ?
ನಿದ್ರೆ ಇರದ ಹೆದ್ದಾರಿಗಳಿಗೆ
ಹಗಲು ಬರಿ
ಕವಲು
ಅಸಂಖ್ಯ ಹೆಜ್ಜೆ, ಚಕ್ರಭಾರಗಳ ಗೊಡವೆ

ಹೆದ್ದಾರಿಗಳು ನಿದ್ರಿಸುವುದಿಲ್ಲ
ಥೇಟ್
ಬುದ್ಧ, ಬಸವ, ಗಾಂಧಿಯ ತರಹ.

ಮೂಲ ಹುಡುಕುವುದೆಂದರೆ

ಪರ್ವತದ ನೆತ್ತಿ ಹಿತ್ತಿ
ಕೂತ ರಿಸಿ ಮುನಿಗಳ
ಬೇರು ಶಯ್ಯಾಗೃಹದಲಿ
ತೊಯ್ದಾಡಿದ ಸತ್ಯ
ನೆತ್ತಿನೆಲವನ್ನು
ಕೂಡಿಸಿ ಬಿಡುತ್ತದೆ

ಒಂಟಿಕಾಲಿನಲಿ ನಿಂತ
ತೀರ್ಥಂಕರರ ಮೂಲ
ಕೈ ಬಳೆ ಸದ್ದಿನ
ಮುದ್ದಿಸುತ್ತ ಕೂತ ಸುದ್ದಿ
ವೈರಾಗ್ಯ ರಾಗವನ್ನು
ಬೆಸೆದು ಬಿಡುತ್ತದೆ

ಮಣ್ಣಲಿ ಕೊಳೆವ ಹಣ್ಣೆಲೆ
ಹೂ ದಿನಗಳ ನೆನೆದು
ಭ್ರಮರಕ್ಕೆ ಬೆವರಾದ
ಮೆಲುಕಿನ ಸರಣಿ
ಕಣ್ಣೆವೆಗಳನ್ನು
ಕನಸಿಗೆ ಕಟ್ಟಿಬಿಡುತ್ತದೆ.

ನಶ್ವರದ ಹಾಡು
ಇದ್ದಾಗ ಭೋಗಿಸಿದ
ಅಜೀರ್ಣದ ಪಲ್ಲಲಿ
ಗುನುಗಿದೆ
ಎಲ್ಲ ಬಿಟ್ಟು
ಕೊಟ್ಟು
ಹೊರಟ ದಿನ
ಸಾವು ಹುಟ್ಟನ್ನು
ದ್ವೇಷಿಸುತ್ತದೆ

ಹತ್ತಿಕ್ಕಲಾಗದ ಆಮಿಷಗಳ
ಗಾಳಿಯಲಿ ಸಿಲುಕಿದ
ಹತ್ತಿಯಂತಹ ಮನದಲ್ಲಿ
ಹೇಗೆ ಒತ್ತಿರಿಸುವುದು?

ಮೌನ ಬತ್ತಳಿಕೆಯೊಳಗಿನ ಮಾತುಗಳು

ಮಾತನಾಡಿಸು ಮಳೆಯೇ
ಮಗುಮ್ಮಾಗಿ ಕೂತ ಬೀಜವ
ದನಿಕಳೆದು ಕೊಂಡ ಭಾವವ
ಹೂವ ಮರೆತಿರುವ ಮುಳ್ಳ ಬೇಲಿಗೆ ನೆನಪಿಸು
ಪರಿಮಳದ ಸ್ವರುಷವ.

ಗಂಟಲೊಳಗೆ ಕಟ್ಟಿದ ಮಂಜುಗಡ್ಡೆಗೆ
ಬಿಸಿ ಹದದ ಬೆರಳುಗಳು ತಾಕಲಿ
ಶತಮಾನಗಳ ನಿಶಬ್ದಕ್ಕೆ
ಅರ್ಥರೆಕ್ಕೆಗಳು ಚಿಗುರಲಿ
ಬೆದರಿರುವ ಹಕ್ಕಿಗಳು ಗಾಳಿಯಲಿ ಬೆರೆಯಲಿ

ರಕ್ತ ಹೆಪ್ಪುಗಟ್ಟಿದ ತುಟಿ ದಡಗಳಲಿ
ನಗೆಯ ತೊರೆ ಜಿನುಗಲಿ
ಕಾದ ಸಲಾಕೆಯ ಇಬ್ಬದಿಯ ಸೊಕ್ಕಿಗೆ
ತಣ್ಣನೆಯ ಪ್ರೀತಿ ಕಸೂತಿ ಪಾಠಕಲಿಸಲಿ
ನಿಂತಲ್ಲೇ ನಿಂತ ದಿನಗಳಿಗೆ ಜೀವಬರಲಿ
ಮಾತು ಮೂಡುವ ಹೊತ್ತು
ಕತ್ತು ಹಿಚುಕುವ ಕ್ರೌರ್ಯವೇ?
ಹೆಜ್ಜೆ ಕಿತ್ತಿಟ್ಟರಲ್ಲವೇ ಹಾದಿ ಆ ತುದಿ?
ಭಾವಕೆ ಶಬ್ದದ ಹರಕೆ, ಕತೆಯ ಆಲಯದೊಳಗೆ
ಜೀವನ ಗಂಟೆ ರಿಂಗಣ

ದಾರಿಗಾಗಿ ದನಿಮೂಡಲಿ, ಒಳಗೆ
ಬಯಕೆಗಳು ಖಿರಪುಟ!
ಬರಸಿಡಿಲು ಬಡಿದ ಕನಸಗೋಪುರಗಳ
ಬದುಕುವ ಆಸೆ ಚುಂಬಿಸೆ,
ಕಣ್ಣಂಗಳದಲಿ ನವಿಲಸಾವಿರಗರಿ, ಝರಿ

ಮಾತುಗಳೇ ಹೊತ್ತು ತನ್ನಿರಿ ಮತ್ತೆ
ಕಳೆದ ಹಗಲುಗಳ, ಹಲವು ಸಾಧ್ಯತೆಗಳ
ಮೌನ ಬತ್ತಳಿಕೆಯಲಿ ಒರಗಿರುವ
ಪ್ರಶ್ನೆಗಳೇ ಮೈಕೊಡವಿಕೊಳ್ಳಿ,
ಉತ್ತರ ಸಿಗುವವರೆಗೂ ನಿದ್ದೆ ಬಾರದಿರಲಿ.

ವಾಸುದೇವ್ ನಾಡಿಗ್, ಜವಾಹರ ನವೋದಯ ವಿದ್ಯಾಲಯ, ಏನಿಗದಲೆ-೫೬೩೧೨೫, ಚಿಂತಾಮಣಿ, ಕೋಲಾರ.

ದಾರಿ (ಕವಿತೆ)

ಡಾ. ಮೃತ್ಯುಂಜಯ ರುಮಾಲೆ

ಇದೇ ದಾರಿಯಲ್ಲವೇ.....?
ಗೆದ್ದವರ ಹೂ ರಾಶಿಯನ್ನು
ಮೈತುಂಬಾ ಹಾಸಿಕೊಂಡು;
ಸೋತವರ ಆಕ್ರೋಶದ
ತುಳಿತಕ್ಕೆ ಒಳಗಾಗಿದ್ದು!

ಅಡ್ಡಪಲ್ಲಕ್ಕಿಗೂ ಸ್ಮಶಾನಯಾತ್ರೆಗೂ
ದಿಕ್ಕು ತೋರಿದ್ದು,
ಕಳ್ಳನನ್ನು, ಪೊಲೀಸನನ್ನೂ,
ರೌಡಿ ನಂಜ, ಸಾಧು ಸಂತರನ್ನು,
ಮೈಮೇಲೆ ಹಾಕಿಕೊಂಡದ್ದು;
ಇದೇ ದಾರಿಯಲ್ಲವೇ?

ಸಣ್ಣ ಹುಡುಗನ ಸೈಕಲ್ಲಿಗೂ,
ಕಾರ್ಖಾನೆಯ ದೊಡ್ಡ ವಾಹನಕ್ಕೂ,
ದುರಸ್ತಿಗೂ ಅಗಲೀಕರಣಕ್ಕೂ

ಬಲಿಯಾಗಿ,
ಅಧಿಕಾರಿಯ ಸಂಪಾದನೆಗೆ
ನೆಲೆಯಾದದ್ದು;
ಇದೇ ದಾರಿಯಲ್ಲವೇ?

ಹೆಣ ಹೊತ್ತವರ
ಭಾರವನ್ನು ಹೊತ್ತು
ನೆಮ್ಮದಿಹರಿಸಿ;
ಬದುಕಿದವರ ಭಾರಕ್ಕೆ
ನಿಟ್ಟುಸಿರಿಟ್ಟದ್ದು
ಇದೇ ದಾರಿಯಲ್ಲವೇ...?

ಅನ್ನ ನೀಡಿ ಸಾಲ ಮಾಡಿ
ಸತ್ತ ರೈತನ 'ಹೆಣ',
ಅನ್ನ ಕಸಿದು ಆಸ್ತಿಮಾಡಿ
ನಿಧನನಾದವನ 'ಪಾರ್ಥೀವ ಶರೀರ'
ಸಾಗುಮಾಡಿದ್ದು
ಇದೇ ದಾರಿಯಲ್ಲವೇ...?

ಕಾರಿನಲ್ಲಿ ಹೋದ
ಆಶ್ವಾಸನೆಗಳನ್ನು ಬೀಳಿಸಿದ್ದು
ಬಂಡಿಯಲ್ಲಿ ಬಂದ
ನಿರಾಶೆಗಳನ್ನು ಕಳಿವಿದ್ದು
ಇದೇ ದಾರಿಯಲ್ಲಲ್ಲವೇ....?

ಎದ್ದ ಮರ ಬಿದ್ದ ಹಣ್ಣು
ಮಣ್ಣೂ ನಿನ್ನದಾಗಲಿಲ್ಲ
ಒಂದು ದಿನವೂ ಕೂಗಲಿಲ್ಲ
ರೋಧಿಸಲಿಲ್ಲ, ಅಳುಕಲಿಲ್ಲ
ಅಷ್ಟೇ ಏಕೆ?
'ಉಸ್' ಶಬ್ದವೂ ಇಲ್ಲ.

ಧ್ಯಾನಕೊಡುವ
ಈ ಪೂರ್ಣಯೋಗ
ನಿನಗೆ ದಕ್ಕಿದ್ದು ಹೇಗೆ?

ಎದೆ ಒಡೆಯದ
ಭಾವವ
ಆವಿಸಿಕೊಳ್ಳಲುಂಟೇ
ಹೀಗೆ?

ಡಾ. ಮೃತ್ಯುಂಜಯ ರುಮಾಲೆ, ಪ್ರಣವ, ಬಸವೇಶ್ವರ ಬಡಾವಣೆ, ಹೊಸಪೇಟೆ-೫೮೩ ೨೦೧

ಅಲೆಗಳು ನನ್ನವ್ವನ ರಂಗೋಲಿಗಳು (ಕವಿತೆ)

ನಾಗತಿಹಳ್ಳಿ ರಮೇಶ

ಅಪರಚಿತ ದನಿಯೊಂದು ಕೂಗಿ ಕರೆಯುತ್ತದೆ
ಮನೆಯಿಂದ ಹೊರಗಲ್ಲ
ಈ ದೇಹದಿಂದಲೇ ಹೊರಕ್ಕೆ

ಅವ್ವನ ಒಂದು ಮಾತು ಕೇಳುವ ಮುನ್ನ
ಹೇಗೆ ಹೋಗಲಿ?

ಈ ಜೀವಕ್ಕೆ ಏರಿ ಹಾಕಿ, ರಕ್ತ ಕಟ್ಟಿ,
ಕೆರೆಯೆಂದು ಕರೆದವಳು ಅವಳಲ್ಲವೆ!
ಕೆರೆ ಬಿಟ್ಟು ನೀರು ಹೊರಗೆ ಹರಿದರೆ
ತಂತಿ ಹರಿದ ತಂಬೂರಿ ಮೂಲೆ ಸೇರುವುದಿಲ್ಲವೇ?

ಗುಹೆಯೊಳಗಿನ ಕತ್ತಲೆಯಲಿ
ನೀರೊಳಗಿನ ಸುಳಿಗಳೊಳಗೆ
ಕಾಡೊಳಗಿನ ಕಾಡ್ಗಿಚ್ಚಿನಲಿ
ನನ್ನೆಲ್ಲ 'ಆಸೆ' 'ಕಾಳಜ'ಗಳೊಳಗೆ

ಅದರ 'ನೆರಳು' ಕಂಡಿದ್ದೇನೆ;
ಒಳಗಿನ ಜೀವ ರೆಕ್ಕೆ ಬಿಕ್ಕಿ ಒದರಾಡಿದೆ.

ನನಗಾಗ ಮೊದಲು ನೆನಪಾಗುವುದು ನನ್ನವ್ವ
ಜಡೆಬಿಚ್ಚಿ ಕಚ್ಚೆ ಹಾಕಿ ನನ್ನೊಂದಿಗೆ ನಿಂತರವಳು
ಎತ್ತ ಓಡುವುದು ಅದು
ಅವಳ ಒಂದು ಕೂಗಿಗೆ ಅದರ ಸೌಧ
ಮೇಣದಂತೆ ಕರಗುತ್ತ ಸೋರ ತೊಡಗುತ್ತದೆ

ಅವಳು ನಡೆವಾಗ
ಮರಗಳು ಬಾಗಿ ನೆರಳ ಚಾಚುತ್ತವೆ
ಪರ್ವತಗಳ ಹಾದಿಯಲಿ ಮೇಲೇರುವಾಗ
ಹಕ್ಕಿಗಳು ಹಾಡ ತೊಡಗುತ್ತವೆ.
ಅಲೆಗಳು ನನ್ನವ್ವನ ರಂಗೋಲಿಗಳು
- ೨ -
ಹೊರಟು ಬಿಡುತ್ತಾಳವಳು
ಮನೆಯಿಂದ ಒಳಗೆ; ಮನೆಯಿಂದ ಹೊರಗೆ
ಅವ್ವಾ... ಅವ್ವಾ.... ಎಂದು ಹಿಂಬಾಲಿಸಿದ್ದಕ್ಕೆ
ನನ್ನ ಕರಿಕಲ್ಲ ಹಳ್ಳದೊಳಗೆಸೆದು, ಪದವನ್ನಾಡುತ್ತಾ
ದೂರೆಲ್ಲೋ ಹೋದವಳು

ಇದ್ದೂ ಇಲ್ಲವಾಗುವ ಅವ್ವ
ನನ್ನೊಳಗೆ ಕಾಡಂತೆ ಹಬ್ಬುತ್ತಾಳೆ
ದಾರಿ ತಪ್ಪಿದ ನಾನು
ಅವ್ವ....ಅವ್ವ... ಎಂದು ಹಲಬುತ್ತೇನೆ
ಮತ್ತೆ ಸಿಕ್ಕಿದಾಗ ಮೈದಡವಿ
''ಎಲ್ಲೋ? ಕಾಣಿಸ್ತಿರಲಿಲ್ಲ'' ಎಂದೇಳಿ
ಇಡೀ ರಾತ್ರಿ ಹಾಡು ಹಾಡುತ್ತ ಕೂತವಳು.

ಕೆಲವರ ಸಾಂತ್ವನದ ನುಡಿಗಳು ಕೇಳಿಸುತ್ತಿವೆ
ಮತ್ತೆ ಕೆಲವರ ಕರುಳ ಕತ್ತರಿಸುವ

ಚೂರಿ ಹರಿತದ ಮಾತುಗಳು ಇರಿಯುತ್ತವೆ
ಇನ್ನು ಕೆಲವರು ಅವ್ವನೇ ಆಗಿ ನಿಂತು
ಇರಿದ ಗಾಯಗಳಿಗೆ ಮುಲಾಮು ಹಚ್ಚುತ್ತಾರೆ

ನಾನು ಅವ್ವನಿಗೆ ಎಲ್ಲ ಹೇಳಿ ಬಿಡಬೇಕು
ಪದೇ ಪದೇ ಓಡುತ್ತೇನೆ
ಎಲ್ಲ ಕೇಳಿಸಿಕೊಂಡಂತೆ ತಲೆಯಾಡಿಸಿ, ಕೊನೆಗೆ
ಕೈಗೆ ಸಿಕ್ಕಿದ್ದನ್ನು ಮೈಮೇಲೆ ಒಗೆದು
ಹೊರಟೇ ಬಿಡುವಳು ಪದಗಳ ಬಯಲಿಗೆ

ಹಿಂದೋಡುವ ನಾನು
ಬಯಲೊಳಗೂ ಅವಳ ಕಾಣದೆ
'ಅವ್ವಾ... ಅವ್ವಾ....' ಎಂದು ಕೂಗುತ್ತೇನೆ
ಯಾರೋ ಅತ್ತ ಕೂಗಿದಂತೆ 'ಅವ್ವ' ಎನ್ನುತ್ತದೆ.
- ೩ -
ನಾನೇನೋ ನಿರ್ಧರಿಸಿ
ರೈಲು ಕಂಬಿಗಳ ಮೇಲೆ
ಸಮುದ್ರದ ದಡಕ್ಕೆ
ಗಿರಿಶಿಖರಗಳ ತುದಿಗೋಗಿ
'ಅವ್ವಾ' ಎಂದ ಅದರ ಹತ್ತಿರ
ಹಾರಲೆತ್ನಿಸುತ್ತೇನೆ
ಕಾಣದ ಕೈಯೊಂದು ತಟ್ಟನೆ ಹಿಡಿಯುತ್ತದೆ
ತಿರುಗಿ ನೋಡಿದರೆ 'ಅವ್ವ'
''ಇಲ್ಲೇನ್ ಮಾಡ್ತಿದೀಯಾ?'' ಮಗನೆ
''ಅಲ್ಲೆಲ್ಲೋ ಹುಡುಕ್ತಿದ್ದೆ ನಿನ್ನ'' ಎಂದು
ಕಡ್ಲೆಕಾಯಿ, ಬೆಲ್ಲ ಕೈಗಿಟ್ಟಳು.

ಸಮುದ್ರದ ಮೇಲೆ ಸುರಿಯುವ ಮಳೆಯ ಆಯುಷ್ಯವೆಷ್ಟು?
ಮತ್ತೆ ಅವಳು ಸಮುದ್ರವೇ ಅಲ್ಲವೆ?
ಅವಳೇ ಹಡೆದ ನಾನು, ದೋಣಿಯೊಂದರಲ್ಲಿ ಕೂತಿದ್ದೇನೆ
ಚಂಡಮಾರುತಗಳೆದ್ದಾಗ ನನ್ನೊಳಗೆ ರೆಕ್ಕೆ ಬಂದು ಹಾರಲು

ಹಠವಿಡುವ ಪ್ರಾಣವ ಮೈದಡವಿ ಸಂತೈಸಿದ್ದೇನೆ
ಪ್ರಶಾಂತವಾಗಿದ್ದಾಗ ಮತ್ಯಾವುದೋ
ದಡ ಸೇರುವ ಕನಸು ಕಾಣುತ್ತೇನೆ.

ಹುಟ್ಟು ಹಾಕುತ್ತಾ ಹೊರಟೇ ಬಿಡುತ್ತೇನೆ
ಅವಳೆತ್ತ ಹೊಯ್ಯುವಳೋ?
ಆ ಹುಟ್ಟಿನಿಂದೆದ್ದ ಅಲೆಗಳು
ನನ್ನವ್ವ ಬರೆದ ರಂಗೋಲಿ ಚಿತ್ರಗಳು
ಅದರ ನಡುವೆ ನನ್ನಯ ಪಯಣ...

ಅವ್ವ,
ನಿನ್ನ ಪ್ರೀತಿಯ ಕೊನೆಯಾವುದು ಹೇಳೆ?!

ನಾಗತಿಹಳ್ಳಿ ರಮೇಶ, ನಂ. ೫೫೦, ೨ನೇ ಮುಖ್ಯ ರಸ್ತೆ, ವಾಟರ್ ಟ್ಯಾಂಕ್ ಅಡ್ಡರಸ್ತೆ, ಪುಟ್ಟೇನಹಳ್ಳಿ ಆರ್.ಬಿ.ಐ.
ಲೇ ಔಟ್, ಜೆ.ಪಿ. ನಗರ, ೭ನೇ ಹಂತ, ಬೆಂಗಳೂರು-೫೬೦ ೦೭೮

ಸೀಮೋಲ್ಲಂಘನ (ಕವಿತೆ)

ರೂಪ ಹಾಸನ

ಫಕ್ಕನೆ ದೀರ್ಘಗಾಢ ನಿದ್ದೆಯಿಂದೆದ್ದ
ಪುಟ್ಟೂರಿನ ಪಟ್ಟದ ಗೊಂಬೆಗಳು
ನಿದ್ದೆಗಣ್ಣಲ್ಲೇ ಗುಲುಮದಾಸಿಯರು
ಸದ್ದಿಲ್ಲದೇ ದಂಗೆಯೆದ್ದ
ಕಥೆ ಹೇಳುತ್ತವೆ.
ಮಾತು ಮಾತಿಗೆ ಮಾತು ತೊದಲುತ್ತವೆ!

ದೀರ್ಘ ಮೌನ ಮುರಿದ
ರಾಣಿ ವಾಸದ ದಾಸಿ ರಾಜಾಜ್ಞೆ ಮೀರಿ
ಏಕೋ ಮೈಮರೆತು ನಕ್ಕು
ಹಿಂದಿನಿಂದಲೇ ಒದ್ದು ಬಂದ ಹಿಡಿದಿಟ್ಟ ಬಿಕ್ಕು
ಕಾದ ತಪ್ಪಕ್ಕೋ ತಾಪಕ್ಕೋ ಕಣ್ಣೀರ ಹನಿಗಳೆಲ್ಲಾ
ಮುತ್ತುಗಳಾಗಿ ಬಿಟ್ಟವಲ್ಲ!

ಅವರಿವರು ಕಂಡಾರೆಂದು ಥಟ್ಟನೆ ಕಣ್ಣೊರೆಸಿ
ಸರಬರನೆ ಮುತ್ತುಗಳಾರಿಸಿ
ಕಿಟಕಿಯಿಂದೊಗೆದ ದಾಸಿ

ಏನೊ ಆಗಿಲ್ಲದಂತೆ ತಟಸ್ಥವಾಗಿ
ನಿಂತು ನಟಿಸುತ್ತಾಳೆ ಮೌನಗೌರಿಯಾಗಿ.

ಇಲ್ಲ ಏನೂ ಆಗಿಯೇ ಇಲ್ಲವೆಂದರೂ
ಇತ್ತ ದಾಸಿ ಕಿಟಕಿಯಿಂದೊಗಿದ
ಮುತ್ತುಗಳು ಮಣ್ಣಿನೊಳಸೇರಿ ಕಾಳಾಗಿ
ಶಾಖಕ್ಕೆ ಹದವಾಗಿ ಮೊಳೆತು
ಗಟ್ಟಿ ಮಣ್ಣಿ ಪದರವನೊದ್ದು
ಸೀಮೋಲ್ಲಂಘಿಸಿ ಗೆದ್ದು
ಬೀಗುತ್ತವೆ ಕದ್ದು.

ಮುಚ್ಚಿಟ್ಟ ಬಿಕ್ಕುಗಳುದುರಿಸಿ
ಹೆತ್ತ ಮುತ್ತಿನ ಮರ ಎತ್ತರೆತ್ತರಕ್ಕೆ ಬೆಳೆದು
ಮುತ್ತಿನ ಹೂವು ಕಾಯಿ ಹಣ್ಣು
ಹಣ್ಣು ಮಾಗಿ ಮತ್ತೆ ಮುತ್ತುದುರಿ
ಊರ ತುಂಬೆಲ್ಲಾ ಮುತ್ತಿನರಾಶಿ
ಝಗಮಗ ಮುತ್ತಿನದೇ ಹಾದಿಬೀದಿ
ಅರಮನೆಯೇ ಮುತ್ತಿನಲ್ಲಿ ಮುಚ್ಚಿಹೋಗಿ
ಪ್ರಜ್ಞೆತಪ್ಪಿದ್ದಾರೆ ರಾಜ-ರಾಣಿ!

ಯಾರು ಹೆತ್ತರೋ ಹೇಗೆ ಹೆತ್ತರೋ ಏಕೆ ಹೆತ್ತರೋ
ಯಾರಿಗೂ ತಿಳಿದಿಲ್ಲ
ದಾಸಿ ಕದ್ದು ನಕ್ಕಿದ್ದು ಸುದ್ದಿಯಾಗಲೇ ಇಲ್ಲ
ಕುದ್ದು ಬಿಕ್ಕಿದ್ದು ಸದ್ದಿಲ್ಲದೇ ಸುದ್ದಿಯಾಯ್ತಲ್ಲ!
ಪುಟ್ಟೂರು ಮುತ್ತೂರಾದ ಸತ್ಯ

ಊರ ತುಂಬೆಲ್ಲಾ ಬಣ್ಣಬಣ್ಣದ ಕಥೆಯಾಗಿ
ಸಿಕ್ಕ ಸಿಕ್ಕಲ್ಲಿ ಮೈ ಕೈಗೆ ತಾಗಿ
ಒಂದಕ್ಕೆ ಎರಡಾಗಿ ಎರಡಕ್ಕೆ ನಾಲ್ಕಾಗಿ
ಮಾತೇ ಮಾತು ಕಥೆಯೆ ಕಥೆ.

ಪುಟ್ಟೂರಿನ ಪಟ್ಟದ ಗೊಂಬೆಗಳು
ಕಥೆ ಹೇಳಿ ಮುಗಿಸಿಯೇ ಇಲ್ಲ
ಮತ್ತೆ ಗಾಢ ನಿದ್ದೆಗಿಳಿದಿವೆಯಲ್ಲ
ಕಥೆ ಕೇಳಬೇಕೆಂದರೆ ನಿದ್ದೆ ತೀರಬೇಕು
ನಾವು ಎಂದಿನಂತೆಯೇ ಕಾಯಬೇಕು!

ರೂಪಾ ಹಾಸನ, ಪ್ರೇರಣಾ, ಸಂತ ಜೋಸೆಫರ ಶಾಲೆ ರಸ್ತೆ, ಉತ್ತರ ಬಡಾವಣೆ, ಹಾಸನ-೫೭೩೨೦೧

ಆಕಾಶದ ಹಣತೆ (ಕವಿತೆ)

ಪ್ರಭಾಕರ ತಾಮ್ರಗೌರಿ

ವೈಶಾಖದ ನಡು ಹಗಲಲ್ಲಿ
ಆಕಾಶದ ಹಣತೆ ಉರಿಯುತ್ತಿದೆ
ಸುಡು ಬಿಸಿಲಿನ ಬೇಗೆಗೆ
ಒಣಗುತಿದೆ ಚೈತನ್ಯದ ಒರತೆ
ದಿಗಂತದೆಡೆ ಮುಖ ತೋರಿಸಿ
ಮರೆಯಾಯಿತು ಹಿರಿಮುಗಿಲು
ನೆಲ ಬಾನನು ಬೆಸೆಯುತಿದೆ
ನುಡಿ ಮೀರಿದ ದಿಗಿಲು

ನದಿ, ಹೊಳೆಗಳು ಸತ್ತುಬಿದ್ದಿವೆ
ಉದ್ದಕ್ಕೆ ಮೈ ಚೆಲ್ಲಿ
ಒಣ ಮರದಲ್ಲಿ ಕಾಯುತ
ಕುಳಿತಿದೆ ಮಿಂಚುಳ್ಳಿ
ಥಳ ಥಳ ಥಳ ಹೊಳೆಯುತಿದೆ
ಕರಿ ಡಾಮರದ ರಸ್ತೆ
ಮನೆ ಮನಗಳ ಒಳಹೊಕ್ಕಿದೆ
ಉರಿ ಬಿಸಿಲ ಮಾರಿ

ನೀರಿಲ್ಲದ ನಲ್ಲಿಯ ಕೆಳಗೆ
ಬರಿ ಕೊಡಗಳ ಸಾಲು
ಸ್ವರ ಮರೆತು ತೂಕಡಿಸಿದೆ ಕೋಗಿಲೆ
ಒಣ ಕೊಂಬೆಯ ನೆರಳಲ್ಲಿ

ಧೋಧೋ ಮಿಡಿಯುತಿದೆ
ಉಸಿರುಸಿರಿನ ತಂತಿ
ತಂಪಿನ ಮಳೆ ಕಾಯುತಿದೆ
ಗಿಡಮರಗಳ ಪಂಕ್ತಿ
ಕಾತರಿಸುತ ಕಾಯುತಿದೆ ಜಗ
ನಿರೀಕ್ಷೆಯಲಿ ತಲೆಬಾಗಿ
ತಂಪರೆಯುವ ಬೆಳದಿಂಗಳ ಶುಭೋದಯಕ್ಕಾಗಿ!

ಪ್ರಭಾಕರ ತಾಮ್ರಗೌರಿ, ಗೋಕರ್ಣ ಪಾರ್ವತಿ ದೇವಸ್ಥಾನದ ಹತ್ತಿರ, ಗೋಕರ್ಣ-೫೮೧ ೩೨೬. (ಉ.ಕ.)

ಅನುವಾದದ ಸಂಕೀರ್ಣತೆ : 'ಯಯಾತಿ'ಪಠ್ಯವನ್ನು ಅನುಲಕ್ಷಿಸಿ

ಪ್ರೊ. ಜಿ.ಬಿ. ಸಜ್ಜನ

ಕನ್ನಡ -ಮರಾಠಿ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಕೊಡು-ಕೊಳೆ reverse ದಿಕ್ಕಿನಲ್ಲಿ ಶುರುವಾದದ್ದು ಗಳಗನಾಥರ ಕಾಲದಿಂದ ಎಂದು ಹೇಳಬಹುದು. ಇಂದು ಎರಡೂ ದಿಕ್ಕಿನಲ್ಲಿ ನಡೆಯುತ್ತಿದೆ. ಕಾಲ ಗತಿಸಿದಂತೆ ಇದು ಇನ್ನು ಬೃಹತ್ ಪ್ರಮಾಣದಲ್ಲಿ ಅಧಿಕಗೊಳ್ಳಲಿದೆ. ಭಾರತೀಯ ಪ್ರಾದೇಶಿಕಭಾಷೆಗಳಲ್ಲಿನ ಉತ್ಕೃಷ್ಟ ಕೃತಿಗಳು ಇತರ ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಅವುಗಳ ಗಾಢ ಪರಿಚಯ ಸರ್ವೇಸಾಮಾನ್ಯವಾದಾಗ ನಮ್ಮ ಭಾರತೀಯತ್ವಕ್ಕೆ ಒಂದು ಅರ್ಥಪೂರ್ಣತೆ, ಸಚೇತನತ್ವ (vibrancy)ಪ್ರಾಪ್ತವಾಗುವುದು. ಬರೀ ಯಾವುದೇ ಒಂದು ಭಾಷೆಯ (ಪ್ರಾದೇಶಿಕ ಭಾಷೆ, ಹಿಂದೀ ಅಥವಾ ಇಂಗ್ಲೀಷು) ಮೂಲಕ ಸಂಪರ್ಕವೇರ್ಪಟ್ಟರೆ ಸಾಕಾಗದು. ಆ ಪ್ರದೇಶದ ಜನಜೀವನ, ನಡೆ-ನುಡಿ, ಸಂಸ್ಕೃತಿ-ಇವುಗಳ ಪರಿಚಯ ಅಲ್ಲಿನ ಸಾಹಿತ್ಯದ ಮೂಲಕ ಏರ್ಪಟ್ಟಾಗಲೇ ಬಾಂಧವ್ಯ ಸಾಧ್ಯ.

ಈ ಪರಿಚಯಿಸುವ ಕೆಲಸ ಆ ಪ್ರದೇಶದ ಭಾಷೆ ಹಾಗೂ ತನ್ನ ಭಾಷೆಯನ್ನು ಚೆನ್ನಾಗಿ ಬಲ್ಲ ಅನುವಾದಕನಿಂದ ಸಾಧ್ಯ. ಯಾವುದೇ ಒಂದು ಸಾಹಿತ್ಯಕೃತಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅನುವಾದಗೊಳ್ಳುವುದು ಮೊದಲ ಘಟ್ಟವಾದುದರಿಂದ, ಭಾಷಾಂತರ, ಎಂಥದು ಎಂಬುದರ ಗೊಡವೆಗೆ ನಾವು ಹೋಗುವುದಿಲ್ಲ. ಈ ಘಟ್ಟದಲ್ಲಿ ವ್ಹಿ.ಎಂ. ಇನಾಂದಾರರು ಮರಾಠೀ ಭಾಷೆಯಲ್ಲಿನ (ವಿ.ಸ.ಖಾಂಡೇಕರರ) 'ಯಯಾತಿ'ಯನ್ನು ಅನುವಾದಿಸಿ ಕನ್ನಡಿಗರಿಗೆ ಉಪಕಾರ ಮಾಡಿದ್ದಾರೆ ಎಂಬ ಭಾವನೆಯೇ ಪ್ರಧಾನ ಆದರೆ the critical phase ಎಂಬ ಕಾಲಘಟ್ಟವೊಂದು ಬರಲೇಬೇಕು. ಆಗ ಕೃತಿಯ ಭಾಷೆ/ಶೈಲಿ ಎಂಥದ್ದು? ಅನುವಾದದ

ಗುಣಮಟ್ಟ ಯಾವುದು ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ. ಮೂಲ ಕರ್ತೃವಿನ ಹೆಜ್ಜೆಯಲ್ಲಿ ಹೆಜ್ಜೆ ಇಡುತ್ತಾ ಸಾಗುವ ಭಾಷಾಂತರಕಾರನ ಸಾಧನೆ ನಿಜವಾದ ಅನುವಾದವಾಗುವುದಿಲ್ಲ. ಮೂಲ ಕೃತಿಕಾರ ಎಲ್ಲಿ ತಪ್ಪು ಹೆಜ್ಜೆ ಇಟ್ಟಿದ್ದಾನೆ ಎನ್ನುವುದನ್ನು ನೋಡಿ, ತಾನು ಅಲ್ಲಿ ಎಡವದೆ ಮುನ್ನಡೆಯಬೇಕು. ಆತನ ಶೈಲಿದೋಷಗಳನ್ನು ಮಿರಿದ ಶೈಲಿ ಈತನದಾಗಬೇಕು. ಮೂಲದ ಭಾಷೆಯಲ್ಲಿ ಔಚಿತ್ಯದೋಷವುಂಟಾಗಿದ್ದರೆ ಅದನ್ನು ಈತ ತನ್ನ ಭಾಷೆಯಲ್ಲಿ ತೊಡೆದುಹಾಕಿ ಶುದ್ಧತೆಯನ್ನು ತಂದುಕೊಳ್ಳಬೇಕು. ಈ ರೀತಿಯ ಸೃಷ್ಟ್ಯಾತ್ಮಕ ವಿಮರ್ಶೆ ಅನುವಾದ ಕಾರ್ಯದಲ್ಲಿ ಸಾರಥ್ಯವಹಿಸಿ, ಅನುವಾದ ಬರೀ ಪ್ರತಿ-ಕೃತಿ, ಅನುಕರಣೆ/ ಅನುಸರಣೆ ಎಂತಾಗುವುದನ್ನು ತಪ್ಪಿಸಬೇಕು. ಇಂಥ ವಿವೇಚನೆ ಮುದ್ರಣದೋಷಗಳಾಚೆಯದಾಗಿರಬೇಕು ಎಂದೂ ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. (ಅಂದರೆ, ಮೂಲಪಠ್ಯದ ಶುದ್ಧೀಕರಣ ಮುದ್ರಣದೋಷಗಳಿಗೆ ಸೀಮಿತವಾಗಿರಬಾರದು. ಅವನ್ನು ಮೀರಿ it must engage with stylistic defaults or deficiencies.)

ಉದಾಹರಣೆಗೆ, 'ಅರಿವು ನನ್ನನ್ನು ಯಾವಾಗಲೂ ಕಟುಕುತ್ತಿರುವುದೂ ನಿಜ'[1] ಎನ್ನುವಲ್ಲಿ 'ಕುಟುಕುತ್ತಿರುವುದೂ' ತಪ್ಪಾಗಿ 'ಕಟುಕುತ್ತಿರುವುದೂ' ಎಂದಾಗಿದೆ ಎಂಬುದು ಸುಸ್ಪಷ್ಟ. ಅಂತೆಯೇ, ನಗುವನ್ನಳೆದು ತರುವಂತಹ', 'ಬೆನ್ನು ಮೆಲೆ' ಒಳ್ಳೆಯವರೋ ಕೆಟ್ಟವರು?[2] ಎಂಬುವಲ್ಲಿ ಮುದ್ರಣದೋಷಗಳಾಗಿದ್ದುದು ಸ್ಪಷ್ಟ.

ಆದರೆ, ಮೂಲದ ಮರಾಠಿ, ಅದರ ಹಿಂದಿನ ಇಂಗ್ಲೀಷ, ನಾಣ್ಣುಡಿಯನ್ನು ಉಮಾ ಅವರು ಕೆಳಗಿನ ರೀತಿ ಭಾಷಾಂತರಿಸಿದರೆ ಏನು ಹೇಳುವುದು?

'ಅರಿವುಗೇಡಿತನದಲ್ಲಿಯೇ[3] ನೆಮ್ಮದಿಯಿದೆ' (ಪು.14)

ಯಯಾತಿಯೇ ಈ ಲೇಖನದ ಗಮ್ಯಗುರಿಯಾದ್ದರಿಂದ, ಅದಕ್ಕೆ ಬರೋಣ.

1. ಕಥೆ ಶುರು ಆಗುವುದೇ ಹೀಗೆ- ಆತ್ಮಕಥನದ ಶೈಲಿಯಲ್ಲಿ ಪ್ರಥಮ ಪುರುಷದ ನಿರೂಪಣೆಯಾಗಿ:

'ನಾನು ನನ್ನ ಕಥೆಯನ್ನು ಯಾತಕ್ಕೆಂದು ಹೇಳುತ್ತಿದ್ದೇನೆ ನನಗೆಯೆ ಅದು ಸರಿಯಾಗಿ ಗೊತ್ತಿಲ್ಲ...'

ಹೀಗಿದ್ದಾಗ, ತೃತೀಯ ಪುರುಷದ ನಿರೂಪಣಾವಿಧಾನದ ಈ ತುಣುಕು ಏಕೆ ಬಂದಿತು? ಎಂದರ್ಥವಾಗದು.

'ಇಂಗುದೀ ಎಂಬ ಹೆಸರನ್ನು ಯುವರಾಜ ಯಯಾತಿ ಕೇಳಿದ್ದನಾದರೂ, ಅದರ ಎಣ್ಣೆ ಎಂಥದಿರುತ್ತದೆ, ಅದನ್ನು ಹೇಗೆ ತೆಗೆಯುತ್ತಾರೆ, ಎಂಬ ಯಾವ ಕಲ್ಪನೆಯೂ ಆತನಿಗಿರಲಿಲ್ಲ, (ಪು55)

ಆತ್ಮ ನಿವೇದನೆಯ ಕಥಾರೂಪದಲ್ಲಿ ಇಂಥ ಸರ್ವದರ್ಶಿ ಕಥಾನಿರೂಪಕನ ಪ್ರಕ್ಷಿಪ್ತತೆ (Quathorial intervention/comment)ಗೆ ಅವಕಾಶವಿಲ್ಲ. ಇದು ಮೂಲದಲ್ಲಿ ತಪ್ಪಿ ಬಂದಿದ್ದರೂ, ಅನುವಾದಕರೂ ಎಚ್ಚರದಪ್ಪಿದರೇ?

2. ಮರಾಠಿ ಯಯಾತಿಯನ್ನು ಖಾಂಡೇಕರರು ಬರೆದ ಕಾಲಕ್ಕೂ, ಇನಾಂದಾರರು ಅದನ್ನು ಕನ್ನಡಿಸಿದ ಕಾಲಕ್ಕೂ ಸುದೀರ್ಘಕಾಲದ ಅಂತರವಿದ್ದು, ಕಾದಂಬರೀ ಪ್ರಕಾರದ ತಂತ್ರದಲ್ಲಿ ಸಾಕಷ್ಟು ಮುನ್ನಡೆಯಾಗಿರಬೇಕು. ಹೀಗಿದ್ದೂ ಕಥಾನಿರೂಪಕನ ಉದ್ಗಾರದಂತಿರುವ ಈ ಕೆಳಗಣ ಅವತರಣಿಕೆಯನ್ನು ಸ್ವತಃ ಕಾದಂಬರಿಕಾರರಾದ ಇನಾಂದಾರರು ಬಿಟ್ಟುಕೊಡಬೇಕಾಗಿತ್ತು.

ಅದೊಂದು ಮಧುರವಾದ ಮೂರ್ಛೆಯೇ?

ವಿಲಕ್ಷಣವಾದ ಹುಚ್ಚೇ? ಅಥವಾ ಚೆಲುವಾದ ಸಮಾಧಿಯೇ? ಯಾರು ಹೇಳಬೇಕು? (ಪು.69) ಇಂಥ ಪ್ರಶ್ನಾರ್ಥಕ ಉದ್ಗಾರ ಅನೇಕ ಕಡೆಬರುತ್ತೆ. ಅದನ್ನು ಅನುವಾದದಲ್ಲಿ ಉಳಿಸಿಕೊಳ್ಳುವುದು ಅನಿವಾರ್ಯವಿದ್ದಿತೇ?

3. ಅನುವಾದಕರು 'ನನ್ನನ್ನು' ಎನ್ನಬೇಕಾದಲ್ಲಿ 'ತನ್ನನ್ನು' ಅಂತಾರೆ; ಮುಂದೆ ಮೈಮರೆತು, 'ನನ್ನನ್ನು' ಅಂತ ತರ್ತಾರೆ.

(Mixing up Direct & Indirect Speech modes):

''ಆದರೆ ತಾಯಿ ತನ್ನನ್ನು ಇನ್ನೂ ಹಸುಗೂಸೆಂದು ತಿಳಿದಿದ್ದಾಳೆ. ತಂದೆಯವರು ಆಕೆಯ ಮುಷ್ಟಿಯಲ್ಲಿ. ಇದರಿಂದಾಗಿ ನನಗೆ ಪ್ರಿಯವಾಗಿದ್ದ ಕನಸುಗಳೆಲ್ಲ ಭೂಮಿಯ ಅಡಿಯಲ್ಲಿ ಹುದುಗಿರಿಸಿದ ಸುವರ್ಣಮುದ್ರೆಯಂತಾಗಿದ್ದವು.''(ಪು.25)

''ಸೂರ್ಯಕಿರಣಗಳ ಹೊನ್ನ ಸ್ಪರ್ಶದತ್ತ ತನ್ನ ಕಣ್ಣೋಟವನ್ನು ಹರಿಯಿಸಿರಲಿಲ್ಲ.'' (ಪು.16) - ಇಲ್ಲಿನ 'ತನ್ನ' ಯಾರಿಗೆ ಸಂಬಂಧಿಸಿದ್ದು ಅಂತ ನೀವು ಹಿಂದು ಮುಂದೆ ನೋಡಿದುದಾದರೆ, ಅದು 'ನನ್ನ' ಅಂತಿರಬೇಕಾಗಿತ್ತು ಎಂದು ತಿಳಿಯುವುದು.

ಈ ಕೆಳಗಿನ ವಾಕ್ಯದಲ್ಲಿ 'ತನ್ನನ್ನು' ಎಂಬ ಪ್ರಯೋಗ ಸ್ವಲ್ಪ ವಿಸ್ಮಯ ಉಂಟು ಮಾಡುತ್ತದೆ.

''ಮನುಷ್ಯ ದೇಹವನ್ನು ಪ್ರೀತಿಸುತ್ತಾನೆ; ಆ ಪ್ರೀತಿಗೆ ಕೊನೆಯೆಂಬುದಿಲ್ಲ. ಆದರೆ ದೇಹ ಮಾತ್ರ ತನ್ನನ್ನು ಅದೇ ರೀತಿಯಾಗಿ ಪ್ರೀತಿಸುವುದಿಲ್ಲ. ಪ್ರಸಂಗ ಬಂದಾಗ ತನ್ನ ವೈರವನ್ನು ಸಾಧಿಸುತ್ತದೆ.'' (ಪು.36)

''ತನ್ನನ್ನು' ಬದಲಾಗಿ 'ಮನುಷ್ಯನನ್ನು'' ಎಂದಿದ್ದರೇ ಸರಿಯಾಗುತ್ತಿತ್ತು.

4. 'ಇಂದಿಲ್ಲ ನಾಳೆ' (ಪು.63) ಹಾಗೂ 'ಹರಿದಾರಿ' (ಪು.64) ಗಳಂಥ ರೂಪಗಳು ಮುದ್ರಣದೋಷಗಳು ಅಂತ ಬಗೆಯಬಹುದು.

ಆದರೆ, ಈ ಕೆಳಗಿನಂತಹ ಪ್ರಯೋಗಗಳ ಬಗೆಗೆ ಏನೆನ್ನುತ್ತೀರಿ?

''ತಂದೆಯವರಿಗಿದ್ದ ಶಾಪ ಎಂಥದು? ಅಂಥದರಿಂದಾಗಿಯೇ ಅವರೀಗ ಮೃತ್ಯುಶಯ್ಯೆಯಲ್ಲಿ ಬಿದ್ದುಕೊಂಡಿರುವಂತಾಗಿರಬಹುದೆ?'' (62)

'ಅದರಿಂದಾಗಿಯೇ' ಎಂದರಾಗುತ್ತಿರಲಿಲ್ಲವೇ?

ಮತ್ತೆ ''ಆ ಶಾಪಕ್ಕೆ ಇಷ್ಟೊಂದು ಯಾತಕ್ಕೆಂದು ಹೆದರಿಕೊಳ್ಳಬೇಕು?''(63) 'ಯಾತಕ್ಕೆ' ಸಾಕಾಗಿರಲಿಲ್ಲವೇ? ಇನ್ನೊಂದು ಅಂಥದೇ ಪ್ರಯೋಗ :

'ಒಬ್ಬ ರಾಕ್ಷಸನಿದ್ದ ಹಾಗಿದ್ದ' (16)

ಹೋಗಲಿ, ನನ್ನ ಈ ಕೂದಲು ಸೀಳುವಿಕೆ(hair-splitting)ಗೆ ಕೆಲವರು ಆಕ್ಷೇಪಿಸಬಹುದು. ಆದರೆ

'ಮೃತ್ಯು ಉದ್ದಕ್ಕೆ ಚಾಚಿದ, ಚಳಿಯ ಕೈ ನಿಲುಕದ ಒಂದು ದೂರದ ಗವಿಯನ್ನು ಹುಡುಕಿ..? (ಸಲ್ಲದ ಜಾಗದಲ್ಲಿ ಉಪಯೋಗಿಸಲಾದ ಅಲ್ಪವಿರಾಮವೂ ಮೂಲದ್ದೇ) ಎಂಬ ವಾಕ್ಯದ ಬಗೆಗೆ ಏನೆನ್ನುವಿರಿ? 'ಮೃತ್ಯುವು ಉದ್ದಕ್ಕೆ ಚಾಚಿದ ಚಳಿಯ ಕೈಗೆ ನಿಲುಕದ.., ಎಂದಿದ್ದಿದ್ದರೆ ಅರ್ಥಕ್ಕೆ ವ್ಯತ್ಯಯವಿರಲಿಲ್ಲ. ಈಗಿದ್ದಂತೆ, ವಾಕ್ಯದ ಅರ್ಥ ಏನಿರಬೇಕು ಎಂದು ತಡಕಾಡುವಂತಾಗಿದೆ.

5. ಕೆಲವೆಡೆ ಅರ್ಥವಾಗದ ಶಬ್ದಗಳು, ದೋಷಪೂರ್ಣ ವಾಕ್ಯರಚನೆಗಳು, ಕನ್ನಡ ಭಾಷೆಯ ಜಾಯಮಾನಕ್ಕೆ ಹೊರತಾದ ಪ್ರಯೋಗಗಳು ಓದುಗರನ್ನು ತಬ್ಬಿಬ್ಬಾಗಿಸುತ್ತವೆ.

ಉದಾ: 'ಅಂಥವರಿಗೆ ಅಪವಿತ್ರವಾದ ವಸ್ತು ಇಲ್ಲಬಾರದು ಎಂದು' (68)

'ಒಬ್ಬಂಟಿಗನಾಗಿ ಇಗುವ ಹೆದರಿಕೆಯೆನಿಸತೊಡಗಿತು.' (68)

'ಈ ಸಂಘರ್ಷ ಇನ್ನು ಘೋರವಾದ ಸಂಗ್ರಾಮವಾಗುತ್ತದೆನ್ನುವುದು ಸ್ಪಷ್ಟವಾಗಿತ್ತು'(61)

(ಸರಿಯಾದ ರೂಪ 'ಇನ್ನು'ವೋ, 'ಇನ್ನೂ'ವೋ? 'ಇನ್ನು'ವಿಗೂ ಬೇರೆ ಅರ್ಥ ಇದೆ-'ಇನ್ನು ಮೇಲೆ' ಎಂದು. ಇಲ್ಲಿ ಆ ಅರ್ಥವೋ? ಇಲ್ಲ.)

ಹಾಗೆಯೇ 'ಕಾತರಳಾಗಿ ನಾಲ್ಕು ಕಡೆಯಲ್ಲಿ ಯಾತಕ್ಕೆ ಹಾಗೆ ನೋಡಬೇಕಾಗಿತ್ತು' (10) ('ನಾಲ್ಕೂ' ಎಂದಾಗಬೇಡವೇ?' ಸರಿ, 'ಮಗು, ಆ ಹೂವನ್ನು ನೀವು ಯುವರಾಜರಿಗೆ ಕೊಡು' (58) ಎಂಬಲ್ಲಿ 'ನೀವು' ಎಂಬುದು 'ನೀನು'ಗೆ ಬದಲಾಗಿ ಆದ ಮುದ್ರಣದೋಷ. ಆದರೆ, 'ಇದರಲ್ಲಿ ನನ್ನ ಗುಣವೂ ಇಲ್ಲ; ದೋಷವೂ ಇಲ್ಲ'(3) ಎಂಬುದನ್ನು ಗಮನಿಸಿ. 'ಗುಣ' ಎಂಬುದು neutral ಅಲ್ಲವೆ? ಸದ್ಗುಣವೂ ಆಗಿರಬಹುದು, ದುರ್ಗುಣವೂ ಆಗಿರಬಹುದು.

6. ಈಗ ಕೆಲವು ಶಬ್ದಗಳ ರೂಪವನ್ನು ನೋಡೋಣ: 'ನನ್ನ ಈ ಪ್ರಯಾಣದಲ್ಲಿ ಹೇಳಬಹುದಾದಂಥ ಒಂದಿಷ್ಟು ನಡೆದದ್ದಿದೆ.'(5)

'ಹೇಳಬಹುದಾದಂಥದ್ದು' ಎಂದಿರಬೇಡವೇ? ಮತ್ತೆ, 'ನನ್ನನ್ನು ಕಣ್ಣರಳಿಸಿ ಕೋಪದಿಂದ ನೋಡಿದೆ (ನೀನು)' (10) ಕಣ್ಣರಳಿಸಿ' ಹಾಗೂ 'ಕೋಪದಿಂದ' ಎರಡೂ ಪರಸ್ಪರ ವಿರೋಧಕವಲ್ಲವೇ? ಇಂಥ ಭಾಷಾಪ್ರಯೋಗದ ಅಂತರ್ ವೈರುಧ್ಯ ಅನುವಾದಕರ ಗಮನಕ್ಕೆ ಬರಲಿಲ್ಲವೇ?

ಅಂತಹದೇ ಇನ್ನೊಂದು ಪ್ರಯೋಗ:

'ನನ್ನ ಕಥೆಯನ್ನು ಹೇಳಬೇಕು ಎಂಬ ಮೋಹ ಅನಿವಾರ್ಯವಾಗುತ್ತಿದೆ'.(5) 'ಮೋಹ ತಡೆಯಲಾರದಾಗಿದೆ' ಎನ್ನಬಹುದಿತ್ತು. ಆದರೆ ಅದು 'ಅನಿವಾರ್ಯವಾಗುವುದು' ವಿಚಿತ್ರ ಪ್ರಯೋಗ.

ಇನಾಂದಾರರು ಬಳಸುವ ಕೆಲವು ಪದಗಳೇ ವಿಚಿತ್ರ-

ಉದಾ: 'ಒಂದೊಂದರೊಡನೆ'(14) ಒಬ್ಬರೊಬ್ಬರೊಡನೆ (15)

7. ಕೆಲ ವಾಕ್ಯರಚನೆಗಳು ಸಂದಿಗ್ಧತೆಗೆ ಎಡೆಮಾಡಿಕೊಡುತ್ತವೆ.

ಉದಾ: 'ಅವನು ಹೊರಟು ಹೋದಾಗ ನಾನೊಬ್ಬಳೇ ಹಿಂದಿರುಗಿ ಬರಬೇಕಾಗುತ್ತಿತ್ತು'.

ಇಲ್ಲಿ 'ಹೋದಾಗ' ಎನ್ನುವ ಬದಲು 'ಹೋದ ಪಕ್ಷದಲ್ಲಿ' ಎಂದಿದ್ದರೆ ಸಂವಹನ ಸಮರ್ಪಕವಾಗುತ್ತಿತ್ತು. (ಸಂದರ್ಭದಲ್ಲಿ ಇದೇ ಅರ್ಥ ಇದೆ.)

ಅದೇ ಪ್ರಕಾರ, 'ನಾನು ಬಾಯಿಂದ 'ಅಮ್ಮ', 'ಅಮ್ಮ' ಎಂದು ಹೇಳುತ್ತಿರುವಂತೆ ಆಕೆ ನನ್ನನ್ನು ಹತ್ತಿರವಾಗಿಸಿಕೊಂಡು...."

ಇಂಥಲ್ಲಿ 'ಹೇಳುತ್ತಿದ್ದಂತೆ' ಎಂಬ ರೂಪ ಸಾಮಾನ್ಯ.

8. ಕನ್ನಡದ ಶಬ್ದ 'ಅರ್ಧಮರ್ಧ', 'ಅರೆಬರೆ'. ಆದರೆ 'ಅರೆಮರ್ಧ'(7) ಅಲ್ಲ. ಇದೊಂದು hybrid ರೂಪ.

(ಹಕ್ಕಿಗಳ) 'ಚಿಂವ್‌ಚಿವಾಟ' (ಪು.23) ಎಂಬುದು ಮರಾಠೀ ಶಬ್ದ. 'ಚಿಲಿಪಿಲಿ' ಎಂಬ ಸಂವಾದೀ ಪದ ಇರುತ್ತಿರಲು, ಅನುವಾದಕರು 'ಚಿಂವ್‌ಚಿವಾಟ' ಶಬ್ದ ಬಳಸಿದ್ದಾರೆ.

9. 'ಈ ಗ್ರಹ, ಬೇನೆ, ಸಾವು ಎಲ್ಲವನ್ನೂ ಮರೆತುಬಿಡಬೇಕಾಗಿದೆ ನನಗೆ'(67) ಎಂದು ಯಯಾತಿ ಹೇಳುತ್ತಾನೆ ಮುಕುಲಿಕೆಗೆ. 'ಗ್ರಹ' ಎಂದರೆ ಏನು ಈ ಸಂದರ್ಭದಲ್ಲಿ? ಸಂವಹನ ಸ್ಪಷ್ಟವಿಲ್ಲ. ಹಾಗೆಯೇ, 'ಅದರ ಭಾವಾರ್ಥ ನನ್ನ ಮನಸ್ಸಿನಲ್ಲಿ ರೂಢ ಮೂಲವಾಗಿ ನಿಂತಿದೆ'(58) ಎಂದು ಯಯಾತಿ ಹೇಳಿದ ಮಾತಿನಲ್ಲೂ 'ರೂಢಮೂಲವಾಗಿ' ಎಂಬ ಶಬ್ದ ಅಸ್ಪಷ್ಟ. 'ಬೇರೂರಿ', 'ಅಚ್ಚೊತ್ತಿ' ಎಂಬ ಅಚ್ಚಗನ್ನಡ ಶಬ್ದಗಳು ಬಾರದೇ ಹೋದವೇ ಇನಾಂದಾರರ ಸಹಾಯಕ್ಕೆ?

10. ಈ ವಾಕ್ಯವನ್ನು ನೋಡಿ:

'ಕುದುರೆಯನ್ನು ತಡೆದು ತರಂಗತರಂಗವಾಗಿ ಹಾಡುತ್ತಿದ್ದಂತಿದ್ದ ಆ ಬಣ್ಣಗಳನ್ನು ನೋಡುತ್ತ ನಿಂತೆ'(52) 'ಬಣ್ಣಗಳ ಹಾಡುವಿಕೆ' ಎಂಬ ಪದಪ್ರಯೋಗವನ್ನು ಕಾವ್ಯದಲ್ಲಿ ಕಾಣಬಹುದು. ಆದರೆ, ಈ ಗದ್ಯಕಾದಂಬರಿಯಲ್ಲಿ ಏಕೆ? ಒಂದು ವೇಳೆ ಖಾಂಡೇಕರರು ಹಾಗೆ ಬರೆದಿದ್ದರೂ, ಅದನ್ನು ಬದಲಿಸಿಕೊಳ್ಳಲು ಆಗುತ್ತಿರಲಿಲ್ಲವೇ?

ಇದೇ ಸಂದರ್ಭದಲ್ಲಿ

'ಅದರ ಬಣ್ಣಗಳು ನನಗೆ ಪ್ರೀತಿಯಾಗಿದ್ದವು' ಎನ್ನುತ್ತಾನೆ ಯಯಾತಿ (52). ಇದು ಕನ್ನಡದ ಸಹಜ ಪ್ರಯೋಗವೇ?

11. ಒಂದೆಡೆ 'ಅಪಹಾರದಂಥ ಅಧರ್ಮ ಇನ್ನೊಂದಿಲ್ಲ' ಎಂಬ ವಾಕ್ಯ ಬರುತ್ತೆ (60). 'ಅಪಹಾರ'ವೆಂಬ ರೂಪವನ್ನು ನಾವು ಬಳಸುತ್ತೇವೆಯೇ?

ಅದೇ ಪುಟದ ಮೇಲಿನ ಇನ್ನೊಂದು ವಾಕ್ಯ 'ಯಾವುದೋ ಹಳೆಯ ಕಡತದಲ್ಲಿಯ ಶುಷ್ಕ ಪಾಂಡಿತ್ಯ ಆದಾಗಿರಬೇಕು.

'ಕಡತ' ವೆಂಬುದು ಕಛೇರಿ ಬಿಟ್ಟು ಇಲ್ಲೇಕೆ ಬಂತು? ಅದರ ಅರ್ಥವೇನಿಲ್ಲ? ಎಂಬ ವಿಸ್ಮಯ.

12. ಕೊನೆಯಲ್ಲಿ ಇನಾಂದಾರ ಒಂದು ಅಸಹಜ ಅಸಿಂಧು ಪ್ರಯೋಗ ನೋಡಿ:

"ನೀನು ಹುಟ್ಟುವ ಮೊದಲು ಒಂದೂವರೆ ವರ್ಷ ಆತ (ಯತಿ) ಹೊರಟುಹೋದ"(11) ಇದನ್ನು ನಾವು "ನೀನು ಹುಟ್ಟುವುದಕ್ಕೆ ಒಂದೂವರೆ ವರ್ಷ ಮುಂಚೆ/ಮೊದಲು ಆತ ಹೊರಟು ಹೋದ" ಎಂದು ಹೇಳುವುದಿಲ್ಲವೇ?

13. ಮೇಲ್ಕಾಣಿಸಿದ ಈ ಎಲ್ಲ ಲೋಪದೋಷಗಳು, ಭಾಷಾ ವೈಪರೀತ್ಯಗಳು ಕಾದಂಬರಿಯ ಮೊದಲ 70 ಪುಟಗಳಲ್ಲಿ ಹೆಕ್ಕಿ ತೆಗೆದಂಥವು. ಉದ್ದಕ್ಕೂ ಇನ್ನೆಷ್ಟು ಇವೆಯೋ?!

ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕು ಎನ್ನಿಸುತ್ತೆ. ಬರಹಗಾರನಿಗೂ, ಮುದ್ರಣಕಾರ/ಪ್ರಕಾಶಕನಿಗೂ ಒಂದು ಹೊಣೆಗಾರಿಕೆಯೆಂಬುದು ಬೇಕು. ಏನು ಬರೆದರೂ, ಎಂತು ಬರೆದರೂ, ಹೇಗೆ ಅಚ್ಚುಹಾಕಿದರೂ, ಕನ್ನಡ ಜನತೆ ಕೊಂಡು ಓದ್ತಾರೆ, ಯಾರೂ ಈ ಪುಸ್ತಕದಲ್ಲಿ ದೋಷಗಳು ಬಹಳ ಇವೆ. ಇದನ್ನು ತೆಗೆದುಕೊಂಡು ನಮ್ಮ ದುಡ್ಡು ವಾಪಸ್ಸು ಕೊಡಿ' ಅಂತ ಬಂದು ಕೇಳುವುದಿಲ್ಲ (ಹಿಂದಕ್ಕೆ, ಒಂದೇ ಲೋಪವಿದ್ದುದಕ್ಕಾಗಿ, ಒಬ್ಬ ಓದುಗ ತಾನು ಕೊಂಡ Concise oxford Dictionary ತಂದು ಕೊಟ್ಟು ಇಂಥ ಸವಾಲನ್ನೊಡ್ಡಿದ್ದನಂತೆ). ಹಾಗಂತ, ಚೊಕ್ಕವಾಗಿ, ಬರೆಯದೆ, ಅಥವಾ ಚೊಕ್ಕವಾಗಿ ಮುದ್ರಿಸದೆ, ಒಂದು ಕೃತಿಯನ್ನು ಬಿಡುಗಡೆ ಮಾಡುವುದು/ಓದುಗನ ಕೈಯಲ್ಲಿಡುವುದು ಎಂದರೆ ಆತನಿಗೆ, ಶಾರದೆಗೆ, ಅಪಚಾರ ಬಗೆದಂತೆ.

---

1. ಬಾಳು ಸೊಗಸಾದರೂ, ಸುನೀತಾ ದೇಶಪಾಂಡೆಯವರ ಮೂಲಕೃತಿಯ ಕನ್ನಡಾನುವಾದ, ಉಮಾ ಕುಲಕರ್ಣಿಯವರದು, ಮಹಿಳಾ ಸಾಹಿತ್ಯಿಕ ಪ್ರ. ಹುಬ್ಬಳ್ಳಿ, 2003, ಪುಟ14

2. ಅದೇ ಪುಸ್ತಕ, ಕ್ರಮವಾಗಿ ಪು. 15,16,17.

3. Ignorance is blissಎಂಬಲ್ಲಿಯ ignoranceನ್ನು ಭಾಷಾಂತರಿಸುವುದು ('ಅಜ್ಞಾನ' ಎಂಬ ಸಂಸ್ಕೃತಪದವನ್ನು ಬಿಟ್ಟುಕೊಟ್ಟರೂ), ಅರಿವಿಲ್ಲದಿರುವಿಕೆ ಎಂಬ ದೇಸಿ ಪದವನ್ನು ಉಪಯೋಗಿಸಬಹುದಿತ್ತು.

ಗಜಲ್‌ಗಳು, ಅವುಗಳ ಅನುವಾದ ಸಮಸ್ಯೆಯೂ (ಲೇಖನ)

ಚಿದಾನಂದ ಸಾಲಿ

ಗಜಲ್ ಎಂದರೆ ಪ್ರೇಮಮಯ ಕಾವ್ಯ, ಸಂಗೀತ ಮಯ ಪ್ರೇಮ. ಈ ಪ್ರಕಾರದ ಗೀತಾತ್ಮಕತೆ ಮತ್ತು ಸಾಹಿತ್ಯಿಕ ಛಂದೋಬದ್ಧತೆಗಳನ್ನು ಉರ್ದುವಿನಷ್ಟು ಸೊಗಸಾಗಿ, ಸಶಕ್ತವಾಗಿ ಮತ್ತು ಸುಕೋಮಲವಾಗಿ ಹಿಡಿದಿಡುವುದು ಸುಲಭದ ಮಾತೇನಲ್ಲ. ಅದರ ವಿಶಿಷ್ಟ ಲಯಗಾರಿಕೆ ಮತ್ತು ಸೂಕ್ಷ್ಮ ಕುಸುರಿತನಗಳನ್ನು ಕಾವ್ಯದ ಒಟ್ಟಂದಕ್ಕೆ ಧಕ್ಕೆ ಬರದಂತೆ, ರಸಿಕರಿಗೆ ಎಲ್ಲೂ ರಸಭಂಗವಾಗದಂತೆ ನಾಜುಕಾಗಿ ಕನ್ನಡಕ್ಕಳವಡಿಸುವುದು ಆಗಷ್ಟೇ ಜನಿಸಿದ ಕೂಸನ್ನು ಒರಟು ಗಂಡಸು ಎತ್ತಿಕೊಳ್ಳುವ ಸವಾಲಿನಂಥದು. ಅಷ್ಟು ಸುಕೋಮಲ ಭಾವದ ಮತ್ತು ಅಷ್ಟೊಂದು ಎಚ್ಚರಿಕೆಯನ್ನು ಬಯಸುವ ಪ್ರಕಾರವಿದು.

ಕನ್ನಡದ ಗಜಲುಗಳ ಸ್ಥಿತಿ ಇನ್ನು ಈಗ ಅಂಬೆಗಾಲಿಡುತ್ತ ನಮ್ಮ ಮನೆಯ ಹೊಸಿಲು ದಾಟಿಕೊಂಡು ಬರುತ್ತಿರುವ ನೆರೆಮನೆಯ ಮಗುವಿನಂತಿದೆ. ಅದಕ್ಕೆ ಮೆಚ್ಚುಗೆಯ ಮತ್ತು ಪ್ರೋತ್ಸಾಹದ ವಾತಾವರಣವೊಂದು ಸಮಕಾಲೀನ ಸಾಹಿತ್ಯಿಕ ಸಂದರ್ಭದಿಂದ ದೊರೆಯುವಂತಾದರೆ ಅದರ ನುಡಿಗಟ್ಟು, ಲಯಗಾರಿಕೆ, ಮತ್ತು ವಿಶೇಷ ಲಾವಣ್ಯಗಳು ಹೊಸ ಹೊಸ ಪರಿವೇಷದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗುತ್ತದೆಯಲ್ಲದೆ ಹಲವು ಯುವ ಮನಸ್ಸುಗಳು ಇದರೆಡೆಗೆ ಆಕರ್ಷಿತಗೊಂಡು ಹೆಚ್ಚು ಹೆಚ್ಚಿನ ರಚನೆ, ಪ್ರಯೋಗ, ಚರ್ಚೆಗಳು ಶುರುವಾಗಿ ಗಜಲಿಗೆ ಕನ್ನಡ ಕಾವ್ಯದ ಆಳ - ಅಗಲ - ಎತ್ತರಗಳು ದಕ್ಕುವುದೇ ಅಲ್ಲದೆ; ಗಜಲಿನ ಆಳ - ಅಗಲ - ಎತ್ತರಗಳು ಕನ್ನಡ ಕಾವ್ಯದ ಸದ್ಯದ ಸ್ಥಿತಿಗೂ ದಕ್ಕುವಂತಾಗಿ ಅದಕ್ಕೆ ಹೊಸ ಸಂವೇದನೆಯ ಸ್ಪರ್ಶ ನೀಡಲು ಸಾಧ್ಯವಾಗುತ್ತದೆ.

ಇನ್ನು ಕನ್ನಡದಲ್ಲಿ ಗಜಲ್ ಹೆಸರಿನಲ್ಲಿ ಪ್ರಕಟಗೊಳ್ಳುತ್ತಿರುವ ಪ್ರೇಮಗೀತೆಗಳ ಒಂದು ಕೆಟ್ಟ ಪರಂಪರೆಯೇ ಇದೆ ಎಂದು ಗಜಲ್‌ನ ಆದ್ಯಪುರುಷರಾದ ಶ್ರೀ ಶಾಂತರಸರು ಅಭಿಪ್ರಾಯಪಟ್ಟಿದ್ದಾರೆ. ನಾಲ್ಕೋ - ಆರೋ ದ್ವಿಪದಿಗಳನ್ನು ಸೇರಿಸಿಬಿಟ್ಟ ಮಾತ್ರಕ್ಕೆ ಯಾವ ಪದ್ಯವೂ ಗಜಲ್ ಆಗಲಾರದು. ಗಜಲ್ ಎಂದರೇನೇ ಅದಕ್ಕೆಂದೇ ವಿಶಿಷ್ಟವಾದ ಲಕ್ಷಣಗಳಿಂದ ರೂಪಿತವಾದ ಪದ್ಯ. ಸರಳೀಕರಿಸಿ ಹೇಳುವುದಾದರೆ ಮೂರು ಸಾಲಿನ ಪದ್ಯವು ತ್ರಿಪದಿ, ನಾಲ್ಕು ಸಾಲಿನದು ಚೌಪದಿ, ಆರುಸಾಲಿನದು ಷಟ್ಪದಿ ಎಂಬುವು ಆಯಾ ಪ್ರಕಾರಗಳ ಮೇಲ್ನೋಟದ ಅಥವಾ ಹೊರ ಆವರಣ ನಿರ್ಧರಿಸುವ ಛಂದೋಲಕ್ಷಣಗಳು. ಐದು ಸಾಲಿನ ಪದ್ಯವೊಂದನ್ನು ಬರೆದು ಇದು ದ್ವಿಪದಿ, ತ್ರಿಪದಿ ಅಥವಾ ಚೌಪದಿ ಎಂದರೆ ಹೇಗೆ ಒಪ್ಪಲಿಕ್ಕಾಗದೋ; ಅಥವಾ ಎರಡೂ ಆರು ಸಾಲಿನ ಪದ್ಯಗಳೇ ಆಗಿದ್ದರೂ ಭಾಮಿನಿ ಷಟ್ಪದಿಯ ಕಾವ್ಯವನ್ನು ವಾರ್ಧಕ ಷಟ್ಪದಿಯದೆಂದು ಹೇಗೆ ಒಪ್ಪಲಿಕ್ಕಾಗದೋ ಹಾಗೇ ಇದೂನೂ.

ಕಾಫಿಯಾ, ರದೀಫ್, ಬೈರ್‌ಗಳಿಲ್ಲದೆ (ರದೀಫ್ ಇಲ್ಲದ ಪ್ರತ್ಯೇಕ ಪ್ರಕಾರವೂ ಇದೆ ಆ ಮಾತು ಬೇರೆ) ದ್ವಿಪದಿಗಳನ್ನು ಸೇರಿಸಿ ಇದು ಕನ್ನಡದ ಗಜಲ್ ಎಂದು ಕರೆಯುವುದು ಉಚಿತವೇ ಎಂಬ ಪ್ರಶ್ನೆಯಿಲ್ಲಿ ಉದ್ಭವಿಸುತ್ತದೆ. ಕನ್ನಡದ್ದೇ ಆಗಲಿ 'ಗಜಲ್' ಎಂದು ಕರೆದ ಮೇಲೆ ಅದು ಗಜಲ್ ಒಳಗೊಳ್ಳಬೇಕಾದ ಎಲ್ಲ ಛಂದೋಲಕ್ಷಣಗಳನ್ನು ಒಳಗೊಂಡಿರಬೇಕಾದುದು ಅಪೇಕ್ಷಣೀಯ.

ಇನ್ನು ಗಜಲ್‌ಗಳ ಅನುವಾದದ ಸಮಸ್ಯೆ. ಗಜಲ್‌ಗಳ ಅನುವಾದ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳ ಸ್ವರೂಪವೂ ಪ್ರಮುಖವಾಗಿ ಎರಡು ಬಗೆಯದು. ಒಂದು ಭಾಷಿಕವಾದದ್ದು ಮತ್ತೊಂದು ಸಾಂಸ್ಕೃತಿಕ ನೆಲೆಯದ್ದು. ಒಂದು ಭಾಷೆಗೆ ಇರುವ ಅಭಿವ್ಯಕ್ತಿಸಾಧ್ಯತೆ, ಮತ್ತು ಪ್ರತಿಭಾಷೆಯೂ ತನ್ನ ಧ್ವನಿಮಾಶಕ್ತಿ ಹಾಗೂ ಸೌಂದರ್ಯಗಳ ದೃಷ್ಟಿಯಿಂದ ಅನನ್ಯವಾಗಿರುವುದು, ಜೊತೆಗೆ ಪರಂಪರೆಯ ಒಡನಾಟದೊಂದಿಗೆ ಆ ಭಾಷೆಯ ಲಯದ ಸಾಧ್ಯಸಾಧ್ಯತೆಗಳ ಮಿತಿ ಮತ್ತು ಮಹತ್ವಗಳ ಅರಿವಿನಲ್ಲಿ ರೂಪುಗೊಂಡಿರುವ ವಿಶಿಷ್ಟವಾದ ಗಾದೆ-ನಾಣ್ನುಡಿ ಲೋಕೋಕ್ತಿಗಳು ಮುಂತಾದ ಅಂಶಗಳನ್ನು ಭಾಷಿಕ ಸಮಸ್ಯೆಯಡಿಯಲ್ಲಿ ಗುರುತಿಸಬಹುದು. ಇವಲ್ಲದೆ ಪದಶಯ್ಯೆ. ವಾಕ್ಯರಚನೆ, ಲಯ ಮತ್ತು ಅರ್ಥವು ಹೊಮ್ಮಿಸುವ ಲೌಕಿಕ ಹಾಗೂ ಅಲೌಕಿಕ ಧ್ವನಿಗಳು ಇತ್ಯಾದಿಯೆಲ್ಲ ಈ ಭಾಷಿಕ ಸಮಸ್ಯೆಯಡಿ ಬರುವ ಇತರೆ ಅನುಷಂಗಿಕ ಅಂಶಗಳು.

ಉದಾಹರಣೆಗೆ ಹೇಳುವುದಾದರೆ ಉರ್ದು ಭಾಷೆಯಲ್ಲಿ ಚಂದ್ರ ಹಾಗೂ ಬೆಳದಿಂಗಳು ಕುರಿತು ವೈವಿಧ್ಯಮಯವಾದ ಪದಗಳಿವೆ. ಅವುಗಳಿಗೆ ಸಂವಾದಿಯಾಗಿ ಅನುವಾದ ಸಂದರ್ಭದಲ್ಲಿ ಯಾವ ರೂಪಗಳನ್ನು ಅಂಗೀಕರಿಸಬೇಕು ಅಥವಾ ಹೇಗೆ ಆ ರೂಪ ರಚನೆಯನ್ನು ಗ್ರಹಿಸಬೇಕೆಂಬ ಪ್ರಶ್ನೆ ಏಳುತ್ತದೆ.

ಮಿಲ್ತಿ ಹೈ ಜಿಂದಗಿ ಮೆ ಮೊಹಬ್ಬ'ತ್'ಕಭಿ ಕಭಿ

ಹೋತಿ ಹೈ ದಿಲ್‌ಭರೋಂ ಸೆ ಇನಾಯ'ತ್' ಕಭಿ ಕಭಿ.

ಎಂಬ ಸಾಲುಗಳನ್ನು ಸಿಗುವುದು ಬದುಕಲ್ಲಿ ಪ್ರೇಮವು ಆಗಾಗ ಆಗುವುದು ರಸಿಕರಿಗೇ ಮೋಸವು ಆಗಾಗ. ಎಂದು ಅನುವಾದಿಸಿ ಪರಿಶೀಲಿಸಿದರೆ.

ಇಲ್ಲಿ ಉರ್ದುಸಾಲುಗಳಲ್ಲಿ 'ತ್' ಎಂಬುದು 'ರವಿ' ಆಗಿದೆ ನಿಯಮದ ಪ್ರಕಾರ 'ಕಾಫಿಯಾ' ಗಳ ಅಂತ್ಯಾಕ್ಷರವಾದ 'ರವಿ'ಯು ಸಾಮಾನ್ಯವಾಗಿರಬೇಕು. ಆದ್ದರಿಂದಲೇ ಮೊಹಬ್ಬ'ತ್' ಇನಾಯ'ತ್', ಜರೂರ'ತ್', ಮುಲಾಖಾ'ತ್'ಗಳನ್ನು ಪ್ರೇಮ'ವು', ಮೋಸ'ವು', ಅಗತ್ಯ'ವು' ಮಿಲನ'ವು' ಅಂತ ಮಾಡಬೇಕಾಗುತ್ತದೆ. ಅಲ್ಲಿ 'ತ್' ರವಿಯಾದರೆ ಅನುವಾದದಲ್ಲಿ 'ವು' ರವಿಯಾಗಿದೆ. ಮಿಲನವು ಪದದ ಬದಲಿಗೆ ಭೇಟಿ'ಯು' ಎಂಬ ಪದವನ್ನು ಹಾಕಲು ಬರುವುದಿಲ್ಲ ಏಕೆಂದರೆ ಇಲ್ಲಿ ಕೊನೆ ಅಕ್ಷರ 'ವು' ಬದಲಿಗೆ 'ಯು' ಆಗುತ್ತದೆ. ಹಾಗಾಗಕೂಡದು.

ಇನ್ನು ವಾಕ್ಯದ ಸಮಸ್ಯೆ. ಉರ್ದು; ತೆಲುಗು, ಹಿಂದಿಗಳಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಈ ಸಮಸ್ಯೆ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಈ ಭಾಷೆಗಳ ವೈಯಾಕರಣಿಕ ರಚನೆ. ಅಂದರೆ ಈ ಮೂರರಲ್ಲೂ ವಾಕ್ಯ ವೊಂದರಲ್ಲಿ ಕರ್ತೃ, ಕರ್ಮ ಮತ್ತು ಕ್ರಿಯಾಪದಗಳ ಸ್ಥಾನಗಳು ಒಂದೇ ರೂಪವಲ್ಲಿರುವುದು. ಉದಾಹರಣೆಗೆ ನೇನು ಪೋತುನ್ನಾನು, ನಾನು ಹೋಗುತ್ತಿದ್ದೇನೆ, ಮೈ ಜಾರಾಹಾಹ್ಞೂಂ. ಇಂಥಲ್ಲಿ ಮೂಲಭಾಷೆಯಿಂದ ಅನುವಾದಭಾಷೆಗೆ ಬರುತ್ತ ಯಾವುದೇ ವಾಕ್ಯರಚನಾ ಸಂಬಂಧಿ ತೊಡಕಿಲ್ಲ. ಅದು ಕಾಣಿಸಿಕೊಳ್ಳುವುದು ಮೂಲಕ ಭಾಷೆಯ ಸಂದರ್ಭದಲ್ಲಿ, ಇನ್ನು ಸ್ಪಷ್ಟಪಡಿಸುವುದಾದರೆ ಉರ್ದು ಮೂಲದ ಗಜಲ್ ಅನ್ನು ಇಂಗ್ಲೀಷನಲ್ಲಿ ಓದಿ, ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಿಸುವಾಗ ಈ ಸಮಸ್ಯೆಯುಂಟಾಗುವುದು. ಉರ್ದು ಭಾಷೆಯ ವಾಕ್ಯ ರಚನೆಯಲ್ಲಿನ ಕರ್ತೃ, ಕರ್ಮ, ಕ್ರಿಯಾಪದಗಳ ಕ್ರಮವು ಇಂಗ್ಲೀಷಿಗೆ ಬರುವ ಹೊತ್ತಿಗೆ ಕರ್ತೃ, ಕ್ರಿಯೆ, ಕರ್ಮ ಆಗಿ ಸ್ಥಾನಾಂತರ ಹೊಂದಿರುತ್ತದೆ. ಹೀಗೆ ಮೂಲಕ ಭಾಷೆಯಲ್ಲಿ ಸ್ಥಾನಾಂತರಿತವಾಗಿರುವ ಕ್ರಮದಲ್ಲಿರುವ ವಾಕ್ಯರಚನೆಯನ್ನು ಅನುವಾದ ಭಾಷೆಯಾದ ಕನ್ನಡಕ್ಕೆ ತರುವಾಗ ಪುನಃ ಮೂಲಭಾಷೆಯ ಕರ್ತೃ-ಕರ್ಮ-ಕ್ರಿಯೆಯ ಕ್ರಮಕ್ಕೆ ತರಬೇಕಾಗುತ್ತದೆ.

ನಂತರದ್ದು ಲಯದ ಪ್ರಶ್ನೆ. 'ಕಹ್ಞಾಂ ಖೋ ಗಯೇ ವೋ ನಾಪಾಕ್ ಜುದಾಯಿಪಲ್' ಎಂಬುದನ್ನು 'ಎಲ್ಲಿ ಕಳೆದು ಹೋದವು ಆ ಮಲಿನ ವಿದಾಯದ ಗಳಿಗೆಗಳು' ಎಂದು ಕನ್ನಡಿಸಿದಾಗ ಅದೇಕೋ ಶುಷ್ಕ ಅನುವಾದದಂತೆ ತೋರುತ್ತದೆ. ಇದಕ್ಕೆ ಕಾರಣ ಮೂಲಭಾಷೆಯ ಲಯ. ಅದರಂತೆಯೋ 'ಆಗಾಗ್ಗ ಆಗುವುದ ಅಗಲಿಕೆಯ ಅರಿವು ಮತ್ತದರ ಭಯವು' ಎಂಬ ಸಹಜಸುಂದರವಾದ ಕನ್ನಡ ಸಾಲಿನ ಲಯವನ್ನು ಹಿಂದಿಗೆ ತರುತ್ತೀರಾದರೂ ಹೇಗೆ? ಪದದ, ಅರ್ಥದ ಅನುವಾದವೇನೋ ಸಾಧ್ಯವಾಗುವುದು ಹೇಗೋ ಆದರೆ ಲಯ? ಇದು ಅನುವಾದಕನ ಪ್ರತಿಭೆಯನ್ನು ಅವಲಂಬಿಸಿದ ಮಾತು. ಹಾಗಾಗಿ ಉತ್ತಮ ಅನುವಾದವು ಮೂಲಕೃತಿಯಂತೆಯೇ

ಸೃಜನಶೀಲ ಸೃಷ್ಟಿಯೆಂದೆನಿಸಿಕೊಳ್ಳುವುದು. ಒಂದೇ ವ್ಯತ್ಯಾಸವೆಂದರೆ ಅದು ಸೃಷ್ಟಿ ಇದು ಪ್ರತಿಸೃಷ್ಟಿ ಅಥವಾ ಮರುಸೃಷ್ಟಿ.

ಪದ, ವಾಕ್ಯ, ಲಯಗಳ ನಂತರ ಉಳಿಯುವುದು ಅರ್ಥದ ಸಮಸ್ಯೆ. ಒಂದೇ ಪದಕ್ಕಿರುವ ಲೌಕಿಕ ಅರ್ಥ ಮತ್ತು ಅವ್ಯಕ್ತವಾದ (ಅನೂಹ್ಯವೂ ಆದ) ಅಲೌಕಿಕಧ್ವನಿ. ಉರ್ದುವಿನಲ್ಲಿ ಆಯಿನಾ ಪದವನ್ನು ಕೆಲವೆಡೆ ಕನ್ನಡಿ ಎಂಬ ಅದರ ಶಬ್ದಶಃ ಅರ್ಥದಲ್ಲಿಯೇ ಬಳಸಿದ್ದರೂ ಅದು ದೇವರು, ಸಮಾಜ, ಪ್ರಿಯೆ ಎಂಬರ್ಥಗಳನ್ನು ಧ್ವನಿಸುತ್ತದೆ. 'ಏಸು' ಎಂಬ ಪದವು 'ಎಷ್ಟು' ಎಂಬ ತನ್ನ ಶಬ್ದಶಃ ಅರ್ಥದ ಹೊರತಾಗಿ 'ಪ್ರಭುಯೇಸು' ಎಂಬ ಅಲೌಕಿಕ ಅರ್ಥವಾಗಿ ಧ್ವನಿಸುತ್ತದೆ. ಅನುವಾದಿಸುವಾಗ ಈ ಕಥಿತ ಅರ್ಥ ಮತ್ತು ಗರ್ಭೀಕೃತ ಅರ್ಥಗಳನ್ನು ಹೇಗೆ ತರುವುದೆಂಬುದು ನಿಜವಾದ ಸವಾಲು. ಗಾಲಿಬ್‌ರ ಒಂದು ಸಾಲು ಹೀಗೆ -

ನನ್ನ ಕಾಲುಗಳೀಗ ಬಲಹೀನವಾಗಿವೆ ಗಾಲಿಬ್

ಎನಿತು ಬಯಸಿದಾಗಲೂ ನನ್ನವಳಾಗಲಿಲ್ಲ ಅವಳು ಇಲ್ಲಿ 'ಕಾಲುಗಳು'

ಎಂಬ ಪದವು ತನ್ನ ವಾಚ್ಯಾರ್ಥವನ್ನು ಬಿಟ್ಟು ಹೃದಯ, ನಿರೀಕ್ಷೆ, ಭರವಸೆ ಎಂಬ ಅರ್ಥಗಳನ್ನು ಧ್ವನಿಸುತ್ತಿದೆ ಎಂದು ಅನಿಸುವುದಿಲ್ಲವೆ?

ಪದ, ವಾಕ್ಯ, ಲಯ ಮತ್ತು ಅರ್ಥಗಳನ್ನೊಳಗೊಂಡ ಈ ಭಾಷಿಕ ಸಮಸ್ಯೆಯನ್ನು ಮೀರಿದ್ದು ಸಾಂಸ್ಕೃತಿಕ ಸಮಸ್ಯೆ. ಪ್ರತಿ ಸಂಸ್ಕೃತಿಯೂ ಊಟ-ಉಡುಗೆ - ವ್ಯವಹಾರಗಳ ನೆಲೆಯಿಂದ ತನಗೇ ವಿಶಿಷ್ಟವಾದ ಹಲವು ಲಕ್ಷಣಗಳನ್ನು ಪರಂಪರೆಯ ಪ್ರಭಾವ ಮತ್ತು ಕಾಲಕಾಲದ ಬಹುವಿಧದ ಅನುಸಂಧಾನಗಳ ಫಲವಾಗಿ ಪಡೆದುಕೊಂಡಿರುತ್ತದೆ. ಈ ಸಾಂಸ್ಕೃತಿಕ ಅನನ್ಯತೆಯ ಪ್ರಭಾವವು ಅಲ್ಲಿನ ವ್ಯವಹಾರದ ಭಾಷೆಯ ಮೇಲೂ ಆಗಿ ಆ ಭಾಷೆಗೊಂದು ಪ್ರತ್ಯೇಕ ಸಾಂಸ್ಕೃತಿಕ ಮೆರಗು (ಕಳೆ) ಪ್ರಾಪ್ತವಾಗಿರುತ್ತದೆ. ಇದೆಲ್ಲ ಮೂಲ ಭಾಷೆಯಿಂದ ಅನುವಾದದ ಭಾಷೆಗೆ ಬರುವಾಗಲಷ್ಟೇ ಅಲ್ಲದೆ ಮೂಲಭಾಷೆಯಿಂದ ಮೂಲಕ ಭಾಷೆಯ ಮುಖಾಂತರ ಹಾದು ಅನುವಾದದ ಭಾಷೆಯನ್ನು ತಲುಪುವಾಗಲೂ ಈ ಸಮಸ್ಯೆ ಎದುರಾಗುವುದು. ಮೂಲಕ ಭಾಷೆಯ ಮುಖಾಂತರ ಹಾದು ಬರುವಾಗಲಂತೂ ಮೂರು ಮೂರು ಸಂಸ್ಕೃತಿಯ ಭಿನ್ನ ಪರಿಸರಗಳನ್ನು ಸಾಹಿತ್ಯದ ಭಾವ ಮತ್ತು ಸೌಂದರ್ಯಗಳಿಗೆ ಯಾವುದೇ ತೆರನ ಧಕ್ಕೆ ಬರದಂತೆ ದಾಟಿಸಿಕೊಂಡು ಬರುವುದು ಸವಾಲೇ ಸರಿ. ನೋಡುವುದಕ್ಕೆ ಮುತ್ತಿನಂತೆ ಕಂಡು ಕಂಗೊಳಿಸಿ ಕೈ ಬೀಸಿ ಕರೆದರೂ ಕೂಡ, ಮುಟ್ಟಿದ ತಕ್ಷಣ ಒಂದೇ ಸ್ಪರ್ಶಕ್ಕೆ ಒಡೆದು ಹೋಗುವ ಇಬ್ಬನಿಯಂತೆ ಭಾಷೆ. ಮೂಲ ಭಾಷೆಯಲ್ಲಿ ಓದುವುದು ಇಬ್ಬನಿಯನ್ನು ನೋಡಿ ಸಂಭ್ರಮಿಸುವ ಅನುಭವವಾದರೆ; ಅನುವಾದಕ್ಕಿಳಿಯುವುದು ಅದನ್ನು ಒಡೆಯಗೊಡದಂತೆ ಮುಟ್ಟುವ ಕಲೆಯಾಗಿದೆ. ಹೀಗೆ ಭಾಷೆ ಮತ್ತು ಭಾವ ಎರಡನ್ನು ಅದರ ಅಷ್ಟೂ ಸಾಂಸ್ಕೃತಿಕ ಸತ್ವಗಳೊಂದಿಗೆ ಅನುವಾದಿಸಬೇಕಾಗುತ್ತದೆ. ಇದನ್ನು ಒಂದು ಸಣ್ಣ ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದಾದರೆ 'ಸಾಕಿ' ಎಂಬುದು ಉರ್ದು ಭಾಷೆಯ ಒಂದು ವಿಶಿಷ್ಟಪದ. ಮಧುಪಾತ್ರೆಗೆ

ಮಧುವನ್ನು ಸುರಿಯುವ ವ್ಯಕ್ತಿಗೆ 'ಸಾಕಿ' ಎನ್ನುವರು. ಹೀಗೆ ಒಂದು ಸಂಸ್ಕೃತಿಯು ಭಾಷೆಯ ಮೂಲಕ ಇಂಥ ವಿಶಿಷ್ಟ ಪದಗಳ ರೂಪದಲ್ಲಿ ಅಭಿವ್ಯಕ್ತಿಸಲ್ಪಟ್ಟಿರುತ್ತದೆ. 'ಸಾಕಿ'ಯನ್ನು ಕನ್ನಡದಲ್ಲಿ ಏನೆನ್ನುವುದು? - ಸಖಿ? ಪ್ರಿಯೆ? ದೇವತೆ? ಸೇವಕಿ? ಅಭಿಸಾರಿಕೆ?

ಕನ್ನಡದ ಗಜಲ್‌ಗಳ ಇತಿಹಾಸ ನಾಲ್ಕೇ ಸಂಕಲನಗಳಷ್ಟು ಚಿಕ್ಕದಿದೆ ಹಾಗಾಗಿ ಉರ್ದು - ತೆಲುಗು ಹಿಂದಿಗಳಿಂದ ಅತ್ಯುತ್ತಮ ಗಜಲ್‌ಗಳ ಛಂದೋಬದ್ಧ ಅನುವಾದ ಕಾರ್ಯ ಆಗುವುದಾದರೆ, ಅಭ್ಯಾಸಿಗಳಿಗೆ ಪರಾಮರ್ಶಿಸಲು ಹೆಚ್ಚು ಕೃತಿಗಳನ್ನು ಉಪಲಬ್ಧಗೊಳಿಸಿದಂಥ ಉಪಯುಕ್ತ ಕಾರ್ಯ ಮಾಡಿದಂತಾಗುತ್ತದೆ ಮತ್ತು ಅದರಿಂದ ಸಧ್ಯದ ಕನ್ನಡ ಗಜಲಿಗೆ ಹೊಸ ರೂಪ, ವೈವಿಧ್ಯ ಪ್ರಾಪ್ತಿಯಾಗಬಹುದಾಗಿದೆ.

ಚಿದಾನಂದ ಸಾಲಿ, ಸಿರವಾರ, 584129, ರಾಯಚೂರು (ಜ)

ಜಪಾನಿ ರಂಗಭೂಮಿ ಹಾಗೂ ನೋಹ್ ನಾಟಕಗಳು(ವಿಮರ್ಶೆ)

ಡಾ. ಬಸವರಾಜ ಸಬರದ

ಪ್ರಾಸ್ತಾವಿಕ:

''ರಂಗಭೂಮಿ'' ಪದದಲ್ಲಿ ಎರಡು ಅರ್ಥಗಳಿವೆ. ಒಂದು ಬಣ್ಣಕ್ಕೆ ಸಂಬಂಧಿಸಿದ್ದಾದರೆ ಮತ್ತೊಂದು ಮೂಲ ನೆಲ ಅಥವಾ ನೆಲೆಗೆ ಸಂಬಂಧಿಸಿದ್ದಾಗಿದೆ. ಬಣ್ಣವೆಂಬುದು ರಂಗದಲ್ಲಿ ಕಲಾವಿದರು ಬಳಸುವ ಬಣ್ಣ ಮಾತ್ರವಾಗಿರದೆ ಅದು ಅವರವರ ಸಾಂಸ್ಕೃತಿಕ ಬೆಳಕೂ ಆಗಿದೆ. ಭೂಮಿಯೆಂಬುದು ಸ್ಟೇಜ್ ಮಾತ್ರವಾಗಿರದೆ, ಅದು ಜನಸಮುದಾಯದ ತಳಪಾಯವೂ ಆಗಿದೆ. ಹೀಗಾಗಿ ರಂಗಭೂಮಿಯ ಅರ್ಥವ್ಯಾಪ್ತಿ ವಿಸ್ತಾರಗೊಳ್ಳುತ್ತ ಹೋಗುತ್ತದೆ. ರಂಗಭೂಮಿ ಬಹುಮುಖಿಯಾಗಿರುವಂತೆ, ಬಹುಪ್ರದೇಶಗಳ ವ್ಯಾಪ್ತಿಯನ್ನು ಹೊಂದಿದೆ. ಜಗತ್ತಿನ ವಿವಿಧ ದೇಶಗಳಲ್ಲಿ, ಆಯಾ ದೇಶಗಳ ಸಾಂಸ್ಕೃತಿಕ ಮುಖವಾಣಿಯಾಗಿ ರಂಗಭೂಮಿ ಕಾರ್ಯನಿರ್ವಹಿಸುತ್ತ ಬಂದಿದೆ.

ರಂಗಭೂಮಿ ಕನ್ನಡಿಯಂತೆ ಪಾರದರ್ಶಕವಾದುದಾಗಿದೆ. ಆಯಾ ದೇಶಗಳಲ್ಲಿ ಕಾಲಕಾಲಕ್ಕೆ ನಡೆದ ಘಟನಾವಳಿಗಳು ರಂಗದ ಮೇಲೆ ಬರುತ್ತವೆ. ಹೀಗಾಗಿ ಪ್ರತಿಯೊಂದು ದೇಶದ ರಂಗಭೂಮಿಯೂ ಚರಿತ್ರೆಯನ್ನು ಹೇಳುತ್ತಲೇ ವರ್ತಮಾನವನ್ನು ಕಟ್ಟಿಕೊಳ್ಳುತ್ತದೆ. ವರ್ತಮಾನವನ್ನು ವಿಡಂಬಿಸುತ್ತಲೇ ಭವಿಷತ್ತನ್ನು ನಿರ್ಮಿಸಿಕೊಳ್ಳುತ್ತದೆ. ಹೀಗೆ ಪರಂಪರೆಯನ್ನು ಕಟ್ಟಿಕೊಳ್ಳುವ, ಪಾರದರ್ಶಿಕತೆಯನ್ನು ಪ್ರಕಟಿಸುವ, ಅದನ್ನು ತಿದ್ದಿಕೊಳ್ಳುವ, ಭವಿಷತ್ತಿನ ಬೆಳಕನ್ನು ರೂಪಿಸಿಕೊಳ್ಳುವ ಕ್ರಿಯೆಗಳಲ್ಲಿ ರಂಗಭೂಮಿ ಹಾಗೂ ರಂಗ ಕಲಾವಿದರು ನಿರತರಾಗಿರುತ್ತಾರೆ. ಹೀಗಾಗಿ ರಂಗಭೂಮಿಯ,ಉದ್ದೇಶ ಮನರಂಜನೆ ನೀಡುವುದರ ಜತೆಗೆ ಪರಂಪರೆಯ

ತಿಳುವಳಿಕೆಯೂ ಆಗಿದೆ, ಸಾಂಸ್ಕೃತಿಕ ಹುಡುಕಾಟವೂ ಆಗಿದೆ. ಆ ಕಾರಣದಿಂದಲೇ ಕಾಲ-ದೇಶ-ಸಂಸ್ಕೃತಿಗಳನ್ನು ಮೀರುವ ಕ್ರಿಯೆ ರಂಗಭೂಮಿಗೆ ಸಾಧ್ಯವಾಗಿದೆ. ಭೂತ-ವರ್ತಮಾನ, ದೇಶ-ಭಾಷೆ, ಪಾತ್ರ-ಪಾತ್ರಧಾರಿಯಂತಹ ಸಹಯೋಗ-ಸಂಯೋಜನೆಯ ಜತೆಜತೆಯಲ್ಲಿಯೇ ಸಂಘರ್ಷ-ಚರ್ಚೆಯನ್ನು ಹುಟ್ಟು ಹಾಕುವ ಶಕ್ತಿ-ಸಾಧ್ಯತೆಗಳನ್ನು ರಂಗಭೂಮಿ ಹೊಂದಿದೆ.

ರಂಗಭೂಮಿಯ ಮತ್ತೊಂದು ವೈಶಿಷ್ಟ್ಯವೆಂದರೆ, ಅದು ಅನೇಕ ಕಲೆಗಳ ಸಂಗಮವಾಗಿದೆ. ದೃಶ್ಯ ಮತ್ತು ಶ್ರಾವ್ಯ ಎರಡೂ ರಂಗಭೂಮಿಯಲ್ಲಿ ಕೂಡಿಕೊಂಡಿರುವುದರಿಂದ ಇದು ಸಮಾಜದ ಎಲ್ಲ ರೀತಿಯ ಜನರ ಮುಕ್ತ ಶಿಕ್ಷಣ ಕೇಂದ್ರವಾಗಿದೆ. ಮಹತ್ವದ ಸಾಂಸ್ಕೃತಿಕ ಸಂಸ್ಥೆಯೂ ಆಗಿದೆ. ಹೀಗಾಗಿ ಇದಕ್ಕೊಂದು ಜಾಗತಿಕ ಪರಂಪರೆಯಿದೆ.

ಜಪಾನಿ ರಂಗಭೂಮಿ:

ಜಗತ್ತಿನ ವಿವಿಧ ದೇಶಗಳಲ್ಲಿ ವಿವಿಧ ರೀತಿಯ ರಂಗಭೂಮಿಗೆ ತನ್ನದೇ ಆದ ವಿಶಿಷ್ಟತೆ ಇದೆ. ಭೌಗೋಲಿಕವಾಗಿ ಹಾಗೂ ಬೌದ್ಧಿಕವಾಗಿ ಹಿಂದಿನಿಂದಲೂ ಭಾರತದೊಡನೆ ಸೌಹಾರ್ದಯುತವಾದ ಸಂಬಂಧವನ್ನು ಹೊಂದಿರುವ ಭಾರತ-ಜಪಾನ ನಡುವಿನ ಸ್ನೇಹ ಸೇತುವೆಗೆ ದೀರ್ಘಕಾಲದ ಪರಂಪರೆಯಿದೆ. ಭಾರತದ ಬೌದ್ಧ ಧರ್ಮ ಹಾಗೂ ರಾಮಾಯಣದ ಸಂಸ್ಕೃತಿ ವಿಶೇಷಗಳು ಹಿಂದೆಯೇ ಜಪಾನದಲ್ಲಿ ಪ್ರಸಾರಗೊಂಡದ್ದನ್ನು ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಆದರೆ ಇಪ್ಪತ್ತನೇ ಶತಮಾನದ ಸಂದರ್ಭದಲ್ಲಿ ಜಪಾನಿನಂತಹ ಪೂರ್ವದ ದೇಶಗಳ ಸಂಬಂಧ ದೂರವಾಗಿ ಬಿಟ್ಟಿತು. ರಂಗಭೂಮಿಗೆ ಈ ಮಾತನ್ನು ಅನ್ವಯಿಸಿ ಹೇಳುವುದಾದರೆ, ನಮಗಿಂದು ಷೇಕಸ್ಪಿಯರ್‌ನ ನಾಟಕಗಳು ಹತ್ತಿರವಾಗಿರುವಷ್ಟು, ಜಪಾನಿನ ನೋಹ್-ಕಬುಕಿ ನಾಟಕಗಳಲ್ಲವೆಂಬುದನ್ನು ತಿಳಿದುಕೊಂಡಾಗ ಇತ್ತೀಚಿನ ಬೆಳವಣಿಗೆಯ ಬಗೆಗೆ ಗೊತ್ತಾಗುತ್ತದೆ.

ವಸಾಹಾತುಶಾಹಿಯ ಇತಿಹಾಸದಿಂದಾಗಿ ನಾವಿಂದು ಪ್ರತಿಯೊಂದನ್ನೂ ಪಶ್ಚಿಮದ ಕಣ್ಣುಗಳಿಂದಲೇ ನೋಡುತ್ತಿದ್ದೇವೆ. ಹೀಗಾಗಿ ಪಶ್ಚಿಮಕ್ಕೆ ದೂರವಾಗಿರುವ ಚೀನಾ-ಜಪಾನ್‌ದಂತಹ ದೇಶಗಳು ನಮಗೂ ದೂರವಾಗಿಬಿಟ್ಟಿವೆ.

ಕ್ರಿ.ಪೂ.250ರ ಸಂದರ್ಭದಲ್ಲಿ ಜಪಾನಿಗೆ ಮಂಗೋಲಿಯನ್ ಬುಡಕಟ್ಟಿನ ಜನರ ಆಗಮನವಾಯಿತು. ಅವರೇ ಜಪಾನಿನ ಗಣ್ಯವರ್ಗವಾಗಿ ಸ್ಥಾಪನೆಗೊಂಡರು. ಕ್ರಿ.ಶ 604ರಲ್ಲಿ ಜಪಾನಿನ ಸಾಮ್ರಾಜ್ಯಯುಗ ಆರಂಭವಾಯಿತು, ಹಾಗೂ ಸಂವಿಧಾನದ ರಚನೆಯಾಯಿತು. ಕ್ರಿ.ಶ.740ರಲ್ಲಿ ಬೌದ್ಧಧರ್ಮಕ್ಕೆ ಜಪಾನಿನ ಮಾನ್ಯತೆ ದೊರಕಿತು. ಆ ಸಂದರ್ಭದಲ್ಲಿ ಭಾರೀ ಬುದ್ಧ ಪ್ರತಿಮೆಗಳ ಸ್ಥಾಪನೆಯಾಯಿತು. ಕ್ರಿ.ಶ. 8ನೇ ಶತಮಾನದ ಹೊತ್ತಿಗೆ ಜಪಾನಿನ ಕಾವ್ಯ-ಲಿಪಿ-ಕಲೆ ಅರಳಲಾರಂಭಿಸಿದವು. ಕ್ರಿ.ಶ. 1020ರಲ್ಲಿ ಜಪಾನಿನ ಪ್ರಾಚೀನ ಗದ್ಯಸಾಹಿತ್ಯ ರಚನೆಯಾಯಿತು. ಕ್ರಿ.ಶ. 1867ರಲ್ಲಿ ಜಪಾನಿನಲ್ಲಿ ಪಾಳೆಗಾರ ಪದ್ಧತಿ ಮುಕ್ತಾಯಗೊಂಡು ಕ್ರಿ. ಶ.1920ರ ಸಂದರ್ಭದಲ್ಲಿ ಪಾಶ್ಚಾತ್ಯ ಪ್ರಭಾವದಿಂದ ಆಧುನಿಕ, ಮಾತಿನ ರಂಗಭೂಮಿ ಆರಂಭವಾಯಿತು. ಅಂದಿನಿಂದ ಇಂದಿನವರೆಗೆ ಜಪಾನಿ ರಂಗಭೂಮಿಯಲ್ಲಿ ಅನೇಕ ಬೆಳವಣಿಗೆಗಳಾಗಿವೆ.

ಕ್ರಿ. ಶ. ಹದಿಮೂರನೇ ಶತಮಾನದಿಂದ ಹದಿನೆಂಟನೇ ಶತಮಾನದವರೆಗೆ ಜಪಾನಿ ರಂಗಭೂಮಿ ಅತ್ಯಂತ ಕ್ರಿಯಾಶೀಲವಾಗಿತ್ತು. ನೋಹ್, ಬುನ್ರಕು ಮತ್ತು ಕಬುಕಿ ಈ ಮೂರು ರಂಗ ಪ್ರಕಾರಗಳು ಇದೇ ಅವಧಿಯಲ್ಲಿ ಹುಟ್ಟಿಕೊಂಡವುಗಳಾಗಿವೆ. ಪ್ರಪಂಚದ ಯಾವುದೇ ರಂಗಭೂಮಿಯೊಂದಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ರಂಗ ಪ್ರಕಾರಗಳಿವು.

ಜಪಾನಿನಲ್ಲಿ ಹನ್ನೆರಡನೇ ಶತಮಾನದಲ್ಲಿ ಝೆನ್ ಬೌದ್ಧಪಂಥ ರೂಪಗೊಂಡಿತು. ಮೂಲತಃ ಬೌದ್ಧಿಕ ವಿರೋಧಿ ಗುಣವುಳ್ಳ ಈ ಪಂಥವು, ಶಾಸ್ತ್ರ-ಸಂಹಿತೆಗಳಲ್ಲಿ ಸಂಗ್ರಹವಾಗಿದ್ದ ಜ್ಞಾನವನ್ನು ನಿರಾಕರಿಸಿತು. ಇಂತಹ ಜ್ಞಾನದ ಪರಿಧಿಯನ್ನು ಮೀರಿದಾಗಲೇ ಸತ್ಯದ ಅರಿವೂ ಮೂಡುತ್ತದೆಂದು ನಂಬಿದ ಝೆನ್ ಸಿದ್ಧಾಂತವು, ಮುಂದೆ ಆ ಕಾಲದ ಸಮುರಾಯ್ ವರ್ಗಕ್ಕೆ ಅತ್ಯಂತ ಅಗತ್ಯವಾದದ್ದೆನಿಸಿತು.

''ಹೀಗೆ ಝೆನ್ ದರ್ಶನ ಮತ್ತು ಸಮುರಾಯ್ ಅಭಿರುಚಿ ಇವೆರಡೂ ಒಟ್ಟುಗೂಡಿ ಆ ಕಾಲದ ಹಲವಾರು ಕಲಾ ಪ್ರಕಾರಗಳ ಭೂಮಿಕೆ ಸಿದ್ಧವಾಗಿದೆ. ಪ್ರಜ್ಞಾಪೂರ್ವಕವಾಗಿ ಅಲಂಕಾರಗಳನ್ನು ವರ್ಜಿಸಿದ ಉದ್ಯಾನವನಗಳಲ್ಲಿ, ಮಾತಿಗಿಂತ ಮೌನವೇ ಹೆಚ್ಚು ಪ್ರಧಾನವಾಗಿರುವ ಚಹಾಪಾನದ ಆಚರಣೆಯಲ್ಲಿ, ಮನೋಭೌತಿಕ ಜಾಗೃತಿಯೇ ಕೇಂದ್ರವಾಗಿರುವ, ಮುಂದೆ ಜೂಡೋ ಎಂದು ಹೆಸರಾದ ಜುಜುತ್ಸು ಸಮರಕಲೆಯಲ್ಲಿ ಇಂತಹ ಸಹಯೋಗ ಕಾಣಸಿಗುತ್ತದೆ. ರಂಗಭೂಮಿಗೆ ಸಂಬಂಧಿಸಿದಂತೆ ಈ ವಿಶಿಷ್ಟ ಸಾಂಸ್ಕೃತಿಕ ಸಂದರ್ಭದ ಫಲ-ನೋಹ್ ಎಂಬ ರಂಗ ಪ್ರಕಾರ'' ಎಂಬಂತಹ ಮಾತುಗಳನ್ನಿಲ್ಲಿ ಗಮನಿಸಬಹುದಾಗಿದೆ. (ನೋಡಿ: ಕೆ.ವಿ.ಅಕ್ಷರ- ರಂಗಪ್ರಪಂಚ, ಪುಟ:201)

ನೋಹ್ ರಂಗ ಪ್ರಕಾರ:

ಜಪಾನಿ ರಂಗಭೂಮಿಯ ಅತ್ಯಂತ ಮಹತ್ವದ ರಂಗ ಪ್ರಕಾರವೆಂದರೆ ನೋಹ್ ಆಗಿದೆ. ಝೆನ್ ತತ್ವಗಳು ಅರಗಿಸಿಕೊಂಡು ಝಿಯಾಮಿಯು ಎಂಬಾತ ನೋಹ್ ಎಂಬ ಈ ರಂಗ ಪ್ರಕಾರವನ್ನು ಒಂದು ಶಾಸ್ತ್ರವಾಗಿ ರೂಪಿಸಿದ. ನಂತರ ಇದನ್ನೇ ಎಲ್ಲ ನೋಹ್ ಶಾಖೆಗಳೂ ಅನುಸರಿಸಿದವು. ನೋಹ್ ಎಂದರೆ ಜಪಾನಿ ಭಾಷೆಯಲ್ಲಿ ''ಕೌಶಲ್ಯಪೂರ್ಣ ಸಾಧನೆ'' ಎಂದರ್ಥವಾಗುತ್ತದೆ. ಅತ್ಯಂತ ಸೂಕ್ಷ್ಮವಾದ ಶೈಲೀಕರಣವನ್ನು ಸಾಧಿಸಿಕೊಂಡಿರುವ ರಂಗಪ್ರಕಾರ ಇದಾಗಿದೆ. ಪೂರ್ವದೇಶಗಳ ರಂಗ ಸಂಪ್ರದಾಯಗಳಲ್ಲಿ ಶೈಲೀಕರಣವು ಅಲಂಕಾರದ ಕಡೆವಾಲಿದ್ದರೆ, ನೋಹ್‌ದಲ್ಲಿ ಶೈಲೀಕರಣವು ಸರಳತೆಯ ಉತ್ಪ್ರೇಕ್ಷೆಯಾಗಿದೆ.

ಈ ಸರಳತೆಯ ರಂಗ ಪ್ರಕಾರದ ಮುಖ್ಯ ಉದ್ದೇಶವೆಂದರೆ ಜಪಾನಿನ ಅಂದಿನ ಸಾಮಾಜಿಕ-ಧಾರ್ಮಿಕ-ಸಂದರ್ಭ. ಹತ್ತನೆಯ ಶತಮಾನದ ಹೊತ್ತಿಗೆ ಜಪಾನಿನಲ್ಲಿ ಬೌದ್ಧ ಮತ್ತು ಶಿಂಟೊ ಧರ್ಮದ ಪಂಗಡಗಳು ತಮ್ಮ ಪ್ರಚಾರಕ್ಕಾಗಿ ಜನಪ್ರಿಯ ನೃತ್ಯ ಪ್ರಕಾರಗಳನ್ನು ಬಳಸಲು ಆರಂಭಿಸಿದ್ದವು. ಹನ್ನೆರಡು-ಹದಿಮೂರನೇ ಶತಮಾನದ ಹೊತ್ತಿಗೆ ಈ ನೋಹ್ ಪ್ರದರ್ಶನಗಳು ದೇವಾಲಯಗಳ ಆಶ್ರಯದ ವೃತ್ತಿ ತಂಡಗಳ ಮೂಲಕ ಇನ್ನಷ್ಟು ಪ್ರಸಿದ್ಧಿ ಪಡೆದವು. ''ಅಂಥ

ಪ್ರಸಿದ್ಧ ತಂಡವೊಂದರ ಮುಖ್ಯ ನಟ-ಕನ್ಅಮಿ. ಆತನ ಪ್ರದರ್ಶನವನ್ನು ನೋಡಿ ಮೆಚ್ಚಿದ ಆ ಕಾಲದ ಶೋಗುನ್, ಆತನ ಮಗ ಝಿಯಾಮಿ ಮೊಟೊಕಿಯೊ (1363-1444)ನನ್ನು ತನ್ನ ಆಸ್ಥಾನದಲ್ಲಿಟ್ಟುಕೊಂಡು ಅಲ್ಲಿ, ಸಮುರಾಯ್ ಅಭಿರುಚಿ ನಡುವೆ ಝೆನ್ ತತ್ವಗಳನ್ನು ಅರಗಿಸಿಕೊಂಡು ಝಿಯಾಮಿಯು ನೋಹ್ ಪ್ರಕಾರವನ್ನು ರೂಪಿಸಿದ'' (ನೋಡಿ: ಕೆ.ವಿ.ಅಕ್ಷರ, ರಂಗಪ್ರಪಂಚ, ಪುಟ:201) ಎಂಬಂತಹ ಮಾತುಗಳನ್ನಿಲ್ಲಿ ಉಲ್ಲೇಖಿಸಬಹುದಾಗಿದೆ.

ಹದಿನೇಳನೇ ಶತಮಾನದ ಹೊತ್ತಿಗೆ ತನ್ನ ಅಂತಿಮ ರೂಪವನ್ನು ಪಡೆದ ನೋಹ್ ವಿನ್ಯಾಸದ ವಿಶಿಷ್ಟತೆ ಗಮನಿಸುವಂತಹದ್ದಾಗಿದೆ. ನೋಹ್ ರಂಗಸ್ಥಳದ ಮುಖ್ಯ ಭಾಗವೆಂದರೆ ಹದಿನೆಂಟು ಅಡಿ ಉದ್ದಗಲದ ಒಂದು ಚೌಕ ವೇದಿಕೆಯಾಗಿದೆ. ಆ ಚೌಕದ ಒಂದು ಕಡೆ ಮೇಳವು ಕುಳಿತುಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿರುತ್ತದೆ. ಹಿಂಬದಿಯ ಪಾರ್ಶ್ವದಲ್ಲಿ ವಾದ್ಯಕಾರರು ಕುಳಿತಿರುತ್ತಾರೆ. ಹಿಂದೆ ಗ್ರೀನ್ ರೂಮ್ ಇರುತ್ತದೆ. ಕಟ್ಟೆಯಲ್ಲಿ ನಟರು ಆಗಮಿಸುತ್ತಾರೆ-ನಿರ್ಗಮಿಸುತ್ತಾರೆ. ಫೇದಿಕೆಯ ಮೇಲೆ ನಾಟಕದ ಮುಖ್ಯ ಕ್ರಿಯೆಗಳು ನಡೆಯುತ್ತವೆ. ವೇದಿಕೆಯ ಸುತ್ತ ಇರುವ ಕಂಬಗಳು ಮುಖವಾಡ ಧರಿಸಿದ ನಟರಿಗೆ, ತಮ್ಮ ಸ್ಥಳ ಗುರುತಿಸಿಕೊಳ್ಳಲು ಅನುಕೂಲವಾಗುತ್ತವೆ. ಹಿಂಬದಿಯ ಪರದೆಯಲ್ಲಿ ಪೈನ್ ಮರವೊಂದರ ಚಿತ್ರವಿರುತ್ತದೆ. ಅದನ್ನು ಬಿಟ್ಟರೆ ಇಡೀ ರಂಗಸ್ಥಳದಲ್ಲಿ ಮರದ ಬಣ್ಣ ಬಿಟ್ಟು ಬೇರೆ ಬಣ್ಣವೇ ಇರುವುದಿಲ್ಲ. ಹೀಗೆ ತುಂಬ ಸರಳವಾಗಿರುವ ನೋಹ್ ರಂಗಭೂಮಿ ಹೆಚ್ಚಿನ ಅಲಂಕಾರಗಳಿಂದ ದೂರವಿರುವುದನ್ನು ಗಮನಿಸಬಹುದಾಗಿದೆ. ಆಂಗಿಕ ಹಾಗೂ ವಾಚಿಕಾದಿ ಅಭಿನಯಗಳಲ್ಲೂ ಈ ರಂಗಭೂಮಿ ಸರಳತೆಯನ್ನು ಸಾಧಿಸಿದೆ. ಪಾತ್ರಗಳು ಹಾರುವ, ನೆಗೆಯುವ, ಕುಣಿದಾಡುವ ನೃತ್ಯಗಳಿರುವುದಿಲ್ಲ.

''ನೋಹ್ ನಟ ಸಾಧಾರಣವಾಗಿ ನೆಲದಿಂದ ತನ್ನ ಕಾಲನ್ನು ಎತ್ತುವುದೇ ಇಲ್ಲ. ಚಲ್ಲಿಸುವಾಗ ಕೂಡಾ ಪಾದವನ್ನು ಜಾರಿಸುತ್ತ ನಡೆಯುತ್ತಾನೆ. ವಾಚಿಕದಲ್ಲೂ ಅಷ್ಟೆ. ಒಂದೊಂದೇ ಸ್ವರವನ್ನು ಎಳೆದೆಳೆದು, ಪದಗಳನ್ನು ಉತ್ಪ್ರೇಕ್ಷಿಸುತ್ತ ಧಾರ್ಮಿಕ ಪಠಣದ ಹಾಗೆ ಮಾತುಗಾರಿಕೆಯನ್ನು ನಿರ್ವಹಿಸುತ್ತಾನೆ.

ಈ ಇಡೀ ಅಭಿನಯಕ್ರಮದ ಹಿಂದೆ ನಿಖರವಾದ ಶಾಸ್ತ್ರವಿದೆ. ಪ್ರತಿಯೊಂದು ಸಣ್ಣ ಚಲನೆಯೂ ಕೂಡಾ ಇಲ್ಲಿ ಎಚ್ಚರಿಕೆಯಿಂದ ಯೋಜಿಸಲ್ಪಟ್ಟ ಒಂದು ರೂಪಕವೆಂಬಂತೆ ಕಾಣಿಸಿಕೊಳ್ಳುತ್ತದೆಂಬ ಕೆ.ವಿ.ಅಕ್ಷರ ಅವರ ಈ ವಿವರಣೆ, ನೋಹ್ ರಂಗಭೂಮಿಯ ತಿಳುವಳಿಕೆಗೆ ತುಂಬಾ ಉಪಯುಕ್ತವಾಗಿದೆ.

ಬಹಳಷ್ಟು ನೋಹ್ ನಾಟಕಗಳು ಬೌದ್ಧ ಪುರಾಣಗಳಿಂದಲೇ ತಮ್ಮ ಕಥಾವಸ್ತುವನ್ನಾರಿಸಿ ಕೊಂಡಿವೆ. ಈ ಬದುಕು ನೀರಮೇಲನ ಗುಳ್ಳೆಯಂತೆ ನಶ್ವರವಾದದ್ದೆಂಬ ಸತ್ಯವನ್ನು ನೋಹ್ ನಾಟಕಗಳು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸುತ್ತವೆ. ಸಾತ್ವಿಕ ಪ್ರಭೆ ಹಾಗೂ ಆಧ್ಯಾತ್ಮದ ಅರಿವು ಈ ರಂಗ ಪ್ರಕಾರದ ಮುಖ್ಯ ನೆಲೆಗಳಾಗಿವೆ.

ಹದಿನಾರನೇ ಶತಮಾನದ ಅಂತ್ಯದಲ್ಲಿ ಜಪಾನ್ ಶಾಂತಿಯ ಶತಮಾನವೊಂದಕ್ಕೆ ಕಾಲಿಟ್ಟಿತು. ಆ ವೇಳೆಗೆ ಪಾಶ್ಚಾತ್ಯ ವ್ಯಾಪಾರಿಗಳು ಜಪಾನಿಗೆ ಬಂದು ಬಿಟ್ಟಿದ್ದರು. ಧರ್ಮಪ್ರಚಾರಕರು ಮತಾಂತರ ಕಾರ್ಯದಲ್ಲಿ ನಿರತರಾಗಿದ್ದರು. ಆಗ ಜಪಾನಿ ಸರಕಾರ ಇದನ್ನು ವಿರೋಧಿಸಿ, ಮತಪ್ರಚಾರಕರನ್ನು ದೇಶಭ್ರಷ್ಟಗೊಳಿಸಿತು. ಆಗ ಮುಕ್ತತೆಯೆಂಬುದು ಜಪಾನಿಗೆ ಸಾಧ್ಯವಾಯಿತು. ಈ ಸನ್ನಿವೇಶದಿಂದಾಗಿ ರಂಗಕ್ಷೇತ್ರದಲ್ಲೂ ಬದಲಾವಣೆಗಳಾದವು. ಸಮುರಾಯ್ ವರ್ಗದ ಪ್ರಾಬಲ್ಯ ಕುಗ್ಗಿ ಹೋಗಿ ವ್ಯಾಪಾರಿ ಮಾಧ್ಯಮ ವರ್ಗಗಳು ಶ್ರೀಮಂತವಾದವು. ಇದುವರೆಗೆ ಕಟ್ಟುಪಾಡುಗಳಲ್ಲಿದ್ದ ಈ ಮಧ್ಯಮ ವರ್ಗಗಳು ತಮ್ಮ ರಂಜನಾಪೇಕ್ಷೆಯನ್ನು ಒಮ್ಮೆಲೇ ತೆರೆದಿಟ್ಟವು. ಆಗ ಧರ್ಮ-ನೀತಿಯ ಕಟ್ಟುಗಳಿಂದ ಬಿಡಿಸಿಕೊಂಡು ಹೊಸ ರಂಜನೆಗಳು ಹುಟ್ಟಿಕೊಂಡವು. ಇಂಥ ಹೊಸ ಸಂದರ್ಭದ ಫಲವಾಗಿಯೇ ಜಪಾನಿನಲ್ಲಿ ಬುನ್ರಕು ಹಾಗೂ ಕಬುಕಿಯೆಂಬ ಹೊಸ ರಂಗಪ್ರಕಾರಗಳು ಹುಟ್ಟಿಕೊಂಡವು.

ಕಬುಕಿ ರಂಗಪ್ರಕಾರವು ಒಂದು ನಿರ್ದಿಷ್ಟ ರಂಗ ರೂಪವನ್ನು ಸಾಧಿಸಿಕೊಳ್ಳಲಿಲ್ಲ. ಕಾಲ-ಕಾಲಕ್ಕೆ ಅದು ಹೊಸ ಹೊಸ ಪ್ರಭಾವಗಳಿಗೆ ತನ್ನನ್ನು ತೆರೆದುಕೊಳ್ಳುತ್ತ ಸಾಗಿತು. ಕಬುಕಿ ಪ್ರಾರಂಭವಾಗುವ ಮೊದಲು ಗೊಂಬೆಯಾಟಗಳು ಸಾಮಾಜಿಕ ವರ್ಗಗಳನ್ನು ರಂಜಿಸಲು ಎರಡು ದಾರಿಗಳನ್ನು ಕಂಡುಕೊಂಡವು. ಇಲ್ಲಿ ರಂಜನೆ ಮುಖ್ಯವಾಯಿತು. ಮುಂದೆ ಕಬುಕಿ ರಂಗಪ್ರಕಾರವು ಪಾಶ್ಚಾತ್ಯ ರಂಗಭೂಮಿಯಿಂದಲೂ ತನಗೆ ಬೇಕಾದದ್ದನ್ನು ಪಡೆದುಕೊಂಡಿತು. ಕಬುಕಿಯು ಗಣನೀಯ ಪ್ರಮಾಣದ ರಂಗ ಸಜ್ಜಿಕೆಗಳನ್ನು ಬಳಸಿಕೊಂಡಿತು. ಕಬುಕಿಯಲ್ಲಿ ನಟರು ಹಾರಲು, ಕುಣಿಯಲು ಪ್ರಾರಂಭಿಸಿದರು. ವೇಷಭೂಷಣಗಳಲ್ಲೂ ಕಬುಕಿಯು, ನೋಹ್ ರಂಗಪ್ರಕಾರಕ್ಕಿಂತ ಭಿನ್ನವಾಗಿ ಕಾಣಿಸಿಕೊಂಡಿತು. ನೋಹ್‌ದಲ್ಲಿ ಮುಖವಾಡಗಳಿದ್ದರೆ, ಕಬುಕಿಯಲ್ಲಿ ಮುಖವಾಡಗಳಿರುವುದಿಲ್ಲ. ಹೀಗೆ ಜಪಾನಿನ ರಂಗಭೂಮಿಯಲ್ಲಿ ಅನೇಕ ಬದಲಾವಣೆಗಳು ಕಾಣಿಸಿಕೊಂಡವು.

'ನೋಹ್' ರಂಗಪ್ರಕಾರದ ನಂತರ ಬಂದದ್ದು ಬುನ್ರಕು. ಗೊಂಬೆಯಾಟಕ್ಕೇನೇ ಬುನ್ರಕು ಎಂಬ ಹೆಸರು ಬಂತು. ಪ್ರತಿಯೊಂದು ಗೊಂಬೆಯನ್ನು ಮೂರು ಜನ ಚಾಲಕರು ಆಡಿಸುವಂತೆ ಇಲ್ಲಿ ವ್ಯವಸ್ಥೆ ಮಾಡಲಾಗಿರುತ್ತದೆ. ಇದರಿಂದಾಗಿ ಗೊಂಬೆಗಳ ಚಲನೆಗಳ ಜತೆಗೆ ಚಲಿಸುವ ಸೀನರಿಗಳನ್ನೂ ಬಳಸಲಾಗುತ್ತದೆ. ಹೀಗೆ ಬುನ್ರಕು ರಂಗಪ್ರಕಾರದ ನಂತರ ''ಕಬುಕಿ'' ರಂಗಪ್ರಕಾರ ಬೆಳೆದು ನಿಂತಿತು. ಕ್ರಿ.ಶ. 1603ರಲ್ಲಿ ಓಕುನಿ ಎಂಬ ಹೆಂಗಸು ಆರಂಭಿಸಿದ ಸಾರ್ವಜನಿಕ ನೃತ್ಯಗಳನ್ನೇ ಕಬುಕಿಯ ಮೂಲರೂಪಗಳೆಂದು ಗುರುತಿಸಲಾಗಿದೆ.

ಹೀಗೆ ಬೆಳೆದು ನಿಂತ ಜಪಾನಿನ ರಂಗಭೂಮಿಗೂ ಭಾರತೀಯ ರಂಗಭೂಮಿಗೂ ಅನೇಕ ಸಾಮ್ಯತೆ-ಭಿನ್ನತೆಗಳು ಇವೆ. 'ನೋಹ್' ರಂಗಪ್ರಕಾರಕ್ಕೆ ಬೌದ್ಧ ಧರ್ಮದ ಝೆನ್ ಸಿದ್ಧಾಂತ ಮೂಲವಾದರೆ, ಭಾರತೀಯ ರಂಗಭೂಮಿಗೆ ರಾಮಾಯಣ-ಮಹಾಭಾರತಗಳೇ ಮೂಲ ಕಥಾ

ಪ್ರಸಂಗಗಳಾಗಿವೆ. ಕನ್ನಡ ಜನಪದ ರಂಗಭೂಮಿಯ ಅನೇಕ ರಂಗಪ್ರಕಾರಗಳನ್ನು, ಜಪಾನಿ ರಂಗಭೂಮಿಯ ರಂಗಪ್ರಕಾರಗಳೊಂದಿಗೆ ತುಲನೆ ಮಾಡಿ ಅಧ್ಯಯನ ನಡೆಸುವ ಅಗತ್ಯವಿದೆ. ನೋಹ್ ನಾಟಕಗಳಲ್ಲಿ ಬಳಸುವ ಮುಖವಾಡಗಳಿಗೂ, ಯಕ್ಷಗಾನದ ಮುಖವಾಡಗಳಿಗೂ ಇರುವ ಸಾಮ್ಯ-ಭಿನ್ನ ಅಂಶಗಳತ್ತ ಸೂಕ್ಷ್ಮ ಅಧ್ಯಯನ ನಡೆಯಬೇಕಾಗಿದೆ.

ಜಗತ್ತಿನ ಯಾವುದೇ ರಂಗಭೂಮಿಯ ಪ್ರಾಚೀನತೆಯನ್ನು ಗಮನಿಸಿದರೂ, ಪ್ರಾರಂಭದಲ್ಲಿ ಆ ರಂಗಭೂಮಿಗೆ ಧರ್ಮದ ಪ್ರಭಾವ ನೇರವಾಗಿದ್ದುದನ್ನು ಕಾಣಬಹುದಾಗಿದೆ. ಇದಕ್ಕೆ ಜಪಾನಿ ರಂಗಭೂಮಿಯೂ ಹೊರತಾಗಿಲ್ಲ. ಭಾರತೀಯ ರಂಗಭೂಮಿಯಲ್ಲಿ ಕಾಣಿಸುವಷ್ಟು ವೈವಿಧ್ಯಮಯ ಬೆಳವಣಿಗೆಗಳು, ಹೊಸ-ಹೊಸ ಪ್ರಯೋಗಗಳು ಜಪಾನಿ ರಂಗಭೂಮಿಯಲ್ಲಿ ಕಾಣಿಸುವುದಿಲ್ಲ. ಕರ್ನಾಟಕವೊಂದರಲ್ಲೇ ಜನಪದ ರಂಗಭೂಮಿ-ವೃತ್ತಿ ರಂಗಭೂಮಿ-ಹವ್ಯಾಸಿ ರಂಗಭೂಮಿ- ಅರೆವೃತ್ತಿ ರಂಗಭೂಮಿ- ತಿರುಗಾಟದ ರಂಗಭೂಮಿ ಹೀಗೆ ಹತ್ತು ಹಲವು ವಿಧದಲ್ಲಿ ರಂಗಭೂಮಿ ಬೆಳೆದು ನಿಂತಿದೆ. ಪಾಶ್ಚಾತ್ಯದ ಪ್ರಭಾವ ಜಪಾನಿ ರಂಗಭೂಮಿಯ ಮೇಲಾದಂತೆ, ಭಾರತೀಯ ರಂಗಭೂಮಿಯ ಮೇಲೂ ಆಗಿದೆ. ನೋಹ್ ರಂಗಪ್ರಕಾರ ಅನೇಕ ಪ್ರಯೋಗಗಳಲ್ಲಿ ಕಾಣಿಸಿಕೊಂಡದ್ದನ್ನು ತೌಲನಿಕವಾಗಿ ನೋಡಿದಾಗ ಕನ್ನಡದಲ್ಲಿ ಕೃಷ್ಣ ಪಾರಿಜಾತ ಅಸಂಖ್ಯಾತ ಪ್ರಯೋಗಗಳನ್ನು ಕಂಡಿದ್ದನ್ನು ನೆನಪಿಸಿಕೊಳ್ಳಬಹುದಾಗಿದೆ. ರಂಗಭೂಮಿಯ ತೌಲನಿಕ ಅಧ್ಯಯನವೆಂದರೆ ಅದು ಸಂಸ್ಕೃತಿಗಳ ತೌಲನಿಕ ಅಧ್ಯಯನವೇ ಆಗಿದೆ.

ನೋಹ್ ನಾಟಕಗಳು :

ಜಪಾನಿನಲ್ಲಿ ಇನ್ನೂರಕ್ಕೂ ಹೆಚ್ಚು ನೋಹ್ ನಾಟಕಗಳು ಜನಪ್ರಿಯವಾಗಿವೆ. ಕ್ರಿ.ಶ. ಹದಿನೈದನೇ ಶತಮಾನದಲ್ಲಿ ಇಂತಹ ನಾಟಕಗಳ ಪ್ರಯೋಗ ಅಲ್ಲಿ ಕಾಣಿಸಿಕೊಂಡಿತು. ಶಿಂತೋಧರ್ಮದ ದೇವತೆಗಳ ಹಬ್ಬದಲ್ಲಿ ಆಚರಿಸಲ್ಪಡುತ್ತಿದ್ದ, ನಾಟ್ಯ ಸಂಗೀತಗಳಿಂದ ಕೂಡಿದ ಈ ನಾಟಕಗಳು ಪ್ರೇಕ್ಷಕರನ್ನು ಆಕರ್ಷಿಸಿದವು. ಮಾತಿಗಿಂತ ಹಾವಭಾವಕ್ಕೆ ಹಾವಭಾವಕ್ಕಿಂತ ಮೌನಕ್ಕೆ ಪ್ರಾಧಾನ್ಯತೆ ನೀಡುವ ನೋಹ್ ನಾಟಕಗಳು ಜಾಗತಿಕ ರಂಗಭೂಮಿಯಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿವೆ. ಗ್ರೀಕ್ ನಾಟಕಗಳಂತೆ, ನೋಹ್ ನಾಟಕಗಳಲ್ಲಿಯೂ ಮೊಗವಾಡಗಳನ್ನು ಪಾತ್ರಧಾರಿಗಳು ಕಟ್ಟಿಕೊಂಡಿರುತ್ತಾರೆ. ಗಾಯನದ್ದೇ ಇಲ್ಲಿ ಮೇಲುಗೈ ಆಗಿದೆ.

ಇಂತಹ ನೋಹ್ ನಾಟಕಗಳನ್ನು ಕನ್ನಡಕ್ಕೆ ಮೊಟ್ಟಮೊದಲು ಪರಿಚಯಿಸಿದವರು ಗೋವಿಂದ ಪೈಗಳು. ಅವರು ಕನ್ನಡದ ಮಹತ್ವದ ಕವಿಗಳು. ಅವರು ಕೆಲವು ಸ್ವತಂತ್ರ ನಾಟಕಗಳನ್ನೂ ರಚಿಸಿದ್ದಾರೆ. ಹೆಬ್ಬೆರಳು, ಚಿತ್ರಭಾನುದಂತಹ ಸ್ವತಂತ್ರ ನಾಟಕಗಳನ್ನು ಪೈ ಅವರು 1962ರಲ್ಲಿಯೇ ಪ್ರಕಟಿಸಿದರು. ''ಸೈರಂಧ್ರಿ'' ಎಂಬ ಅವರ ಅಪ್ರಕಟಿತ ನಾಟಕವೂ ಇದೆ. 1942ರಲ್ಲಿ ''ತಾಯಿ'' ಎಂಬ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಪೈ ಅವರು ಅನುವಾದಿಸಿದ ಕೆಲವು ನೋಹ್ ನಾಟಕಗಳು 1946 ರಿಂದ 1951ರ ಅವಧಿಯಲ್ಲಿ ಬೇರೆ ಬೇರೆ ಪತ್ರಿಕೆಗಳಲ್ಲಿ ಮೊದಲು ಪ್ರಕಟವಾದವು. ನಂತರ ಕ್ರಿ.ಶ.1979ರಲ್ಲಿ ಮೈಸೂರಿನ ಕಾವ್ಯಾಲಯ ಪ್ರಕಾಶನದವರು, ಪೈಅವರ ''ತಾಯಿ ಮತ್ತು ನೋ ನಾಟಕಗಳು'' ಎಂಬ ಹೆಸರಿನಲ್ಲಿ ಕೃತಿ ಪ್ರಕಟಿಸಿದರು. ಈ ಕೃತಿಯಲ್ಲಿ ''ತಾಯಿ'' ಯೆಂಬ ಅನುವಾದಿತ ನಾಟಕದ ಜತೆಗೆ ಎಂಟು ನೋಹ್ ನಾಟಕಗಳೂ ಅನುವಾದಗೊಂಡು ಪ್ರಕಟವಾಗಿವೆ. ಗೋವಿಂದ ಪೈ ಅವರ ಎಲ್ಲ ಅನುವಾದಿತ ನಾಟಕಗಳನ್ನು ಒಂದೆಡೆ ಸೇರಿಸಿ ಪ್ರಕಾಶಕರು ಇಲ್ಲಿ ಪ್ರಕಟಿಸಿದ್ದಾರೆ. ''ತಾಯಿ'' ನಾಟಕಕ್ಕೂ, ಜಪಾನಿನ ನೋಹ್ ನಾಟಕಗಳಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಜಪಾನಿನ ರಂಗಭೂಮಿಯ ಪರಿಚಯಕ್ಕಾಗಿ ಇಲ್ಲಿ ಅನುವಾದಗೊಂಡಿರುವ ಎಂಟು(8) ನೋಹ್ ನಾಟಕಗಳನ್ನು ಪರಿಶೀಲಿಸಬಹುದಾಗಿದೆ.

ಈ ನೋಹ್ ನಾಟಕಗಳಲ್ಲಿ ಸಾಂಪ್ರದಾಯಿಕ ಕಲಾ ನಿಷ್ಠೆ ಯಥಾವತ್ತಾಗಿ ಉಳಿದುಕೊಂಡು ಬಂದಿದೆ. ಜಪಾನಿನಲ್ಲಿ ಕ್ರಿ.ಶ. 14ನೇ ಶತಮಾನದಲ್ಲಿ ಕಾನಾಮಿ ಹಾಗೂ ಸೆಆಮಿ (Kanami & Zeami) ಎಂಬ ಅಪ್ಪ ಹಾಗೂ ಮಗ ಹಿಂದಿನಿಂದ ಅಸ್ತಿತ್ವದಲ್ಲಿದ್ದ ಸೆರುಗಾಕು (sarugaku) ನಾಟಕ ಪ್ರಕಾರವನ್ನು ಬೆಳೆಸಿ ಅದರಲ್ಲಿ ನಾಟ್ಯ ಸಂಗೀತ ಪದ್ಧತಿಯನ್ನು ಬಳಸಿಕೊಂಡು ನೋಹ್ ನಾಟಕಗಳಿಗೆ ತಾತ್ವಿಕ ತಳಹದಿ ನೀಡಿದರು. ಈಗ ಲಭ್ಯವಿರುವ ಸುಮಾರು 240 ನೋಹ್ ನಾಟಕಗಳಲ್ಲಿ 80 ನಾಟಕಗಳು ಈ ಪಿತ-ಸುತರಿಂದಲೇ ರಚಿತವಾದವುಗಳೆಂದು ತಿಳಿದು ಬರುತ್ತದೆ. ನೋಹ್ ನಾಟಕಗಳು ಜನಪ್ರಿಯವಾಗಲು ಧಾರ್ಮಿಕ ಹಿನ್ನಲೆಯ ಜತೆಗೆ ರಾಜಾಶ್ರಯವೂ ದೊರಕಿತ್ತು. ಸಾವಿರಾರು ವೃತ್ತಿ ಕಲಾವಿದರು ಹುಟ್ಟಿಕೊಳ್ಳಲು ಇಂತಹ ಆಶ್ರಯಗಳು ಮುಖ್ಯ ಕಾರಣವಾದವು. ಈ ನಾಟಕಗಳು ಗಾತ್ರದಲ್ಲಿ ಬಹಳ ಸಣ್ಣವಾಗಿರುತ್ತವೆ. ಐದಾರು ಪುಟಗಳಲ್ಲಿಯೇ ಒಂದು ನಾಟಕ ರಚಿತವಾಗಿರುತ್ತದೆ. ನೃತ್ಯ-ಸಂಗೀತಗಳಿಂದ ಪ್ರದರ್ಶನ ರಂಗೇರುತ್ತದೆ.

ನೋಹ್ ನಾಟಕಗಳು ಗದ್ಯ-ಪದ್ಯ ಮಿಶ್ರಿತವಾಗಿವೆ. ಪಾತ್ರಧಾರಿಗಳು ಗದ್ಯದಲ್ಲಿ ಮಾತನಾಡಿದರೆ, ಗೊಂದಳ (chorus)ದವರು ಪದ್ಯದಲ್ಲಿ ಮಾತಾಡುತ್ತಾರೆ. ಮಾತಾಡುವ ಅಂಶಕ್ಕೆ ಕಾತರು (Kataru) ಎಂದೂ ಹಾಡುವ ಅಂಶಕ್ಕೆ ''ಉಟಾಯಿ'' (utai)ಎಂದೂ ಕರೆಯುತ್ತಾರೆ. ಒಂದೆರಡು ಅಂಕಗಳಲ್ಲಿಯೇ ನಾಟಕಗಳು ಮುಕ್ತಾಯವಾಗುತ್ತವೆ. ಅಪ್ಸರ ಪಾತ್ರಗಳಿಗೆ, ಪ್ರೇತಾತ್ಮಗಳಿಗೆ, ಹೆಂಗಸರಿಗೆ ಹಾಗೂ ಮುದುಕರಿಗೆ ಮೊಗವಾಡಗಳನ್ನು ಹಾಕಿರುತ್ತಾರೆ. ಉಳಿದವರಿಗೆ ಈ ಮೊಗವಾಡಗಳಿರುವುದಿಲ್ಲ. ನಾಟಕದ ನಾಯಕನನ್ನು ಶೀತೆ (shite)ಎಂದೂ, ಅವನ ಅನುಯಾಯಿಯನ್ನು ತ್ಸೂರೆಯೆಂದೂ (Tsure) ದ್ವಿತೀಯ ದರ್ಜೆಯ ಪಾತ್ರವನ್ನು ವಾಕಿ (Waki) ಎಂದೂ ಕರೆಯಲಾಗುತ್ತದೆ. ವಾಕಿಗೆ ಅನುಯಾಯಿದ್ದರೆ ಆತನಿಗೆ ವಾಕಿತ್ಸೂರೆ (Waki-tsure) ಎಂದು ಕರೆಯುತ್ತಾರೆ. ನಾಟಕದ ನಾಯಕ ಪಾತ್ರವಾದ ಶೀತೆ ಸಾಮಾನ್ಯವಾಗಿ ಅಲೌಕಿಕ ಪಾತ್ರವಾಗಿರುತ್ತದೆ. ವಾಕಿ ಪಾತ್ರವು ವಾಸ್ತವಿಕ ಪ್ರಪಂಚದ ಜೀವಂತ ವ್ಯಕ್ತಿಯಾಗಿರುತ್ತದೆ. ಅಲೌಕಿಕ ಪಾತ್ರಕ್ಕೆ ವಾಸ್ತವ ಸಂಬಂಧವನ್ನು ಕಲ್ಪಿಸಲಾಗಿರುತ್ತದೆ. ನಾಟಕದಲ್ಲಿ ಎದ್ದು ಕಾಣುವ ಪಾತ್ರವೆಂದರೆ

ಶೀತೆ. ಈ ಪಾತ್ರದ ವೇಷಭೂಷಣಗಳು ಭರ್ಜರಿಯಾಗಿರುತ್ತವೆ. ಗ್ರೀಕ್ ರಂಗಭೂಮಿಯ ಹಾಗೆ ಇಲ್ಲಿಯೂ ಕೂಡ ಗೊಂದಳ-ಪಾತ್ರವೇ ಆಗಿರುತ್ತದೆ. ಸಾಮಾನ್ಯವಾಗಿ ನೋಹ್ ನಾಟಕದ ಪ್ರದರ್ಶನವೆಂದರೆ ಅದು ಐದು ನಾಟಕಗಳ ಪ್ರದರ್ಶನವೇ ಆಗಿರುತ್ತದೆ.

ಪೈ ಅವರು ಅನುವಾದಿಸಿದ ಎಂಟು ನೋಹ್ ನಾಟಕಗಳಲ್ಲಿ ಪ್ರಣಯಿಸಿ ಕೊಮಾಚಿಗೆ ಸಂಬಂಧಪಟ್ಟ ಎರಡು ನಾಟಕಗಳಿವೆ. ''ಕಾಯೊಯ್ ಕೊಮಾಚಿ''-1946ರಲ್ಲಿ ಅನುವಾದಗೊಂಡಿದ್ದರೆ, ''ಸೊತೋಬಾ ಕೊಮಾಚಿ''- 1950ರಲ್ಲಿ ಅನುವಾದವಾಗಿದೆ. ಈ ಎರಡೂ ನಾಟಕಗಳಲ್ಲಿ ಒಂದೇ ಕಥೆ ಮುಂದುವರಿದಿರುವುದನ್ನು ಕಾಣಬಹುದಾಗಿದೆ. ಉಳಿದ ಏಳು ನೋಹ್ ನಾಟಕಗಳ ವಸ್ತು -ವಿಷಯ ಬೇರೆ-ಬೇರೆಯಾಗಿವೆ. ಈ ಕೃತಿಯಲ್ಲಿ ಪ್ರಕಟಗೊಂಡಿರುವ ಒಂಬತ್ತು ನೋಹ್ ನಾಟಕಗಳಲ್ಲಿ ಬೌದ್ಧ ಧರ್ಮದ ತಿರುಳು ಅಡಕವಾಗಿರುವುದನ್ನು ಕಾಣಬಹುದಾಗಿದೆ.

'ಕಾಯೊಯ್ ಕೊಮಾಚಿ' ನಾಟಕದಲ್ಲಿ ಶೋಶೋ ಎಂಬಾತನು ಓನೋ ನೋ ಕೊಮಾಚಿಯ ಪ್ರಣಯಿ. ಆತ ಬೌದ್ಧನಾಗಿರುವುದಿಲ್ಲ. ಆ ಕಾರಣಕ್ಕಾಗಿ ಆತನು 99 ರಾತ್ರಿ ಅವಳಲ್ಲಿಗೆ ಹೋದರೂ, ಅವಳು ಆತನಿಗೆ ಕದ ತೆರೆಯಲಿಲ್ಲ. ಅವರಿಬ್ಬರೂ ಸತ್ತ ನಂತರವೂ ಅವರ ಆತ್ಮಗಳು ವಿಂಗಡವಾಗಿದ್ದವು. ಕೊನೆಯಲ್ಲಿ ಒಬ್ಬ ಭಕ್ತಿವಂತನಾದ ಬೌದ್ಧ ಯಾಜಕನ ಮುಖಾಂತರ, ಆಕೆ ಅವನನ್ನು ಬೌದ್ಧ ಧರ್ಮಕ್ಕೆ ಒಲಿಸಿಕೊಂಡು, ಆ ನಂತರ ಅವರ ಆತ್ಮಗಳು ಒಟ್ಟು ಗೂಡುತ್ತವೆ.

ಈ ನಾಟಕದಲ್ಲಿ ಬರುವ ಶೀತೆ ಪಾತ್ರವು ಶೋಶೋನ ಆತ್ಮವಾಗಿದೆ. ತ್ಸೂರೆ ಪಾತ್ರವು ಓನೋನೋ ಕೊಮಾಚಿಯ ಆತ್ಮವಾಗಿದೆ. ಕೊಮಾಚಿ ಇಲ್ಲಿ ತಾತ್ವಿಕವಾಗಿ ಬದ್ಧಳಾಗಿರುವುದನ್ನು ಕಾಣಬಹುದಾಗಿದೆ. ಅವಳಲ್ಲಿ ತಾತ್ವಿಕ ನಿಷ್ಠುರತೆಯ ಜತೆಗೆ, ಶೋಶೋನ ಬಗೆಗೆ ಅವಳಲ್ಲಿರುವ ಗಾಢ ಪ್ರೇಮವನ್ನು ಕಾಣಬಹುದಾಗಿದೆ. ''ನೀನು ನನ್ನನ್ನು ಒಬ್ಬಂಟಿ ಮಾಡಿ ಬಿಟ್ಟು ಹೋದಿ'' ಎಂದು ಪ್ರಿಯಕರ ಹೇಳಿದಾಗ, ''ಇನಿಯಾ, ನಿನ್ನ ಬಗ್ಗೆ ನೀನು ಆಡಬಹುದು, ನನ್ನ ಹೃದಯ ಹೊಸ ಬೆಳದಿಂಗಳಂತೆ ತಿಳಿಯಾಗಿದೆ'' ಎಂದು ತ್ಸೂರೆ ಹೇಳುತ್ತಾಳೆ. ''ಹಾಗಾದರೆ ನೀನು ಹಿಂದಿರುಗಲಾರೆಯಾ?'' ಎಂದು ಶೀತೆ ಕೇಳಿದಾಗ, ''ನಂಬುಗೆ ಬೆಟ್ಟದ ಮೇಲಣ ಕಾಡು ಚಿಗುರಿಯಂತಿದೆ, ಕರೆದರೆ ನಿಲ್ಲದು'' ಎಂದು ತ್ಸೂರೆ ಹೇಳುತ್ತಾರೆ. ಕೊನೆಗೆ ಶೀತೆ ಹೇಳುವ ಮಾತು ತ್ಸೂರೆಯಲ್ಲಿ ಪರಿಣಾಮವನ್ನುಂಟು ಮಾಡುತ್ತದೆ. ''ಹಾಗಾದರೆ ನಾನು, ನಿನ್ನ ಬುದ್ಧನ ನಾಯಿಯಾಗುವೆ, ಬಡೆದಷ್ಟು ನಿನ್ನಿಂದ ತೊಲಗಲೊಲ್ಲೆ'' ಎಂದು ಶೀತೆ ಹೇಳಿದಾಗ ತ್ಸೂರೆ ಒಪ್ಪಿಕೊಂಡು ಶೀತೆನನ್ನು ಕೂಡುತ್ತಾಳೆ.

ಈ ನಾಟಕದಲ್ಲಿ ಎರಡು ಪ್ರಣಯಿ ಆತ್ಮಗಳು ಸಂಭಾಷಣೆಯಲ್ಲಿ ತೊಡಗಿ ಬೌದ್ಧ ಚಿಂತನೆಗೆ ಬದ್ಧರಾಗಿರುವುದರ ಜತೆಗೆ ಪ್ರಣಯದ ವಿಚಾರದಲ್ಲಿಯೂ ಗಟ್ಟಿಯಾಗಿವೆ. ಎರಡೂ ಆತ್ಮಗಳು ಕಾವ್ಯಾತ್ಮಕವಾಗಿ ಮಾತನಾಡುತ್ತವೆ. ಇದಕ್ಕೆ ಪೂರಕವಾಗಿ ಕೋರಸ್(ಗೊಂದಳ) ಕಾರ್ಯನಿರ್ವಹಿಸಿದೆ.

ಇದೇ ನಾಟಕದ ವಸ್ತು ಈ ಕೃತಿಯಲ್ಲಿ ಕೊನೆಗೆ ಪ್ರಕಟವಾಗಿರುವ ''ಸೊತೋಬಾ ಕೊಮಾಚಿ''ಯಲ್ಲಿ ಮುಂದುವರೆದಿದೆ. ಈ ನಾಟಕದಲ್ಲಿ ಸೊತೋಬಾ ಕೊಮಾಚಿ ಆತ್ಮವಾಗಿ ಮುದಿರೂಪದಲ್ಲಿ ಕಾಣಿಸಿಕೊಳ್ಳುತ್ತಾಳೆ. ಇಬ್ಬರು ಯಾಜಕರು ಆಕೆಯನ್ನು ಮಾತನಾಡಿಸುತ್ತಾರೆ. ಬುದ್ಧನ ಪೂಜೆಯ ಮರದ ಕೆತ್ತನೆಯ ಕೋಲಿನ ಮೇಲೆ ಅವಳು ಕುಳಿತಿದ್ದಾಳೆ. ಕೊಮಾಚಿಯನ್ನು ಮಾತನಾಡಿಸಿದ ಯಾಜಕರು ಅವಳ ಯೌವನದ ದಿನಗಳ ವಿವರಗಳನ್ನು ಕೇಳುತ್ತಾರೆ, ಅವಳ ಸಧ್ಯದ ಶೋಚನೀಯ ಸ್ಥಿತಿಯನ್ನು ಕಂಡು ಕನಿಕರಪಡುತ್ತಾರೆ. ಈ ನಾಟಕದ ಪ್ರಾರಂಭದಲ್ಲಿ ಒನೋನೋ ಕೊಮಾಚಿ ಮಾತನಾಡುವ ಸಂಭಾಷಣೆ ತುಂಬ ಅರ್ಥಗರ್ಭಿತವಾಗಿದೆ.

''ನಾನು ಎಳೆಯವಳಿದ್ದಾಗ ನನಗೆ ತುಂಬ ಹೆಮ್ಮೆ ಇತ್ತು. ನನ್ನ ತುರುಬಿನ ಹೂವುಗಳು ಚೈತ್ರ ಮಾಸದ ನೀರು ಹಬ್ಬೆಯಂತೆ ಒಲೆದಾಡುತ್ತಿದ್ದವು. ನಾನು ಗೊರವಂಕಗಳಂತೆ ಉಲಿದಾಡುತ್ತಿದ್ದೆ. ಈಗಲಾದರೆ ನನಗೆ ಅಪ್ಪಟ್ಟ ಮುಪ್ಪು, ನೂರಾರು ವರ್ಷಗಳ ಮುಪ್ಪು, ಮೈಯ್ಯೆಲ್ಲಾ ಮುಪ್ಪು.....'' ಎನ್ನುವಂತಹ ಕೊಮಾಚಿಯ ಈ ಸಂಭಾಷಣೆ ತೀವ್ರ ಪರಿಣಾಮಕಾರಿಯಾಗಿದೆ. ಯೌವನದ ಸಂಭ್ರಮ ಮುಪ್ಪಿನ ಯಾತನೆ ಈ ಬದುಕಿನ ಭಾಗಗಳಾಗಿರುವುದನ್ನು ಪ್ರಕಟಿಸುತ್ತಲೇ ನಾಟಕ ಬುದ್ಧನ ಚಿಂತನೆಯತ್ತ ಮುಖ ಮಾಡುತ್ತದೆ.

ಇಬ್ಬರು ಯಾಜಕರು ಮಾತನಾಡಿಕೊಳ್ಳುವ ಮಾತುಗಳಲ್ಲಿ ಆಕೆಯ ಹಿಂದಿನ ಉಜ್ವಲವಾದ ಜೀವನ, ಇಂದಿನ ಯಾತನಾಮಯ ಬದುಕು ಎರಡೂ ಕಾಣಿಸಿಕೊಳ್ಳುತ್ತವೆ. ಹಿಂದಿನ ಕೊಮಾಚಿಯೆಂದರೆ ಆಕೆ ಪುಷ್ಪವಾಗಿದ್ದಳು, ಸೊಗಸಾದ ಉಡಿಗೆ ತೊಡಿಗೆಗಳಲ್ಲಿ ಅರಮನೆಯಲ್ಲಿ ನಡೆದಾಡುತ್ತಿದ್ದಳು. ಆಕೆಯ ಕವನಗಳನ್ನು ಕೇಳಲಿಕ್ಕೆ ಎಷ್ಟೋ ಮಂದಿ ನೆರೆಯುತ್ತಿದ್ದರು. ಆದರೆ ಇಂದು ಆಕೆ ಮುಪ್ಪಾಗಿದ್ದಾಳೆ. ಆಕೆಯ ತಲೆಯಲ್ಲಿ ಚಳಿಗಾಲ ನರೆತಿದೆ, ಆಕೆಯ ಕೊರಳಲ್ಲಿ ಜೋಳಿಗೆ ಜೋತಾಡುತ್ತಿದೆ. ಹುಚ್ಚು ಹುಚ್ಚಾದ ನೆರಳಿನಂತೆ ಆಕೆ ಈಗ ಅಲೆದಾಡುತ್ತಿದ್ದಾಳೆಂದು ವಿಶ್ಲೇಷಿಸುವ ಯಾಜಕರ ನುಡಿಗಳು ತುಂಬ ಪರಿಣಾಮಕಾರಿಯಾಗಿವೆ.

''ಹಾಗೊರೋಮೊ'' ಜಪಾನಿನ ಮತ್ತೊಂದು ನೋಹ್ ನಾಟಕ. ಹಾಗೊರೋಮೊ- ಎಂದರೆ ನಿಲುವಂಗಿ. ಮೀವೋ ಪ್ರದೇಶದ ದೇವದಾರುಗಳ ದಟ್ಟವಾದ ಕಡಲ ತೆರೆಯಲ್ಲಿ ಒಬ್ಬ ಅಪ್ಸರೆ ಇರುತ್ತಾಳೆ. ಆಕೆ ರೆಂಬೆಗೆ ತೂಗು ಹಾಕಿದ್ದ ನಿಲುವಂಗಿಯನ್ನು ಬೆಸ್ತರ ಗೊತ್ತುಗಾರನೊಬ್ಬ ತೆಗೆದುಕೊಂಡು ಬಿಡುತ್ತಾನೆ. ಆ ನಿಲುವಂಗಿ ಇರಲಾರದೆ ಅಪ್ಸರೆ ಮೇಲೆ ಹಾರಲಾರಳು. ಅದನ್ನು ಮರಳಿ ಕೊಡಬೇಕೆಂದು ಆಕೆ ಅವನಲ್ಲಿ ಯಾಚಿಸುತ್ತಾಳೆ. ಆಕೆ ನಾಟ್ಯ ಮಯೂರಿಯಾಗಿರುತ್ತಾಳೆ. ಆ ನಾಟ್ಯವನ್ನು ಕಲಿಸಿದರೆ ಮಾತ್ರ ನಿಲುವಂಗಿಯನ್ನು ಮರಳಿಸುವುದಾಗಿ ಬೆಸ್ತರವನು ಹೇಳುತ್ತಾನೆ. ಆಕೆ ಒಪ್ಪಿ ನರ್ತನ ಮಾಡುತ್ತಾಳೆ. ಆ ನಾಟ್ಯವು ಚಂದ್ರನ ದೈನಿಕ ಪರಿವರ್ತನೆಯ ಸಂಕೇತವೆಂದು ಗೊಂದಳ(ಕೋರಸ್) ವಿವರಿಸುತ್ತದೆ. ಆಕೆಯ ನರ್ತನವನ್ನು ನೋಡಿದ ನಂತರ ಬೆಸ್ತರವನ್ನು ನಿಲುವಂಗಿಯನ್ನು ಮರಳಿ ಕೊಡುತ್ತಾನೆ. ಆಗ ಅಪ್ಸರೆ ಮೆಲ್ಲಮೆಲ್ಲನೆ ಮೇಲೆ ಹಾರಿ ಹೋಗುತ್ತಾಳೆ. ತೆನ್ನಿನ್ ಎಂಬ ಅಪ್ಸರೆಯ ನಾಟ್ಯ ವರ್ಣನೆಯನ್ನು ಈ ನಾಟಕ ಮಾಡಿಕೊಡುತ್ತದೆ. ಫೈ ಅವರು 1946ರಲ್ಲಿ ಈ ನಾಟಕವನ್ನು ಅನುವಾದಿಸಿದ್ದಾರೆ.

''ಕುಮಾಸಾಕಾ'' ಎಂಬ ನೋಹ್ ನಾಟಕ 1947ರಲ್ಲಿ ಅನುವಾದಗೊಂಡಿದೆ. ಕುಮಾಸಾಕಾ ಎಂಬ ವ್ಯಕ್ತಿ ದೊಡ್ಡ ದಾರಿಗಳ್ಳನಾಗಿದ್ದ. ಇಲ್ಲಿ ಅವನ ಪ್ರೇತವು ಒಬ್ಬ ಮುದಿಯ ಯಾಜಕನ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. ಈ ಯಾಜಕನೊಬ್ಬ ಯಾತ್ರಿಕನಾಗಿದ್ದಾನೆ. ಅಂದೇ ಸತ್ತು ಹೋಗಿದ್ದ ಅನಾಮಧೇಯನೊಬ್ಬನ ಸದ್ಗತಿಯ ಬಗ್ಗೆ ಪ್ರಾರ್ಥಿಸಬೇಕೆಂದು ಪ್ರೇತವು ಆತನನ್ನು ಕೇಳಿಕೊಳ್ಳುತ್ತದೆ. ಆ ಮುದಿ ಯಾಜಕನ ಗುಡಿಸಲಲ್ಲಿ ಬುದ್ಧನ ವಿಗ್ರಹವಿಲ್ಲ. ಎರಡನೇ ಅಂಕದಲ್ಲಿ ಕುಮಸಾಕನ ಪ್ರೇತವು ಉಜ್ವಲವಾದ ಉಡಿಗೆ-ತೊಡಿಗೆಯಲ್ಲಿ ಕಾಣಿಸಿಕೊಂಡು ತನ್ನ ಹಿಂದಿನ ವೈಭವಯುಕ್ತ ದಿನಗಳನ್ನು ನೆನಪಿಸಿಕೊಂಡು ತನ್ನ ಬಿಲ್ಲುಗಾರಿಕೆಯ ಬಗ್ಗೆ ತಿಳಿಸುತ್ತದೆ.

''ತ್ಸುನೆಮಾಸ್'' ಎಂಬ ನಾಟಕ ಕೂಡಾ 1947ರಲ್ಲಿಯೇ ಅನುವಾದಗೊಂಡಿದೆ. ನಿನ್ನಾಜಿಯ ದೇಗುಲದ ಅರ್ಚಕನಾದ ಸೋಜುಗಿಯಾಕೈ ಈ ನಾಟಕದಲ್ಲಿ ತ್ಸುನೆಮಾಸ್‌ನ ಆತ್ಮವನ್ನು ಆರಾಧಿಸುತ್ತಾನೆ. ಒಬ್ಬ ವೀರಯೋಧನಾಗಿದ್ದ ತ್ಸುನೆಮಾಸ್ ಪ್ರೇತನಾಗಿ ಕಾಣಿಸಿಕೊಳ್ಳುತ್ತಾನೆ. ಇಲ್ಲಿ ಎರಡೇ ಪಾತ್ರಗಳಿವೆ, ಜತೆಗೆ ಕೋರಸ್ ಇದೆ. ಇದು ಅತ್ಯಂತ ಚಿಕ್ಕ ನಾಟಕವಾಗಿದೆ.

''ಸೊಮಾಗೆಂಜಿ'' ನಾಟಕವೂ 1947ರಲ್ಲಿಯೇ ಅನುವಾದವಾಗಿದೆ. ಈ ನಾಟಕದಲ್ಲಿ ಗೆಂಜಿಯೆಂಬ ಮರಕಡಕ ಸತ್ತು ಭೂತವಾಗಿದ್ದಾನೆ. ಈತ ಎಷ್ಟೋ ಕಥೆಗಳಿಗೆ ವಸ್ತುವಾಗಿದ್ದಾನೆ. ಫುಜಿವಾರನೆಂಬ ಜನಪದ ಸಾಹಿತ್ಯ ಸಂಗ್ರಹಕಾರನು ಯಾಜಕನೊಬ್ಬನಿಗೆ ಮೊದಲು ಭೂತವಾಗಿ ಕಾಣಿಸಿಕೊಂಡು ಆ ಮೇಲೆ ತನ್ನ ಅಲೌಕಿಕ ಉಜ್ವಲ ರೂಪದಲ್ಲಿ ದರ್ಶನ ಕೊಡುತ್ತಾನೆ. ಆತ ಆ ಸ್ಥಳದ ಆತ್ಮವೇ ಆಗಿರುವುದರ ಅನುಭವವನ್ನು ಕಟ್ಟಿಕೊಡುತ್ತಾನೆ. ಇಲ್ಲಿ ಬರುವ ಸೊಮಾ ಎಂಬುದು ಸ್ಥಳದ ಹೆಸರು. ಆ ಸ್ಥಳ ಮಹಿಮೆಯಿಂದ ಗೆಂಜಿ ಎಂಬ ಮರಕಡುಕ ಪ್ರಸಿದ್ಧನಾಗುತ್ತಾನೆ. ಸೊಮಾ ಹಾಗೂ ಗೆಂಜಿ ಈ ಎರಡೂ ಪದಗಳು ಸಮಾಸಗೊಳ್ಳುವ ಸಮರ್ಥನೆ ಈ ನಾಟಕದಿಂದ ಪ್ರಕಟವಾಗುತ್ತದೆ.

''ಚೊರಿಯೊ'' ನಾಟಕ ಪೈ ಅವರಿಂದ 1948ರಲ್ಲಿ ಅನುವಾದಗೊಂಡಿದೆ. ಚೊರಿಯೊ ಒಬ್ಬ ಸಾಮಾನ್ಯ ಪ್ರಜೆಯಾಗಿದ್ದ. ಈತನಿಗೆ ತನ್ನ ಕನಸಿನಲ್ಲಿ ಮುಂದೇನಾಗುತ್ತದೆಂಬ ಸೂಚನೆಗಳು ಕಾಣಸಿಗುತ್ತವೆ. ಕನಸಿನಲ್ಲಿ ಕಂಡ ಮುದುಕನನ್ನು ವಾಸ್ತವದಲ್ಲಿ ಹುಡುಕಲಿಕ್ಕೆ ಪ್ರಯತ್ನಿಸುತ್ತಾನೆ. ಮುದುಕನ ವೇಷದಲ್ಲಿದ್ದ ಕೊಸೆಕ್ಕೊ ಎಂಬಾತ ಚೊರಿಯಾನನ್ನು ಪರೀಕ್ಷಿಸುತ್ತಾನೆ. ಕನಸು ವಾಸ್ತವವಾಗುತ್ತಿದ್ದಂತೆ, ಕೊಸೆಕ್ಕೊ ತನ್ನ ಮೊಚ್ಚೆಯೊಂದನ್ನು ಹೊಳೆಯ ನೀರಿಗೆ ಒಗೆಯುತ್ತಾನೆ. ಚೊರಿಯೊ ಅದನ್ನು ಪಡೆಯಲು ನೀರಿಗೆ ಧುಮುಕಿದಾಗ ಹಾವು ಹಕ್ಕಿಯೊಂದು ಆ ಮೊಚ್ಚೆಯನ್ನು ಹಿಡಿದುದ್ದನ್ನು ಕಂಡು ಅದರೊಂದಿಗೆ ಹೋರಾಡಿ ಪಡೆಯುತ್ತಾನೆ. ಕೊಸೆಕ್ಕೊನಿಗೆ ತಂದು ಒಪ್ಪಿಸುತ್ತಾನೆ. ಹಾವು ಹಕ್ಕಿಯಾಗಿ ಬಂದದ್ದು ''ಕ್ವನ್ನೊನ್'' ಎಂಬ ದೇವತೆಯೆಂದು ತಿಳಿಸಿದ ಕೊಸೆಕ್ಕೊ ಕಾದಾಟಕ್ಕಿಂತ ಬೋಧೆಯ ಗುಟ್ಟು ದೊಡ್ಡದೆಂದು ತಿಳಿಸುತ್ತಾನೆ.

''ಶೋಜೊ'' 1950ರಲ್ಲಿ ಅನುವಾದಗೊಂಡ ನಾಟಕವಾಗಿದೆ. ಈ ನಾಟಕ ಮದಿರೆಯ ಪ್ರಭಾವವನ್ನು ಹೇಳುತ್ತದೆ. ಇಂಥ ವಸ್ತುವೂ ಕೂಡ ನೋಹ್ ನಾಟಕಗಳಿಗೆ ವಸ್ತುವಾಗಿರುವುದನ್ನು

ಕಾಣಬಹುದಾಗಿದೆ. ವಾಕಿಯೆಂಬ ಉಪಪಾತ್ರದ ಮೂಲಕ ಈ ನಾಟಕ ಬಿಚ್ಚಿಕೊಳ್ಳುತ್ತದೆ. ಶೋಜೊ ಈ ನಾಟಕದ ನಾಯಕನಾಗಿದ್ದಾನೆ. ಜತೆಗೆ ಕೋರಸ್(ಗೊಂದಳ್) ಇದೆ. ಚೀನ ದೇಶದ ಕಾನೆಕಿಂಜಾನ್ ಎಂಬ ಬೆಟ್ಟದ ಬುಡದಲ್ಲಿ ತಾನು ಇರುವುದೆಂದು ಪ್ರಾರಂಭದಲ್ಲಿ ವಾಕಿ ಸ್ಪಷ್ಟಪಡಿಸುತ್ತಾನೆ. ಕಳ್ಳನ್ನು ಕುಡಿಯಲಿಕ್ಕೆ ಬರುವ ಕಳ್ಳನ ಮೇಲೆ ಮದಿರೆ ಯಾವ ಪ್ರಭಾವವನ್ನು ಉಂಟು ಮಾಡುವುದಿಲ್ಲ. 'ಶೋಜೊ' ಎಂದರೆ ಮಂಗ. ಆ ಕಳ್ಳನ ಹೆಸರೇ ಶೋಜೊ.

ಗೋವಿಂದ ಪೈ ಅವರು ಅನುವಾದಿಸಿದ ಈ ಎಂಟು ನೋಹ್ ನಾಟಕಗಳು ಪ್ರಯೋಗಗೊಂಡಾಗಲೇ ಹೆಚ್ಚು ಪರಿಣಾಮ ಬೀರುವಂತಹವುಗಳಾಗಿವೆ. ಓದುಗರಿಗಾಗಿ ಈ ನಾಟಕಗಳು ತೃಪ್ತಿ ನೀಡುವುದಿಲ್ಲ. ಅನುವಾದ ಕಾರ್ಯ, 1946 ರಿಂದ 1951ರ ಅವಧಿಯಲ್ಲಿ ನಡೆದದ್ದರಿಂದ ಅನುವಾದದ ಭಾಷೆಯಲ್ಲಿ ಸ್ಪಷ್ಟತೆಯಿಲ್ಲ. ಕೆಲವು ಪದಗಳಂತೂ ಇದು ಕನ್ನಡ ಅನುವಾದವೆ? ಎನ್ನುವಷ್ಟರ ಮಟ್ಟಿಗೆ ಗೋಜಲುಗಳಾಗಿವೆ. ಪೈ ಅವರು ಅನುವಾದಿಸಿದ ಈ ನಾಟಕಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾದೇಶಿಕ ಪದಗಳು ಹೆಚ್ಚು ಬಳಕೆಯಾಗಿವೆ. ಕೊನೆಯಲ್ಲಿ ಪ್ರಾದೇಶಿಕ ಪದಗಳ ಅರ್ಥ ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ನೋಹ್ ನಾಟಕಗಳು ತುಂಬ ಚಿಕ್ಕ ಚಿಕ್ಕವಾಗಿರುವುದರಿಂದ ಇಲ್ಲಿ ಪಾತ್ರಗಳ ಬೆಳವಣಿಗೆಯಾಗಲಿ, ಕಥಾವಸ್ತುವಿನ ಬೆಳವಣಿಗೆಯಾಗಲಿ ಸಾಧ್ಯವಾಗುವುದಿಲ್ಲ. ಹೀಗಾಗಿ ಅನುವಾದಕರು ವಿಶಿಷ್ಟತೆಯನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಇಲ್ಲಿಯ ಎಲ್ಲ ನಾಟಕಗಳೂ ಬೌದ್ಧ ಧರ್ಮದ ಪ್ರಸಾರಕ್ಕೆ ಪೂರಕವಾಗಿರುವುದರಿಂದ, ಸಾಮಾಜಿಕ ಘಟನೆಗಳಿಗೆ ಇಲ್ಲಿ ಅವಕಾಶಗಳು ತುಂಬ ಕಡಿಮೆಯಾಗಿವೆ. ಇಷ್ಟೆಲ್ಲ ಮಿತಿಗಳ ನಡುವೆಯೂ ಈ ನೋಹ್ ನಾಟಕಗಳನ್ನು ಪ್ರಯೋಗಕ್ಕೆ ತಂದಾಗ ಪರಿಣಾಮವನ್ನುಂಟು ಮಾಡುತ್ತವೆ.

ಜಪಾನಿನ ರಂಗಭೂಮಿಯ ನೋಹ್ ನಾಟಕಗಳನ್ನು ಮೊದಲು ಕನ್ನಡಕ್ಕೆ ತಂದ ಕೀರ್ತಿ ಗೋವಿಂದ ಪೈಗಳಿಗೆ ಸಲ್ಲುತ್ತದೆ. ಅವರು ಅತ್ಯಂತ ಶ್ರದ್ಧೆಯಿಂದ ಈ ನಾಟಕಗಳನ್ನು ಅನುವಾದಿಸಿದ್ದಾರೆ. ಮೂಲ ನಾಟಕಗಳ ಆಶಯಕ್ಕೆ ಧಕ್ಕೆ ಬಾರದಂತೆ ನೋಡಿಕೊಂಡಿದ್ದಾರೆ. ಇವರ ಅನುವಾದವು ಎಲ್ಲಿಯೂ ಮೂಲವನ್ನು ಮರೆಮಾಚಿಡುವುದಿಲ್ಲ.

ಪೈಅವರು ಅನುವಾದಿಸಿದ ಈ ನೋಹ್ ನಾಟಕಗಳ ವೈಶಿಷ್ಟ್ಯತೆಯೆಂದರೆ, ಇಲ್ಲಿಯ ಹೆಚ್ಚಿನ ಸಂಭಾಷಣೆಗಳನ್ನು ಕಾವ್ಯಾತ್ಮಕವಾಗಿ ಮಾಡಿರುವುದಾಗಿದೆ. ಇಲ್ಲಿಯ ಅನೇಕ ಸಂಭಾಷಣೆಗಳನ್ನು ಓದುತ್ತ ಹೋದಂತೆ, ಗೀತ ನಾಟಕಗಳ ನೆನಪಾಗುತ್ತದೆ. ಕೋರಸ್‌ದ ಪಾತ್ರ ವಿಶಿಷ್ಟವಾದುದ್ದಾಗಿದೆ. ನಿರ್ದೇಶಕರಿಗೆ ಈ ನಾಟಕಗಳ ಪ್ರಯೋಗ ಸವಾಲಾಗಿ ಕಾಣಿಸುತ್ತದೆ. ಇಲ್ಲಿ ನಿರ್ದೇಶಕನ ಜಾಣ್ಮೆಗೆ ಬಹಳ ಅವಕಾಶವಿದೆ.

ಕನ್ನಡದ ಕಂಪನ್ನು ಗಮನಿಸಲು ಕೆಲವು ಸಂಭಾಷಣೆಗಳ ವಾಕ್ಯಗಳನ್ನಿಲ್ಲಿ ಗಮನಿಸಬಹುದಾಗಿದೆ.

"ಪ್ರಾರ್ಥನೆ ಬಹಳ ಚಲೋದಾಗಿತ್ತು." (ಪುಟ:12)

"ನಂಬುಗೆ ಬೆಟ್ಟದ ಮೇಲಣ ಕಾಡು ಚಿಗುರಿಯಂತಿದೆ." (ಪುಟ:13)

"ಸಾವುಳ್ಳವರಿಗೆ ತಾನೆ ಸಂಶಯ, ನಮ್ಮಲ್ಲಿ ವಂಚನೆ ಇಲ್ಲ" (ಪುಟ:22)

"ಆ ದಿವ್ಯಗರಿಗಳ ದಗಲೆ ಗಾಳಿಗೆ ಸರಿಯಾಗಿ ಮಿಸುಕಾಡುತ್ತದೆ........

ಆದರ ಹೂಗಳ ತೋಳುಗಳು ಮಳೆಯಿಂದ ತೋಯುತ್ತಲಿವೆ."(ಪುಟ:22)

"ತೆಳ್ಳಾನೆ ಒಂದು ಮುಗಿಲು...ಹೊತ್ತು ಸುಗ್ಗಿಯಂತೆ ತೋರುತ್ತದೆ"(ಪುಟ:46)

"ಈ ಲೋಕಕ್ಕೂ ಮೇಲ್ಲೋಕಕ್ಕೂ, ನಕ್ಷತ್ರಗಳ ಆಚೆಗೂ

ಈಚೆಗೂ ನಡುವೆ ರತ್ನದ ಬೇಲಿ ವಿನಾ ಮತ್ತೇನೂ ಇಲ್ಲ." (ಪುಟ:23)

ಇಂತಹ ಅನೇಕ ಕಾವ್ಯಾತ್ಮಕವಾದ ನುಡಿಗಳನ್ನು ಇಲ್ಲಿಯ ನಾಟಕಗಳಲ್ಲಿ ನೋಡಬಹುದಾಗಿದೆ. ಸಾಹಿತ್ಯ ಕೃತಿಯೊಂದನ್ನೇ ಆಧರಿಸಿ ವಿಮರ್ಶೆ ಮಾಡುವುದು ಅಪೂರ್ಣವಾದದ್ದೆನಿಸುತ್ತದೆ. ಈ ಎಲ್ಲ ನಾಟಕಗಳ ರಂಗ ಕೃತಿಯನ್ನು ವೀಕ್ಷಿಸಿದಾಗ, ಈ ನಾಟಕಗಳ ಮಹತ್ವ ಎದ್ದು ಕಾಣುತ್ತದೆ. ನಿರ್ದೇಶಕರಿಗೆ ಇಲ್ಲಿ ಬೇಕಾದಷ್ಟು ಸ್ವಾತಂತ್ರ್ಯವಿದೆ. ಈ ನಾಟಕಗಳು ಮಾತಿಗಿಂತಲೂ ಹೆಚ್ಚಾಗಿ ಹಾವಭಾವದಿಂದ, ಹಾವಭಾವಕ್ಕಿಂತಲೂ ಹೆಚ್ಚಾಗಿ ಮೌನದಿಂದ ತಮ್ಮ ಇಂಗಿತವನ್ನು ವ್ಯಕ್ತಪಡಿಸುತ್ತವೆ. ಮೌನದ ಮೂಲಕವೂ ರಂಗಭೂಮಿಯಲ್ಲಿ ತೀವ್ರತರವಾದ ಪರಿಣಾಮ ಬೀರಲು ಸಾಧ್ಯವೆಂಬುದಕ್ಕೆ ನೋಹ್ ನಾಟಕಗಳು ಸಾಕ್ಷಿಯಾಗಿವೆ. ಕೃತಿ ಮತ್ತು ರಂಗಕೃತಿ, ನಾಟಕ ಪ್ರಯೋಗ ಇವುಗಳನ್ನು ಒಟ್ಟೊಟ್ಟಿಗೆ ಗಮನಿಸಿದಾಗ ಮಾತ್ರ ವಸ್ತುನಿಷ್ಠ ವಿಮರ್ಶೆ ಸಾಧ್ಯವಾಗುತ್ತದೆ. ಅಂತಹ ಪ್ರಯತ್ನಗಳಿಗೆ ಇಲ್ಲಿ ವಿಪುಲ ಅವಕಾಶವಿದೆ. ಈ ಕೆಲವು ನಾಟಕಗಳನ್ನು ಮೂಲದಿಂದಲೇ ಕನ್ನಡಕ್ಕೆ ಅನುವಾದಿಸಿಕೊಟ್ಟ ಪೈಅವರನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕಾಗುತ್ತದೆ.

ಡಾ. ಬಸವರಾಜ ಸಬರದ, ನಿರ್ದೇಶಕರು ಬಸವಾದಿ ಶರಣ ಸಾಹಿತ್ಯ ಕೇಂದ್ರ, ಗುಲಬರ್ಗಾ ವಿಶ್ವ ವಿದ್ಯಾಲಯ ಗುಲಬರ್ಗಾ-585106.

''ಜಿಗರಿಗಂಗಳ ಚೆಲುವಿ''ಯ ಹಾಡು (ವಿಮರ್ಶೆ)
(ಬೇಂದ್ರೆ, ಕಾವ್ಯದ ಅಭ್ಯಾಸ)

ಶಿವರಾಜ ಕಾರಗಡಿ

ಬೇಂದ್ರೆ ತಮ್ಮ 'ಕಾವ್ಯಯೋಗ' ಎಂಬ ಪ್ರಸಿದ್ಧ ಲೇಖನದಲ್ಲಿ ''ಕಾವ್ಯವೆಂದರೆ ಕವಿಯ ಕರ್ಮಯೋಗ..... ಜಗತ್ತಿನ ಕಲ್ಯಾಣಕ್ಕಾಗಿ ಕುಶಲತೆಯಿಂದ ಮಾಡಿದ ಕೆಲಸವದು'' ಎಂದಿದ್ದಾರೆ. ಆದರೆ ವಸಾಹತುಶಾಹಿಯ ಪ್ರವೇಶದ ನಂತರದ ಬೆಳವಣಿಗೆಯನ್ನು ಅಭ್ಯಾಸಿಸಿದಾಗ ಕಾವ್ಯದಿಂದ ಜಗತ್ತಿನ ಕಲ್ಯಾಣ ಅಸಾಧ್ಯ ಎಂಬುದನ್ನು ತೋರಿಸುತ್ತದೆ. ಕಾವ್ಯ ಒಂದು ದಿವ್ಯತ್ವದ ಗಳಿಗೆಯಲ್ಲಿ ಉಂಟಾಗುವ ರಸಾವೇಶವೆಂಬುದು ಆಧ್ಯಾತ್ಮಿಕ ಭಾವವೇ ಹೊರತು ಜಗದ ಬೇಸರ ನೀಗುವ ಯಾವ ಉದ್ದೇಶವೂ ಅದಕ್ಕಿದೆ ಎಂಬುದನ್ನು ನಂಬಲ ಸಾಧ್ಯ! ಹೀಗಿದ್ದಾಗ್ಯೂ ''ದುಡಿದುಡಿದು ಸತ್ತಾಗ, ನುಡಿದು ಬೇಸತ್ತಾಗ ಜಗಕೆ ಹಿಗ್ಗಿನ ಹಾಡ ನೀಡಾವ'' ಕವಿ ಎಂದೂ ಹೇಳುತ್ತಾರೆ. ರಮ್ಯ ಸಂಪ್ರದಾಯದ, ವೈದಿಕ ಮೂಲದ ಕವಿಗೆ ಅಭಿವ್ಯಕ್ತಿಯಲ್ಲಿ ಇರುವ ಸಡಗರ ಜಗತ್ತಿನಲ್ಲಿ ನಿರಾಶದಾಯಕ ಸ್ಥಿತಿಯಲ್ಲಿರುವ ವ್ಯಕ್ತಿಗಳ ಕುರಿತು ಇರುವುದಿಲ್ಲ. ತೀರಾ ವೈಯಕ್ತಿಕ ಬೇಸರವೇ ಕಾವ್ಯವಾದರೂ ಸಾಮಾಜಿಕನ ನೋವು ಅದೇ ಎಂದು ಹೇಳಲಾಗದು. ಹೀಗೆ ವಿಚಕ್ಷಿಸಿದರೂ ಬೇಂದ್ರೆಯ ನೋವು, ಸಡಗರ, ಒಲವು ಸಧ್ಯದ ಸಾಮಾಜಿಕ ಸಂದರ್ಭಕ್ಕೆ ಎಷ್ಟು ಸಾಂತ್ವನ ನೀಡಿತು ಅಥವಾ 'ಒಲವೇ ನಮ್ಮ ಬದುಕು' ಎಂಬುದು ಕವಿಕೇಂದ್ರಿತ ದೃಷ್ಟಿಯಾಗಿ ನಿಜವಾದ ಬದುಕು ಬೇರೆಯೇ ಇದೆ ಎಂಬ ಮುಂಜಾಗ್ರತಾ ಕ್ರಿಯೆಯೆ ಎಂಬುದನ್ನು ಅರ್ಥೈಸಬೇಕಾಗಿದೆ. ತಮ್ಮ ನೋವಿನ ಸಖ್ಯದಲ್ಲಿ 'ಎದೆ'ಯಾಳದ ಹಾಡು. ಹುಟ್ಟಿದಾಗೆಲ್ಲ, ಸಾರ್ವತ್ರಿಕವಾಗಿಯೂ ಅದು ಇದೆ ಎನ್ನುವುದು ಪ್ರಶ್ನಾರ್ಹ. ಒಲವಿನ ಕುರಿತು ಅನೇಕ ಮಗ್ಗುಲನ್ನು ಆವಿಷ್ಕರಿಸಿದ ಕವಿಗೆ

ಪ್ರೀತಿಯ ನಿಜ ಅರ್ಥದಲ್ಲಿ ಅಷ್ಟು ಆಸಕ್ತಿಯಿಲ್ಲ. ''ಕಣ್ಣು ಮುಚ್ಚಿ ನಿನ್ನ ನೆನೆದೆ, ಎದಿ ಮುಗುಳು ತೆರೆಯಲೊಲ್ಲಿ'' ಎಂಬಲ್ಲಿ ವಾಸ್ತವ ಅಸ್ಪಷ್ಟವಾಗಿದೆ. ಆದರೆ ''ನನ್ನ ಕೈಯ ಹಿಡಿದಾಕೆ ಅಳುನುಂಗಿ ನಗುವೊಮ್ಮೆ ನಾನೂನು ನಕ್ಕೇನು'' ಈ ಧ್ವನಿಪೂರ್ಣ ಸಾಲುಗಳ ಮೂಲಕ ಕೃತಕತೆಯ ಸೋಗಿನಿಂದ ಹೊರ ಬರುತ್ತಾರೆ. ಬೇಂದ್ರೆಯ ಕಾವ್ಯಶಕ್ತಿ ಅವರ 'ಎದಿ'ಯ ಹರವನ್ನು ತೋರಿಸುತ್ತಲೇ ನೋವನ್ನು ಜೀರ್ಣಿಸಿ ಬಿಡುತ್ತದೆ. ಅವರ ಕಾವ್ಯ ಓದಿದಂತೆ/ಕೇಳಿದಂತೆ ಅನಿರ್ವಚನೀಯ ಸುಖವೊಂದು ಸುತ್ತಿಕೊಂಡು ಎಚ್ಚರಿಸುತ್ತದೆ. ಆ ಎಚ್ಚರ ನಮ್ಮ ನಡುವಿನ ಗೋಳಾಗಿ ಹನಿ ಹನಿ ನೀರಿನ ಜೀವತಂತುವಾಗಿ ಕಾಡಿ ''ಜೀವ ಜೀವಾಳದಲಿ ಹೃದಯಾಂತರಾಳದಲಿ ಇಳಿದು ನೋಡು'' ಎನ್ನುವ ಹಂತಕ್ಕೆ ಮುಟ್ಟುತ್ತದೆ. ಬೇಂದ್ರೆಗೆ ಕಾವ್ಯ ಒಂದು ಯೋಗಕ್ಕಿಂತ 'ಬಾಳ ಹಣತೆ'. ಅದರ ಎಣ್ಣೆಯ ಶಕ್ತಿಯೆ ಅವರ ಜೀವ. ಹೀಗಾಗಿ ''ಕೂಡಿರಲಿ ಬಾಳು ಇಡಿ ಕಾಳಿನಂತೆ'' ಎನ್ನುತ್ತಾರೆ. ಬೇಂದ್ರೆ ಕಾವ್ಯ ಕುರಿತು ಸರಳವಾಗಿಯೊ, ಸಂಕ್ಷಿಪ್ತವಾಗಿಯೊ ಅಭ್ಯಾಸದ ಅನುಕೂಲಕ್ಕೆ ಅನೇಕ ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಅತಿರಂಜಿತ ಅಭಿಪ್ರಾಯಗಳು ಕೇವಲ ಕ್ಯಾಸೆಟ್ ಕವನಗಳ ಆಧಾರದಿಂದ ಕವಿ-ಕಾವ್ಯ ಶ್ರೇಷ್ಠ ಎನ್ನಲಾಗದು. ವೈದಿಕ ಶ್ರದ್ಧೆಯಿಂದ ಕವಿಯಾದ ಬೇಂದ್ರೆಯ ಕಾವ್ಯದಿಂದ ಸಾಮಾನ್ಯರ ಆಖ್ಯಾನಕ್ಕೆ ಸಿಕ್ಕಿದ ಉತ್ತರವೇನು? ಒಲುಮೆಯೊಂದು ಅವರಲ್ಲಿ ಕಾಣುವ ಭಿನ್ನ ಸ್ವರೂಪಗಳನ್ನು ನಾವಿಲ್ಲಿ ಅಭ್ಯಾಸಿಸಬೇಕಾಗಿದೆ.

'ಆಧ್ಯಾತ್ಮ' ಕವಿಮನದ ಬಹುರೂಪವನ್ನು ತೋರಿಸುತ್ತಲೇ ಸಮಾಜದ ರಮ್ಯತೆ ಕಡೆಗೆ ನಿಡಿದಾದ ನೋಟವೊಂದನ್ನು ನೀಡುತ್ತದೆ. ಹೃದಯದ ಹದವೇ ಕಾವ್ಯ ಜೀವಾಳವಾಗಬೇಕಾದರೆ ಆಧ್ಯಾತ್ಮದ ಮೇಳೈಸುವಿಕೆ ಇರಲೇಬೇಕು. ''ಅಂತು ಇಂತು ಪ್ರಾಣತಂತು ಹೆಣೆಯುತ್ತಿತ್ತು ಬಾಳಾ'' ಆ ಹೆಣಿಗೆಯ ಹಿಂದಿನ ದಿವ್ಯಶಕ್ತಿ ಯಾವುದು? ಸರಳ, ನಿರ್ವಿಕಾರ ಮನಸ್ಸು ಸಾಗುವ ಹಾದಿಯ ಕನಸು ಎಂತದ್ದು? ಜೀವದುಸಿರಿಗೆ ಕಾವ್ಯ ಸೇರಿದ ಬಗೆ ಎಂತು. ಈ ಯೋಚಿತ ಅಂಶಗಳಾಚೆ ಆಧ್ಯಾತ್ಮ ನಿಂತಿದೆ. ಅರವಿಂದರ ಪ್ರೇರಣೆ ಒಂದೆಡೆ ಬೇಂದ್ರೆಗಿದ್ದರೂ ಅವರ ಕಾವ್ಯದ ಒಟ್ಟುಗುಣ 'ಅನುಭವ'ದ ಆಳದಲ್ಲಿದೆ. ಹೀಗಾಗಿ 'ಪ್ರಾಣತಂತು'ವನ್ನು ಮೀರಿ ಬೇಂದ್ರೆ ಬರೆಯಲು ಸಾಧ್ಯವಾಯಿತು. ಒಲವಿನ ಕಣ್ಣಿಗೆ ಕಾಡದ ಚಿತ್ರವಿಲ್ಲ, ಕೇಳಿಸದ ರೋಧನವಿಲ್ಲ. ಅದಕ್ಕೆ ಬೇಂದ್ರೆಗೆ 'ಹೆಣದ ಹಿಂದೆ' ಕಾವ್ಯ ಬರೆಯಲು ಸಾಧ್ಯವಾದದ್ದು. ''ಅಂತೂ ಇಂತೂ ನನಗೂ ನಿನಗೂ ಅಂಟಿದ ನಂಟನು ಕೊನೆ ಬಲ್ಲವರ್ಯಾರು'' ಹೀಗೆ ಜೀವನ್ಮುಖಿಯಾಗಲು ಸಾಧ್ಯವಾದದ್ದು. ದೈನಂದಿನ ನೋವು-ನಲಿವು ಹಾಡಾಗುವಾಗ ಕವಿಮನದ ಅಭೀಪ್ಸೆಗಳೇನು? ''ಜಾಗರದಾಚಿನ ಹೂಟ''ವನ್ನು ಅರಿಯಬಲ್ಲವ ಮಾತ್ರವೇ ಕವಿಯಾಗಬಲ್ಲ! ಕಾವ್ಯದಾಳದ ಹನಿಯೊಂದನ್ನು ಎತ್ತಿ ಹಿಡಿಯಬಲ್ಲ ಬೇಂದ್ರೆ ಕಾವ್ಯ ಅಭ್ಯಾಸ ಕೂಡ ಅಂತಹ ಜೀವಧಾಯಕ ಆಧ್ಯಾತ್ಮದ ಹಂಬಲಕ್ಕಾಗಿ ನಮಗೆ ಮುಖ್ಯವಾಗುತ್ತದೆ. ''ಮೌನದಲ್ಲಿಯೂ ಕೂಡ ಮಾತಿನ ಧ್ವನಿಯಿರಲಿ'' ಅಪ್ಪಟ ಮನೋಮೌನದಲ್ಲಿ ಕವಿ ಇರುವಂತಿದ್ದರೂ ಮಾತಿನ ಜಾಣ್ಮೆಯ ಬಲೆ ಹರಡಿ ಬಿಟ್ಟಿದೆ. ಬೇಂದ್ರೆಗೆ ಮಾತು ಬಹಳ ಮುಖ್ಯ. ಅವರ ಮಾತಿನ ಹೊನಲು ನೋವಿನಲ್ಲೂ

ತೇಲಿ ಬರುತ್ತದೆ. - ''ಅತ್ತಾರೆ ಅತ್ತು ಬಿಡು ಹೊನಲು ಬರಲಿ'' ಯಲ್ಲಿ 'ಅಳು' ಒಂದು ಸೂಚಿತ ಕ್ರಿಯೆಯಾಗಬೇಕೆಂದೇನೂ ಇಲ್ಲ. ಅಥವಾ ಅಭಿವ್ಯಕ್ತಿಯ ಮಾಧ್ಯಮವೂ ಅಲ್ಲ. ಅಲ್ಲಿನ ಸನ್ನಿವೇಶ ಕಟ್ಟುವ ದುಃಖಿತ ಮನಸ್ಸಿನ ಚಿತ್ರಣದಲ್ಲಿ ಅಳು ಸಹಜ ಕ್ರಿಯೆ. ಕವಿಯ ಆಧ್ಯಾತ್ಮ ತೆರೆವ ಬಗೆ ನೋಡಿ ''ಹುಣ್ಣಿಮೆ ಚಂದಿರನ ಹೆಣಾ ಬಂತೊ ಮುಗಿಲಾಗ ತೇಲುತ ಹಗಲ''. ಅನೇಕ ಅರ್ಥ ಸಾಧ್ಯತೆಯ ಈ ಮಾತುಗಳು ಭವಬಂಧನದ ಆಚಿನ ನೋಟವೊಂದನ್ನು ತೆರೆಯುತ್ತದೆ. ಹಂಬಲಿತ ಕವಿಗೆ ಯಾವುದೂ ಜಡವಲ್ಲ. ಬದುಕಿನ ಯಾವ ಪದರವೂ ಮೇಲು-ಕೀಳಿಲ್ಲ. ಅನುಭವಿಸೋ ಮನಕೆ ಅನಂತತೆಯೇ ಹರಕೆಯಾಗುವ ಭೂಮಿಕೆ ಇಲ್ಲಿದೆ. ಬೇಂದ್ರೆಗೆ ಮಾತ್ರ ಸಾಧ್ಯವಾಗುವ ಸಾವಲ್ಲೂ ಆಧ್ಯಾತ್ಮದ ಪರಿಯಾ ರಾಗದ ದಾಟಿಯಲ್ಲಿ ಬಂದಾಗ ಒಂದು ಅರ್ಥವನ್ನು ಮಾತ್ರ ಹೊರಡಿಸಿ, ಕಾವ್ಯದ ವಿವಿಧ ಮಗ್ಗುಲುಗಳ ಪರಿಚಯವನ್ನು ಗೌಣವಾಗಿಸಿ ಬಿಡುತ್ತದೆ. 'ಪಾತರಗಿತ್ತಿ ಪಕ್ಕ' ಕವಿತೆಯ ಭಾವಧೇಧಿಷ್ಯತೆ ಕೇವಲ ಪಾತರಗಿತ್ತಿಯ ಮೈಬಣ್ಣದ ವರ್ಣನೆಯಾಗಿ ಮಾತ್ರ ನಿಂತಿಲ್ಲ. ಆಚಿನ ಯಾರೂ ಅರಿಯದ ವರ್ಣಮಯ ಪ್ರಪಂಚವೊಂದರ ದರ್ಶನ ಅಲ್ಲಿದೆ. ಕವಿಯ ಕಣ್ಣಿಗೆ ಕಾಣುವ ಹುಣ್ಣಿಮೆಯೇ ಆಧ್ಯಾತ್ಮದ ನಿಜಬಗೆಯಾಗುವ ಈ ತೆರನಾದ ಕಾವ್ಯಗಳು ಜನಮಾನಸದಲ್ಲಿ ಅಚ್ಚಳಿಯದೆ ನಿಲ್ಲಲು ಕಾವ್ಯದ ಅಭ್ಯಾಸಕ್ಕಿರುವ ನವ ದಿಕ್ಕುಗಳ ಪರಿಚಯ ಆಗಬೇಕಾಗಿದೆ. 'ಭೃಂಗದ ಬೆನ್ನೇರಿ' ಬಂದ ಕಲ್ಪನಾ ವಿಲಾಸದಲ್ಲಿ ಬೇಂದ್ರೆಯ ಜೀವದಾಯಕ ಶಕ್ತಿಯೆ ಅಡಗಿದೆ ಎಂಬುದನ್ನು ತೋರಿಸಬೇಕು.

ಬೇಂದ್ರೆಗೆ 'ಒಲವು' ಬಹುಪ್ರೀತಿಯ ಶಬ್ದ. 'ಒಲವೇ ನಮ್ಮ ಬದುಕು' ಎಂಬಲ್ಲಿ ಬದುಕಿನ ನೈಜ ಉದ್ದೇಶವೇ ಒಲವಿನ ತೋಟದಲ್ಲಿ ಇದೆ. ಪ್ರೀತಿಯ ಕುರಿತು ಎರಿಕ್‌ಫ್ರಾಂನ ಅಭಿಪ್ರಾಯಗಳು ಉನ್ನತ ಬೌದ್ಧಿಕ ಹಂತದಲ್ಲಿ ಕಂಡರೆ ಬೇಂದ್ರೆಯಲ್ಲಿ ಜನಸಾಮಾನ್ಯವಾಗಿದೆ. ''ಹಸಿಯಿದ್ದಳು ಬಿಸಿಯಾದಳು/ಸಸಿಯಿದ್ದಾ ಹುಡುಗಿ/ ಹುಸಿಯರಿಯದ ಹುಡುಗಿ'' ಸರಳವಾದ ಬಿಡಿ ಮಾತುಗಳಲ್ಲೆ ನಿಗರ್ವಿಯಾದ ಮನೋಭೂಮಿಕೆಯನ್ನು ಸಿದ್ಧಮಾಡುವ ಇಂತಹ ಸಾಲುಗಳು ಅಪ್ಪಟ ಜನಪದ ರೂಪವನ್ನು ಪಡೆದಿವೆ. ಮನುಷ್ಯನ ಅತ್ಯಾಸೆಯಾದ ಕಾಮದ ಕುರಿತು ''ಕಾಮವಿದು ಮೈಗಾವು/ ಜೀವದ ಬಾವು/ ಚಿತ್ತದ ನೋವು/ ಎನ್ನರಸಿ.'' ಈ ವಾಕ್ಯ ಸರಣಿಯಲ್ಲಿ ಅಶ್ಲೀಲದ ಸೋಂಕಿಲ್ಲ, ನವಿರು ಮನದ ಅರ್ಥಪೂರ್ಣ ವ್ಯಕ್ತತೆ ಅಡಗಿದೆ. ನೈಜ ಘಟನೆ ಆಧಾರಿತ 'ಕಥೆಯಾದಳು ಹುಡುಗಿ' ಕಾವ್ಯದಲ್ಲಿ ಅನೇಕ ಭಾವ ಹಂದರಗಳನ್ನು ನೋಡಬಹುದು. ಕೇವಲ ಊಹೆಯ ಪ್ರೀತಿಯನ್ನು ದಾಟಿದ ಬೇಂದ್ರೆ, ನೈಜ ಒಲವಿನಲ್ಲಿ ಭಕ್ತಿ ಇಟ್ಟವರು. ಅದನ್ನು ಹೇಳುವಲ್ಲಿಯೂ ನವಿರತೆ ಕಾಯ್ದುಕೊಂಡವರು. ಒಲವು ಅವರಲ್ಲಿ ಒತ್ತಡದಿಂದ ಉಂಟಾಗುವ ಭಾವವಲ್ಲ. ಆಳದ ಅನುಭವದಲ್ಲಿ ಅದನ್ನು ಕಂಡುಕೊಂಡವರು. ''ವಿಧಿಯಿತ್ತ ಕುಲಡೊಂಕು, ನನ್ನ ಪ್ರೀತಿಯು ಡೊಂಕೆ'' ಎನ್ನುವ ಕವಿಗೆ ಯಾವ ಒತ್ತಡ ಇರಲು ಸಾಧ್ಯ. ಆಧುನಿಕೋತ್ತರ ಸಮಾಜದಲ್ಲಿ ಬದುಕುತ್ತಿರುವ ನಾವು ಸಹಜವಾಗಿ ಒತ್ತಡಕ್ಕೆ ಸಿಕ್ಕಿ ಬಿಟ್ಟಿದ್ದೇವೆ. ಅಪ್ಪಟ ಜೀವನ್ಮುಖಿ ಧ್ಯೇಯಗಳೆಲ್ಲವೂ ಜಾಗತೀಕರಣದ ಭರಾಟೆಯಲ್ಲಿ ಲಾಭಕೋರತನದ ದಿಕ್ಕಿಗೆ ಇಳಿದು ಬಿಟ್ಟಿದೆ. ಇಂತಹ ಸಂದಿಗ್ಧತೆಯಿಂದ ಪಾರಾಗಲು ಬೇಂದ್ರೆಯ

ಮಂತ್ರಚುಂಬಿತ ಕಾವ್ಯಬಿಂದುಗಳು ಸಹಾಯ ನೀಡಿಯಾವು! ಒಲವಿನ ನಾವಿನ್ಯತೆಯನ್ನು ವಿಧವಾಗಿ ಸವಿದ ಕವಿಗೆ ''ಸಖೀ ನಮ್ಮ ಸಖ್ಯದ ಆಖ್ಯಾನ''ವನ್ನು ಬಿಡಿಸಿಕೊಳ್ಳುವ ತುರ್ತು ಇಲ್ಲ. ಆ ಆಖ್ಯಾನದ ಒಳಗಿದ್ದು ಕೊಂಡೆ ಸಂಸಾರ ಸಾಗರವನ್ನು ಒಪ್ಪವಾಗಿಸಿಕೊಳ್ಳುವ ತಾಳ್ಮೆ ಅಡಗಿದೆ. ಆಧುನಿಕರಾದ ನಮಗೆ 'ಒಪ್ಪ' ಮಾಡಿಕೊಳ್ಳುವ ಯಾವ ಸಂಯಮವೂ ಇಲ್ಲ. ''ನನ್ನ ಕೈಯ ಹಿಡಿದಾಕಿ ಅಳುನುಂಗಿ ನಗುವೊಮ್ಮೆ ನಾನೂನು ನಕ್ಕೇನು'' ಎನ್ನುವ ಸುಖೀಭಾವದ ಸಂಚಲನವೂ ಇಲ್ಲ. ಇಂತಹ ಅಸಮಸಮ ರೂಪದಲ್ಲಿ ತೇಲುವ ಈ ಬದುಕಿಗೆ ಸಾಂತ್ವನ ಹೇಗೆ ಎಂದರೆ ''ಅರ್ಥವಿಲ್ಲ ಸ್ವಾರ್ಥವಿಲ್ಲ ಬರಿಯ ಭಾವಗೀತಾ'' ಎಂಬ ಉತ್ತರವನ್ನೆ ನೀಡಿದ್ದಾರೆ. ಈ ಅರ್ಥ ಸ್ವಾರ್ಥದ ಆಚೆಗೆ ನಿಜದ ಬದುಕಿದೆ. ಅಲ್ಲಮ ಹೇಳಿದ ''ಶಬ್ದದೊಳಗಣ ನಿಶ್ಯಬ್ದದಂತೆ'' ಬದುಕಿದರೆ ಸ್ವಾರ್ಥದ ಲವಲೇಶವೂ ಇಲ್ಲ. ಅಂತಹ ಒಲವಿನ ಬಂಧನದಲ್ಲಿ ಸಿಕ್ಕಿಸಿದ ಕವಿ ಬೇಂದ್ರೆಯ ಪದ್ಯಗಳು ಪ್ರೀತಿಯ ಗೀತೆಯಾಗದೆ, ಕಲ್ಪನೆಯ ಕಾಡಾಗದೆ ತಮ್ಮ ಅನುಭವದ ಮೂಸೆಯಿಂದ ಹದವಾಗಿ ಬಂದವು. ''ನಾರಿ ನಿನ್ನ ಮಾರಿ ಮ್ಯಾಗೆ ನಗಿ ನವಿಲು ಕುಣಿತಿತ್ತು'' ಎನ್ನುವ ಅವರು 'ಸಮರಸದ ಜೀವನ'ವನ್ನು ವಿಶ್ವಮಾನವ ಸಂದೇಶದಂತೆ ಸಾರುತ್ತಾರೆ. ಬದುಕಿನ ಕಡು ವ್ಯಾಮೋಹಿಯಾದ ಬೇಂದ್ರೆಗೆ ದುಃಖವೂ ತಮ್ಮಲ್ಲಿ ಅವಿಭಾಜ್ಯವಾದದ್ದು ಎಂಬ ಕುರಿತು ಬೇಸರವಿಲ್ಲ. 'ಅಳುನುಂಗಿ'ಯೂ ಸಂತೋಷ ತೋರುವ ಛಾತಿ ಬೇಂದ್ರೆಯದ್ದು.

ಬೇಂದ್ರೆ ಕಂಡ ಸಮಾಜ ವಿಚ್ಛಿನ್ನತೆಯನ್ನು ಪಡೆದುಕೊಂಡದ್ದು. ತೀವ್ರ ನಿರಾಶವಾದವನ್ನು ಹೇಳುತ್ತಲೆ ನೋವನ್ನು ವಿಷಧೀಕರಿಸುತ್ತಾರೆ. ಅವರು ಸಮಾಜದಲ್ಲಿ ಆಗುವ ಅನಿಷ್ಠಗಳಿಗೆ ನಮ್ಮನ್ನಾಳುವ ಮಂದಿಯನ್ನು ಮುಂದೆ ಮಾಡಿದರೂ ಆಳದಲ್ಲಿ 'ನಾವೇ' ಕಾರಣ ಎನ್ನುತ್ತಾರೆ.- ''ಹಸಿದವ ಬಲ್ಲ ಹಸವೆಯ ಶೂಲಿ'' ಈ ಸಾಲುಗಳು, ಕಂಡ ನೋವಿನ ಅನಾವರಣದಂತೆಯೇ ಇದೆ. ಹಸಿವು ಹಿಂಗಿದ ಮೇಲೆ ಧರ್ಮ, ಪ್ರೇಮದ ಮಾತು ಎಂಬುದಕ್ಕೆ ''ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ, ಬೆಂಕಿಯ ನಿಕ್ಕಿ'' ಸಾಲುಗಳು ಸಾಕ್ಷಿಯಾಗುತ್ತದೆ. ದುಃಖಿತ ಪ್ರಪಂಚದಲ್ಲಿ ವಾಸಿಸುತ್ತಿರುವ ಜನಕ್ಕೆ ಸಾಂತ್ವನದ ಅಮೃತತ್ವ ನೀಡಲು ನಾವೆಲ್ಲ ವಿಫಲರಾಗಿದ್ದೇವೆ. ಆ ವಿಫಲತೆಯನ್ನು ಉಪಯೋಗಿಸಿಕೊಂಡ ವಸಾಹತುಕಾರರು ಇಲ್ಲಿನ ಜನರಲ್ಲಿ ಹುಟ್ಟಿಸಿದ ಯೋಚನಾ ದಿಗಂತದಲ್ಲಿ ಇರುವ 'ಒಳಮೋಸ'ವನ್ನು ಟೀಕಿಸುವ ಬೇಂದ್ರೆ ''ಅತ್ತೊಂದು ಹತ್ತು ಕೋಟಿ! ಇತ್ತೊಂದು ಹತ್ತು ಕೋಟಿ! ಸೋದರರು ಇದ್ದರೂ ಆಧರದ ನುಡಿ ಇಲ್ಲ'' ಈ ರೀತಿಯ ಅನಾಥತೆಗೆ ಬ್ರಿಟಿಷ್ ಪ್ರಭುತ್ವವೇ ಕಾರಣ ಎನ್ನುತ್ತಾರೆ. ಪ್ರಭುತ್ವವನ್ನು ವಿರೋಧಿಸಿ ಬರೆದ 'ನರಬಲಿ'ಯಿಂದ ನೋವು ಕಂಡ ಕವಿಗೆ ಈ ಎಲ್ಲ ವಿಷಣ್ಣತೆ ಗೊತ್ತು. ಹೀಗಾಗಿ ಬೇಂದ್ರೆಗಿರುವ ಅನುಭವ ವಿಸ್ತಾರತೆ, ಆಳದ ನೋವು ಸಮಾಜಮುಖಿಯಾಗಿ ಚಿಂತಿಸಲು ಪ್ರೇರೇಪಿಸುತ್ತದೆ. ಕಾವ್ಯ ಕಲ್ಪನಾ ಹಟವಲ್ಲ ಅದು ಜನಮಾನಸದ ಎಚ್ಚರಿಕೆಯ ಪ್ರತಿಬಿಂಬವೂ ಹೌದು. 'ಅನ್ನಾವತಾರ' ಕಾವ್ಯದಲ್ಲಿ ಬಡ ಜೀವಕ್ಕೆ ಅನ್ನ ನೀಡುವ ಶಮನತೆಯನ್ನು ಮಾರ್ಮಿಕವಾಗಿ ಹೇಳುತ್ತಲೇ ''ಅನ್ನ ದೇವರು ಮಾತ್ರ ಇನ್ನೂ ಬರಲಿಲ್ಲ'', ಅದು ಬರುವ ದಿಕ್ಕು ಯಾವುದು? ಪ್ರಶ್ನಾರ್ಥಕವಾಗಿಯೇ ಕವಿ ದಿಗಿಲುಗೊಳ್ಳುತ್ತಾರೆ. ಇತ್ತೀಚಿನ ಸಮೀಕ್ಷೆಗಳು ಕೂಡ

ಎಲ್ಲಾ ಜನರಿಗೂ ಅನ್ನ ನೀಡಲು ವಿಫಲವಾಗಿರುವುದನ್ನು ಹೇಳುತ್ತವೆ. ''ದುಡಿವ ಉಸಿರಿಗೆ ದಣಿವಿಲ್ಲ'' ಈ ಸಾಲುಗಳ ಮೂಲಕ ಕಾಯಕದ ಭೋದೆಯನ್ನು ಮಾಡಿದರೂ ಶೋಷಣೆಯ ಒಂದು ವರ್ಗ ಇರುವುದನ್ನು ಹೇಳುತ್ತಾರೆ. ಕೈಗಾರೀಕರಣದ ನಂತರ ಉಂಟಾದ ಶ್ರೀಮಂತಿಕೆಯನ್ನು ನಿಚ್ಚಳವಾಗಿ ಹೇಳುವ ಬೇಂದ್ರೆ ತೀರಾ ನಿರಾಶರಾಗಿಲ್ಲ ''ಬಾಳ್ಮೆಯಲ್ಲಿ ತಾಳ್ಮೆ ಬೇಕು ಬದುಕ ಬೇಕು ಎಂದರೆ'' ಎನ್ನುವಲ್ಲಿ ''ಕಾಯುವ'' ಘೋಷವನ್ನು ಮಾಡುತ್ತಾರೆ. ಕಳೆದ ಐವತ್ತಕ್ಕೂ ಹೆಚ್ಚು ವರ್ಷಗಳಲ್ಲಿ ಆದ ತಾಳ್ಮೆಯನ್ನು ಪರ್ಯಾಯಲೋಚಿಸಿದರೆ ಬೇಂದ್ರೆಯ ನಿಲುವುಗಳು ಸಡಿಲಗೊಂಡಿವೆ. ''ಕುರುಡು ಕಾಂಚಾಣ'', 'ಮನುವಿನ ಮಕ್ಕಳು', ಕಾವ್ಯಗಳಲ್ಲಿ ಕೂಡ ಸಮಾಜಮುಖಿ ಚಿಂತನೆಯನ್ನು ಮಂಡಿಸುವ ಕವಿ ಎಲ್ಲಿಯೂ ಸಂಯಮವನ್ನು ಕಳೆದುಕೊಂಡಿಲ್ಲ. ಸಮಾಜ, ಸಂಸ್ಕೃತಿ ಕುರಿತಾದ ಅವರ ಎಲ್ಲಾ ಯೋಚನೆಗಳು 'ಭಾರತೀಕರಣ' ವಾಗಿರುವುದನ್ನು ವೈದಿಕ ಪರಿಭಾಷೆಯ ಮೂಲಕ ನೋಡಿದಾಗ ಅರ್ಥವಾಗುವಂತದ್ದು.

''ಬೇಂದ್ರೆ ಕಾವ್ಯವನ್ನು ಅರ್ಥೈಸುವ ಸಲಕರಣೆಗಳು ಇನ್ನೂ ಸಿದ್ಧವಾಗಬೇಕಾಗಿದೆ'' ಎಂಬ ರಾಜೇಂದ್ರ ಚೆನ್ನಿಯವರ ಅಭಿಪ್ರಾಯ ಬೇಂದ್ರೆ ಕಾವ್ಯದ ನೈಜ ವಿಶ್ಲೇಷಣೆಯೊಂದು ಇನ್ನೂ ನಡೆಯಬೇಕಾಗಿದೆ ಎಂಬ ಕಡೆಗಿದೆ. ಜೀವಜಾಲದ ಮಹಾಯಾನದಲ್ಲಿ ಬೇಂದ್ರೆ ಕಾವ್ಯಕ್ಕೆ ಅನೇಕ ಅನುಕಂಪದ ವಿವರಣೆಗಳು ಸಿಕ್ಕಿದ್ದರಿಂದಲೂ ಅವರ ಕಾವ್ಯದ ಬಹುಮುಖಿ ವಿಶ್ಲೇಷಣೆಯನ್ನು ಮಂಡಿಸಬೇಕಾಗಿದೆ. ಬೇಂದ್ರೆಗೆ ಕಾವ್ಯವೆಂದರೆ-''ಶಬ್ದಾರ್ಥದಲ್ಲಿ ಎತ್ತಿದ ವಿಷಯಾನಂದ'' ಅಂತಹ ವಿಷಯ ಆನಂದದ ಸಾತತ್ಯವನ್ನು ಬೇಂದ್ರೆ ಸದಾ ಪಡೆದವರು. ನವೋದಯದ ಯಾವೆಲ್ಲ ಲಕ್ಷಣಗಳನ್ನು ದಾಟಿ ''ಕಾವ್ಯಗುಡಿಯ ಬೀಗದ ಮುದ್ರೆಯನ್ನು ಒಡೆದು ಅಂಬಿಕಾತನಯದತ್ತ'' ಆದವರು. ವರಕವಿಯ ಸೃಷ್ಟಿಯ ಹಿಂದೆ ಆಧ್ಯಾತ್ಮ, ಸಾಧನಕೇರಿ, ಒಲವು, ನೋವು ಇರುವಂತೆಯೇ ಸಮಕಾಲೀನ ಸ್ಪಂದನವೂ ಇದೆ. ನವೋದಯವರು ದೂರ ಇಟ್ಟ ಸೂಳೆಯ ಚಿತ್ರಣಕ್ಕೆ ಕರುಳಿನ ಹಾಡ ಕಟ್ಟಿದವರು. ''ಜಲ್ಮ ಜಲ್ಮಕ ಗೆಣ್ಯಾ ಆಗಿ ಬರತೇನಂದಾವ'' ಈ ಭಾವದಲ್ಲಿಯ ವಿವರಣೆಗೆ ಶಬ್ದಗಳೇಕೆ? ಇಂತಹ ಬೇಂದ್ರೆಯ ಕಾವ್ಯವನ್ನು ಯಾವ ದಿಕ್ಕಿನಿಂದ ಪ್ರವೇಶಿಸಿದರೆ ಅವರನ್ನು ಮುಟ್ಟಬಹುದು ಎಂದುಕೊಂಡರೆ ಮೃಗಜಲವೇ ಸರಿ! ಆದರೂ ಜಲಬಿಂದುಗಳು ಆಗಾಗ ಗೋಚರಿಸಿ ನಮ್ಮಲ್ಲಿ ಉತ್ಸಾಹ ತುಂಬುತ್ತವೆ. ಆ ನೀಲ ಜಲದ ಅನಂತ ರಮಣೀಯತೆಯನ್ನು ಹಿಡಿದಿಡುವ ಈ ಪ್ರಯತ್ನದಲ್ಲಿ ಬೇಂದ್ರೆ ಮಾತ್ರ ಇದ್ದಾರೆ. ಕಾವ್ಯ ಯಾವತ್ತೂ ಅಮೃತಕ್ಕೆ ಹಾರುವ ಗರುಡ ಎನ್ನುವ ಅವರಿಗೂ ''ಪ್ರಾಣತಂತು ಹೆಣಿವ'' ದಿವ್ಯಶಕ್ತಿಯ ಕಡೆಗೆ ಅಪಾರ ಒಲವು. ಆ ಒಲವೇ ಬೇಂದ್ರೆಯನ್ನು ''ಭೂಮಿ ತಾಯಿಯ ಚೊಚ್ಚಿಲ ಮಗ''ನಂತೆ ಚಿತ್ರಿಸಿ ಬಿಟ್ಟಿದೆ.

೦೦

ಶಿವರಾಮ ಕಾರಗಡಿ, ಕನ್ನಡ ಉಪನ್ಯಾಸಕ, ಮೌಂಟ್ ಕಾರ್ಮೆಲ್ ಪದವಿ ಪೂರ್ವ ಕಾಲೇಜು, ನಂ. 58,
ಅರಮನೆ ರಸ್ತೆ, ವಸಂತ ನಗರ, ಬೆಂಗಳೂರು.

ಲೇಖಕರಿಗೆ ವಿನಂತಿ

ಅಕಾಡೆಮಿಯ ತ್ರೈಮಾಸಿಕ ಪತ್ರಿಕೆ 'ಅನಿಕೇತನ'ದ ಸ್ವರೂಪದಲ್ಲಿ ರಚನಾತ್ಮಕ ಬದಲಾವಣೆಗಳನ್ನು ತರಬೇಕೆಂಬ ಹಂಬಲವನ್ನು ತಾವು ಇದುವರೆಗಿನ ಸಂಚಿಕೆಗಳ ಮೂಲಕ ಗಮನಿಸಬಹುದಾಗಿದೆ. ಕನ್ನಡದ ಶ್ರೇಷ್ಠ ಲೇಖಕರನ್ನೆಲ್ಲ ಒಳಗೊಳ್ಳುವಂತೆಯೂ ಹಾಗೂ ಹೊಸ ಸಂವಾದ, ಸಂವೇದನೆಗಳ ಶಕ್ತ ವೇದಿಕೆಯಾಗಿ ಪತ್ರಿಕೆ ಗಂಭೀರ ಸಾಹಿತ್ಯ ಚಿಂತನೆಗಳ ಅಭಿವ್ಯಕ್ತಿಯಾಗಿ ರೂಪುಗೊಳ್ಳಬೇಕೆಂಬುದೂ ನಮ್ಮ ಆಶಯವಾಗಿದೆ. ಕನ್ನಡದ ಹಿರಿಯ ಹಾಗೂ ಭರವಸೆಯ ಹೊಸ ಪೀಳಿಗೆಯ ಲೇಖಕರೆಲ್ಲರ ಭಾಗವಹಿಸುವಿಕೆಯೇ ಪತ್ರಿಕೆಗೆ ಜೀವದ್ರವ್ಯವಾದ್ದರಿಂದ ತಮ್ಮ ಅಮೂಲ್ಯ ಸಹಕಾರ ಅತ್ಯಗತ್ಯ.

ಅನ್ಯಭಾಷೆಯ ಶ್ರೇಷ್ಠ ಬರಹಗಳ ಅನುವಾದದೊಂದಿಗೆ, ಸ್ವತಂತ್ರ ಬರಹಗಳನ್ನು ಆಹ್ವಾನಿಸುತ್ತಿದ್ದೇವೆ. 'ಅನಿಕೇತನ'ಕ್ಕಾಗಿ ಕವಿತೆ / ಕಥೆ / ಕಿರುನಾಟಕ / ವಿಮರ್ಶಾತ್ಮಕ / ವೈಚಾರಿಕ ಲೇಖನ / ಪ್ರಬಂಧ / ಸಾಂಸ್ಕೃತಿಕ ಚಿಂತನೆ ಹಾಗೂ ಅನುವಾದಗಳನ್ನು ಕಳುಹಿಸಿ ಕೊಡುವುದರ ಮೂಲಕ ನಮ್ಮ ಪ್ರಯತ್ನಕ್ಕೆ ಸಹಕರಿಸಬೇಕೆಂದು ಕೋರುತ್ತಿದ್ದೇವೆ. ದಯವಿಟ್ಟು ಬರೆಯಿರಿ. ಪತ್ರಿಕೆಗೆ ಹೊಸ ರೂಪ ಕೊಡಬೇಕೆಂಬ ಪ್ರಯತ್ನಗಳ ನಮ್ಮೊಂದಿಗೆ ಸದಾ ನೀವಿರುತ್ತೀರೆಂಬುದೇ ನಮ್ಮ ಧೈರ್ಯ ಹಾಗೂ ವಿಶ್ವಾಸ.

ಅನುವಾದಗಳಾದರೆ ಮೂಲ ಲೇಖಕರ ಹೆಸರು, ವಿಳಾಸ, ಮೂಲ ಬರಹದ ಭಾಷೆಯ ವಿವರ ಅಗತ್ಯ. ಅನುಮತಿ ಪತ್ರದ ಜೆರಾಕ್ಸ್ ಪ್ರತಿ ಜೊತೆಯಲ್ಲಿರುವುದು ಅಪೇಕ್ಷಣೀಯ. ಬರವಣಿಗೆ ಹಾಳೆಯ ಒಂದೇ ಮಗ್ಗುಲಲ್ಲಿದ್ದು, ಸ್ಫುಟವಾಗಿ ಓದಲು ಅನುಕೂಲವಾಗುವಂತಿರಲಿ.

ಬರಹಗಳನ್ನು ಕಳುಹಿಸಬೇಕಾದ ವಿಳಾಸ :
ಸಂಪಾದಕರು, 'ಅನಿಕೇತನ', ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೫೬೦ ೦೦೨

–ಸಂಪಾದಕರು



ಯಾವ ಗಿಡುಗವಾದರೂ ತನ್ನ ಅಪರಾಧ
ಒಪ್ಪಿಕೊಂಡಿದ್ದಿದೆಯೇ ?

ಬೇಟೆಯ ಮೇಲೆ ಜಿಗಿಯುವ ಮುನ್ನ ಎಂದಾದರೂ
ಹಿಂಜರಿದಿದೆಯೇ ಚಿರತೆ ?

ಕೊಂಡಿಯಿಂದ ಕುಟುಕುವಾಗ ಚೇಳು ನಾಚಿಕೊಂಡಿರಲಿಲ್ಲ

ಸರ್ಪಕ್ಕೆ ಕೈಗಳಿದ್ದಿದ್ದರೆ

ಅದೂ ಅವುಗಳನ್ನು ನಿರಪರಾಧಿಯೆಂದೇ ಹೇಳುತ್ತಿತ್ತು

ನರಭಕ್ಷಿ ವ್ಹೇಲ್‌ದ ಹೃದಯ

ಒಂದು ಟನ್ನಿನದೇ ಇರಬಹುದು

ಸೂರ್ಯ ಮಾಲೆಯ ಈ ಮೂರನೆಯ ಗ್ರಹದ ಮೇಲೆ

ಪಶುತ್ವದ ಮೊದಲ ಲಕ್ಷಣ

ನಿರ್ದ್ವಂದ್ವ ಆತ್ಮ ಹಾಗೂ ಅಚಲ ವಿಶ್ವಾಸ.

- ಆರ್.ಪಿ. ಹೆಗಡೆ

Reg. No. 45646/88 Price : 30/-